ಗುರುವಾರ, ಏಪ್ರಿಲ್ 27, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 116 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ರಾಜ್ಯದ ಶೇ 78ರಷ್ಟು ಜಲಮೂಲ ನಿರುಪಯುಕ್ತ

ಚಿನ್ನ ₹ 590, ಬೆಳ್ಳಿ ₹ 420 ಏರಿಕೆ 10

ದೆಹಲಿ ತಲುಪಿದ 360 ಭಾರತೀಯರು 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,300 ▲	17,813 ▲	₹62,250 (ಬೆಂಗಳೂರು) ▲	₹76,300 (ಬೆಂಗಳೂರು) ▼	81.74 ▲

₹ 25 ಸಾವಿರಕ್ಕೆ ಮತದಾರರ ದತ್ತಾಂಶ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೂವರೆ ಲಕ್ಷಕ್ಕೂ ಹೆಚ್ಚು ಮತದಾರರ ದತ್ತಾಂಶವನ್ನು ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಕೋರಮಂಗಲದ ಖಾಸಗಿ ಕಂಪನಿಯೊಂದರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದು, ತನಿಖೆ ಆರಂಭಿಸಲಾಗಿದೆ.

ಆಗ್ನೇಯ ವಿಭಾಗದ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದತ್ತಾಂಶವನ್ನು ₹ 25 ಸಾವಿರಕ್ಕೆ ಮಾರಾಟ ಮಾಡಲಾಗುತ್ತಿತ್ತು ಎಂದು ದೂರಲಾಗಿದೆ.

6ನೇ ಪುಟ ನೋಡಿ

ಪ್ರಜಾ ಮತ
ಜನತಂತ್ರದ ಹಬ್ಬ

ಬಂಡಾಯ ಅರಗಿಸಿಕೊಳ್ಳುವ ಶಕ್ತಿ ಬಿಜೆಪಿಗಿದೆ: ಶೋಭಾ ಕರಂದ್ಲಾಜೆ 6

ಅಂಚಿಗೆ ತಳ್ಳಲ್ಪಟ್ಟ ಮುಸ್ಲಿಂ ನಾಯಕತ್ವ 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮತ್ತೆ ನಕ್ಸಲರ ಅಟ್ಟಹಾಸ • ಐಇಡಿ ಬಳಸಿ ಸ್ಫೋಟ • ಚಾಲಕನೂ ಬಲಿ

10 ಪೊಲೀಸರ ಹತ್ಯೆ

ದಾಂತೇವಾಡ, (ಛತ್ತೀಸ್‌ಗಢ, ಪಿಟಿಐ): ಸುಧಾರಿತ ಸ್ಫೋಟಕ ಸಾಧನ (ಐಇಡಿ) ಬಳಸಿ ಜಿಲ್ಲಾ ಮೀಸಲು ಪಡೆ (ಡಿಆರ್‌ಜಿ) ಸಿಬ್ಬಂದಿಯಿದ್ದ ವಾಹನವನ್ನು ಸ್ಫೋಟಿಸಿದ ನಕ್ಸಲರು, 10 ಪೊಲೀಸರು ಹಾಗೂ ಚಾಲಕನನ್ನು ಹತ್ಯೆಗೈದು ಅಟ್ಟಹಾಸ ಮೆರೆದ ಘಟನೆ ಬುಧವಾರ ಸಂಭವಿಸಿದೆ.

ಈ ಭೀಕರ ಘಟನೆ ಜಿಲ್ಲೆಯ ಅರನಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಘಟನಾ ಸ್ಥಳವು ರಾಜಧಾನಿ ರಾಯಪುರದಿಂದ 450 ಕಿ.ಮೀ. ದೂರದಲ್ಲಿದೆ. 'ರಾಜ್ಯದಲ್ಲಿ ಭದ್ರತಾ ಪಡೆಗಳನ್ನು ಗುರಿಯಾಗಿಸಿ ಕಳೆದ ಎರಡು ವರ್ಷಗಳಲ್ಲಿ ನಕ್ಸಲರು ನಡೆಸಿದ ದೊಡ್ಡ ಪ್ರಮಾಣದ ದಾಳಿ ಇದಾಗಿದೆ' ಎಂದು ಐಜಿಪಿ (ಬಸ್ತರ್ ವಲಯ) ಪಿ. ಸುಂದರರಾಜ್ ಹೇಳಿದ್ದಾರೆ.

ಬಸ್ತರ್ ವಲಯದ ದರ್ಭಾ ವಿಭಾಗ ವ್ಯಾಪ್ತಿಯಲ್ಲಿ ನಕ್ಸಲರು ಅವಿತಿದ್ದಾರೆ ಎಂಬ ಮಾಹಿತಿ ಸಿಕ್ಕ ಹಿನ್ನೆಲೆಯಲ್ಲಿ ಜಿಲ್ಲಾ ಕೇಂದ್ರ ದಾಂತೇವಾಡದಿಂದ ತೆರಳಿದ್ದ ಡಿಆರ್‌ಜಿ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದರು. ಕಾರ್ಯಾಚರಣೆ ಮುಗಿಸಿ, ಬಾಡಿಗೆಯ ಮಿನಿ ಗೂಡ್ಸ್ ವಾಹನವೊಂದರಲ್ಲಿ ಮರಳುತ್ತಿದ್ದಾಗ ಅರನಪುರ ಹಾಗೂ ಸಮೇಲಿ ಗ್ರಾಮಗಳ ನಡುವೆ ನಕ್ಸಲರು ವಾಹನವನ್ನು ಸ್ಫೋಟಿಸಿದ್ದಾರೆ.

ಸ್ಫೋಟದ ಭೀಕರತೆಯನ್ನು ತೋರಿಸುವ ದೃಶ್ಯಗಳನ್ನು ಸ್ಥಳೀಯ ಸುದ್ದಿವಾಹಿನಿಗಳು ಪ್ರಸಾರ ಮಾಡಿವೆ. ಸ್ಫೋಟ ಸಂಭವಿಸಿದ ಜಾಗದಲ್ಲಿ 10 ಅಡಿ ಆಳದಷ್ಟು ಗುಂಡಿ ಬಿದ್ದಿದೆ. ಪೊಲೀಸ್ ಸಿಬ್ಬಂದಿ ಪ್ರಯಾಣಿಸುತ್ತಿದ್ದ ವಾಹನ ಸಂಪೂರ್ಣ ನಾಶವಾಗಿದೆ. ಮೃತದೇಹಗಳನ್ನು ಪ್ಲಾಸ್ಟಿಕ್ ಹಾಳೆಗಳಲ್ಲಿ ಸುತ್ತಿ ಇರಿಸಿರುವ ದೃಶ್ಯಗಳು ವಿಡಿಯೊದಲ್ಲಿವೆ.

'ಮೃತದೇಹಗಳನ್ನು ಘಟನಾ ಸ್ಥಳದಿಂದ ತರಲಾಗಿದ್ದು, ಪೊಲೀಸರು ವ್ಯಾಪಕ ಶೋಧ ಕಾರ್ಯ ಕೈಗೊಂಡಿದ್ದಾರೆ' ಎಂದು ಐಜಿಪಿ ತಿಳಿಸಿದ್ದಾರೆ.

ಮೋದಿ ಖಂಡನೆ: ನಕ್ಸಲರ ದಾಳಿಯನ್ನು ಪ್ರಧಾನಿ ನರೇಂದ್ರ ಮೋದಿ ಖಂಡಿಸಿದ್ದಾರೆ.

ಘಟನೆ ಬಗ್ಗೆ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಜೊತೆಗೆ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, 'ಕೇಂದ್ರದಿಂದ ಅಗತ್ಯವಿರುವ ಎಲ್ಲಾ ನೆರವು ನೀಡಲಾಗುವುದು' ಎಂದು ಭರವಸೆ ನೀಡಿದರು.

ನಕ್ಸಲರು ನಡೆಸಿದ ದಾಳಿಯಲ್ಲಿ ಹುತಾತ್ಮರಾದ ಕೆಚ್ಚೆದೆಯ ಪೊಲೀಸರಿಗೆ ನನ್ನ ನಮನಗಳು. ಅವರ ತ್ಯಾಗ ಸದಾ ನೆನಪಿನಲ್ಲಿರುತ್ತದೆ
ನರೇಂದ್ರ ಮೋದಿ, ಪ್ರಧಾನಿ

ಇದು ಹೇಡಿಗಳ ಕೃತ್ಯ. ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಕೈಗೊಂಡಿರುವ ನಕ್ಸಲ್ ವಿರೋಧಿ ಹೋರಾಟದಲ್ಲಿ ಜಯ ಸಿಗಲಿದೆ
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಇನ್ನಷ್ಟು ಸುದ್ದಿಗಳು 11

'ಮುಸ್ಲಿಮರಿಗೆ ಮೀಸಲಾತಿ ಜಾತ್ಯತೀತ ತತ್ವಕ್ಕೆ ವಿರುದ್ಧ'

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಂದುಳಿದ ವರ್ಗಗಳ ಕೋಟಾದಲ್ಲಿ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮುಸ್ಲಿಮರಿಗೆ ನೀಡಿದ್ದ ಶೇ 4ರಷ್ಟು ಮೀಸಲಾತಿಯನ್ನು ಹಿಂಪಡೆದಿರುವ ನಿರ್ಧಾರವನ್ನು ಕರ್ನಾಟಕ ಸರ್ಕಾರ ಸಮರ್ಥಿಸಿಕೊಂಡಿದೆ. ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಿರುವುದು ಸಂವಿಧಾನ ವಿರೋಧಿ ಮತ್ತು ಭಾರತೀಯ ಸಂವಿಧಾನದ 14ರಿಂದ 16ರ ಪರಿಚ್ಛೇದದ ಉಲ್ಲಂಘನೆ ಎಂದೂ ಸರ್ಕಾರ ಪ್ರತಿಪಾದಿಸಿದೆ.

ಮುಸ್ಲಿಮರ ಶೇ 4ರಷ್ಟು ಮೀಸಲಾತಿ ಹಿಂಪಡೆದ ಕರ್ನಾಟಕ ಸರ್ಕಾರದ ಮಾರ್ಚ್ 27ರ ಆದೇಶ ಪ್ರಶ್ನಿಸಿ ಎಲ್. ಗುಲಾಮ್ ರಸೂಲ್ ಮತ್ತು ಇತರರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಮಂಗಳವಾರ ವಿಚಾರಣೆಯ ವೇಳೆ ರಾಜ್ಯ ಸರ್ಕಾರದ ಪರವಾಗಿ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಮುಸ್ಲಿಮರಿಗೆ ನೀಡಿದ್ದ ಶೇ 4ರಷ್ಟು ಮೀಸಲಾತಿಯನ್ನು ಹಿಂಪಡೆದು, ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳಿಗೆ ಮರು ಹಂಚಿಕೆ ಮಾಡಿರುವ ಮಾರ್ಚ್ 27ರ ಆದೇಶದ ಮೇಲೆ ಸದ್ಯ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ' ಎಂದು ವಾಗ್ದಾನ ನೀಡಿದ್ದರು.

5ನೇ ಪುಟ ನೋಡಿ

ತಾರಕಕ್ಕೇರಿದ ವಾಕ್ಸಮರ

ಸಂತೋಷ್ ಬಹಿರಂಗ ಯುದ್ಧಕ್ಕೆ ಬರಲಿ: ಶೆಟ್ಟರ್

ಹುಬ್ಬಳ್ಳಿ: 'ಒಬ್ಬ ಲಿಂಗಾಯತ ನಾಯಕನನ್ನು ಮುಗಿಸಲು ಮತ್ತೊಬ್ಬ ಲಿಂಗಾಯತ ನಾಯಕನ ಹೆಗಲ ಮೇಲೆ ಬಂದೂಕು ಇಟ್ಟು ಹೊಡೆಯುವ ಕೆಲಸ ಬಿಜೆಪಿಯಲ್ಲಿ ನಡೆಯುತ್ತಿದೆ. ಬಿ.ಎಸ್. ಯಡಿಯೂರಪ್ಪ ಅವರ ಮೇಲೆ ಒತ್ತಡ ಹೇರಿ, ನನ್ನ ವಿರುದ್ಧ ಹೇಳಿಕೆ ಕೊಡಿಸಿದ್ದಾರೆ. ಸಮಾಜದಲ್ಲಿ ಒಡಕು ಮೂಡಿಸುವ (ಡಿವೈಡ್ ಅಂಡ್ ರೂಲ್) ಕೆಲಸವನ್ನು ಬಿಜೆಪಿ ಮಾಡುತ್ತಿದೆ' ಎಂದು ಜಗದೀಶ ಶೆಟ್ಟರ್ ವಾಗ್ದಾಳಿ ನಡೆಸಿದರು.

ಶೆಟ್ಟರ್ ಅವರನ್ನು ಸೋಲಿಸಬೇಕೆಂದು ಲಿಂಗಾಯತ ಸಮಾಜ ಬಾಂಧವರಿಗೆ ಕರೆ ನೀಡಿದ ಬಿ.ಎಸ್. ಯಡಿಯೂರಪ್ಪ ಹೇಳಿಕೆಗೆ ಅವರು

ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿ, 'ನನಗೆ ಟಿಕೆಟ್ ತಪ್ಪಲು ಬಿ.ಎಲ್. ಸಂತೋಷ ಅವರೇ ಕಾರಣ ಎಂದಿದ್ದೆ. ಇದಕ್ಕೆ ಅವರು ಇದುವರೆಗೆ ಉತ್ತರಿಸಿಲ್ಲ. ಬೇರೆಯವರ ಮೂಲಕ ನನ್ನ ಮೇಲೆ ಟೀಕೆ ಮಾಡಿಸುತ್ತಿದ್ದಾರೆ. ಯುದ್ಧ ಮಾಡುವುದಿದ್ದರೆ ಬಹಿರಂಗವಾಗಿ ಬರಲಿ' ಎಂದು ಸವಾಲೆಸೆದರು.

6ನೇ ಪುಟ ನೋಡಿ

ಶೆಟ್ಟರ್ ಸೋಲಿಸುವ ಹೊಣೆ ನನ್ನದು: ಯಡಿಯೂರಪ್ಪ

ಅಥಣಿ/ಹುಬ್ಬಳ್ಳಿ: 'ಹುಬ್ಬಳ್ಳಿಯಲ್ಲಿ ಜಗದೀಶ ಶೆಟ್ಟರ್ ಅವರನ್ನು ಸೋಲಿಸುವ ಜವಾಬ್ದಾರಿ ನಾನು ತೆಗೆದುಕೊಳ್ಳುತ್ತೇನೆ. ಅಥಣಿಯಲ್ಲಿ ಲಕ್ಷ್ಮಣ ಸವದಿ ಅವರನ್ನು ಸೋಲಿಸುವ ಜವಾಬ್ದಾರಿ ನೀವು ತೆಗೆದುಕೊಳ್ಳಿ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಬಿಜೆಪಿ ಪರ ಮತಯಾಚಿಸಿ ಅವರು ಮಾತನಾಡಿದರು.

'ಶೆಟ್ಟರ್ ಅವರು ಜೀವನದಲ್ಲಿ ಅವರು ಎಂದೂ ಮರೆಯಲಾರದ ಸೋಲು ಅನುಭವಿಸುವಂತಾಗಬೇಕು. ವಿಶ್ವಾಸಘಾತುಕ ಕೆಲಸಕ್ಕೆ ಎಲ್ಲರೂ ಒಂದಾಗಿ ಅವರನ್ನು ಮನೆಗೆ ಕಳುಹಿಸಬೇಕು. ಫಲಿತಾಂಶದ ನಂತರ ಶೆಟ್ಟರ್ ಸಮಕ್ಷಮ ಒಂದುಲಕ್ಷ ಜನ ಸೇರಿಸಿ ವಿಜಯೋತ್ಸವ ಆಚರಿಸಬೇಕು' ಎಂದು ಕರೆ ನೀಡಿದರು.

'ಬಿಜೆಪಿಯಲ್ಲಿದ್ದಾಗ ಏಕೆ ಹೇಳಲಿಲ್ಲ?'

ಬೆಳಗಾವಿ: ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಶೇಕಡ 40ರಷ್ಟು ಕಮಿಷನ್ ಆರೋಪದ ಕುರಿತು ತನಿಖೆ ನಡೆಸಲಾಗುವುದು ಎಂಬ ಲಕ್ಷ್ಮಣ ಸವದಿ ಹೇಳಿಕೆಗೆ ತಿರುಗೇಟು ನೀಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಅವರು ಬಿಜೆಪಿಯಲ್ಲಿದ್ದಾಗಲೇ ಹೇಳಬಹುದಿತ್ತಲ್ಲ? ಏಕೆ ಆಗ ಸುಮ್ಮನಿದ್ದರು' ಎಂದು ಪ್ರಶ್ನಿಸಿದರು.

ಸೆರೆಯಲ್ಲೇ ಉಳಿದಿದ್ದ ಚೀತಾಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ದಕ್ಷಿಣ ಆಫ್ರಿಕಾದ 11 ಚೀತಾಗಳು ಅರಣ್ಯದ ಕಿರಿದಾದ ಆವರಣದಲ್ಲಿ ಕೂಡಿಹಾಕಿದ ಸ್ಥಿತಿಯಲ್ಲೇ 11 ತಿಂಗಳ ಅವಧಿಯನ್ನು ಕಳೆದಿವೆ. ಇದರಿಂದ ಈ ಚೀತಾಗಳನ್ನು ಕಾಡಿಗೆ ಬಿಡುವ ಮೊದಲು ಅವುಗಳ ಆರೋಗ್ಯ ಮತ್ತು ದೈಹಿಕ ಸಾಮರ್ಥ್ಯದ ಬಗ್ಗೆ ತಜ್ಞರು ಕಳವಳಪಡುವಂತೆ ಮಾಡಿದೆ.

'ಮೊದಲು ದಕ್ಷಿಣ ಆಫ್ರಿಕಾದಲ್ಲಿ ಮತ್ತು ನಂತರ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ 50x50 ಮೀಟರ್ ವಿಸ್ತೀರ್ಣದ ಆವರಣಗಳಲ್ಲಿ ಈ ಚೀತಾಗಳನ್ನು ಇರಿಸಲಾಗಿತ್ತು. ಕಳೆದ ವಾರವಷ್ಟೇ ಇವುಗಳನ್ನು 5 ಹೆಕ್ಟೇರ್‌ನಷ್ಟು ವಿಸ್ತಾರದ ಪ್ರದೇಶಕ್ಕೆ ಬಿಡಲಾಗಿದೆ. ಅಲ್ಲಿ ಅವುಗಳಿಗೆ ಓಡಾಡಲಾದರೂ ಅವಕಾಶವಿದೆ. ಇಷ್ಟು ಕಿರಿದಾದ ಪ್ರದೇಶವು ಅವುಗಳಿಗೆ ತಮ್ಮ ದೈಹಿಕ ಸಾಮರ್ಥ್ಯ ಕಾಪಾಡಿಕೊಳ್ಳಲು ಸಾಕಾಗುವುದಿಲ್ಲ' ಎಂದು ಚೀತಾ ಸಂತತಿ ಪುನರುತ್ಥಾನ ಯೋಜನೆ ವ್ಯವಸ್ಥಾಪಕ ಮತ್ತು ಚೀತಾ ಸಂರಕ್ಷಕ ವಿನ್ಸೆಂಟ್ ವ್ಯಾನ್ ಡೆರ್ ಮೆರ್ವೆ 'ಪ್ರಜಾವಾಣಿ'ಗೆ ತಿಳಿಸಿದರು.

'ಚೀತಾಗಳನ್ನು ಸಂಬಂಧಿಸಿದವರು ಕಣ್ಗಾವಲಿನಲ್ಲಿ ಪ್ರತ್ಯೇಕವಾಗಿ ಯಾಕೆ ದೀರ್ಘಕಾಲ ಇರಿಸಿದ್ದರೆನ್ನುವುದು ನಮಗೆ ತಿಳಿಯದು. ಇದು ಚೀತಾಗಳ ಯಶಸ್ವಿ ಪುನರುತ್ಥಾನ ಕಾರ್ಯದೊಂದಿಗೆ ರಾಜಿ ಮಾಡಿಕೊಂಡಂತಾಗುತ್ತದೆ' ಎಂದು ಮೆರ್ವೆ ಹೇಳಿದರು.

ದಕ್ಷಿಣ ಆಫ್ರಿಕಾದಿಂದ ತರಲಾದ ಚೀತಾಗಳಲ್ಲಿ ಉದಯ್ ಹೆಸರಿನ ಚೀತಾ ಸಾವಿನ ಮೊದಲ ಪ್ರಕರಣದಲ್ಲಿ ವಿಷಪ್ರಾಶನದ ಸಾಧ್ಯತೆಯನ್ನು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ಅಧಿಕಾರಿಗಳು ತಳ್ಳಿಹಾಕಿದ್ದಾರೆ. ಆದರೆ, ಇನ್ನೊಬ್ಬ ತಜ್ಞರು, ಚೀತಾ ಸಾವಿಗೆ ವಿಷಾಹಾರ ಸೇವನೆಯೇ ಕಾರಣವಿರಬಹುದು ಎಂದು ಶಂಕೆ ವ್ಯಕ್ತಪಡಿಸಿದ್ದಾರೆ.

ಬಿಟಿಎಂ ಲೇಔಟ್

ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಗಳು ಏನಂತಾರೆ?

ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ವಿವಿಧ ಪಕ್ಷಗಳ ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಸ್ಪರ್ಧಿಗಳ ನಡುವೆ ಆರೋಪ–ಪ್ರತ್ಯಾರೋಪ ಬಿರುಸಾಗಿದೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಆದ್ಯತೆ ಕುರಿತಂತೆ ಅಭ್ಯರ್ಥಿಗಳ ಜೊತೆ **ಆರ್.ಮಂಜುನಾಥ್** ಅವರು ನಡೆಸಿರುವ ಕಿರು ಸಂದರ್ಶನ ಇಲ್ಲಿದೆ.

ರಾಮಲಿಂಗಾರೆಡ್ಡಿ (ಕಾಂಗ್ರೆಸ್)

‘ಜನರ ಬೆಂಬಲ, ಅಭಿವೃದ್ಧಿ ಕಾರ್ಯಗಳೇ ಶ್ರೀರಕ್ಷೆ’

- **ನೀವು ಏನು ಮಾಡುತ್ತೀರಿ ಎಂಬ ಕಾರಣಕ್ಕೆ ಜನ ನಿಮಗೆ ಮತ ಹಾಕಬೇಕು?**

ಬಿಟಿಎಂ ಲೇಔಟ್‌ನಲ್ಲಿ ಜನರು ದೂರು ನೀಡುವಂತಹ ಸಮಸ್ಯೆಗಳೇನೂ ಇಲ್ಲ. ಜನರ ನಿರೀಕ್ಷೆಗಳಂತೆ ಕೆಲಸಗಳಾಗಿವೆ. ರಾಜಕೀಯವಾಗಿ ಒಂದಷ್ಟು ಆರೋಪಗಳನ್ನು ಮಾಡಲೇಬೇಕು ಎಂದು ಕೆಲವರು ಮಾಡುತ್ತಾರೆ. ಈಜಿಪುರ ಮೇಲ್ಸೇತುವೆ ಕಾಮಗಾರಿ ಸ್ಥಗಿತಗೊಂಡಿದೆ. ಅದನ್ನು ನಮ್ಮ ಸರ್ಕಾರ ಇದ್ದಾಗ ಅದನ್ನು ಆರಂಭಿಸಿದ್ದೆವು. ಬಿಜೆಪಿ ನೇತೃತ್ವದ ಸರ್ಕಾರ ಅದನ್ನು ಸ್ಥಗಿತಗೊಳಿಸಿತು. ಕಾಂಗ್ರೆಸ್ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸುತ್ತೇವೆ. ಮಳೆ ಬಂದಾಗ ಕ್ಷೇತ್ರದಲ್ಲಿ ಒಂದೆರಡು ಪ್ರದೇಶದಲ್ಲಿ ಮುಳುಗಡೆಯಾಗುತ್ತಿದೆ. 4ನೇ ಬ್ಲಾಕ್‌ನಲ್ಲಿ ಸಮಸ್ಯೆ ಬಗೆಹರಿದಿದೆ. 6ನೇ ಬ್ಲಾಕ್ ಮತ್ತು ಕೆ.ಎಸ್. ಕಾಲೊನಿಯಲ್ಲಿ ಸಂಕಷ್ಟ ಪರಿಹರಿಸಲಾಗುತ್ತಿದೆ. ರಸ್ತೆ ಹಾಗೂ ಚರಂಡಿಗಳು ಉತ್ತಮವಾಗಿಯೇ ಇವೆ. ಸಣ್ಣಪುಟ್ಟ ನಿತ್ಯದ ಸಮಸ್ಯೆಗಳಿವೆ. ಅವುಗಳನ್ನೂ ಪರಿಹರಿಸಲಾಗುವುದು.

- **ನೀವು ಗೆಲ್ಲುತ್ತೀರಿ ಎಂಬುದಕ್ಕೆ ನಿಮಗಿರುವ ಬೆಂಬಲ ಎಂಥದ್ದು?**

ರಾಜ್ಯದಲ್ಲೇ ದೊಡ್ಡ ಗ್ರಂಥಾಲಯವನ್ನು ನಿರ್ಮಿಸಲಾಗಿದೆ. ಅಲ್ಲದೆ, ಸರ್ಕಾರಿ ಶಾಲೆಗಳನ್ನೆಲ್ಲ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿ ಮಾಡಲಾಗಿದೆ. ಆಸ್ಪತ್ರೆ ಕೂಡ ಅತ್ಯುತ್ತಮವಾಗಿ ಉನ್ನತೀಕರಣ ಕಂಡಿದೆ. ಆರೋಗ್ಯ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಕ್ಲಿನಿಕ್‌ಗಳನ್ನು ಆರಂಭಿಸಲಾಗಿದೆ. ಜನರು ದಶಕಗಳ ಹಿಂದಿನ ಸ್ಥಿತಿಗೂ ಈಗಿನ ಸ್ಥಿತಿಗೂ ಇರುವ ವ್ಯತ್ಯಾಸವನ್ನು ಗಮನಿಸಿದ್ದಾರೆ. ಅವರ ಎಲ್ಲ ಸಮಸ್ಯೆಗಳನ್ನು ನಿವಾರಿಸಿದ್ದೇವೆ. ದೂರು ಬಂದಾಗ ಕೂಡಲೇ ಪರಿಹಾರ ಆಗುತ್ತದೆ ಎಂಬುದು ಅವರಿಗೆ ಖಾತರಿಯಾಗಿದೆ. ಹೀಗಾಗಿ ಜನ ಬೆಂಬಲ ಎಂದಿಗೂ ನಮ್ಮ ಪರವಾಗಿಯೇ ಇದೆ.

- **ನಿಮ್ಮ ನಿಜವಾದ ಎದುರಾಳಿ ಯಾರು?**

ಪ್ರತಿ ಬಾರಿಯೂ ಬಿಜೆಪಿ ತನ್ನ ಅಭ್ಯರ್ಥಿಯನ್ನು ಬದಲಿಸಿ ಪ್ರಯೋಗ ಮಾಡುತ್ತಿದೆ. ಎಲ್ಲೆಲ್ಲಿಂದಲೋ ಬರುತ್ತಾರೆ. ಬಿಜೆಪಿ ಒಂದಷ್ಟು ಎದುರಾಳಿ.



ಕೆ.ಆರ್. ಶ್ರೀಧರ ರೆಡ್ಡಿ (ಬಿಜೆಪಿ)

‘ಕೆಲಸವೇ ಆಗಿಲ್ಲ, ಬದಲಾವಣೆ ಕಾಲ ಬಂದಿದೆ’

- **ನೀವು ಏನು ಮಾಡುತ್ತೀರಿ ಎಂಬ ಕಾರಣಕ್ಕೆ ಜನ ನಿಮಗೆ ಮತ ಹಾಕಬೇಕು?**

ಬಿಟಿಎಂ ಲೇಔಟ್‌ನಲ್ಲಿ ಸುಮಾರು ಕೆಲಸಗಳು ಆಗಿಲ್ಲ, ಬಾಕಿ ಉಳಿದಿವೆ. ಅವುಗಳನ್ನು ಪೂರ್ಣಗೊಳಿಸುವುದು ಇಲ್ಲಿನ ಸವಾಲು. ಕಸದ ವಿಲೇವಾರಿ ಸಮರ್ಪಕವಾಗಿಲ್ಲ. ಮನೆಮನೆಯಿಂದ ಸಂಗ್ರಹವಾಗುತ್ತಿಲ್ಲ. ಸ್ವಚ್ಛತೆ ಇಲ್ಲದ ಬಡಾವಣೆಗಳಿವೆ. 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಇಲ್ಲ. ಆರೋಗ್ಯ ಕೈಕೊಟ್ಟಾಗ ಸಾಕಷ್ಟು ಸಮಸ್ಯೆ ಆಗುತ್ತಿದೆ. ಮಳೆ ಬಂದಾಗ ಹಲವು ಪ್ರದೇಶಗಳು ಮುಳುಗಡೆಯಾಗುತ್ತವೆ. ಸಿದ್ದಾರ್ಥ ಕಾಲೊನಿ ಸುತ್ತಮುತ್ತ ಕುಡಿಯುವ ನೀರಿನ ಸೌಲಭ್ಯವಿಲ್ಲ, ಒಳಚರಂಡಿ ಸಮಸ್ಯೆಗಳಿವೆ. ಈಜಿಪುರದ ಮೇಲ್ಸೇತುವೆ ಕಾಮಗಾರಿ ಸ್ಥಗಿತಗೊಂಡಿದೆ. ಅದನ್ನು ಬೇಗ ಪೂರ್ಣಗೊಳಿಸಬೇಕಿದೆ. ಮಳೆ ಸಂದರ್ಭದಲ್ಲಿ ಯಾರಿಗೂ ಸಮಸ್ಯೆಯಾಗದಂತೆ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳಲಾಗುತ್ತದೆ.

- **ನೀವು ಗೆಲ್ಲುತ್ತೀರಿ ಎಂಬುದಕ್ಕೆ ನಿಮಗಿರುವ ಬೆಂಬಲ ಎಂಥದ್ದು?**

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕೆಲಸ, ಅಭಿವೃದ್ಧಿ ಕಾರ್ಯಗಳೇ ನನಗೆ ಶ್ರೀರಕ್ಷೆ. 35 ವರ್ಷದಿಂದ ಒಂದೇ ವ್ಯಕ್ತಿಯನ್ನು ನೋಡುತ್ತಿರುವ ಜನತೆ, ಈಗ ಬದಲಾವಣೆ ಬಯಸುತ್ತಿದ್ದಾರೆ. ಇದೇ ನನ್ನ ಹುಮ್ಮಸ್ಸು. ಕಾರ್ಯಕರ್ತರು ಸಾಕಷ್ಟು ಕೆಲಸ ಮಾಡುತ್ತಿದ್ದಾರೆ. ಅವರೆಲ್ಲ ನಮ್ಮ ಶಕ್ತಿ. ಅಭಿವೃದ್ಧಿ ಕೆಲಸಗಳಿಗೆ ಬಿಜೆಪಿ ಒತ್ತು ನೀಡುತ್ತದೆ. ಇದೆಲ್ಲ ಜನರಿಗೂ ಗೊತ್ತು. ಹೀಗಾಗಿ ಎಲ್ಲೆಡೆ ಬಾರಿ ಬೆಂಬಲ ದೊರಕುತ್ತಿದೆ.

- **ನಿಮ್ಮ ನಿಜವಾದ ಎದುರಾಳಿ ಯಾರು?**

ಇಲ್ಲಿ ನನ್ನ ಪ್ರಬಲ ಎದುರಾಳಿ ಕಾಂಗ್ರೆಸ್ ಮಾತ್ರ. ಬೇರೆ ಯಾವುದೇ ಪಕ್ಷ ಇಲ್ಲಿ ಪ್ರಬಲವಾಗಿಲ್ಲ.

ಎಂ.ವೆಂಕಟೇಶ ದೇವೇಗೌಡ (ಜೆಡಿಎಸ್)

‘ರಾಷ್ಟ್ರೀಯ ಪಕ್ಷಗಳಿಗಿಂತ ಪ್ರಾದೇಶಿಕ ಪಕ್ಷ ಉತ್ತಮ’

- **ನೀವು ಏನು ಮಾಡುತ್ತೀರಿ ಎಂಬ ಕಾರಣಕ್ಕೆ ಜನ ನಿಮಗೆ ಮತ ಹಾಕಬೇಕು?**

ಜೆಡಿಎಸ್ ಪಕ್ಷವು ಪಂಚರತ್ನ ಯೋಜನೆಗಳು ಹಾಗೂ ಪ್ರಣಾಳಿಕೆಯಲ್ಲಿ ಘೋಷಿಸಿರುವ ಎಲ್ಲ ಸೌಲಭ್ಯ, ಭರವಸೆಗಳನ್ನು ಜಾರಿಗೊಳಿಸುತ್ತದೆ. ಬಿಟಿಎಂ ಬಡಾವಣೆ ಸಾಕಷ್ಟು ಅಭಿವೃದ್ಧಿಯಾಗಿದ್ದರೂ, ಹಲವು ಕೊರತೆಗಳು ಇವೆ. ರಸ್ತೆ, ಚರಂಡಿಯಂತಹ ಸಮಸ್ಯೆಗಳು ಕೆಲವು ಪ್ರದೇಶಗಳಲ್ಲಿ ಎದ್ದುಕಾಣುತ್ತವೆ. ಈಜಿಪುರದಂತಹ ಪ್ರದೇಶದಲ್ಲಿ ಜನರು ಮಳೆ ಬಂದಾಗ ಸಂಕಷ್ಟಕ್ಕೀಡಾಗುತ್ತಾರೆ. ಇವುಗಳಿಗೆಲ್ಲ ಶಾಶ್ವತ ಪರಿಹಾರ ನೀಡಲಾಗುತ್ತದೆ. ಸ್ಥಳೀಯ ನಿವಾಸಿಯಾಗಿ ಹಲವು ವರ್ಷಗಳಿಂದ ಕ್ಷೇತ್ರದಲ್ಲಿ ಸಾಕಷ್ಟು ಸಮಸ್ಯೆಗಳನ್ನು ನೋಡಿದ್ದೇನೆ. ಅವುಗಳಿಗೆಲ್ಲ ಮುಕ್ತಿ ನೀಡಿ, ಎಲ್ಲರಿಗೂ ಸಕಲ ಸೌಕರ್ಯ ಒದಗಿಸಲಾಗುತ್ತದೆ.

- **ನೀವು ಗೆಲ್ಲುತ್ತೀರಿ ಎಂಬುದಕ್ಕೆ ನಿಮಗಿರುವ ಬೆಂಬಲ ಎಂಥದ್ದು?**

ಮತದಾರರು ಈ ಬಾರಿ ಹೊಸಬರಿಗೆ ಅವಕಾಶ ಮಾಡಿಕೊಡುತ್ತಾರೆ ಎಂಬ ನಂಬಿಕೆ ಇದೆ. 2016ರಿಂದ ನಾನು ಕ್ಷೇತ್ರದ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಕಾರ್ಯಕರ್ತರನ್ನು ಸೇರಿಸಿದ್ದೇನೆ. ಚುನಾವಣೆಯಿಂದ ಚುನಾವಣೆಗೆ ಜೆಡಿಎಸ್ ಪಕ್ಷದ ಶಕ್ತಿ ಹೆಚ್ಚಾಗುತ್ತಿದೆ. ಹಿಂದುಳಿದ ವರ್ಗಕ್ಕೆ ಸೇರಿದ ನನಗೆ ಈ ಬಾರಿ ಜನರು ಬೆಂಬಲ ನೀಡುತ್ತಾರೆ. ಸಾಮಾನ್ಯ ಕಾರ್ಯಕರ್ತನಾದ ನನ್ನನ್ನು ಗುರುತಿಸಿ ಪಕ್ಷ ಟಿಕೆಟ್ ನೀಡಿದೆ. ಅದೇ ರೀತಿ ತಿಗಳ ಸಮುದಾಯ ಸೇರಿದಂತೆ ಎಲ್ಲ ಸಮುದಾಯಗಳೂ ಜೆಡಿಎಸ್‌ಗೆ ಈ ಬಾರಿ ಆಶೀರ್ವಾದ ಮಾಡಲಿವೆ ಎಂಬ ನಂಬಿಕೆ ಇದೆ.

- **ನಿಮ್ಮ ನಿಜವಾದ ಎದುರಾಳಿ ಯಾರು?**

ಎರಡು ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಹಾಗೂ ಬಿಜೆಪಿ ಎದುರಾಳಿಗಳು. ಇವರೆಡು ಪಕ್ಷಗಳಿಗೆ ಅವಕಾಶ ನೀಡಲಾಗಿದ್ದು, ಈ ಬಾರಿ ಜೆಡಿಎಸ್‌ಗೆ ಅವಕಾಶ ಮಾಡಿಕೊಡಬೇಕೆಂದು ಮತದಾರರನ್ನು ಕೋರಲಾಗುತ್ತಿದೆ.

ಮತದಾರರ ಓಲೈಕೆಗೆ ತರಹೇವಾರಿ ಕಸರತ್ತು

ಬೆಂಗಳೂರು: ಮತದಾನಕ್ಕೆ 14 ದಿನಗಳಷ್ಟೇ ಬಾಕಿ ಇದ್ದು, ಮತದಾರರ ಓಲೈಕೆಗೆ ಅಭ್ಯರ್ಥಿಗಳು ಹಲವು ಕಸರತ್ತುಗಳನ್ನು ನಡೆಸುತ್ತಿದ್ದಾರೆ.

ಬೀದಿ ಬೀದಿ, ಗಲ್ಲಿ–ಗಲ್ಲಿಗಳನ್ನು ಸುತ್ತಿ ಮತದಾರರ ಮನೆಯ ಮುಂದೆ ಮತಯಾಚಿಸುತ್ತಿದ್ದಾರೆ. ಬಹುತೇಕರು ಕರಪತ್ರಗಳನ್ನು ಹಿಡಿದು ಕೈ ಮುಗಿದು ಮತ ಕೇಳುತ್ತಿದ್ದರೆ, ಕೆಲವರು ಮತದಾರರ ಕಾಲಿಗೆ ಎರಗಿ ಓಲೈಸುವ ಪ್ರಯತ್ನ ಮಾಡುತ್ತಿದ್ದಾರೆ.

ಚಾಮರಾಜಪೇಟೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಭಾಸ್ಕರ ರಾವ್ ಅವರು ಮತದಾರರನ್ನು ಸೆಳೆಯಲು ಹೊಸ ಮಾರ್ಗ ಕಂಡುಕೊಂಡಿದ್ದು, ಸೈಕಲ್ ಏರಿ ಕ್ಷೇತ್ರದಲ್ಲಿ ಸುತ್ತಾಟ ಆರಂಭಿಸಿದ್ದಾರೆ. ಪಾದರಾಯನಪುರದಲ್ಲಿ ಕಿರಿದಾದ ರಸ್ತೆಗಳಲ್ಲಿ ಸೈಕಲ್‌ನಲ್ಲಿ ಸಾಗಿ ಪ್ರಚಾರ ಮಾಡಿದರು. ಅಲ್ಲಲ್ಲಿ ನಿಂತು ಜನರನ್ನು ಭೇಟಿಯಾಗಿ ಮತ ನೀಡುವಂತೆ ಮನವಿ ಮಾಡಿದರು. ಬೆಂಬಲಿಗರೂ ಸೈಕಲ್‌ನಲ್ಲಿ ಭಾಸ್ಕರ ರಾವ್ ಅವರನ್ನು ಹಿಂಬಾಲಿಸಿದರು.

ಸರ್ವಜ್ಞ ನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕೆ.ಜೆ.ಜಾರ್ಜ್ ಅವರು ಬೆಂಬಲಿಗರೊಂದಿಗೆ ಪ್ರಚಾರ ನಡೆಸಿದರು. ಬ್ಯಾಂಡ್ ಸೆಟ್‌ನೊಂದಿಗೆ ಬೆಂಬಲಿಗರು ಕುಣಿಯುತ್ತಿದ್ದರೆ, ಸ್ವತಃ ಜಾರ್ಜ್ ಅವರೇ ಡ್ರಮ್ ಬಾರಿಸಿ ಕಾರ್ಯಕರ್ತರ ಉತ್ಸಾಹ ಹೆಚ್ಚಿಸಿದರು.

ಹೆಬ್ಬಾಳ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಟ್ಟಾ ಜಗದೀಶ್ ಅವರು ನಾಗಶೆಟ್ಟಿಹಳ್ಳಿಯ ಬೂಪಸಂದ್ರದಲ್ಲಿ ಪ್ರಚಾರದ ವೇಳೆ ಹಿರಿಯರೊಬ್ಬರ ಕಾಲಿಗೆ ನಮಸ್ಕರಿಸಿದರು

ಸರ್ವಜ್ಞನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಜೆ. ಜಾರ್ಜ್ ಅವರು ಕೆ.ಜಿ.ಹಳ್ಳಿಯ ಗಾಂಧಿನಗರದಲ್ಲಿ ಮತಯಾಚನೆ ವೇಳೆ ಡ್ರಂ ಬಾರಿಸಿ ಕಾರ್ಯಕರ್ತರನ್ನು ಹುರಿದುಂಬಿಸಿದರು

ಬಸವನಗುಡಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯು.ಬಿ. ವೆಂಕಟೇಶ್ ಅವರ ಮಗಳು ಸ್ವಪ್ನಾ ಸಂಬಂಧಿಕರೊಂದಿಗೆ ಗವಿಪುರದಲ್ಲಿ ಬುಧವಾರ ತಂದೆಯ ಪರ ಪ್ರಚಾರ ಮಾಡಿದರು – ಪ್ರಜಾವಾಣಿ ಚಿತ್ರಗಳು

ಮಲ್ಲೇಶ್ವರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಉತ್ಕರ್ಷ ಎ. ಅವರು ಗಾಯತ್ರಿನಗರದಲ್ಲಿ ಮತಯಾಚನೆ ಮಾಡಿದರು

ಮಹದೇವಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಂಜುಳಾ ಅರವಿಂದ ಲಿಂಬಾವಳಿ ಅವರು ಕಾಡುಗೋಡಿಯಲ್ಲಿ ಬುಧವಾರ ಪ್ರಚಾರ ನಡೆಸಿದರು

ಪಾದರಾಯನಪುರದಲ್ಲಿ ಭಾಸ್ಕರ ರಾವ್ ಸೈಕಲ್‌ನಲ್ಲಿ ತೆರಳಿ ಪ್ರಚಾರ ನಡೆಸಿದರು

ನೈಋತ್ಯ ರೈಲ್ವೆ G20

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರ್ ಸೂಚನೆ ಸಂ. CAO/CN/BNC/2/2023 ದಿನಾಂಕ: 13.04.2023

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಗದಗ–ವಾಡಿ ವಿಭಾಗ: ಕಿಮೀ:214.525 (1x24.0ಮೀ ಕಾಂಪೋಸಿಟ್ ಗಿರ್ಡರ್) ನಲ್ಲಿ ರೋಡ್ ಓವರ್ ಬ್ರಿಡ್ಜ್ ನಂ.293 ಮತ್ತು ಕಿಮೀ: 217.812 (1x48.0ಮೀ ಬೌಸ್ಟ್ರಿಂಗ್ ಗಿರ್ಡರ್+3x18.71ಮೀ) ನಲ್ಲಿ ಆರ್‌ಒಬಿ ನಂ.304 ಮತ್ತು ತಿರುವು ರಸ್ತೆ ನಿರ್ಮಾಣ. (ಟೆಂಡರ್ ಉಲ್ಲೇಖ ಸಂಖ್ಯೆ: GDG-WD-44). ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 03–05–2023, 15:00 ಗಂಟೆಯವರೆಗೆ	ರೂ. 35,67,68,325/-
2	ಬೆಂಗಳೂರು ಕಂಟೋನ್ಮೆಂಟ್–ಯಾರ್ಡ್ – ಎಫ್‌ಒಬಿ ನಂ.3 ನಿರ್ಮಾಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಕಂಟೋನ್ಮೆಂಟ್ ಸ್ಟೇಷನ್ ಪುನರಾಭಿವೃದ್ಧಿಗಾಗಿ ಪ್ಲಾಟ್‌ಫಾರ್ಮ್ ನಂ.2 ಮತ್ತು 3 ರ ಅಗಲೀಕರಣ. (ಟೆಂಡರ್ ಉಲ್ಲೇಖ ಸಂಖ್ಯೆ: BNC-FOB-PF-2-3). ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05–05–2023, 15:00 ಗಂಟೆಯವರೆಗೆ	ರೂ. 1,19,34,942/-
3	ಶಿವಮೊಗ್ಗ– ಶಿಕಾರಿಪುರ ರಾಣೆಬೆನ್ನೂರು ಹೊಸ ಮಾರ್ಗದ ಯೋಜನೆಯಲ್ಲಿ ಇಂಜಿನಿಯರಿಂಗ್ ಸಂಗ್ರಹಣೆ ಮತ್ತು ನಿರ್ಮಾಣ (ಇಪಿಸಿ) ಆಧಾರದ ಮೇಲೆ ಕೋಟೆಗಂಗೂರು (ಹೊರತುಪಡಿಸಿ) ಮತ್ತು ಶಿಕಾರಿಪುರ (ಒಳಗೊಂಡಂತೆ) ನಿಲ್ದಾಣಗಳ ನಡುವೆ ಸಿಗ್ನಲ್ ಮತ್ತು ದೂರಸಂಪರ್ಕ ಕಾರ್ಯಗಳು ಮತ್ತು ವಿದ್ಯುತ್ ಸಾಮಾನ್ಯ ಸೇವೆಗಳು ಸೇರಿದಂತೆ ಚೈನೇಜ್ 8.020 ಮತ್ತು ಚೈನ್ನೇಜ್ 48.000 @ 40'46 @ 980 ಕಿಮೀ ನಡುವೆ ಹೊಸ ಬ್ರಾಡ್ ಗೇಜ್ ಲೈನ್ ನಿರ್ಮಾಣಕ್ಕಾಗಿ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಸೇವೆಗಳನ್ನು ಒದಗಿಸಲು ಪ್ರಾಧಿಕಾರದ ಇಂಜಿನಿಯರ್ ನೇಮಕಕ್ಕಾಗಿ ಪ್ರಸ್ತಾವನೆಗಾಗಿ ವಿನಂತಿ (ಆರ್‌ಎಫ್‌ಪಿ) ಮತ್ತು ಕೋಟೆಗಂಗೂರು (ಸೇರಿದಂತೆ) ಮತ್ತು ಶಿಕಾರಿಪುರ (ಸೇರಿದಂತೆ) ನಡುವೆ ರೈಲ್ವೆ ವಿದ್ಯುದ್ದೀಕರಣ ಕಾಮಗಾರಿಗಳು. (ಟೆಂಡರ್ ಉಲ್ಲೇಖ ಸಂಖ್ಯೆ: PMS-SMET-RNR-EPC-R).	ರೂ. 8,63,60,584/-
4	[ತುಮಕೂರು–ಚಿತ್ರದುರ್ಗ– ದಾವಣಗೆರೆ ಹೊಸ ಮಾರ್ಗ ಯೋಜನೆಗೆ ಯೋಜನಾ ನಿರ್ವಹಣಾ ಸೇವೆಗಳನ್ನು ಒದಗಿಸಲು ಪ್ರಾಧಿಕಾರದ ಇಂಜಿನಿಯರ್ ನೇಮಕಕ್ಕಾಗಿ ಪ್ರಸ್ತಾವನೆಗಾಗಿ ವಿನಂತಿ (ಆರ್‌ಎಫ್‌ಪಿ) ಮತ್ತು ಇಂಜಿನೀಯರಿಂಗ್ ಸಂಗ್ರಹಣೆ ಮತ್ತು ನಿರ್ಮಾಣ (ಇಪಿಸಿ) ವಿಧಾನದ ಮೇಲೆ ತೋಳಹುಣಸೆ (ಹೊರತುಪಡಿಸಿ) ಮತ್ತು ಭರಮ ಸಾಗರ್ (ಹೊರತುಪಡಿಸಿ) ನಿಲ್ದಾಣಗಳ ನಡುವೆ ಎಲೆಕ್ಟ್ರಿಕಲ್ ಮತ್ತು ದೂರಸಂಪರ್ಕ ಕಾರ್ಯಗಳನ್ನು ಒಳಗೊಂಡಂತೆ ಚೈನೇಜ್ 192000 ಮತ್ತು ಚೈನೇಜ್ 171640 ನಡುವೆ ಹೊಸ ಬಿಜಿ ಲೈನ್ ನಿರ್ಮಾಣ. (ಟೆಂಡರ್ ಉಲ್ಲೇಖ ಸಂಖ್ಯೆ: PMS-TK-DVG-R). ಕಾಮಗಾರಿ 3&4 ಕ್ಕೆ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29–05–2023, 15:00 ಗಂಟೆಯವರೆಗೆ	ರೂ. 2,60,66,849/-

ಟೆಂಡರ್ ಸೂಚನೆ ಸಂ. CAO/CN/BNC/5/2023 ದಿನಾಂಕ: 20.04.2023

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಗದಗ–ಹೊಟಗಿ ಡಬ್ಲಿಂಗ್ ವಿಭಾಗ: ಪ್ಲಾಟ್‌ಫಾರ್ಮ್ ಕಾಮಗಾರಿ ಸೇರಿದಂತೆ ಮುಗಳೊಳ್ಳಿ, ಜಡ್ರಾಮಕುಂಟೆ ಮತ್ತು ಆಲಮಟ್ಟಿಯಲ್ಲಿ ಸ್ಟೇಷನ್ ಕಟ್ಟಡಗಳ ನಿರ್ಮಾಣ ಮತ್ತು ಆಲಮಟ್ಟಿಯಲ್ಲಿ ಎಫ್‌ಒಬಿ. (ಟೆಂಡರ್ ಉಲ್ಲೇಖ ಸಂಖ್ಯೆ: HIGA-91). ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10–05–2023, 15:00 ಗಂಟೆಯವರೆಗೆ	ರೂ. 21,31,15,754/-
2	ಗದಗ–ಹೊಟಗಿ ದ್ವಿಗುಣಗೊಳಿಸುವ ವಿಭಾಗ: 1. 1x5.0ಮೀx5.150ಮೀ ಆರ್‌ಸಿಸಿ ಸೆಗ್ಮೆಂಟಲ್ ಬಾಕ್ಸ್‌ಗಳಾಗಿ ಕಿಮೀ 101/806 ಮುಗಳೊಳ್ಳಿ ಯಾರ್ಡ್ ನಲ್ಲಿ ಎಲ್‌ಸಿ ನಂ.50 ರ ಬದಲಿಗೆ ಆರ್‌ಯುಬಿ ನಿರ್ಮಾಣ. 2. ಸೀತಿಮನಿ ಮತ್ತು ಕೂಡಲಸಂಗಮ ರೋಡ್ ನಿಲ್ದಾಣಗಳ ನಡುವೆ ಅಸ್ತಿತ್ವದಲ್ಲಿರುವ 10.932 ಮೀ ಸ್ಟೀಲ್ ಗರ್ಡರ್ ಅನ್ನು ಸರಿಯಾಗಿ ಕಿತ್ತುಹಾಕಿ ಕಿಮೀ 120.747 ನಲ್ಲಿ ಸೇತುವೆ ನಂ.62ಇ(ಆರ್‌ಯುಬಿ) ನಲ್ಲಿ 1x6.00x5.00ಮೀ SQ (8.967SK) ಆರ್‌ಸಿಸಿ ಸೆಗ್ಮೆಂಟಲ್ ಬಾಕ್ಸ್‌ನಂತೆ ಆರ್‌ಯುಬಿ ನಿರ್ಮಾಣ. 3. ಸೀತಿಮನಿ ಮತ್ತು ಕೂಡಲಸಂಗಮ ರೋಡ್ ನಿಲ್ದಾಣಗಳ ನಡುವೆ ಕಿಮೀ120/947 ನಲ್ಲಿ 1x1.80x1.20ಮೀ ಆರ್‌ಸಿಸಿ ಬಾಕ್ಸ್ ಸ್ಲ್ಯಾಬ್ ನ ಸೇತುವೆ ನಂ.62F ನಿರ್ಮಾಣ. 4. ಆಲಮಟ್ಟಿ ಮತ್ತು ವಂಡಾಲ್ ನಿಲ್ದಾಣದ ನಡುವೆ ಕಿಮೀ.128.925 ನಲ್ಲಿ 21.80ಮೀ ಸ್ಪಷ್ಟವಾದ ಆರ್‌ಸಿಸಿ ಟಿ ಬೀಮ್ ಸ್ಲ್ಯಾಬ್ ಅನ್ನು ಸರಿಯಾಗಿ ಕಿತ್ತುಹಾಕಿ 60.00ಮೀ ಬೋ ಸ್ಟ್ರಿಂಗ್ ಗಿರ್ಡರ್‌ನ ಕಿಮೀ.128.940 ನಲ್ಲಿ ಸೇತುವೆ ನಂ.63C ಆರ್‌ಒಬಿ ನಿರ್ಮಾಣ. (ಟೆಂಡರ್ ಉಲ್ಲೇಖ ಸಂಖ್ಯೆ: HIGA-92). ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12–05–2023, 15:00 ಗಂಟೆಯವರೆಗೆ	ರೂ. 26,19,87,204/-

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕೆಲಸಗಳು ಬೆಂಗಳೂರು ಕಂಟೋನ್ಮೆಂಟ್

PUB/40/AAV/PRB/SWR/2023-24

S.W.Railways SWRRLY SWRRLY

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

PERSONAL

Change of Name

CHANGE OF NAME

I DHIVIYA, Daughter of HAV 1366213H, Murthy A, Residing at No. 32/400, J R Layout, Opp. J R Apartment, Chelekere, Bangalore North, Bangalore- 560043, have changed my name from DHIVIYA to M DHIVIYA vide affidavit dated 26.04.2023, before notary Y.R. Chandrashekar, Bangalore.

I, RAJKUMAR R/o. #5/43, D.Thammandrapalli Village, Kundumaranapalli post, Denkanikottai Taluk-635113, have changed my name to RAJALINGAM. M, affidavit dated 26.04.2023, notary B.V. Nagabhushana, Bangalore.

I, ARIYAMAAN RAVI RAJA N RAJAMANICKAM VIJAYASEKARAN S/o Vijayasekaran N.R, Residing at No.41, Vani Vilas Road Basavangudi Bengaluru-560004, have Change My Name to ARIYAMAAN VIJAYASEKARAN vide affidavit dated 26-04-2023 sworn before Notary Gangaraju B.N Bangalore

I, ANUSHA HEGDE R/a. No. P-5, Gowramma Building, Begur Main Road, Bengaluru-560068, have changed my name from JAYASHREE HEGDE to ANUSHA HEGDE vide affidavit dated 26.04.2023 before notary K.H. Jagadish Bangalore.

EDUCATION CORNER ಕ್ಲಾಸಿಫೈಡ್ಸ್

MASTER THE FUTURE OF CORPORATE BUSINESS & MANAGEMENT

ADMISSIONS ARE OPEN

BBA Aviation Management
- Logistics Network Planning
- Aviation Corporate Affairs
- Environmental Research

BBA
- Cyber Wall
- HR Act and Law
- Digital Graphing

BCA
- Social Cyber Defence
- Artificial Intelligence
- Data Science/Machine Learning

B.Com
- Finance Modelling
- Advanced Business Techniques
- People and Culture

B.Sc. Aircraft Maintenance +DGCA CAR 147 AME Basic (B1.1/B2)

M.Com

MBA

SYLLABUS as per National Education Policy 2020 with ENTRY/EXIT options

HBS HINDUSTAN BUSINESS SCHOOL
P. B. No. 3776, Ashwathanagar
Marathahalli, Bangalore-560037
Ph: 080-25238650, 25232217 • Toll Free: 18004258650
Email: admissions@hindustanacademy.edu.in
www.hindustanacademy.edu.in
8971404357 • 9740037853
See more details

EDUCATIONAL

Admission

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

AIR FORCE SCHOOL JALAHALLI
CBSE AFFILIATION No.880006
APTITUDE TEST FOR ADMISSION IN CLASS XI (SCIENCE & COMMERCE) STREAM
Air Force School invites application for Aptitude Test (AT) from students appearing in Class X Board Exams for Admission into Class XI (Science and Commerce) Session 2023-24
Online Registration from 29 Apr 23 to 06 May 23 till 1700 hrs
For Registration login: www.afsjal.org
Date of Aptitude Test: 09 May 23
Venue: AFS Jalahalli (East)
For any queries contact: 080-23455063 Ph: 9606398474
Principal
Air Force School Jalahalli

ASTRO YATRA

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ಪ್ಯಾಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

ಸಂಕ್ಷಿಪ್ತ ಸುದ್ದಿ

ಸಾಮಾಜಿಕ ಮಾಧ್ಯಮದಲ್ಲಿ ನಿಂದನೆ: ದೂರು ದಾಖಲು

ಬೆಂಗಳೂರು: ಯಶವಂತಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಟಿ.ಸೋಮಶೇಖರ್ ಅವರ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನ ಮಾಡಲಾಗಿದೆ ಎಂದು ಆರೋಪಿಸಿ ಕೆಂಗೇರಿ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ಪೊಲೀಸರು ಎಫ್‌ಐಆರ್ ದಾಖಲಿಸಿ ಕೊಂಡಿದ್ದಾರೆ.

ಕೆ.ಟಿ.ಶ್ರದ್ಧಾನಂದ ಅವರು ನೀಡಿದ ದೂರು ಆಧರಿಸಿ, ಜೆಡಿಎಸ್ ರಾಜ್ಯ ಕಾನೂನು ಘಟಕದ ಅಧ್ಯಕ್ಷ ಎ.ಪಿ. ರಂಗನಾಥ್ ಹಾಗೂ ಮತ್ತೊಂದು ಪ್ರಕರಣದಲ್ಲಿ ಅಪರಿಚಿತ ವ್ಯಕ್ತಿಯ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ಮತದಾರರಲ್ಲಿ ಕೆಟ್ಟ ಭಾವನೆ ಮೂಡಿಸುವ ರೀತಿಯಲ್ಲಿ ರಂಗನಾಥ್ ಎಂಬುವವರು ಫೇಸ್‌ಬುಕ್‌ನಲ್ಲಿ ಬರೆದಿದ್ದಾರೆ. ಅಲ್ಲದೇ ಜೆಡಿಎಸ್ ಯಶವಂತಪುರ ಆ್ಯಂಡ್ ಜೆಡಿಎಸ್ ಯೂಥ್ ಕರುನಾಡು ಅಫೀಶಿಯಲ್ ಎಂಬ ಇನ್‌ಸ್ಟಾಗ್ರಾಂ ಖಾತೆಯ ಮೂಲಕ ಸೋಮಶೇಖರ್ ಅವರನ್ನು ನಿಂದಿಸಿ ಪೋಸ್ಟ್ ಹಾಕಲಾಗಿದೆ. ಅವರು ವಿರುದ್ಧ ಕ್ರಮ ಜರುಗಿಸಬೇಕು’ ಎಂದು ದೂರಿನಲ್ಲಿ ಕೋರಿದ್ದಾರೆ.

ಎಐಸಿಸಿ ವೀಕ್ಷಕರ ನೇಮಕ

ಬೆಂಗಳೂರು: ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಐದು ಪ್ರಾದೇಶಿಕ ವಿಭಾಗಗಳಿಗೆ ಎಐಸಿಸಿ ವೀಕ್ಷಕರನ್ನು ನೇಮಿಸಿದೆ.

ಮಧ್ಯ ಕರ್ನಾಟಕ ಭಾಗಕ್ಕೆ ಅವಿನಾಶ್ ಪಾಂಡೆ, ಮೈಸೂರು ಭಾಗಕ್ಕೆ ಡಾ.ಎ. ಚೆಲ್ಲ ಕುಮಾರ್, ಕಿತ್ತೂರು ಕರ್ನಾಟಕ– ಮಾಣಿಕಂ ಟಾಗೋರ್, ಕರಾವಳಿ ಕರ್ನಾಟಕ– ಡಾ. ಅಜಯ್ ಕುಮಾರ್, ಕಲ್ಯಾಣ ಕರ್ನಾಟಕ ಭಾಗಕ್ಕೆ ಮೋಹನ್ ಪ್ರಕಾಶ್ ಅವರನ್ನು ನೇಮಿಸಲಾಗಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

ಕೆ.ಆರ್. ಪುರದಲ್ಲಿ ಕಾಂಗ್ರೆಸ್ ಬಿರುಸಿನ ಪ್ರಚಾರ

ಕೆ.ಆರ್.ಪುರ: ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಡಿ.ಕೆ.ಮೋಹನ್ ಬಾಬು ಅವರು ಭಟ್ಟರಹಳ್ಳಿಯಲ್ಲಿ ಬಿರುಸಿನ ಪ್ರಚಾರ ಕೈಗೊಂಡರು.

ಈ ವೇಳೆ ಅವರು, ರಾಜ್ಯ ಮತ್ತು ಕ್ಷೇತ್ರದಲ್ಲಿ ಕಾಂಗ್ರೆಸ್ ಅಲೆ ಇದೆ. ಕ್ಷೇತ್ರದಲ್ಲಿ ಈ ಬಾರಿ ಕಾಂಗ್ರೆಸ್ ಜಯಭೇರಿ ಬಾರಿಸಲಿದೆ. ಅಭಿವೃದ್ಧಿಗಾಗಿ ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದ ಮಾಡಲಿದ್ದಾರೆ ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮಾಡಿರುವ ಅಭಿವೃದ್ಧಿ ಯೋಜನೆಗಳೇ ಶ್ರೀರಕ್ಷೆಯಾಗಲಿದೆ. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ರೂಪಿಸಿದ್ದು, ಇದರ ಜಾರಿಗೆ ಅವಕಾಶ ಮಾಡಿಕೊಡಬೇಕು ಎಂದು ಕೋರಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ನಾರಾಯಣಸ್ವಾಮಿ, ಕೆಪಿಸಿಸಿ ಸದಸ್ಯ ಕಲ್ಕೆರೆ ನಾರಾಯಣಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್, ಹೊರಮಾವು ವೆಂಕಟೇಶ್ ಇದ್ದರು.

ಎಚ್‌.ಡಿ. ಕುಮಾರಸ್ವಾಮಿ ವ್ಯಂಗ್ಯ

ಅವರ ಭಾಷೆ ನಮಗೆ ಗೊತ್ತಿಲ್ಲ. ಯಾವ ಗೂಟದ ಕಾರು ಕೊಡುತ್ತಾರೆ? ಖಾಸಗಿ ಕಾರಿಗೆ ಗೂಟ ಇಟ್ಟು ಕೊಡುತ್ತಾರಾ- ವಿ. ಸೋಮಣ್ಣ ವಿರುದ್ಧವೂ ವಾಗ್ದಾಳಿ

‘ನಾಯಕರು ರಕ್ತದ ಕೊರತೆ ಮಾಡಿಕೊಳ್ಳಬೇಡಿ’

ಬೆಂಗಳೂರು: ‘ಚುನಾವಣಾ ಪೂರ್ವ ಸಮೀಕ್ಷೆಗಳ ಯಾವ ವರದಿಗಳೂ ನಿಜವಾಗುವುದಿಲ್ಲ. ರಾಜಕೀಯ ನಾಯಕರು ರಕ್ತದಲ್ಲಿ ಬರೆದು ಕೊಡುವುದಾಗಿ ಹೇಳಿ ರಕ್ತದ ಕೊರತೆ ಮಾಡಿಕೊಳ್ಳಬೇಡಿ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

‘ಕಾಂಗ್ರೆಸ್‌ಗೆ 150 ಸ್ಥಾನ ಬರುತ್ತದೆ ಎಂದು ರಕ್ತದಲ್ಲಿ ಬರೆದು ಕೊಡುತ್ತೇನೆ’ ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿಕೆ ಕುರಿತು ಸುದ್ದಿಗಾರರಿಗೆ ಬುಧವಾರ ಪ್ರತಿಕ್ರಿಯಿಸಿದ ಅವರು, ‘ಶಿವಕುಮಾರ್ ಅವರು ರಕ್ತದಲ್ಲಿ ಬರೆದು ಕೊಡುವುದು ಬೇಡ. ಪಾಪ, ಅವರಿಗೆ ರಕ್ತದ ಕೊರತೆ ಆಗುತ್ತದೆ’ ಎಂದರು.

‘ಜಗದೀಶ ಶೆಟ್ಟರ್ ಅವರು ಸೋಲುವುದಾಗಿ ರಕ್ತದಲ್ಲಿ ಬರೆದುಕೊಡುವುದಾಗಿ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ. ಅವರು ಕೂಡ ಹಾಗೆ ಮಾಡುವುದು ಬೇಡ. ನೀವು ರಕ್ತದಲ್ಲಿ ಬರೆದು ಕೊಡುವುದು ಈಗ ಮುಖ್ಯವಲ್ಲ. ಜನರು ನಿಮಗೆ ಮತ ಕೊಡುವುದು ಮುಖ್ಯ’ ಎಂದು ಹೇಳಿದರು.

‘ನಾವು ಯಾರಿಗೂ ಹಣ ಕೊಟ್ಟು ಸಮೀಕ್ಷೆ ಮಾಡಿಸಿಲ್ಲ. ಅದರ ಅಗತ್ಯವೂ ನಮಗಿಲ್ಲ. ಜನಮತದ ಆಧಾರದಲ್ಲಿ ಅಧಿಕಾರಕ್ಕೆ ಬರುತ್ತೇವೆ ಎಂಬ ನಂಬಿಕೆ ನಮಗೆ ಇದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಿಜೆಪಿಗೆ 156 ಸ್ಥಾನ: ವಿಶ್ವಾಸ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 156ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ ಎಂದು ರಾಜ್ಯಸಭೆ ಸದಸ್ಯ ಬಿಪ್ಲಬ್ ಕುಮಾರ್ ದೇಬ್ ಬುಧವಾರ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು, ‘ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಭಿವೃದ್ಧಿ ಯೋಜನೆಗಳ ಮೂಲಕ ಜನಮನ್ನಣೆ ಗಳಿಸಿದೆ. ಕಾಂಗ್ರೆಸ್ ಸುದೀರ್ಘ ಆಡಳಿತ ನಡೆಸಿದ್ದರೂ ಅಭಿವೃದ್ಧಿ ಶೂನ್ಯವಾಗಿತ್ತು’ ಎಂದು ಅವರು ಹೇಳಿದರು.

ಮಹದೇವಪುರ ಕ್ಷೇತ್ರವು ಅರವಿಂದ ಲಿಂಬಾವಳಿ ಅವರ ನೇತೃತ್ವದಲ್ಲಿ ನೇತೃತ್ವದಲ್ಲಿ ಸಾಕಷ್ಟು ಅಭಿವೃದ್ಧಿ ಕಂಡಿದೆ ಎಂದು ಹೇಳಿದರು. ಬ್ರಾಹ್ಮಣ ಮಂಡಳಿ ಅಧ್ಯಕ್ಷ ಸಚ್ಚಿದಾನಂದ-ಮೂರ್ತಿ, ನಗರ ಮಂಡಲ ಅಧ್ಯಕ್ಷ ಮನೋಹರರೆಡ್ಡಿ, ರಾಜಾರೆಡ್ಡಿ, ಮಹೇಂದ್ರ ಮೋದಿ ಇದ್ದರು.

ಭೇಟಿಗೂ ಮುನ್ನ ಮತದಾರರಿಗೆ ಮಾಹಿತಿ: ಮನೋಜ್ ಕುಮಾರ್ ಮೀನಾ

29ರಿಂದ ಮೇ 6ವರೆಗೆ ಮನೆಯಲ್ಲಿ ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 80 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಾದವರು ಹಾಗೂ ಅಂಗವಿಕಲರಿಗೆ ಏಪ್ರಿಲ್ 29ರಿಂದ ಮೇ 6ರವರೆಗೆ ಮನೆಯಿಂದಲೇ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗುವುದು ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, '80,250 ಹಿರಿಯ ನಾಗರಿಕರು ಮತ್ತು 19,279 ಅಂಗವಿಕಲರು ಮನೆಯಿಂದ ಮತದಾನ ಮಾಡಲು ನೋಂದಾಯಿಸಿಕೊಂಡಿದ್ದಾರೆ. ಅವರೆಲ್ಲರಿಗೂ ಮನೆಯಿಂದಲೇ ಗೋಪ್ಯ ಮತದಾನಕ್ಕೆ ಅವಕಾಶ ಕಲ್ಪಿಸಲು ವ್ಯವಸ್ಥೆ ಮಾಡಲಾಗಿದೆ' ಎಂದರು.

ಮತಗಟ್ಟೆ ಸಿಬ್ಬಂದಿಯು ಮತಪತ್ರ ಹಾಗೂ ಮತಪೆಟ್ಟಿಗೆಗಳೊಂದಿಗೆ ಪ್ರತೀ ಮತದಾರರ ಮನೆಗೆ ಎರಡು ಬಾರಿ ಭೇಟಿ ನೀಡುತ್ತಾರೆ. ಮುಂಚಿತವಾಗಿ ಮಾಹಿತಿ ನೀಡಿದ ಬಳಿಕವೇ ಮತಗಟ್ಟೆ ಸಿಬ್ಬಂದಿ ಭೇಟಿನೀಡುವರು.

ಪ್ರಜಾ ಮತ ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

ಮೊದಲ ಬಾರಿ ಮತದಾರರು ಮನೆಯಲ್ಲಿ ರದಿದ್ದರೆ, ಎರಡನೇ ಬಾರಿ ಹೋಗುತ್ತಾರೆ. ಆ ಬಳಿಕ ಮತದಾನಕ್ಕೆ ಅವಕಾಶ ಇರುವುದಿಲ್ಲ. ಮನೆಯಿಂದ ಮತದಾನಕ್ಕೆ ನೋಂದಣಿ ಮಾಡಿಸಿಕೊಂಡಿರುವವರಿಗೆ ಮತಗಟ್ಟೆಗೆ ಬಂದು ವಿದ್ಯುನ್ಮಾನ ಮತಯಂತ್ರದಲ್ಲಿ ಮತ ಚಲಾಯಿಸಲು ಅವಕಾಶ ಇಲ್ಲ ಎಂದು ಹೇಳಿದರು.

47,488 ಸೇವಾ ಮತದಾರರಿಗೆ ಇ-ಮೇಲ್ ಮೂಲಕ ಮತಪತ್ರಗಳನ್ನು ರವಾನಿಸಲಾಗಿದೆ. ಅವರು ಮತಪತ್ರಗಳನ್ನು ಡೌನ್‌ಲೋಡ್ ಮಾಡಿ, ಮತ ಚಲಾಯಿಸಿ ಅವುಗಳನ್ನು ಅಂಚೆ ಮೂಲಕ ಆಯಾ ಕ್ಷೇತ್ರಗಳ ಚುನಾವಣಾಧಿಕಾರಿಗೆ ಕಳುಹಿಸಬೇಕು. ಮೇ 13ರ ಬೆಳಿಗ್ಗೆ 8 ಗಂಟೆಯವರೆಗೆ ತಲುಪುವ ಮತಪತ್ರಗಳನ್ನು ಮಾತ್ರ ಎಣಿಕೆಯಲ್ಲಿ ಪರಿಗಣಿಸಲಾಗುವುದು ಎಂದು ಮೀನಾ ವಿವರಿಸಿದರು.

ಬಿಸಿಲಿನ ಝಳ ಜಾಸ್ತಿ ಇರುವುದರಿಂದ ಅಗತ್ಯ ಇರುವ ಮತಗಟ್ಟೆಗಳಲ್ಲಿ ಆರೋಗ್ಯ ಇಲಾಖೆಯ ಸಹಾಯ ಕೇಂದ್ರಗಳನ್ನೂ ತೆರೆಯಲಾಗುವುದು. ಮತದಾರರ ಆರೋಗ್ಯದಲ್ಲಿ ವ್ಯತ್ಯಯ ಉಂಟಾದರೆ ತಕ್ಷಣವೇ ಚಿಕಿತ್ಸೆ ನೀಡಲಾಗುವುದು ಎಂದರು.

ಚುನಾವಣಾ ನೀತಿಸಂಹಿತೆ ಉಲ್ಲಂಘನೆ ಆರೋಪದಡಿ ಈವರೆಗೆ 673 ಪ್ರಕರಣಗಳನ್ನು ದಾಖಲಿಸಲಾಗಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ನೀತಿಸಂಹಿತೆ ಉಲ್ಲಂಘಿಸಿರುವವರ ವಿರುದ್ಧ 34 ಪ್ರಕರಣಗಳು ದಾಖಲಾಗಿವೆ ಎಂದು ವಿವರ ನೀಡಿದರು.

ಮತದಾರರ ವಿವರ	
ಪುರುಷರು	2,66,82,156
ಮಹಿಳೆಯರು	2,63,98,483
ಲೈಂಗಿಕ ಅಲ್ಪಸಂಖ್ಯಾತರು	4,927
ಒಟ್ಟು	5,30,85,566
ಮತದಾನ ಕೇಂದ್ರಗಳು	58,282
ಹೆಚ್ಚುವರಿ ಮತದಾನ ಕೇಂದ್ರಗಳು	263
ಒಟ್ಟು ಮತದಾನ ಕೇಂದ್ರಗಳು	58,545
ಒಟ್ಟು ಮತಗಟ್ಟೆ ಸಿಬ್ಬಂದಿ	3,59,253
ಮೀಸಲು ಮತಗಟ್ಟೆ ಸಿಬ್ಬಂದಿ	2,79,752

ಭದ್ರತಾ ವ್ಯವಸ್ಥೆ	
ನಾಗರಿಕ ಪೊಲೀಸ್	54,682
ಗೃಹರಕ್ಷಕರು	20,000
ರಾಜ್ಯ ಮೀಸಲು ಪೊಲೀಸ್	90 ತುಕಡಿ
ನಗರ/ಜಿಲ್ಲಾ ಮೀಸಲು ಪೊಲೀಸ್	5,037 ತುಕಡಿ
ಕೇಂದ್ರೀಯ ಪಡೆಗಳು	650 ಕಂಪನಿ

'ವಿವೇಚಿಸಿ ಮತ ಹಕ್ಕು ಚಲಾಯಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಪ್ರತಿಯೊಬ್ಬ ಯುವ ಮತದಾರ ವಿವೇಚನೆಯಿಂದ ತಮ್ಮ ಹಕ್ಕು ಚಲಾಯಿಸಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಮೊದಲ ಬಾರಿಗೆ ಮತದಾನ ಮಾಡುತ್ತಿರುವ ಯುವ ಮತದಾರರ ಜೊತೆ ಈಡನ್ ಪಾರ್ಕ್ ಹೋಟೆಲ್‌ನಲ್ಲಿ ಬುಧವಾರ ನಡೆದ 'ಯುವ ಮತ' ಸಂವಾದದಲ್ಲಿ ಮಾತನಾಡಿದರು.

'ಸರ್ಕಾರವನ್ನು ಬದಲಾವಣೆ ಮಾಡುವಲ್ಲಿ ಜನರ ಕೈಯಲ್ಲೇ ಇದೀಗ ರಿಮೋಟ್ ಕಂಟ್ರೋಲ್ ಇದೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನ ಉಳಿಸಲು ಮತದಾನ ಮಾಡಬೇಕು' ಎಂದರು.

ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ತ, ಯುವ ಮತ ಅಭಿಯಾನದ ರಾಜ್ಯ ಉಸ್ತುವಾರಿ ಹಾಗೂ ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಂ.ಎಸ್. ರಕ್ಷಾ ರಾಮಯ್ಯ, ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮದ್ ನಲಪಾಡ್, ಯುವ ಕಾಂಗ್ರೆಸ್ ನಾಯಕಿ ಐಶ್ವರ್ಯಾ ಇದ್ದರು.

'ಯುವ ಮತ' ಸಂವಾದದಲ್ಲಿ ಎಂ.ಎಸ್. ರಕ್ಷಾ ರಾಮಯ್ಯ, ಡಿ.ಕೆ. ಶಿವಕುಮಾರ್, ಅಭಿಷೇಕ್ ದತ್ತ, ಐಶ್ವರ್ಯಾ ಇದ್ದರು

ರೈತರ 15 ಹಕ್ಕೊತ್ತಾಯ; ಈಡೇರಿಸುವ ಪಕ್ಷಕ್ಕೆ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರ ಪ್ರಮುಖ 15 ಹಕ್ಕೊತ್ತಾಯಗಳನ್ನು ಪ್ರಣಾಳಿಕೆಯಲ್ಲಿ ಸೇರಿಸುವ, ಜಾತ್ಯತೀತ ನಿಲುವಿನ ಪಕ್ಷಗಳಿಗೆ ಚುನಾವಣೆಯಲ್ಲಿ ಬೆಂಬಲಿಸಲು ಸಂಯುಕ್ತ ಕಿಸಾನ್ ಪಂಚಾಯತ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ರೈತ, ಕಾರ್ಮಿಕ ಸಂಘಟನೆಗಳ ಮುಖಂಡರು ಬುಧವಾರ ನಿರ್ಣಯ ಕೈಗೊಂಡರು.

ಹಕ್ಕೊತ್ತಾಯಗಳೇನು?: 2019ರಲ್ಲಿ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ರೈತ ವಿರೋಧಿ ಕೃಷಿ ಕಾಯ್ದೆ, ಎಪಿಎಂಸಿ ಕಾಯ್ದೆ, ಜಾನುವಾರು ಹತ್ಯೆ ನಿಯಂತ್ರಣ ಕಾಯ್ದೆಗಳನ್ನು ಹೊಸ ಸರ್ಕಾರ ರಚನೆಯಾದ ತಕ್ಷಣ ರದ್ದುಗೊಳಿಸಬೇಕು. ವಿದ್ಯುತ್ ಖಾಸಗೀಕರಣ ಪ್ರಸ್ತಾವ ಕೈಬಿಡಬೇಕು. ರೈತರಿಗೆ ವಿದ್ಯುತ್ ಸಬ್ಸಿಡಿ ಮುಂದುವರಿಸಬೇಕು. ಎಲ್ಲ ಬೆಳೆಗಳಿಗೂ ವೈಜ್ಞಾನಿಕ ಬೆಲೆಯನ್ನು ಖಾತ್ರಿಗೊಳಿಸಬೇಕು. ಪ್ರಕಾಶ್ ಕಮ್ಮರಡಿ ಅಧ್ಯಕ್ಷತೆಯ ಕೃಷಿ ಬೆಲೆ ಆಯೋಗದ ಶಿಫಾರಸುಗಳನ್ನು ತಿದ್ದುಪಡಿಗಳೊಂದಿಗೆ ಜಾರಿಗೊಳಿಸಬೇಕು. ಕಬ್ಬು, ಕೊಬ್ಬರಿ ಮತ್ತಿತರ ವಾಣಿಜ್ಯ ಬೆಳೆಗಾರರಿಗೆ ನೆರವು ನೀಡಬೇಕು. ಪ್ರಕೃತಿ ವಿಕೋಪಕ್ಕೆ ತುತ್ತಾಗುವ ಬೆಳೆಗಳ ವಿಮಾ ರಕ್ಷಣೆಗೆ ₹ 10 ಸಾವಿರ ಕೋಟಿ ಮೀಸಲಿಡಬೇಕು.

ಸಾಲದ ಶೂಲಕ್ಕೆ ಸಿಲುಕಿ ಆತ್ಮಹತ್ಯೆ ಮಾಡಿಕೊಳ್ಳುವ ರೈತರ ಜೀವ ಉಳಿಸಲು ಸಾಲಮುಕ್ತಿ ಕಾಯ್ದೆ ಜಾರಿಗೆ ತರಬೇಕು. ರೈತರ ಎಲ್ಲ ಕೃಷಿ ಸಾಲಗಳನ್ನು ಮನ್ನಾ ಮಾಡಬೇಕು. ಕೃಷಿ ಸಾಲದ ಪ್ರಮಾಣ ಹೆಚ್ಚಿಸಬೇಕು. 1995ರಿಂದ ಇಲ್ಲಿಯವರೆಗೆ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬದ ಮಹಿಳೆಯರಿಗೆ ಜೀವನ ಭದ್ರತೆ ಒದಗಿಸಬೇಕು. ಬಗರ್‌ಹುಕುಂ ಭೂಮಿಯನ್ನು ಬಡವರಿಗೆ ಹಂಚಿಕೆ ಮಾಡಬೇಕು. ಪ್ರತಿ ಕುಟುಂಬಕ್ಕೂ ಸ್ವಂತ ಸೂರು ಒದಗಿಸಬೇಕು. 2018ರಲ್ಲಿ ರಚಿಸಿದ್ದ ಉನ್ನತ ಸಮಿತಿಯನ್ನು ಮತ್ತೆ ಪುನರ್‌ರಚಿಸಬೇಕು. ಸರ್ಕಾರಿ ಭೂಮಿಯನ್ನು ಬಲಾಢ್ಯರಿಗೆ, ಮಠ ಮಾನ್ಯಗಳಿಗೆ, ರಾಜಕಾರಣಿಗಳಿಗೆ ಬೇಕಾಬಿಟ್ಟಿ ಹಂಚಿಕೆ ಮಾಡುವ ಬದಲು ಬಡವರ ವಸತಿಗೆ ಆದ್ಯತೆ ನೀಡಬೇಕು.

2006ರ ಅರಣ್ಯಹಕ್ಕು ಕಾಯ್ದೆ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕು. ಅರಣ್ಯ ಅವಲಂಬಿತ ಕುಟುಂಬಗಳನ್ನು ಒಕ್ಕಲೆಬ್ಬಿಸಬಾರದು. ಕೃಷಿ ಕೂಲಿಗಳ ಅಭಿವೃದ್ಧಿಗೆ ಮಂಡಳಿ ರಚಿಸಬೇಕು. ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಬೇಕು. ಕೃಷಿಯಲ್ಲಿ ವಿಷಯುಕ್ತ ತಂತ್ರಜ್ಞಾನ ನಿಷೇಧಿಸಬೇಕು. ಜಾತಿ, ಧರ್ಮದ ರಾಜಕೀಯಕ್ಕೆ ಇತಿಶ್ರೀ ಹಾಡಬೇಕು. ಭ್ರಷ್ಟಾಚಾರ ಮುಕ್ತ ಸರ್ಕಾರದ ಘೋಷಣೆ ಮಾಡಬೇಕು. ಕೇಂದ್ರದ ಸಂವಿಧಾನ ವಿರೋಧಿ ನಡೆಗಳನ್ನು ರಾಜ್ಯ ಸರ್ಕಾರ ಖಂಡಿಸಬೇಕು ಎಂಬ ಹಕ್ಕೊತ್ತಾಯಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಯಿತು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಪ್ರಣಾಳಿಕೆ ಸಮಿತಿಯ ಸಹ ಅಧ್ಯಕ್ಷ ಕೆ.ಇ. ರಾಧಾಕೃಷ್ಣ ಸಂಘಟನೆಗಳ ಮುಖಂಡರ ಜತೆ ಸಂವಾದ ನಡೆಸಿದರು. ರೈತ ಕಾರ್ಮಿಕ ಸಂಘಟನೆಗಳ ಮುಖಂಡರಾದ ಬಡಗಲಪುರ ನಾಗೇಂದ್ರ, ಎಚ್.ಆರ್.ಬಸವರಾಜಪ್ಪ, ಬಯ್ಯಾ ರೆಡ್ಡಿ, ಕುಮಾರ್ ಸಮತಳ, ಪ್ರಕಾಶ್ ಕಮ್ಮರಡಿ, ಆನಂದ್ ಮುಲ್ಲಾ, ಯೋಗೇಂದ್ರ ಯಾದವ್, ನೂರ್ ಶ್ರೀಧರ್, ನಿಂಗಮ್ಮ ಸವಣೂರು, ಮಂಜು ಕಿರಣ್, ಮಂಜೇಗೌಡ, ವಿ.ಗಾಯತ್ರಿ ಉಪಸ್ಥಿತರಿದ್ದರು.

ನಗರದ ಗಾಂಧಿ ಭವನದಲ್ಲಿ ಬುಧವಾರ ಸಂಯುಕ್ತ ಕಿಸಾನ್ ಪಂಚಾಯತ್ ಹಮ್ಮಿಕೊಂಡಿದ್ದ ರೈತ ಹಕ್ಕೊತ್ತಾಯಗಳ ಮಂಡನಾ ಸಭೆಯಲ್ಲಿ ರೈತ ಮುಖಂಡರಾದ ಬಡಗಲಪುರ ನಾಗೇಂದ್ರ, ಜೆ.ಸಿ.ಬಯ್ಯಾರೆಡ್ಡಿ, ಯೋಗೇಂದ್ರ ಯಾದವ್, ಎಚ್.ಆರ್.ಬಸವರಾಜಪ್ಪ, ಆನಂದ್ ಮುಲ್ಲಾ ಇದ್ದಾರೆ –ಪ್ರಜಾವಾಣಿ ಚಿತ್ರ.

'ಬಿಜೆಪಿ ಅವಧಿಯಲ್ಲಿ ರೈತರ ಸ್ಥಿತಿ ಶೋಚನೀಯ'

ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳು ರೈತರ ಪಾಲಿಗೆ ಶಾಪವಾಗಿದೆ. ರೈತರ ಸ್ಥಿತಿ ಶೋಚನೀಯವಾಗಿದೆ. ಬಿಜೆಪಿ ನೇತೃತ್ವದ ಸರ್ಕಾರ ಸಾಲುಸಾಲು ಜನ ವಿರೋಧಿ ಕಾಯ್ದೆಗಳನ್ನು ಜಾರಿಗೆ ತಂದಿದೆ. ರೈತರ ಶಕ್ತಿ 'ನಂದಿನಿ'ಯನ್ನೂ ಮುಗಿಸಲು ಸಂಚು ರೂಪಿಸಿದೆ. ಇಂತಹ ಸನ್ನಿವೇಶದಲ್ಲಿ ಕೋಮುವಾದಿ ಬಿಜೆಪಿ ಸೋಲಿಸಬೇಕಿದೆ. ಹಾಗೆಂದು ಕಾಂಗ್ರೆಸ್ ಒಪ್ಪಿದ್ದೇವೆ ಎಂದಲ್ಲ, ರೈತ ಸಂಘಟನೆ, ಎಡಪಕ್ಷಗಳು ಪ್ರಬಲವಾಗಿಲ್ಲದ ಕಡೆ ಕಾಂಗ್ರೆಸ್ ಬೆಂಬಲಿಸಲು ನಿರ್ಧರಿಸಿದ್ದೇವೆ ಎಂದು ಹಲವು ಮುಖಂಡರು ಅಭಿಪ್ರಾಯ ವ್ಯಕ್ತಪಡಿಸಿದರು.

MISSING

R Rama Lakshmi 48 Years
25/18, Ekamparapuram Street,
Kallidaikurichi Post-627416
Ambasamuduram (Taluk), Tirunelveli- Dist,
Tamilnadu.
Missing from 06.04.2023 from
Hanuman silks Chickpet.
Please inform to the nearest police station
or **Call: 9361501023/ 9994088512.**
Informers will be suitable Rewarded.

'ಬೇಸಿಗೆ: ಕಪ್ಪು ಕೋಟು ಕಡ್ಡಾಯವಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೇಸಿಗೆಯಲ್ಲಿ ಸುಪ್ರೀಂ ಕೋರ್ಟ್, ಹೈಕೋರ್ಟ್‌ಗಳನ್ನು ಹೊರತುಪಡಿಸಿ ವಿಚಾರಣಾ ನ್ಯಾಯಾಲಯಗಳನ್ನು ಪ್ರವೇಶಿಸುವ, ವಾದ ಮಂಡಿಸುವ ಅಥವಾ ಕಲಾಪಗಳಲ್ಲಿ ಸಕ್ರಿಯರಾಗುವ ವಕೀಲರು ಕಪ್ಪು ಕೋಟ್ ಧರಿಸುವುದು ಕಡ್ಡಾಯವಲ್ಲ' ಎಂದು ರಾಜ್ಯ ವಕೀಲರ ಪರಿಷತ್ ತಿಳಿಸಿದೆ.

ಈ ಸಂಬಂಧ ಕರ್ನಾಟಕ ರಾಜ್ಯ ವಕೀಲರ ಪರಿಷತ್ ಅಧ್ಯಕ್ಷ ಎಚ್.ಎಲ್. ರಘು ಅವರು ಭಾರತೀಯ ವಕೀಲರ ಪರಿಷತ್ ನಿಯಮಗಳ ಅಧ್ಯಾಯ 4ರ ಭಾಗ 4ರಲ್ಲಿ ವಿವರಿಸಿರುವಂತೆ ವಕೀಲ ವೃಂದಕ್ಕೆ ಈ ಕುರಿತಂತೆ ಮಾಹಿತಿ ಒದಗಿಸುವ ನಿಟ್ಟಿನಲ್ಲಿ ಸಹಕರಿಸಬೇಕು ಎಂದು ವಕೀಲರ ಸಂಘದ ಅಧ್ಯಕ್ಷರಿಗೆ ಕೋರಿದ್ದಾರೆ.

ಪುರುಷ ವಕೀಲರು ಬಿಳಿ ಶರ್ಟ್, ಕಪ್ಪು ಅಥವಾ ಬೂದು ಬಣ್ಣದ ಪ್ಯಾಂಟ್ ಮತ್ತು ಬಿಳಿ ಬ್ಯಾಂಡ್ ನೊಂದಿಗೆ ಕಾಣಿಸಿಕೊಳ್ಳಬಹುದಾಗಿದೆ. ಮಹಿಳಾ ವಕೀಲರು ಸೀರೆ ಅಥವಾ ಉದ್ದನೆಯ ಸ್ಕರ್ಟ್‌ಗಳಲ್ಲಿ (ಬಿಳಿ/ಕಪ್ಪು ಅಥವಾ ಯಾವುದೇ ಮುದ್ರೆ, ವಿನ್ಯಾಸವಿಲ್ಲದ) ಅಥವಾ ಚೂಡಿದಾರ್, ಕುರ್ತಾ (ಬಿಳಿ/ಕಪ್ಪು) ಬಿಳಿ ಬ್ಯಾಂಡ್‌ನೊಂದಿಗೆ ಕಾಣಿಸಿಕೊಳ್ಳಬಹುದಾಗಿದೆ.

ಹೊರಾಂಗಣ ಕಾರ್ಯಕ್ರಮಕ್ಕೆ ನೀರಿನ ವ್ಯವಸ್ಥೆ ಕಡ್ಡಾಯ

ಬೆಂಗಳೂರು: ತಾಪಮಾನ ಹೆಚ್ಚಳದ ಕಾರಣ ಹೊರಾಂಗಣ ಸಭೆ, ಸಮಾರಂಭ ಆಯೋಜಿಸುವಾಗ ಕಡ್ಡಾಯವಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ. ಈ ಬಗ್ಗೆ ಇಲಾಖೆ ಸುತ್ತೋಲೆ ಹೊರಡಿಸಿದೆ.

ರಾಜ್ಯದಲ್ಲಿ ಬಿಸಿಲಿನ ಪ್ರಖರತೆ ಹೆಚ್ಚುತ್ತಿದೆ. ಬೆಳಿಗ್ಗೆ 11ರಿಂದ ಸಂಜೆ 4 ಗಂಟೆವರೆಗೆ ಹೊರಾಂಗಣದಲ್ಲಿ ಸಭೆ, ಸಮಾರಂಭ ಆಯೋಜನೆ ಮಾಡದಿರುವುದು ಉತ್ತಮ. ಅನಿವಾರ್ಯತೆ ಇದ್ದಲ್ಲಿ ಮುಂಜಾಗ್ರತೆ ಕ್ರಮಗಳನ್ನು ಪಾಲಿಸಬೇಕು. ಭಾಗವಹಿಸುವ ಸಾರ್ವಜನಿಕರಿಗೆ ಬಿಸಿಲಿನಿಂದ ರಕ್ಷಣೆ ನೀಡಲು ಶಾಮಿಯಾನ ವ್ಯವಸ್ಥೆ ಮಾಡಬೇಕು ಎಂದು ಇಲಾಖೆ ಹೇಳಿದೆ. ಬಿಬಿಎಂಪಿ ಹಾಗೂ ಜಿಲ್ಲಾಡಳಿತ ಈ ಬಗ್ಗೆ ನಿಗಾ ವಹಿಸಬೇಕು ಎಂದು ಸೂಚಿಸಲಾಗಿದೆ.

ನಗರದಲ್ಲಿ ಇಂದು

'ಸೈಬರ್ ಸೆಕ್ಯುರಿಟಿ' ಕುರಿತು ಉಪನ್ಯಾಸ: ಚಂದನ್ ವೀರಭದ್ರ ಸೆಟ್ಟಿ, ಆಯೋಜನೆ ಮತ್ತು ಸ್ಥಳ: ಬಿ.ಎನ್.ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 3ನೇ ಹಂತ, ಮಧ್ಯಾಹ್ನ 2

ಅಭಿನಂದನಾ ಸಮಾರಂಭ: ಅಧ್ಯಕ್ಷತೆ: ಎನ್.ಎಸ್. ಸಿದ್ಧರಾಮಪ್ಪ, ಅತಿಥಿಗಳು: ಮಾಯಪ್ಪ, ಕೆ.ವಿ. ಶರತ್ ಚಂದ್ರ, ಸಿ.ವಿ. ಗೋಪಿನಾಥ್, ರಾಮೇಗೌಡ, ಉಪಸ್ಥಿತಿ: ಬಿ.ಎಸ್. ನಾಗರಾಜಯ್ಯ, ಆಯೋಜನೆ: ಎಚ್. ರಾಜಣ್ಣ ಅಭಿಮಾನಿ ಬಳಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

ಭಜನಾಮೃತ: ಸುಶಮೀಂದ್ರ ಭಜನಾ ಮಂಡಳಿ, ದಾಸಾಮೃತ: ಗೀತಾ ಭತ್ತದ್, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸುದರ್ಶನ್ ಅಸ್ಕಿಹಾಳ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸೀತಾಪತಿ ಅಗ್ರಹಾರ, ಚಾಮರಾಜಪೇಟೆ, ಸಂಜೆ 5.30


ಗೀತಾ ಭತ್ತದ್

ಹರಿಭಜನೆ: ಎಚ್.ವಿ.ಜಿ. ಭಜನಾ ಮಂಡಳಿ, ದಾಸವಾಣಿ: ರೂಪಾ ಪ್ರಭಂಜನ, ಕೀ–ಬೋರ್ಡ್: ಬಿ.ಆರ್. ಪ್ರಕಾಶ್, ತಬಲಾ: ಶ್ರೀನಿವಾಸ ಕಾಖಂಡಕಿ, ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಸಂಜೆ 5.30

ಪ್ರವಚನ ವಾಹಿನಿ: 'ಸಮಾಜಕ್ಕೆ ರಾಮಾನುಜರ ಕೊಡುಗೆ', ಉಪನ್ಯಾಸ: ಗೋಪಾಲ ಅಯ್ಯಂಗಾರ್, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ದಾಸವಾಣಿ: ಸುಧಾಕರ್ ಶೆಟ್ಟಿ, ಆತ್ಮಾರಾಮ್ ಆಳ್ವ, ಆಯೋಜನೆ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸ್ಥಳ: ಜಯನಗರದ 5ನೇ ಬಡಾವಣೆ, ಸಂಜೆ 7.30

ರಾಮೋತ್ಸವ ವಿಶೇಷ

ಎಂ.ಎಸ್. ಶೀಲಾ

ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಶಿಲ್ಪಾ ಮಾಧವಿ ಮತ್ತು ತಂಡ, ಗಾಯನ: ಎಂ.ಎಸ್. ಶೀಲಾ, ಪಿಟೀಲು: ಎಚ್.ಎಂ. ಸ್ಮಿತಾ, ಮೃದಂಗ: ಆನೂರು ಅನಂತಕೃಷ್ಣ ಶರ್ಮ, ಘಟ: ಸುಕನ್ಯ ರಾಮಗೋಪಾಲ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಸುಧಾ ರಘುನಾಥನ್, ಪಿಟೀಲು: ಎಂಬಾರ್ ಕಣ್ಣನ್, ಮೃದಂಗ: ಪತ್ರಿ ಸತೀಶ್ ಕುಮಾರ್, ಮೋರ್ಸಿಂಗ: ಎನ್. ರಾಮನ್, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

30ನೇ ಶ್ರೀರಾಮನವಮಿ ಸಂಗೀತೋತ್ಸವ: ಪಿಟೀಲು ವಾದನ: ಅದಿತಿ ಹೆಬ್ಬಾರ್, ಅರುಂಧತಿ ಹೆಬ್ಬಾರ್, ಗಾಯನ: ಭರತ್ ಸುಂದರ್, ಪಿಟೀಲು: ಎಚ್.ಕೆ. ವೆಂಕಟರಾಮ್, ಮೃದಂಗ: ಸುಮೇಶ್ ನಾರಾಯಣನ್, ಘಟ: ಗಿರಿಧರ್ ಉಡುಪ, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

Supported by
जल शक्ति मंत्रालय
जल संसाधन, नदी विकास और गंगा संरक्षण विभाग
MINISTRY OF JAL SHAKTI
DEPARTMENT OF WATER RESOURCES,
RIVER DEVELOPMENT & GANGA REJUVENATION

Redefining Plumbing Standards
Indian Plumbing Association
30 Years in Service to the Nation

Supported by
Ministry of Housing and Urban Affairs
Government of India

Largest ever Plumbing Show
PLUMBEX® India 2023
Bringing Industry Together
Thursday, Friday & Saturday
27TH, 28 TH, & 29TH APRIL 2023
Time: 11:00am to 06:30pm
Bengaluru International Exhibition Centre (BIEC)
1 LAC SQ. FEET | 100+ EXHIBITORS | 40+ START-UPS
3 Sessions with Domain Experts & Policy Makers
Net Zero Water | Water Use Efficiency | Modern Day Plumbing
Meet & Greet leading professionals & industrialists
Visitor ENTRY FREE
*To and Fro Free Shuttle service will be available between Nagasandra Metro Station and BIEC from 10:00am to 6:30pm
www.indianplumbing.org

G20 भारत 2023 INDIA

ಬ್ಯಾಂಕ್ ಶಾಖೆಯ ಕೌಂಟರ್‌ನಲ್ಲಿ ಕೊಳಕಾದ, ಹರಿದ, ಹಾನಿಗೊಳಗಾದ, ನುಜ್ಜುಗುಜ್ಜಾದ ಅಥವಾ ದೋಷಪೂರಿತ ಕರೆನ್ಸಿ ನೋಟನ್ನು ಬದಲಾಯಿಸಿ

- ನಿಮ್ಮ ಹತ್ತಿರದ ಬ್ಯಾಂಕ್ ಶಾಖೆಯಲ್ಲಿ ಕರೆನ್ಸಿ ನೋಟನ್ನು ಬದಲಿಸಬಹುದು*
- ಒಂದು ವೇಳೆ ಬ್ಯಾಂಕ್ ನೋಟು ಬದಲಿಸಲು ನಿರಾಕರಿಸಿದರೆ, ಆ ಬ್ಯಾಂಕ್ ಮೇಲೆ ದೂರು ನೀಡಬಹುದು. ದೂರು ನೀಡಿ ಒಂದು ತಿಂಗಳವರೆಗೆ ಇತ್ಯರ್ಥ ಆಗದಿದ್ ದರೆ, ನೀವು RBIನ ಲೋಕಪಾಲರಿಗೆ (Ombudsman) ದೂರು ನೀಡಬಹುದು

*RBI Note Refund Rules, 2009 (amended in 2018)ರ ಅಡಿಯಲ್ಲಿ ಕರೆನ್ಸಿ ನೋಟನ್ನು ಬದಲಿಸಬಹುದು.

ಸಾರ್ವಜನಿಕರ ಹಿತಾಸಕ್ತಿಗಾಗಿ ಜಾರಿಗೊಳಿಸುವವರು
ಭಾರತೀಯ ರಿಸರ್ವ್ ಬ್ಯಾಂಕ್
RESERVE BANK OF INDIA
www.rbi.org.in
ಫೀಡ್‌ಬ್ಯಾಕ್ ನೀಡಲು rbikehtahai@rbi.org.inಗೆ ಬರೆಯಿರಿ

ಮಿರಾಕಲ್ ಡ್ರಿಂಕ್ಸ್‌ನ ಶಕ್ತಿ

miracle drinks® NEO AYURVEDA® Be Healthy Again

ಭರವಸೆ ಕಳೆದುಕೊಂಡಿದ್ದೀರ?
- ಅನಿಯಂತ್ರಿತ ಸಕ್ಕರೆ ಮಟ್ಟ
- ಡಯಾಬಿಟಿಕ್ ನ್ಯೂರೋಪತಿ
- ಡಯಾಬಿಟಿಕ್ ರೆಟಿನೋಪತಿ
- ಡಯಾಬಿಟಿಕ್ ನೆಫ್ರೋಪತಿ
- ಭುಜಗಳ ಬಿಗಿತ ಮತ್ತು ಡಯಾಬಿಟಿಕ್ ಅಲ್ಸರ್
- ನಿದ್ರಾಹೀನತೆ

100% ಗಿಡಮೂಲಿಕೆಗಳನ್ನು ಬಳಸಲಾಗಿದೆ | ಲೋಹಗಳಿಲ್ಲ | ರಾಸಾಯನಿಕಗಳಿಲ್ಲ

ನಮ್ಮ ಆಹಾರವೇ ಮಹಾ ಔಷಧ | 30 ದಿನಗಳಲ್ಲಿ ಖಚಿತ ಫಲಿತಾಂಶ
ನಮ್ಮಲ್ಲಿ ಕಾರ್ಡಿಯೋವ್ಯಾಸ್ಕ್ಯುಲರ್ ಸಪೋರ್ಟ್, ಶುಗರ್ ಕೇರ್, ಲಿವರ್ ಹೆಲ್ತ್ ಸಪೋರ್ಟ್, ಆ್ಯಂಟಿಡೋಟ್, ಗ್ಯಾಸ್ಟ್ರೋ ಸಪೋರ್ಟ್ ಸಿಗುತ್ತವೆ.

ನಮ್ಮ ತಜ್ಞ ವೈದ್ಯರ ಜೊತೆ ನೇರ ಪ್ರಸಾರ ಕಾರ್ಯಕ್ರಮ.
ಆಯುಷ್ ಟಿವಿ: ಸಂಜೆ 7 ರಿಂದ 7:30 ರವರೆಗೆ (ಸೋಮವಾರ, ಬುಧವಾರ – ಶುಕ್ರವಾರ).
ದೈಜಿವರ್ಲ್ಡ್: ಸಂಜೆ 7 ರಿಂದ 8 ಗಂಟೆಗೆ ಏಪ್ರಿಲ್ 28 ರಂದು.

ಮಿರಾಕಲ್ ಡ್ರಿಂಕ್ಸ್ ಆಯುರ್ವೇದಿಕ್ ಕ್ಲಿನಿಕ್:
ಮೈಸೂರು | ಮಂಗಳೂರು | ಹುಬ್ಬಳ್ಳಿ | ಕೋಲಾರ | ಹಾಸನ | ಶಿವಮೊಗ್ಗ | ತುಮಕೂರು | ವಿಜಯಪುರ,
ಬೆಂಗಳೂರು (ವೈಟ್ ಫೀಲ್ಡ್, ಆರ್.ಟಿ ನಗರ, ಜೆ.ಪಿ ನಗರ, ಎಚ್.ಎಸ್.ಆರ್ ಲೇಔಟ್, ನಾಗರಬಾವಿ)

Inventions Featured in Forbes INDIA | ಟೆಸ್ಟಿಮೋನಿಯಲ್ | ಪಥ್ಯ

ಎಲ್ಲಾ ಆಯುರ್ವೇದಿಕ್ ಹಾಗೂ ಮೆಡಿಕಲ್ ಸ್ಟೋರ್ ಗಳಲ್ಲಿ ಲಭ್ಯ
ಉಚಿತ ಆರೋಗ್ಯ ಸಮಾಲೋಚನೆಗಾಗಿ: 080-6904 3800
ಡಿಸ್ಟ್ರಿಬ್ಯೂಷನ್ ವಿಚಾರಣೆಗಾಗಿ ಸಂಪರ್ಕಿಸಿ: ಶ್ಯಾಮ್ ಸುಂದರ್ +91-91089 96002
Whatsapp on: +91-91089 96005 | www.miracledrinks.in | FDA U.S. FOOD & DRUG ADMINISTRATION REGISTERATION No. 14900359152 | AYUSH Premium
*ವಿವಿಧ ಟ್ರೇಡ್‌ಮಾರ್ಕ್‌ಗಳು ಆಯಾ ಸಂಬಂಧಿಸಿದ ಮಾಲೀಕರಿಗೆ ಸೇರಿವೆ

ಗಜ ಉತ್ಸವ

ಗಜಲೋಕದ ಸಂಭ್ರಮ

ಯು.ಟಿ. ಆಯಿಶ ಫರ್ಝಾನ

ಅಸ್ಸಾಂ ರಾಜ್ಯದ ಯುನೆಸ್ಕೊ(UNESCO) ವಿಶ್ವ ಪರಂಪರೆಯ ತಾಣ ಕಾಜಿರಂಗ ರಾಷ್ಟ್ರೀಯ ಉದ್ಯಾನ ಒಂಟಿಕೊಂಬಿನ ಘೇಂಡಾಮೃಗಗಳ ಆವಾಸಸ್ಥಾನವಾಗಿದೆ. ವಿಶ್ವದಾದ್ಯಂತವಿರುವ ಒಟ್ಟು ಒಂಟಿಕೊಂಬಿನ ಘೇಂಡಾಮೃಗಗಳಲ್ಲಿ, ಮೂರನೇ ಎರಡರಷ್ಟು ಇದೇ ಕಾಜಿರಂಗ ಅರಣ್ಯದಲ್ಲಿವೆ. ಘೇಂಡಾಮೃಗಗಳ ಜೊತೆಗೆ, ಆನೆಗಳು, ಜಿಂಕೆಗಳೂ ಇವೆ. ಹಾಗೆಯೇ, ಇದು ಬೃಹತ್ ಜೌಗುಪ್ರದೇಶ ಜೀವಿಗಳ ಸಂತಾನೋತ್ಪತ್ತಿಯ ತಾಣವೂ ಹೌದು.

ಇಂಥ ವಿಶಿಷ್ಟ ವಿಶ್ವ ಪಾರಂಪರಿಕ ವನ್ಯಜೀವಿ ತಾಣದಲ್ಲಿ ಇದೇ ಏಪ್ರಿಲ್ 7 ಮತ್ತು 8ರಂದು 'ಗಜ್ ಉತ್ಸವ್-2023' (gaj utsav) ನಡೆಯಿತು. ಗಜಲೋಕದ ಸಂಭ್ರಮವಾಗಿರುವ ಈ 'ಗಜ್ ಉತ್ಸವ್'ದ ನೆನಪದಲ್ಲಿ ಉತ್ಸವದ ಉದ್ದೇಶ, ಆನೆಗಳ ಜೀವನ ಕ್ರಿಯೆ ಹಾಗೂ ಆನೆ ಕಾರಿಡಾರ್‌ಗಳ ಕುರಿತು ಇಲ್ಲಿ ವಿವರಿಸಲಾಗಿದೆ.

ಗಜ್ ಉತ್ಸವ್ 2023

- ಆನೆಗಳ ಸಂರಕ್ಷಣಾ ಪ್ರಯತ್ನಗಳನ್ನು ಉತ್ತೇಜಿಸುವ ಸಲುವಾಗಿ 1991-92ರಲ್ಲಿ ಪ್ರಾರಂಭವಾದ ಯೋಜನೆ 'ಪ್ರಾಜೆಕ್ಟ್ ಎಲಿಫೆಂಟ್'. ಈ ಯೋಜನೆ 30ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುವ ಹಿನ್ನೆಲೆಯಲ್ಲಿ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವು 'ಗಜ್ ಉತ್ಸವ್ 2023' ಅನ್ನು ಆಚರಿಸಿತು.
- ಕಾಡು ಆನೆಗಳಿಗೆ ಬಹುದೊಡ್ಡ ನೆಲೆಯಾಗಿರುವ ಭಾರತದ ಎರಡನೇ ರಾಜ್ಯ ಅಸ್ಸಾಂ. ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆನೆಗಳು, ಸಾಕು ಆನೆಗಳಾಗಿ ಮನುಷ್ಯರ ಆರೈಕೆಯಲ್ಲಿ ಪೋಷಿಸಲ್ಪಡುತ್ತಿವೆ. ಈ ಕಾರಣಗಳಿಗಾಗಿ ಅಸ್ಸಾಂ ರಾಜ್ಯವನ್ನು ಗಜ್ ಉತ್ಸವಕ್ಕೆ ಆಯ್ಕೆ ಮಾಡಲಾಯಿತು.

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ –ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ಮಾಹಿತಿ ಇಲ್ಲಿದೆ.

- ಈ ಉತ್ಸವ 'ಪ್ರಾಜೆಕ್ಟ್ ಎಲಿಫೆಂಟ್'ನ ಭಾಗವಾಗಿದೆ. ಆನೆಗಳ ಕಾರಿಡಾರ್‌ಗಳು ಮತ್ತು ಆವಾಸಸ್ಥಾನಗಳನ್ನು ಸಂರಕ್ಷಿಸುವುದು, ಈ ಮೂಲಕ ಆನೆ-ಮನುಷ್ಯ ಸಂಘರ್ಷಗಳನ್ನು ತಡೆಯುವುದು, ಆನೆಗಳ ರಕ್ಷಣೆ ಕುರಿತು ಜಾಗೃತಿ ಮೂಡಿಸುವುದು ಈ ಉತ್ಸವದ ಉದ್ದೇಶ.

ಆನೆಗಳ ಜೀವನ ಕ್ರಮ

- ಆನೆಗಳ ಜೀವನಕ್ರಮ ಎಲ್ಲ ಸಸ್ತನಿಗಳಿಗಿಂತಲೂ ಭಿನ್ನವಾಗಿದೆ. ಈ ಆನೆಗಳು ಸುಮಾರು 22 ತಿಂಗಳು ಗರ್ಭಾವಸ್ಥೆ ಹೊಂದಿರುತ್ತವೆ (ಹಾಗಾಗಿಯೇ ವಿಳಂಬದ ಫಲಿತಾಂಶಗಳಿಗೆ ಗಜಪ್ರಸವ ಎಂಬ ಮಾತು ಬಂದಿದೆ).
- ಹೆಣ್ಣಾನೆಗಳು ನಾಲ್ಕರಿಂದ ಐದು ವರ್ಷಗಳಿಗೊಮ್ಮೆ ಮರಿಗಳಿಗೆ ಜನ್ಮ ನೀಡುತ್ತವೆ.

'ಗಜ್ ಉತ್ಸವ್' ಉದ್ಘಾಟನೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು –ಪಿಟಿಐ ಚಿತ್ರ

- ಆನೆಗಳು ಹಿಂಡುಹಿಂಡಾಗಿ ಜೀವಿಸುತ್ತವೆ. ಜೊತೆಗೆ, ಅವುಗಳದ್ದೇ ಆದ ಒಂದು ಸಂಕೀರ್ಣವಾದ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿವೆ.
- ಆನೆಗಳಲ್ಲಿ ಮಾತೃಪ್ರಧಾನ ವ್ಯವಸ್ಥೆ ಇದೆ. ಅಂದರೆ ಹೆಣ್ಣಾನೆಗಳೇ ಹಿಂಡಿನ ಅಥವಾ ಗುಂಪಿನ ನೇತೃತ್ವವಹಿಸುತ್ತವೆ. ಆ ಗುಂಪಿನಲ್ಲಿ ಇತರೆ ವಯಸ್ಕ ಹೆಣ್ಣು ಮತ್ತು ಮರಿಗಳ ಗುಂಪನ್ನು ಒಳಗೊಂಡಿರುತ್ತವೆ.
- ಆದರೆ ಗಂಡು ಆನೆಗಳು ಪ್ರತ್ಯೇಕವಾಗಿ ಅಥವಾ ಮರಿ ಆನೆಗಳಿರುವ ಗುಂಪುಗಳಲ್ಲಿ ವಾಸಿಸುತ್ತವೆ. ಪ್ರತ್ಯೇಕವಾಗಿ ತಿರುಗುವ ಗಂಡಾನೆಯನ್ನು ಸಲಗ ಎನ್ನುತ್ತಾರೆ.
- ಆನೆಯ ಸೊಂಡಿಲು 40,000 ಸ್ನಾಯುಗಳನ್ನು ಹೊಂದಿರುತ್ತದೆ. ಹಾಗಾಗಿಯೇ ಅವು ಅಷ್ಟು ಫ್ಲೆಕ್ಸಿಬಲ್ ಆಗಿವೆ. (ಮನುಷ್ಯನ ಇಡೀ ದೇಹದಲ್ಲಿರುವುದು 600ಕ್ಕೂ ಹೆಚ್ಚು ಸ್ನಾಯುಗಳು)
- ಆನೆಯ ದಂತಗಳಿಗೆ ಒಮ್ಮೆ ಹಾನಿಯಾದರೆ ಅಥವಾ ದಂತವನ್ನು ಮುರಿದರೆ ಅಥವಾ ತೆಗೆದರೆ, ಅದು ಮತ್ತೆ ಬೆಳೆಯಲು ಸಾಧ್ಯವಿಲ್ಲ.
- ಏಷ್ಯಾದ ಆನೆಗಳು ಆಫ್ರಿಕನ್ ಆನೆಗಳಿಗಿಂತ ಹಲವಾರು ವಿಧಗಳಲ್ಲಿ ಭಿನ್ನವಾಗಿರುತ್ತವೆ. ಅವುಗಳ ನಡುವೆ 10ಕ್ಕಿಂತ ಹೆಚ್ಚು ರೀತಿಯ ದೈಹಿಕ ವ್ಯತ್ಯಾಸಗಳಿವೆ.
- ಉದಾಹರಣೆಗೆ, ಆಫ್ರಿಕನ್ ಜಾತಿಯ ಆನೆಗಳಲ್ಲಿ ಕಂಡುಬರುವ ಮೊರದಗಲದ ಕಿವಿಗಳಿಗೆ ಹೋಲಿಸಿದರೆ ಏಷ್ಯಾದ ಆನೆಗಳ ಕಿವಿಗಳು ಚಿಕ್ಕದಾಗಿರುತ್ತವೆ.
- ಏಷ್ಯನ್ ಆನೆಗಳಲ್ಲಿ ಕೆಲವು ಗಂಡು ಆನೆಗಳು ಮಾತ್ರ ದಂತಗಳನ್ನು ಹೊಂದಿದ್ದರೆ, ಆಫ್ರಿಕನ್ ಆನೆಗಳಲ್ಲಿ ಗಂಡು ಮತ್ತು ಹೆಣ್ಣುಗಳೆರಡೂ ದಂತಗಳನ್ನು ಹೊಂದಿರುತ್ತವೆ.
- ಆಫ್ರಿಕನ್ ಜಾತಿಗಳಲ್ಲೂ ಸವನ್ನಾ ಮತ್ತು ಕಾಡು ಆನೆಗಳು ಎಂಬ ಎರಡು ವಿಭಿನ್ನ ತಳಿಗಳು ಅಸ್ತಿತ್ವದಲ್ಲಿವೆ. ಅವು ಸ್ಪಷ್ಟವಾಗಿ ಪ್ರತ್ಯೇಕಿಸುವ ಹಲವಾರು ಗುಣಲಕ್ಷಣಗಳನ್ನು ಹೊಂದಿವೆ.
- ಆಫ್ರಿಕನ್ ಸವನ್ನಾ ಆನೆಗಳಿಗೆ ಹೋಲಿಸಿದರೆ ಏಷ್ಯನ್ ಕಾಡಾನೆ ಮತ್ತು ಆಫ್ರಿಕನ್ ಕಾಡಾನೆಗಳು ಗಾತ್ರದಲ್ಲಿ ಚಿಕ್ಕದಾಗಿವೆ. ಆಫ್ರಿಕನ್ ಸವನ್ನಾ ಆನೆಗಳು, ಆನೆ ಜಾತಿಗಳಲ್ಲೇ ಅತಿದೊಡ್ಡ ಆನೆಗಳಾಗಿವೆ.

ಆನೆ ಕಾರಿಡಾರ್‌ಗಳು

- ಆನೆ ಕಾರಿಡಾರ್- ಇದು ಆನೆಗಳ ಎರಡು ದೊಡ್ಡ ಆವಾಸಸ್ಥಾನಗಳನ್ನು ಸಂಪರ್ಕಿಸುವ ಒಂದು ದಾರಿ.
- ಆನೆ ಕಾರಿಡಾರ್, ಕಾಡುಗಳ ವಿಘಟನೆಯ ಕಾರಣದಿಂದಾಗಿ ಸಂಭವಿಸುವ ಅಪಘಾತಗಳು ಮತ್ತು ಇತರ ಕಾರಣಗಳಿಂದ ಉಂಟಾಗುವ ಪ್ರಾಣಿಗಳ ಸಾವುಗಳನ್ನು ಕಡಿಮೆ ಮಾಡುತ್ತದೆ.
- ಆನೆಗಳು ಸಂಚಾರಕ್ಕೆ ವಿಶಾಲವಾದ ಅರಣ್ಯಪ್ರದೇಶಗಳನ್ನು ಬಳಸುತ್ತವೆ. ಆದ್ದರಿಂದ ಅವುಗಳಿಗೆ ಸಹಜ ಜೀವನಶೈಲಿಯನ್ನು ಒದಗಿಸಿಕೊಡುವ ಸಲುವಾಗಿ ಆನೆ ಕಾರಿಡಾರ್‌ಗಳನ್ನು ರಕ್ಷಿಸುವುದು ಅವಶ್ಯಕವಾಗಿದೆ.
- ಆನೆ ಕಾರಿಡಾರ್ ರಕ್ಷಣೆಯಿಂದ, ಅದೇ ಅರಣ್ಯವನ್ನು ಅವಲಂಬಿಸಿರುವ ಇತರ ಪ್ರಭೇದದ ಪ್ರಾಣಿಗಳ ನೈಸರ್ಗಿಕ ಆವಾಸಸ್ಥಾನದ ರೂಪಿಸುವಿಕೆಗೂ ಸಹಾಯ ಮಾಡುತ್ತದೆ.
- ಲಭ್ಯ ಮಾಹಿತಿಯ ಪ್ರಕಾರ ಶೇ 40 ಆನೆ ಮೀಸಲು ಅರಣ್ಯಗಳು ಯಾವುದೇ ಸಂರಕ್ಷಿತ ಉದ್ಯಾನಗಳು ಮತ್ತು ಅಭಯಾರಣ್ಯಗಳ ವ್ಯಾಪ್ತಿಗೆ ಸೇರದ ಕಾರಣ, ಆನೆಗಳು ಅಪಾಯದಂಚಿನಲ್ಲಿವೆ.
- ಭಾರತದ 16 ರಾಜ್ಯಗಳಲ್ಲಿ ವಿಶೇಷವಾಗಿ ಪಶ್ಚಿಮ ಘಟ್ಟಗಳ ದಕ್ಷಿಣ ಭಾಗ, ಈಶಾನ್ಯ ಭಾರತ, ಪೂರ್ವ ಭಾರತ, ಮಧ್ಯ ಭಾರತ ಮತ್ತು ಉತ್ತರ ಭಾರತದಲ್ಲಿ ಆನೆಗಳು ವ್ಯಾಪಕವಾಗಿವೆ.

ಪ್ರಚಲಿತ ವಿದ್ಯಮಾನಗಳು

ಮಧ್ಯಪ್ರದೇಶದ ರೇವಾದಲ್ಲಿ ಇತ್ತೀಚೆಗೆ ನಡೆದ ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆಯಲ್ಲಿ ಪ್ರದರ್ಶಿಸಲ್ಪಟ್ಟ ಹಳ್ಳಿಯ ಮಾದರಿಯೊಂದನ್ನು ಪ್ರಧಾನಿ ನರೇಂದ್ರ ಮೋದಿ ಅವರು ವೀಕ್ಷಿಸಿದರು. – ಪಿಟಿಐ ಚಿತ್ರ

1. ರಾಷ್ಟ್ರೀಯ ಪಂಚಾಯತ್ ಪ್ರಶಸ್ತಿ ಸಪ್ತಾಹ

- ಏಪ್ರಿಲ್ 17ರಿಂದ ಏಪ್ರಿಲ್ 21ರವರೆಗೂ ಕೇಂದ್ರ ಪಂಚಾಯತ್ ರಾಜ್ ಸಚಿವಾಲಯ ರಾಷ್ಟ್ರೀಯ ಪಂಚಾಯತ್ ಪ್ರಶಸ್ತಿ ಸಪ್ತಾಹ ಹಮ್ಮಿಕೊಂಡಿತ್ತು.
- ಈ ಕಾರ್ಯಕ್ರಮದ ಪ್ರಮುಖ ಉದ್ದೇಶವೇನೆಂದರೆ ಪಂಚಾಯತ್ ರಾಜ್ ಸಂಸ್ಥೆಗಳ ಸಾಧನೆಗೆ ಮಾನ್ಯತೆ ನೀಡುವುದು, ಸುಸ್ಥಿರ ಅಭಿವೃದ್ಧಿ ಗುರಿಗಳು ಹಾಗೂ ಉತ್ತಮ ಆಡಳಿತದ ತತ್ವ ಮತ್ತು ಸಿದ್ಧಾಂತಗಳನ್ನು ಕೆಳಹಂತದಿಂದ ಸಾಧಿಸುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಶ್ಲಾಘಿಸುವ ಉದ್ದೇಶದಿಂದ ಈ ಸಪ್ತಾಹ ಹಮ್ಮಿಕೊಂಡಿತ್ತು.
- ಈ ಕಾರ್ಯಕ್ರಮದಡಿ ಹಲವು ಸಮಾವೇಶಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಸಮಾವೇಶದಲ್ಲಿ ಸ್ಥಳೀಯ ಸರ್ಕಾರಗಳಲ್ಲಿ ಭಾಗವಹಿಸುತ್ತಿರುವ ಪ್ರಮುಖ ಸರ್ಕಾರೇತರ ಸಂಸ್ಥೆಗಳು, ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳು, ಯಶಸ್ವಿ ಪ್ರಯೋಗಗಳನ್ನು ವಿನಿಮಯ ಮಾಡಿಕೊಳ್ಳಲಾಗುತ್ತದೆ.

ರಾಷ್ಟ್ರೀಯ ಪಂಚಾಯತ್ ರಾಜ್ ದಿವಸ

- ಪ್ರತಿ ವರ್ಷ ಏಪ್ರಿಲ್ 24ರಂದು ರಾಷ್ಟ್ರೀಯ ಪಂಚಾಯತ್ ರಾಜ್ ದಿವಸವನ್ನಾಗಿ ಆಚರಿಸಲಾಗುತ್ತದೆ. 73ನೇ ಸಂವಿಧಾನಾತ್ಮಕ ತಿದ್ದುಪಡಿಯನ್ನು ಜಾರಿಗೆ ತರುವ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ ಕಲ್ಪಿಸಿದ ಹಿನ್ನೆಲೆಯಲ್ಲಿ ಈ ದಿನವನ್ನು ಪಂಚಾಯತ್ ರಾಜ್ ದಿವಸವೆಂದು ಆಚರಿಸಲಾಗುತ್ತದೆ.

2. ಗ್ರಾಮೀಣ ಸಮುದಾಯಗಳಿಗೆ 'ನಿಮ್ಹಾನ್ಸ್'

- ಇತ್ತೀಚೆಗೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (NIMHANS) ಆಶ್ರಯ ಹಸ್ತ ಟ್ರಸ್ಟ್ ಎನ್ನುವ ಸರ್ಕಾರೇತರ ಸಂಸ್ಥೆಯೊಂದಿಗೆ ಒಪ್ಪಂದವೊಂದಕ್ಕೆ ಸಹಿ ಹಾಕಿದೆ.
- ಗ್ರಾಮೀಣ ಸಮುದಾಯಗಳಿಗೆ ಮಾನಸಿಕ ಆರೋಗ್ಯದ ಸವಲತ್ತುಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ನಮನ್ (NAMAN) ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.
- ಈ ಕಾರ್ಯಕ್ರಮದಡಿ ಮಾನಸಿಕ ಆರೋಗ್ಯದ ಸಮಸ್ಯೆಗಳಿಂದ ಬಳಲುತ್ತಿರುವ ಗ್ರಾಮೀಣ ಪ್ರದೇಶದ ಜನರ ಆರೈಕೆಗೆ(ಶುಶ್ರೂಷೆಗೆ) ಹಾಗೂ ಪುನರ್ವಸತಿ ಸವಲತ್ತನ್ನೂ ಕಲ್ಪಿಸಲಾಗುತ್ತದೆ.
- ಈ ಕಾರ್ಯಕ್ರಮವನ್ನು ಮೂರು ವರ್ಷಗಳ ಕಾಲ 4 ಹಂತಗಳಲ್ಲಿ ಅನುಷ್ಠಾನಕ್ಕೆ ತರಲಾಗುತ್ತದೆ. ಮೊದಲ ಹಂತದ ಕಾರ್ಯಕ್ರಮದಡಿಯಲ್ಲಿ ಅವಶ್ಯಕ ಸಿಬ್ಬಂದಿಯ ನೇಮಕಾತಿ ಮಾಡಿಕೊಂಡು, ಅವರಿಗೆ ತರಬೇತಿ ಕಲ್ಪಿಸುವುದು. ಈ ಮೂಲಕ ಸಂಪನ್ಮೂಲಗಳನ್ನು ಕ್ರೋಢೀಕರಿಸಲಾಗುತ್ತದೆ. ಎರಡನೇ ಹಂತದಲ್ಲಿ ಮಾನಸಿಕ ಆರೋಗ್ಯಕ್ಕೆ ಸಂಬಂಧಪಟ್ಟ ಪರೀಕ್ಷೆ ನಡೆಸಲಾಗುತ್ತದೆ. ಮೂರನೇ ಹಂತದಲ್ಲಿ ರೋಗಿಗಳಿಗೆ ಬೇಕಾದ ಶುಶ್ರೂಷೆ ಹಾಗೂ ಪುನರ್ವಸತಿ ಸೇವೆಗಳನ್ನು ಕಲ್ಪಿಸಲಾಗುತ್ತದೆ. ಅಂತಿಮ ಹಂತವನ್ನು ಮೌಲ್ಯಮಾಪನ ಪ್ರಕ್ರಿಯೆಗಾಗಿ ವಿನಿಯೋಗಿಸಲಾಗುತ್ತದೆ.
- ಪ್ರಸ್ತುತ ಕರ್ನಾಟಕದ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕು ಹಾಗೂ ಉತ್ತರಾಖಂಡ್ ರಾಜ್ಯದ ಪಿತೋರ್ ಘರ್ ಜಿಲ್ಲೆಯ ಮುಂಸಿಯರಿ ಗ್ರಾಮದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ.

ಪ್ರಚಲಿತ

ಇನ್ನಷ್ಟು ಪ್ರಚಲಿತ ವಿದ್ಯಮಾನಗಳಿಗಾಗಿ www.https://www.prajavani.net/education-career/career ನೋಡಿ

DH ಪ್ರಜಾವಾಣಿ EXAM MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಮತ್ತಷ್ಟು ಮಾಹಿತಿಗಾಗಿ

'ಗಜ್ ಉತ್ಸವ್ 2023' ಕುರಿತ ಇನ್ನಷ್ಟು ಮಾಹಿತಿಗಾಗಿ ಹಾಗೂ ನಾಗರಿಕ ಸೇವಾ ಪರೀಕ್ಷೆಗಳಿಗೆ ಸಂಬಂಧಿಸಿದ ಮತ್ತಷ್ಟು ಪ್ರಚಲಿತ ವಿದ್ಯಮಾನಗಳು ಹಾಗೂ ವಿಡಿಯೊಗಳಿಗಾಗಿ 'ಡೆಕ್ಕನ್‌ಹೆರಾಲ್ಡ್- ಪ್ರಜಾವಾಣಿ ಮಾಸ್ಟರ್‌ಮೈಂಡ್' ಇ-ಪೇಪರ್‌ಗೆ ಚಂದಾದಾರರಾಗಿ. ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

www.exammastermind.com

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

PHYSICS

63) A rotating wheel change angular speed from 1800 rpm to 3000 rpm in 20 s. What is the angular acceleration assuming to be uniform?

(a) 2π rad s^{-2} (b) 60π rad s^{-2}
(c) 40π rad s^{-2} d) 90π rad s^{-2}

Soln: (a): Here,

Initial angular speed of the wheel,

$$\omega_o = 1800 \times \frac{2\pi}{60} \text{ rad s}^{-1} = 60\pi \text{ rad s}^{-1}$$

Final angular speed of the wheel,

$$\omega = 3000 \times \frac{2\pi}{60} \text{ rad s}^{-1} = 100\pi \text{ rad s}^{-1}$$

Time during which this change of speed takes place, $t = 20$ s

Let α be angular acceleration of the wheel.

As $\omega = \omega_o + \alpha t$

$$\therefore \alpha = \frac{\omega - \omega_0}{t} = \frac{100\pi - 60\pi}{20} \text{ rad s}^{-2} = 2\pi \text{ rad s}^{-2}$$

64) A flow of liquid is streamline if the Reynold number is

(a) Between 2000 to 3000
(b) Less than 1000 **(c)** Greater than 1000
(d) Between 4000 to 5000

Soln:(b): if Reynold number is less than 1000, the flow is streamline.

If Reynold number is greater than 2000, the flow is turbulent.

If Reynold number lies between 1000 and 2000, the flow becomes unsteady.

65) A radio-active element has half-life of 15 years. What is the fraction that will decay in 30 years?

(a) 0.85 (b) 0.25
(c) 0.5 (d) 0.75

Ans: d

Expln:- Fraction undecayed is given as,

$N/N_0 = (1/2)^{(t/T)}$

Here, t=30 years and T=15 years

So,

$N/N_0 = (1/2)^{((30 \text{ years})/(15 \text{ years}))}$

or, $N/N_0 = (1/2)^2$

or, $N/N_0 = 1/4$

Therefore,

Fraction undecayed $= 1 - N/N_0$

or, Fraction undecayed $= 1 - (1/4)$

or, Fraction undecayed $= 3/4 = 0.75$

66) Light of two different frequencies whose photons have energies 1 eV and 2.5 eV respectively, successively illuminate a metallic surface whose work function is 0.5 eV. Ratio of maximum speeds of emitted electrons will be

(A) 1:4 **(B) 1:1**
(C) 1:5 **(D) 1:2**

Ans: (D) 1:2

Soln : $E = \phi + (KE)_{max}$

$1 = 0.5 + k_1$

$2.5 = 0.5 + k_2$

$\therefore k_1 = 0.5\text{eV}; \quad k_2 = 2.0\text{eV}; \quad K.E. = \frac{1}{2}mv^2$

$$\frac{v_1}{v_2} = \sqrt{\frac{k_1}{k_2}} = \sqrt{\frac{0.5}{2.0}} = \frac{1}{2}$$

or $v_1 : v_2 = 1:2$.

67) The polarizing angle of glass is 57^0. A ray of light which is incident at this angle will have an angle of refraction as

(A) 33^0 **(B) 38^0**
(C) 25^0 **(D) 43^0**

Ans: (A) 33^0



From Brewster's law

$\theta p + r = 90^0$

$r = 90^0 - \theta p$

$\therefore r = 90^0 - 57^0 = 33^0$.

68) To observe diffraction, the size of the obstacle

(A) Should be $\lambda/2$, where λ is the wavelength
(B) Should be of the order of wavelength
(C) Has no relation to wavelength
(D) Should be much larger than the wavelength.

Ans: (B) Should be of the order of wavelength

Condition for diffraction is $\lambda \approx d$.

69) A radioactive decay can form an isotope of the original nucleus with the emission of particles

(A) one α and two β (B) four α and one β
(C) one α and four β (D) one α and one β

Ans: (A) one α and two β

$$_{Z}X^{A} \xrightarrow{\alpha} {}_{Z-2}Y^{A-4} \xrightarrow{\beta} {}_{Z-1}P^{A-4} \xrightarrow{\beta} {}_{Z}X^{A-4}$$

So it must be one α and 2 β particles

Where $_{Z}X^{A}$ and $_{Z}X^{A-4}$ are the isotopes.

BIOLOGY

MULTIPLE CHOICE QUESTIONS:-

74. With respect to angiosperms, identify the incorrect pair from the following

(a) Antipodal -2n
(b) Vegetative cell of male gametophyte -n
(c) Primary endosperm nucleus - 3n
(d) Cells of nucleus of ovule - 2n

Ans:a

Expln:- out of the given pairs in the option only antipodal is wrongly matched because antipodals are haploid cells (n) found within the mature embryo sac towards the chalazal end. Rest all three options are correctly matched.

75. Statement (A) for a particular character in an individual, each gamete gets only one allele.

Statement (B) Chromatids of a chromosome spilt (separate) and move towards opposite pole during anaphase of mitosis.

(a) Both the statements are correct and 'B' is the reason for 'A'
(b) Both the statements are correct and 'B' is not the reason for 'A'
(c) Statement 'A' is correct and statement 'B; is wrong
(d) Statement 'B' is correct and statement 'B' is wrong

Ans:b

Expl:- Alleles are alternative forms of particular gene having the same position on a pair of homologous chromosomes affecting the same trait. During fertilization each gamete receives only one allele for a particular character. In anaphase the chromatids of a chromosome of future daughter nuclei start migrating towards the opposite poles along the path of their chromosome fibers. Thus, both statements given are correct but, one is not the correct reason for the other.

76. Internal bleeding, muscular pain, blockage of the intestinal passage and anemia are some of the symptoms caused due to infection by

(a) Wuchereia (b) Trichophyton
(c) Ascaris (d) Plasmodium

Ans: C

Expl:- Ascariasis is the helminthic disease caused by Ascaris lumbricoides, an intestinal parasite commonly known as roundworm which is responsible for the symptoms mentioned in the question such as internal bleeding, muscular pain, blockage of intestinal passage, anemia, fever, etc.

While, the other agents given in the other options causes the following diseases filariasis (is caused by Wuchereria), ringworm (is caused by Trichophyton) and malaria (is caused by Plasmodium).

77. RNA interference which is employed in making tobacco plant resistant to Meloidegyne incognita is essentially involved in

(a) Preventing the process of translation of mRNA
(b) Preventing the process of transcription
(c) Preventing the process of replication of DNA
(d) Preventing the process of spilicing of hnRNA

Ans:(a)

Expl:- Several nematodes infect a wide variety of plants and animals including human beings. Nematodes known as Meloidegyne incognita infects the roots of tobacco plants and reduces the production of tobacco.

Thus, to prevent this infection a strategy has adopted known as RNA interface (RNAi) which takes place in all eukaryotic organisms as a method of cellular defense. This method involves silencing of mRNA due to complementary dsRNA molecule that binds to it and prevents the process of translation of mRNA.

78. The success of mammals on earth is largely because

(a) They can conform to the changes in the environment
(b) They can reduce metabolic activity and go into a state of dormancy during unfavorable conditions in the environment
(c) They have the ability to maintain constant body temperature
(d) They can take of their young ones as they have mammary glands to suckle them

Ans:(C)

Expl:- out of the statements given in the options, the appropriate explanation is that the success of mammals on earth is largely because they are homeotherms, i.e., they have ability to maintain a constant internal body temperature within a tolerable range regardless of the changing external conditions.

79. Which one of the following hormones also produces anti-inflammatory reactions in man and suppresses the immune response in addition to its primary functions?

(a) Cortisol (b) thymosin
(c) Thyrocalcitonin (d) Erythropoietin

Ans:(a)

Expl:- Cortisol hormone is the main glucocorticiod produced in the body. It is secreted by zona fasciculate of adrenal cortex of adrenal gland. Apart from serving many other functions, one of its major functions is to produce anti-inflammatory reactions in man and also functions in suppressing the immune response. While, thymosin (hormone secreted by thymus)stimulates the development of disease fighting T-cell, Thyrocalcition (hormone secreted by parfollicular cells in the thyroid gland) regulates the calcium and phosphate metabolism and erythropoietin (hormone produced by the kidney) and control erythropoiesis or production of red blood cells.

ಚುನಾವಣಾ ನೀತಿ ಸಂಹಿತೆ ಜಾರಿ • ರಕ್ತದಾನ ಶಿಬಿರ ಆಯೋಜನೆಗೆ ಹಿನ್ನಡೆ

ನಡೆಯದ ಶಿಬಿರ: ರಕ್ತದ ಅಭಾವ

• ವರುಣ ಹೆಗಡೆ

ಬೆಂಗಳೂರು: ಚುನಾವಣೆ ನೀತಿ ಸಂಹಿತೆಯ ಪರಿಣಾಮ ನಗರದಲ್ಲಿ ರಕ್ತದಾನ ಶಿಬಿರಗಳ ಆಯೋಜನೆ ಮೇಲೂ ಬೀರಿದೆ. ಇದರಿಂದಾಗಿ ರಕ್ತದ ಅಭಾವ ಎದುರಾಗಿದೆ.

ರಕ್ತದ ಬೇಡಿಕೆ ಮತ್ತು ಪೂರೈಕೆ ನಡುವೆ ಶೇ 50ರಷ್ಟು ವ್ಯತ್ಯಾಸ ಉಂಟಾಗಿದೆ. ಇದೇ ಸ್ಥಿತಿ ಮುಂದುವರಿದಲ್ಲಿ ಸಮಸ್ಯೆ ಗಂಭೀರವಾಗಬಹುದು ಎಂದು ರಕ್ತನಿಧಿ ಕೇಂದ್ರದ ಪ್ರತಿನಿಧಿಗಳು ಹೇಳುತ್ತಾರೆ. ಬೇಸಿಗೆ ರಜೆ ಅವಧಿಯಲ್ಲಿ ವಿವಿಧ ಸಂಘ–ಸಂಸ್ಥೆಗಳು ರಕ್ತದಾನ ಶಿಬಿರಗಳನ್ನು ನಡೆಸುತ್ತಿದ್ದವು. ರಾಜಕಾರಣಿಗಳು, ಸಿನಿಮಾ ಸೇರಿ ವಿವಿಧ ಕ್ಷೇತ್ರಗಳ ಪ್ರಮುಖರ ಜನ್ಮದಿನದ ನೆನಪಲ್ಲಿ ಶಿಬಿರಗಳನ್ನು ಆಯೋಜಿಸಲಾಗುತ್ತಿತ್ತು.

ಎರಡು ವರ್ಷ ಕೋವಿಡ್‌ನಿಂದಾಗಿ ಶಿಬಿರಗಳು ಅಷ್ಟಾಗಿ ನಡೆದಿರಲಿಲ್ಲ. ಇದರಿಂದಾಗಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಸೇರಿ ವಿವಿಧ ಆಸ್ಪತ್ರೆಗಳಲ್ಲಿ ರಕ್ತದ ಕೊರತೆ ಎದುರಾಗಿತ್ತು ಥಲಸ್ಸೇಮಿಯಾ ಮತ್ತು ಹೀಮೊಫಿಲಿಯ ಸಮಸ್ಯೆಗಳಿಂದ ಬಳಲುತ್ತಿರುವ ರೋಗಿಗಳು ಸಮಸ್ಯೆ ಎದುರಿಸಿದ್ದರು. ಸದ್ಯ, ಕೋವಿಡ್ ನಿಯಂತ್ರಣದಲ್ಲಿದ್ದರೂ ಚುನಾವಣೆ ನೀತಿ ಸಂಹಿತೆಯ ಕಾರಣ ರಕ್ತದಾನ ಶಿಬಿರಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯುತ್ತಿಲ್ಲ. ಕೋವಿಡ್ ಬಳಿಕ ಐಟಿ–ಬಿಟಿ ಕಂಪನಿಗಳು ಪುನಾರಂಭ ಆಗಿದ್ದರೂ, ವಾರದ ಎಲ್ಲಾ ದಿನಗಳು ಕಾರ್ಯನಿರ್ವಹಿಸುತ್ತಿಲ್ಲ. ಈಗಲೂ ಕೆಲ ಉದ್ಯೋಗಿಗಳು ಮನೆಯಿಂದಲೇ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ, ಐಟಿ–ಬಿಟಿ ಕಂಪನಿಗಳು ಶಿಬಿರ ನಡೆಸಲು ಆಸಕ್ತಿ ತೋರುತ್ತಿಲ್ಲ. ಇದೂ ರಕ್ತ ಪೂರೈಕೆಯಲ್ಲಿ ವ್ಯತ್ಯಯವಾಗಿದೆ.

ಪೂರೈಕೆ ಕಷ್ಟ: ಪ್ರಮುಖ ರಕ್ತ ನಿಧಿ ಸಂಸ್ಥೆಯಾದ ಭಾರತೀಯ ರೆಡ್ ಕ್ರಾಸ್ ನಗರದ ವಿವಿಧ ಆಸ್ಪತ್ರೆಗಳಿಗೆ ರಕ್ತ ಪೂರೈಕೆ ಮಾಡುತ್ತಿತ್ತು. ಕೆಲ ದಿನಗಳಿಂದ ನಿರೀಕ್ಷಿತ ಪ್ರಮಾಣದಲ್ಲಿ ರಕ್ತ ಸಂಗ್ರಹವಾಗದಿದ್ದರಿಂದ ಆಸ್ಪತ್ರೆಗಳಿಗೆ ಲಭ್ಯತೆಯ ಆಧಾರದಲ್ಲಿ ಕೇಂದ್ರವು ಒದಗಿಸುತ್ತಿದೆ. ಪ್ರತಿ ತಿಂಗಳು 3 ಸಾವಿರ ಯೂನಿಟ್ ರಕ್ತವನ್ನು ಸಂಗ್ರಹಿಸುತ್ತಿದ್ದ ಸಂಸ್ಥೆ, ಎರಡು ತಿಂಗಳಿಂದ 1.5 ಸಾವಿರ ಯೂನಿಟ್ ರಕ್ತವನ್ನು ಸಂಗ್ರಹಿಸುತ್ತಿದೆ.

ಸಂಗ್ರಹಿಸಿಟ್ಟಿರುವ ರಕ್ತ

‘ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ರಕ್ತದಾನ ಶಿಬಿರಗಳು ಅಷ್ಟಾಗಿ ನಡೆಯುತ್ತಿಲ್ಲ. ಪೂರ್ವ ನಿಗದಿತ ಶಿಬಿರಗಳನ್ನೂ ಆಯೋಜಕರೇ ರದ್ದು ಮಾಡುತ್ತಿದ್ದಾರೆ. ಜನವರಿ. ಫೆಬ್ರುವರಿಯಲ್ಲಿ ಸಂಗ್ರಹವಾಗಿದ್ದ ರಕ್ತದಲ್ಲಿಯೇ ನಿರ್ವಹಣೆ ಮಾಡುತ್ತಿದ್ದೇವೆ. ಬೇಡಿಕೆಯಷ್ಟು ಪೂರೈಕೆ ಸಾಧ್ಯವಾಗುತ್ತಿಲ್ಲ. ಯುವಜನರು ರಕ್ತದಾನದ ಜೊತೆಗೆ ಇತರರನ್ನೂ ರಕ್ತದಾನ ಮಾಡಲು ಪ್ರೇರೇಪಿಸಬೇಕು’ ಎಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ರಾಜ್ಯಶಾಖೆಯ ಕಾರ್ಯಕಾರಿ ಸಮಿತಿಯ ಸದಸ್ಯರೊಬ್ಬರು ತಿಳಿಸಿದರು.

‘ಸರ್ಕಾರಿ ಆಸ್ಪತ್ರೆಗಳಲ್ಲಿ ಥಲಸ್ಸೇಮಿಯಾ ರೋಗಿಗಳಿಗೆ ಉಚಿತವಾಗಿ ರಕ್ತ ಒದಗಿಸಲಾಗುತ್ತಿದೆ. ಕೊರತೆ ನೀಗಿಸಲು ಸಂಚಾರಿ ವಾಹನಗಳ ಮೂಲಕವೂ ರಕ್ತ ಸಂಗ್ರಹಿಸಲಾಗುತ್ತಿದೆ’ ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ಹೇಳಿದರು.

ಪ್ರಜಾವಾಣಿ ವಿಶೇಷ

ಥಲಸ್ಸೇಮಿಯಾ ರೋಗಿಗಳಿಗೆ ಸಮಸ್ಯೆ

‘ರಕ್ತ ದಾನ ಶಿಬಿರಗಳು ನಡೆಯುತ್ತಿಲ್ಲ. ರಕ್ತ ಸಂಗ್ರಹಿಸಲು ಬಹಳ ಕಷ್ಟ ಪಡುತ್ತಿದ್ದೇವೆ. ನಮ್ಮ ಸಂರಕ್ಷಾ ಥಲಸ್ಸೇಮಿಯಾ ಕೇಂದ್ರದಲ್ಲಿ 426 ಮಕ್ಕಳಿದ್ದಾರೆ. ಅವರಿಗೆ ನಿತ್ಯ 30ರಿಂದ 35 ಯೂನಿಟ್ ರಕ್ತ ಒದಗಿಸಬೇಕಾಗುತ್ತದೆ. ಕಾಯಂ ದಾನಿಗಳನ್ನು ಸಂಪರ್ಕಿಸಿ, ಮನವಿ ಮಾಡಿಕೊಳ್ಳುತ್ತಿದ್ದೇವೆ. ಆದರೂ ಅಗತ್ಯ ಪ್ರಮಾಣದ ರಕ್ತವನ್ನು ಸಂಗ್ರಹಿಸಿ, ಒದಗಿಸುವುದು ಸವಾಲಾಗಿದೆ’ ಎಂದು ರಾಷ್ಟ್ರೋತ್ಥಾನ ರಕ್ತನಿಧಿ ಕೇಂದ್ರದ ಅಧಿಕಾರಿ ರಾಧಾ ತಿಳಿಸಿದರು.

‘ರಕ್ತದಾನ ಶಿಬಿರಗಳು ನಡೆದರೂ ದಾನಿಗಳು ಬರುತ್ತಿಲ್ಲ. ಈ ಮೊದಲು ಪ್ರತಿನಿತ್ಯ 80ರಿಂದ 100 ಯೂನಿಟ್ ರಕ್ತವನ್ನು ಆಸ್ಪತ್ರೆಗಳಿಗೆ ಒದಗಿಸುತ್ತಿದ್ದೆವು. ಈಗ ನಮ್ಮಲ್ಲಿನ ಮಕ್ಕಳಿಗೆ ಅವರ ಪಾಲಕರಲ್ಲಿ ರಕ್ತ ನೀಡುವಂತೆ ಮನವಿ ಮಾಡಿಕೊಳ್ಳುತ್ತಿದ್ದೇವೆ. ಆಸ್ಪತ್ರೆಗಳಿಗೆ ರಕ್ತವನ್ನು ಪೂರೈಕೆ ಮಾಡಲು ಸಾಧ್ಯವಾಗುತ್ತಿಲ್ಲ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ರಾಷ್ಟ್ರೋತ್ಥಾನ ರಕ್ತನಿಧಿ ಕೇಂದ್ರದ ಸಂಪರ್ಕ ಸಂಖ್ಯೆ: 080 26608870 ಅಥವಾ 9945299369

ಭಾರತೀಯ ರೆಡ್ ಕ್ರಾಸ್ ಕರ್ನಾಟಕ ಶಾಖೆಯ ಸಂಪರ್ಕ ಸಂಖ್ಯೆ: 080 22268435 ಅಥವಾ 9902859859

ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಹಳೆಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿದ್ದ 85ನೇ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ಭಾರ್ಗವಿ ವೆಂಕಟರಾಮ್ ಅವರು ಬುಧವಾರ ಸಂಗೀತ ಕಛೇರಿ ಪ್ರಸ್ತುತಪಡಿಸಿದರು. ಅವರ ತಂದೆ ಎಚ್‌.ಕೆ. ವೆಂಕಟರಾಮ್ ಸಾಥ್ ನೀಡಿದರು
–ಪ್ರಜಾವಾಣಿ ಚಿತ್ರ

ವೆಲ್ಲೂರ್ ಕಾಲೇಜು ಸಿಇಟಿ ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಲ್ಲೂರ್ ತಾಂತ್ರಿಕ ಶಿಕ್ಷಣ ವಿದ್ಯಾಲಯ ನಡೆಸಿದ್ದ ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಯ (ವಿಐಟಿಇಇಇ) ಫಲಿತಾಂಶ ಪ್ರಕಟವಾಗಿದ್ದು, ಜಾರ್ಖಂಡ್‌ನ ಕುಶಾಗ್ರ ಬಶಿಷ್ಟ್ ಅವರು ಮೊದಲ ಸ್ಥಾನ ಪಡೆದಿದ್ದಾರೆ.

ಏ. 17ರಿಂದ 23ರವರೆಗೆ 121 ನಗರಗಳು ಹಾಗೂ ದುಬೈ, ಕುವೈತ್, ಮಸ್ಕತ್, ಕತಾರ್‌ಗಳಲ್ಲಿ ಕಂಪ್ಯೂಟರ್ ಆಧರಿತ ಪರೀಕ್ಷೆ ನಡೆದಿತ್ತು. ಫಲಿತಾಂಶವನ್ನು https://ugresults.vit.ac.in/viteee ಪೋರ್ಟಲ್ ಹಾಗೂ www.vit.ac.in ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಮಹಾರಾಷ್ಟ್ರದ ಪ್ರಕ್ಷಾಲ್ ಶ್ರೀನಿವಾಸ್ ಚೌಧರಿ (ಎರಡು), ಮಹಿನ್ ಪ್ರಮೋದ್ ಧೋಕ್ (ಮೂರು), ಕೇರಳದ ಆಶಿಕ್ ಸ್ಟೆನ್ನಿ (ನಾಲ್ಕು) ; 5ನೇ ರ್‍ಯಾಂಕ್ -ಬಿಹಾರದ ಅಂಕಿತ್ ಕುಮಾರ್ ರ್‍ಯಾಂಕ್ ಪಡೆದಿದ್ದಾರೆ. ಒಂದು ಲಕ್ಷ ರ್‍ಯಾಂಕ್ ಒಳಗಿನ ಅಭ್ಯರ್ಥಿಗಳು ಪ್ರವೇಶದ ಕೌನ್ಸೆಲಿಂಗ್‌ಗೆ ಅರ್ಹರು. ವೆಲ್ಲೂರು ಮತ್ತು ಚೆನ್ನೈ, ಭೋಪಾಲ್‌ನಲ್ಲಿ ಏ.26ರಿಂದ ಕೌನ್ಸೆಲಿಂಗ್ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಿಲಾಸಿ ಜೀವನಕ್ಕಾಗಿ ಪ್ರೇಮಿಗಳಿಂದ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಲಾಸಿ ಜೀವನ ಹಾಗೂ ಮಾದಕ ವ್ಯಸನದ ಖರ್ಚಿಗೆ ಹಣ ಹೊಂದಿಸಲು ನಗರದ ಹಲವೆಡೆ ಬೈಕ್ ಹಾಗೂ ಮೊಬೈಲ್ ಕಳವು ಮಾಡುತ್ತಿದ್ದ ಪ್ರೇಮಿಗಳನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಶ್ರೀರಾಮಪುರ ನಿವಾಸಿ ಮುರುಗನ್ (25), ಥಣಿಸಂದ್ರದ ಯಾಸ್ಮಿನ್ (18) ಬಂಧಿತರು. ಬಂಧಿತರಿಂದ ₹ 1 ಲಕ್ಷ ಮೌಲ್ಯದ ಮೊಬೈಲ್ ಫೋನ್‌ಗಳು ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಿಕೊಳ್ಳಲಾಗಿದೆ.

‘2021ರಲ್ಲಿ ನಡೆದಿದ್ದ ಕಳವು ಪ್ರಕರಣದಲ್ಲಿ ಸಿಕ್ಕಿಬಿದ್ದಿದ್ದ ಮುರುಗನ್ ಜೈಲಿಗೆ ಹೋಗಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ. ಮತ್ತೆ ಕೆಲಸಕ್ಕೆ ಇಳಿದು ಉಪ್ಪಾರಪೇಟೆ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಬಂಧಿತನಾಗಿ ಜಾಮೀನು ಮೇಲೆ ಹೊರಬಂದಿದ್ದ. ಯಾಸ್ಮಿನ್ ಸಹ ಒಂಟಿಯಾಗಿ ತೆರಳಿ ರಸ್ತೆಬದಿಯಲ್ಲಿ ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದರು. ಆಗ ಯಾಸ್ಮಿನ್‌ಗೆ ಮುರುಗನ್ ಪರಿಚಯವಾಗಿದ್ದ. ಇಬ್ಬರೂ ಪರಸ್ಪರ ಮೊಬೈಲ್ ನಂಬರ್ ಪಡೆದು ಪ್ರೀತಿಸಲು ಆರಂಭಿಸಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಇಬ್ಬರೂ ಮಾದಕವಸ್ತು ವ್ಯಸನಿಗಳಾಗಿದ್ದರು. ಹಣ ಖಾಲಿ ಆಗುತ್ತಿದ್ದಂತೆಯೇ ಮಾದಕವಸ್ತು ಖರೀದಿಸಲು ಬೈಕ್, ಮೊಬೈಲ್ ಕಳವು ಮಾಡುತ್ತಿದ್ದರು. ಕದ್ದ ಬೈಕ್‌ಗಳನ್ನು ಶಿವಾಜಿನಗರ, ಪಾದರಾಯನಪುರದ ಗ್ಯಾರೇಜ್‌ಗೆ ಕೇವಲ ₹ 10 ರಿಂದ ₹ 15 ಸಾವಿರಕ್ಕೆ ಮಾರಾಟ ಮಾಡಿದ್ದಾರೆ. ಹ್ಯಾಂಡಲ್ ಲಾಕ್ ತೆಗೆದು, ನಕಲಿ ಕೀ ಬಳಸಿ ಕೃತ್ಯ ಎಸಗುತ್ತಿದ್ದರು.’

‘ಏ.10ರಂದು ಮಲ್ಲೇಶ್ವರ ಹೈಪರ್ ಮಾರುಕಟ್ಟೆ ಎದುರು ಮೊಬೈಲ್ ಕಸಿದು ಪರಾರಿಯಾಗಿದ್ದು, ಜಯಚಂದ್ರ ಎಂಬವರು ಮಲ್ಲೇಶ್ವರ ಠಾಣೆಗೆ ದೂರು ನೀಡಿದ್ದರು. ಕಾರ್ಯಾಚರಣೆ ನಡೆಸಿದ ಪೊಲೀಸರಿಗೆ ಮುರುಗನ್, ಯಾಸ್ಮಿನ್ ಸಿಕ್ಕಿಬಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಸಾಲಗಾರರ ಕಿರುಕುಳ: ಗುತ್ತಿಗೆದಾರ ಆತ್ಮಹತ್ಯೆ

ಬೆಂಗಳೂರು: ಸಾಲಗಾರರ ಕಿರುಕುಳದಿಂದ ಬೇಸತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಗುತ್ತಿಗೆದಾರರೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬಸವೇಶ್ವರನಗರ 3ನೇ ಹಂತದ ನಿವಾಸಿ ಎ.ವೆಂಕಟೇಶ್ ಆತ್ಮಹತ್ಯೆ ಮಾಡಿಕೊಂಡ ಗುತ್ತಿಗೆದಾರ. ಅವರು ಕ್ಲಾಸ್ 1 ಗುತ್ತಿಗೆದಾರರಾಗಿದ್ದರು.

‘ವಿಶ್ವನಾಥ್, ಧರ್ಮೇಂದ್ರ ಬಾಬು, ಚಂದ್ರು, ಗೋಪಿ ಮತ್ತು ಇತರೆ ಫೈನಾನ್ಸಿಯರ್‌ಗಳು ಪತಿಗೆ ಕಿರುಕುಳ ನೀಡುತ್ತಿದ್ದರು. ಅದರಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ವೆಂಕಟೇಶ್ ಅವರ ಪತ್ನಿ ದೇವಿಕಾ ದೂರು ನೀಡಿದ್ದಾರೆ.

ಪೊಲೀಸರು ನಾಲ್ವರ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಬಿಬಿಎಂಪಿ ಗುತ್ತಿಗೆ ಕಾಮಗಾರಿ ಮಾಡುವಾಗ ಪತಿಗೆ ಸಾಕಷ್ಟು ನಷ್ಟವಾಗಿತ್ತು. ಸಾಲ ಪಡೆದುಕೊಂಡಿದ್ದರು. ಕೋಟ್ಯಂತರ ರೂಪಾಯಿ ನಷ್ಟ ಅನುಭವಿಸಿದ್ದರು. ಸಾಲಗಾರರು ಕಿರುಕುಳ ನೀಡುತ್ತಿದ್ದರು’ ಎಂದು ಅವರ ಪತ್ನಿ ದೂರಿದ್ದಾರೆ.

ಅಪರಾಧ ಸುದ್ದಿ

ಕಿರುಕುಳ: ರ್‍ಯಾಪಿಡೊ ಸವಾರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ನ್ಯೂಟೌನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೈಕ್ ಪ್ರಯಾಣದ ವೇಳೆ ಯುವತಿಗೆ ಕಿರುಕುಳ ನೀಡಿದ್ದ ರ್‍ಯಾಪಿಡೊ ಸವಾರನ ದೀಪಕ್‌ರಾವ್ (27) ನನ್ನು ಪೊಲೀಸರು ಬಂಧಿಸಿದ್ದಾರೆ.

ದೀಪಕ್ ರಾವ್

‘ಆರೋಪಿ ವಿರುದ್ಧ ಹಲ್ಲೆ, ಅಪಹರಣ, ಕಿರುಕುಳ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಯುವತಿಯಿಂದ ಕಸಿದುಕೊಂಡಿದ್ದ ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ. ಆಂಧ್ರಪ್ರದೇಶದ ಆರೋಪಿ, ನಗರದ ತಿಂಡ್ಲುವಿನಲ್ಲಿ ಬಾಡಿಗೆ ಮನೆಯಲ್ಲಿ ನೆಲೆಸಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಆರೋಪಿ ಯುವತಿ ಕರೆದೊಯ್ಯುವ ಮೊದಲು ವಿಪರೀತ ಮದ್ಯ ಸೇವಿಸಿದ್ದ. ಮದ್ಯದ ಅಮಲಿನಲ್ಲಿ ಯುವತಿಗೆ ಕಿರುಕುಳ ನೀಡಿರುವುದಾಗಿ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ. ಏ.21ರಂದು ಬಿ.ಎಂ.ಎಸ್ ಕಾಲೇಜು ಬಳಿ ಈ ಘಟನೆ ನಡೆದಿತ್ತು’ ಎಂದು ಮೂಲಗಳು ತಿಳಿಸಿವೆ.

ಬೇರೊಂದು ಬೈಕ್ ಬಳಕೆ: ಅಂದು ರಾತ್ರಿ 11 ಗಂಟೆ ಸುಮಾರಿಗೆ ಸ್ನೇಹಿತನ ಮನೆಗೆ ತೆರಳಲು ಯುವತಿ ರ್‍ಯಾಪಿಡೊ ಬುಕ್ ಮಾಡಿದ್ದರು.ಆರೋಪಿ ರ್‍ಯಾಪಿಡೊ ಸಂಸ್ಥೆಯ ನೋಂದಾಯಿತ ಬೈಕ್ ಬದಲಿಗೆ ಸ್ವಂತ ಬೈಕ್ ಬಳಸಿದ್ದ. ಒಟಿಪಿ ಪಡೆಯುವ ನೆಪದಲ್ಲಿ ಕಿರುಕುಳ ನೀಡಿದ್ದ. ಯುವತಿ ನೀಡಿದ್ದ ವಿಳಾಸದ ಬದಲು ದೊಡ್ಡಬಳ್ಳಾಪುರ ರಸ್ತೆ ಕಡೆ ಬೈಕ್ ತಿರುಗಿಸಿದ್ದ.

ಗಾಬರಿಗೊಂಡಿದ್ದ ಯುವತಿ ನಾಗೇನಹಳ್ಳಿ ಬಳಿ ಬೈಕ್‌ನಿಂದ ಜಿಗಿದಿದ್ದಳು. ಯುವತಿ ಕಿರುಚಾಟ ಕೇಳಿ ಕಾಲೇಜಿನ ಸೆಕ್ಯುರಿಟಿ ರಕ್ಷಿಸಿದ್ದರು. ಅಷ್ಟರಲ್ಲಿ ಆರೋಪಿ ಪರಾರಿಯಾಗಿದ್ದ. ಸ್ಥಳೀಯರ ಮೊಬೈಲ್ ಪಡೆದು ಸ್ನೇಹಿತರಿಗೆ ಕರೆ ಮಾಡಿ ಮನೆಗೆ ತಲುಪಿದ್ದಳು. ಸಿಸಿಟಿವಿಯಲ್ಲಿ ಸೆರೆಯಾಗಿದ್ದ ಆರೋಪಿಯ ಚಹರೆ ಆಧರಿಸಿ ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮಗನಿಂದ ತಂದೆಯ ಕೊಲೆ

ಬೆಂಗಳೂರು: ವಿಜಯನಗರದ ಮಾರೇನಹಳ್ಳಿಯ ಪಿಎಫ್ ಲೇಔಟ್‌ನಲ್ಲಿ ಮದ್ಯ ಖರೀದಿಸಲು ಹಣ ನೀಡಲಿಲ್ಲ ಎಂಬ ಕಾರಣಕ್ಕೆ ತಂದೆಯನ್ನು ಮಗ ಕೊಲೆ ಮಾಡಿದ್ದಾನೆ. ಬಸವರಾಜು (60) ಮೃತಪಟ್ಟವರು. ಆರೋಪಿ ಪುತ್ರ ನೀಲಾಧರ(30)ನನ್ನು ಪೊಲೀಸರು ಬಂಧಿಸಿದ್ದಾರೆ. ಬಸವರಾಜು ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು. ನೀಲಾಧರ ಆಟೊ ರಿಕ್ಷಾ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಶೆಡ್‌ನಲ್ಲಿ ಇಟ್ಟಿಗೆಯಿಂದ ಹೊಡೆದು ಕೊಲೆ ಮಾಡಿದ್ದಾನೆ. ತನಿಖೆ ವೇಳೆ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ ಎಂದು ಮೂಲಗಳು ಹೇಳಿವೆ.

ಹೈಕೋರ್ಟ್ ಏಕಸದಸ್ಯ ಪೀಠದ ಆದೇಶ

ಬಾಡಿಗೆ ತಾಯ್ತನ: ತ್ರಿವಳಿ ಪರೀಕ್ಷೆ ಅವಶ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಾಡಿಗೆ ತಾಯ್ತನ ಹೊಂದಬಯಸುವವರಿಗೆ ಸಕ್ಷಮ ಪ್ರಾಧಿಕಾರವು ಅರ್ಹತಾ ಪ್ರಮಾಣ ಪತ್ರ ನೀಡುವ ಮುನ್ನ ಅವರ ಆನುವಂಶಿಕ, ದೈಹಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು (ಜೆನೆಟಿಕ್, ಫಿಸಿಕಲ್ ಹಾಗೂ ಎಕನಾಮಿಕ್) ಪರಿಗಣಿಸುವ ಅವಶ್ಯಕತೆ ಇದೆ‘ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಬಾಡಿಗೆ ತಾಯ್ತನ ನಿಯಂತ್ರಣ ಕಾಯ್ದೆಯ ನಿಯಮಗಳನ್ನು ಪ್ರಶ್ನಿಸಿ ನಗರದ 57 ವರ್ಷದ ವ್ಯಕ್ತಿ ಮತ್ತವರ 45 ವರ್ಷದ ಪತ್ನಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪ್ರಕರಣದಲ್ಲಿ ಬಾಡಿಗೆ ತಾಯ್ತನ ಕಾಯ್ದೆ-2021ರ ಕಲಂ 2(1)(ಝಡ್ ಜಿ) ಹಾಗೂ ಕಲಂ 4(3)(ಸಿ)(ಈ) ಅನ್ನು ಆಕ್ಷೇಪಿಸಿದ್ದ ಅರ್ಜಿದಾರರು, ‘ಬಾಡಿಗೆ ತಾಯ್ತನದ ಮೂಲಕ ಮಗು ಪಡೆಯಲು ಬಯಸುವ ಪುರುಷರಿಗೆ 55 ವರ್ಷ ಮೀರಿರಬಾರದು ಹಾಗೂ ಬಾಡಿಗೆ ತಾಯಿಯಾಗುವ ಮಹಿಳೆ; ಮಗು ಬಯಸುವ ದಂಪತಿಯೊಂದಿಗೆ ಅನುವಂಶಿಕ ಸಂಬಂಧ ಹೊಂದಿರಬೇಕು’ ಎಂಬ ನಿಯಮಗಳನ್ನು ಪ್ರಶ್ನಿಸಿದ್ದರು.

ಅರ್ಜಿಯನ್ನು ಭಾಗಶಃ ಮಾನ್ಯ ಮಾಡಿರುವ ನ್ಯಾಯಪೀಠ, ‘ಅರ್ಜಿದಾರರು ಪ್ರಶ್ನಿಸಿರುವ ನಿಯಮಗಳ ಕುರಿತಂತೆ ಸದ್ಯ ಸುಪ್ರೀಂಕೋರ್ಟ್‌ನಲ್ಲಿ ಅನ್ಯ ಪ್ರಕರಣ ವಿಚಾರಣೆಗೆ ಬಾಕಿ ಇದೆ. ಹೀಗಾಗಿ, ಅರ್ಜಿದಾರರು ಆಕ್ಷೇಪಿಸಿರುವ ಅಂಶಗಳನ್ನು ಇಲ್ಲಿ ಇತ್ಯರ್ಥಪಡಿಸಲಾಗದು. ಆದರೆ, ಬಾಡಿಗೆ ತಾಯ್ತನದ ಮೂಲಕ ಮಗು ಪಡೆಯುವವರು ಆನುವಂಶಿಕ, ದೈಹಿಕ ಹಾಗೂ ಆರ್ಥಿಕ ಪರೀಕ್ಷೆಯಲ್ಲಿ ಉತ್ತೀರ್ಣವಾಗುವ ಅಗತ್ಯವಿದೆ. ಆದ್ದರಿಂದ, ಅರ್ಜಿದಾರರು ಈ ತ್ರಿವಳಿ ಪರೀಕ್ಷೆಗೆ ಒಳಪಡಬೇಕು’ ಎಂದು ಸೂಚಿಸಿದೆ.

‘ಈ ಸಂಬಂಧ ಅರ್ಜಿದಾರರು ಸಲ್ಲಿಸುವ ಅರ್ಜಿಯನ್ನು ಸಕ್ಷಮ ಪ್ರಾಧಿಕಾರವು ನಾಲ್ಕು ವಾರಗಳಲ್ಲಿ ಪರಿಗಣಿಸಿ ಅರ್ಹತಾ ಪ್ರಮಾಣಪತ್ರ ವಿತರಿಸುವ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಬೇಕು’ ಎಂದು ರಾಜ್ಯ ಬಾಡಿಗೆ ತಾಯ್ತನ ಮಂಡಳಿಗೆ ನ್ಯಾಯಪೀಠ ನಿರ್ದೇಶಿಸಿದೆ.

ಪ್ರಕರಣವೇನು?: ಅರ್ಜಿದಾರರು ಶೈಕ್ಷಣಿಕ ಸಂಸ್ಥೆಯೊಂದರಲ್ಲಿ ಪ್ರಥಮ ದರ್ಜೆ ಸಹಾಯಕ. ಪತ್ನಿ ಗೃಹಿಣಿ. ಮದುವೆಯ ನಂತರ ಪುತ್ರ ಜನಿಸಿದ್ದ. ಎಂಬಿಬಿಎಸ್ ಪದವಿ ಪೂರ್ಣಗೊಳಿಸಿದ್ದ ಪುತ್ರ 23ನೇ ವಯಸ್ಸಿನಲ್ಲಿ ಅಪಘಾತದಲ್ಲಿ ಮೃತಪಟ್ಟಿದ್ದ. ಏತನ್ಮಧ್ಯೆ ಪತ್ನಿ ಅನಾರೋಗ್ಯದ ಕಾರಣ ಶಸ್ತ್ರಚಿಕಿತ್ಸೆ ಮೂಲಕ ಅವರ ಗರ್ಭಕೋಶ ತೆಗೆಸಿಕೊಂಡಿದ್ದರು.

ಪುತ್ರನ ಸಾವಿನಿಂದ ಖಿನ್ನತೆಗೆ ಒಳಗಾಗಿದ್ದ ದಂಪತಿ ಕೆಲ ದಿನಗಳ ಬಳಿಕ ಬಾಲನ್ಯಾಯ (ಮಕ್ಕಳ ಕಾಳಜಿ ಹಾಗೂ ರಕ್ಷಣೆ) ಕಾಯ್ದೆಯ ನಿಯಮಗಳ ಅನುಸಾರ ಮಗುವೊಂದನ್ನು ದತ್ತು ಪಡೆಯಲು ನಿರ್ಧರಿಸಿದ್ದರು. ಆದರೆ, ಹೆಚ್ಚಿನ ಸಂಖ್ಯೆಯ ಪೋಷಕರು ಮಕ್ಕಳನ್ನು ದತ್ತು ಪಡೆಯಲು ನೋಂದಣಿ ಮಾಡಿಸಿಕೊಂಡಿದ್ದ ಕಾರಣ ಮಗು ದತ್ತು ಪಡೆಯಲು ಕನಿಷ್ಠ ಮೂರು ವರ್ಷ ತಗುಲಲಿದೆ ಎಂದು ತಿಳಿಸಲಾಗಿತ್ತು.

ವೈದ್ಯರೊಂದಿಗೆ ಸಮಾಲೋಚಿಸಿದ ದಂಪತಿ ಬಾಡಿಗೆ ತಾಯ್ತನದ ಮೂಲಕ ಮಗುವನ್ನು ಪಡೆಯಲು ನಿರ್ಧರಿಸಿದ್ದರು. ಅರ್ಜಿದಾರರ ನಾದಿನಿ ಅಂಡಾಣು ದಾನ ಮಾಡಲು ಸಮ್ಮತಿಸಿದ್ದರು. 2 ಮಕ್ಕಳ ತಾಯಿಯಾಗಿರುವ ಹತ್ತಿರದ ಕುಟುಂಬದ ಸ್ನೇಹಿತೆಯೊಬ್ಬರು (25 ವರ್ಷ) ಬಾಡಿಗೆ ತಾಯಿಯಾಗಲು ಒಪ್ಪಿಗೆ ಸೂಚಿಸಿದ್ದರು. ಆದರೆ, ಪತಿಗೆ 57 ವರ್ಷವಾಗಿದ್ದ ಕಾರಣ ಹಾಗೂ ಬಾಡಿಗೆ ತಾಯಿಯಾಗುವ ಮಹಿಳೆ ದಂಪತಿಯ ಆನುವಂಶಿಕ ಸಂಬಂಧಿ ಅಲ್ಲ ಎಂಬ ಕಾರಣಕ್ಕೆ ಬಾಡಿಗೆ ತಾಯ್ತನದ ಕಾಯ್ದೆಯ ಕೆಲ ಕಲಂಗಳು ಪ್ರಕ್ರಿಯೆಗೆ ಅಡ್ಡಿ ಉಂಟು ಮಾಡಿದ್ದವು. ಇದರಿಂದಾಗಿ ದಂಪತಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ರಾಜ್ಯದಲ್ಲಿ 5 ವರ್ಷದಲ್ಲಿ 67 ಲಕ್ಷ ಉದ್ಯೋಗ ಸೃಷ್ಟಿ • ಉದ್ಯೋಗ ವರದಿ ಬಿಡುಗಡೆ

‘ನಿರುದ್ಯೋಗ ಪ್ರಮಾಣ ಶೇ 2.7’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 5 ವರ್ಷಗಳಲ್ಲಿ 67.9 ಲಕ್ಷ ಉದ್ಯೋಗ ಸಂಘಟಿತ ವಲಯದಲ್ಲಿ ಸೃಷ್ಟಿಯಾಗಿದೆ. ಇಷ್ಟಾಗಿಯೂ ಅಸಂಘಟಿತ ವಲಯದ ಉದ್ಯೋಗಿಗಳನ್ನು ಸಂಘಟಿತ ವಲಯದಡಿಗೆ ತರಲು ಮಾಸಿಕ ಪ್ರೋತ್ಸಾಹಧನದಂತಹ ಯೋಜನೆಗಳನ್ನು ರಾಜ್ಯ ಸರ್ಕಾರ ಜಾರಿಗೆ ತರಬೇಕು ಎಂದು ‘ಕರ್ನಾಟಕ ಉದ್ಯೋಗ ವರದಿ 2022–23’ರಲ್ಲಿ ಶಿಫಾರಸು ಮಾಡಲಾಗಿದೆ.

ಭಾರತೀಯ ವಾಣಿಜ್ಯೋದ್ಯಮ ಮಹಾಸಂಘಗಳ ಒಕ್ಕೂಟ (ಎಫ್‌ಐಸಿಸಿಐ) ಹಾಗೂ ಕ್ವೆಸ್ ಸಂಸ್ಥೆ ಜಂಟಿಯಾಗಿ ಹೊರತಂದ ವರದಿಯನ್ನು ಬುಧವಾರ ಬಿಡುಗಡೆ ಮಾಡಲಾಯಿತು. ಸಂಸ್ಥೆಯ ಹಿರಿಯ ಸಂಶೋಧನಾ ವಿಶ್ಲೇಷಕಿ ಅಕ್ಷತಾ ಎಂ. ಅವರು ವರದಿ ಮಂಡಿಸಿದರು.

‘ರಾಜ್ಯದ 2.9 ಕೋಟಿ ಉದ್ಯೋಗಿಗಳಲ್ಲಿ ಶೇ 24.7ರಷ್ಟು (73.8 ಲಕ್ಷ) ಜನರು ಸಂಘಟಿತ ವಲಯದಲ್ಲಿದ್ದಾರೆ. ಈ ಪ್ರಮಾಣ ದೇಶದ ಸರಾಸರಿಗಿಂತ (ಶೇ 20) ಹೆಚ್ಚಿದೆ. ರಾಜ್ಯದಲ್ಲಿ ಪ್ರತಿವರ್ಷ 13.5 ಲಕ್ಷ ಜನರು ಇಪಿಎಫ್‌ಒ, ಇಎಸ್‌ಐಸಿ ಅಡಿ ನೋಂದಾಯಿಸಿಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿ ನಿರುದ್ಯೋಗದ ಪ್ರಮಾಣ ಶೇ 2.7ರಷ್ಟಿದ್ದು, ದೇಶದ ಸರಾಸರಿಗಿಂತ (ಶೇ 4.2) ಕಡಿಮೆಯಿದೆ’ ಎಂದು ವರದಿಯಲ್ಲಿ ಹೇಳಲಾಗಿದೆ.

‘ನೌಕರರ ಭವಿಷ್ಯನಿಧಿ ಸಂಘಟನೆ (ಇಪಿಎಫ್‌ಒ) ಹಾಗೂ ನೌಕರರ ರಾಜ್ಯ ವಿಮಾ ನಿಗಮದ (ಇಎಸ್‌ಐಸಿ) ನೋಂದಣಿ ಪ್ರಕಾರ ಸಂಘಟಿತ ವಲಯದ ಉದ್ಯೋಗ ಸೃಷ್ಟಿಯಲ್ಲಿ ಕರ್ನಾಟಕ ದ್ವಿತೀಯ ಸ್ಥಾನದಲ್ಲಿದೆ. ಮಹಾರಾಷ್ಟ್ರವು ಮೊದಲ ಸ್ಥಾನದಲ್ಲಿದ್ದು, 5 ವರ್ಷಗಳಲ್ಲಿ 1.2 ಕೋಟಿ ಉದ್ಯೋಗ ಸೃಷ್ಟಿಯಾಗಿದೆ. ರಾಜ್ಯದಲ್ಲಿ ಜನಸಂಖ್ಯೆಯ ಶೇ 45ರಷ್ಟು (2.9 ಕೋಟಿ) ಜನರು ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗದಲ್ಲಿದ್ದಾರೆ. 1.3 ಕೋಟಿ ಜನರು ಕೃಷಿ ಕ್ಷೇತ್ರದಲ್ಲಿ ಉದ್ಯೋಗ ಕಂಡುಕೊಂಡಿದ್ದಾರೆ. ಉಳಿದವರು ಬೇರೆ ಕ್ಷೇತ್ರಗಳಲ್ಲಿ ಇದ್ದಾರೆ’ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಶೇ 50ರಷ್ಟು ಹೆಚ್ಚಳ ಸವಾಲು: ‘ಅಸಂಘಟಿತ ವಲಯದ ಉದ್ಯೋಗಿಗಳನ್ನು ಸಂಘಟಿತ ವಲಯದಡಿ ತರುವುದು ಸವಾಲಾಗಿದೆ. ಶೇ 24.7ರಷ್ಟಿರುವ ಸಂಘಟಿತ ವಲಯ ಉದ್ಯೋಗಸ್ಥರ ಪ್ರಮಾಣವನ್ನು 2030ರ ವೇಳೆಗೆ ಶೇ 50ಕ್ಕೆ ಹೆಚ್ಚಿಸುವುದು ಕಷ್ಟ. ಆದ್ದರಿಂದ ಕೌಶಲ ವೃದ್ಧಿಯಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು’ ಎಂದು ವರದಿಯಲ್ಲಿ ಸಲಹೆ ಮಾಡಲಾಗಿದೆ.

‘ಸಂಘಟಿತ ವಲಯದಲ್ಲಿ ಉದ್ಯೋಗ ಸೃಷ್ಟಿ ವೇಗವಾಗಿ ನಡೆಯುತ್ತಿದೆ. ಆದರೂ ಸಂಘಟಿತ ವಲಯದಲ್ಲಿ ಉದ್ಯೋಗ ಸೃಷ್ಟಿಯ ಬಗ್ಗೆ ಜಿಲ್ಲಾವಾರು ವಿಶ್ಲೇಷಣೆ ಆಗಬೇಕಿದೆ. ಸಂಘಟಿತ ಉದ್ಯೋಗಿಗಳ ಪ್ರಮಾಣ ಹೆಚ್ಚಳ ಮಾಡಲು ಪ್ರತ್ಯೇಕ ನೀತಿ ಜಾರಿಗೊಳಿಸಬೇಕಾದ ಅಗತ್ಯವಿದೆ. ‘ಪ್ರಧಾನಮಂತ್ರಿ ರೋಜಗಾರ್’ ಅಂತಹ ಯೋಜನೆಯನ್ನು ರಾಜ್ಯ ಸರ್ಕಾರ ರೂಪಿಸಿ, ಅನುಷ್ಠಾನಗೊಳಿಸಬೇಕು’ ಎಂದು ಹೇಳಲಾಗಿದೆ.



‘ಉದ್ಯೋಗಿಗಳಿಗೆ ಪ್ರೋತ್ಸಾಹಧನ ಅಗತ್ಯ’

‘ರಾಜ್ಯದಲ್ಲಿ ಸಂಘಟಿತ ವಲಯದ ಉದ್ಯೋಗಿಗಳ ಸಂಖ್ಯೆ ಹೆಚ್ಚಿಸಲು 10 ಹಿಂದುಳಿದ ಜಿಲ್ಲೆಗಳನ್ನು ಗುರುತಿಸಿ, ಅಲ್ಲಿ ಉದ್ಯೋಗ ಪ್ರೋತ್ಸಾಹ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕು. ಸ್ಥಳೀಯ ಉದ್ಯೋಗಿಗಳಿಗೆ ಮಾಸಿಕ ₹ 2 ಸಾವಿರದಿಂದ ₹ 3 ಸಾವಿರ ಪ್ರೋತ್ಸಾಹ ಧನವನ್ನು ಸರ್ಕಾರ ನೀಡಬೇಕು.

ಈ ರೀತಿ ಎರಡು ವರ್ಷ ಪ್ರೋತ್ಸಾಹ ಧನ ನೀಡಿದಲ್ಲಿ ಅಸಂಘಟಿತ ವಲಯದ ಉದ್ಯೋಗಿ, ಸಂಘಟಿತ ವಲಯದ ಉದ್ಯೋಗಿಯಾಗಿ ಮಾರ್ಪಡುತ್ತಾನೆ. ಸ್ಥಳೀಯ ಮಟ್ಟದಲ್ಲಿಯೇ ಹೆಚ್ಚಿನ ಉದ್ಯೋಗ ಸೃಷ್ಟಿಯಾಗಿ, ಮಹಾನಗರಗಳಿಗೆ ವಲಸೆ ಹೋಗುವುದು ತಪ್ಪಲಿದೆ’ ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

‘ಇತಿಹಾಸ ತಿರುಚುವ ಕೆಲಸ ನಡೆಯುತ್ತಿದೆ’

ಬೆಂಗಳೂರು: ‘ರಾಜಕೀಯ ಅನುಕೂಲಕ್ಕಾಗಿ ಇತಿಹಾಸವನ್ನು ತಿರುಚುವ ಕೆಲಸ ನಡೆಯುತ್ತಿದೆ’ ಎಂದು ‘ಸಿಟಿಜನ್ ಫಾರ್ ಹ್ಯೂಮನ್ ವ್ಯಾಲ್ಯೂಸ್ ಆ್ಯಂಡ್ ಇನ್‌ಕ್ಲ್ಯೂಸಿವಿಟಿ ಇನ್ ಪಾಲಿಟಿಕ್ಸ್’ನ ಸಾಯಿ ಪ್ರಕಾಶ್ ಬುಧವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಇತ್ತೀಚೆಗೆ ದೇಶದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುವ ಕೆಲಸಗಳು ಹೆಚ್ಚಾಗುತ್ತಿವೆ. ಪ್ರಾದೇಶಿಕ ಭಾಷೆಗಳು ಮತ್ತು ಸಂಸ್ಕೃತಿಯನ್ನು ವ್ಯವಸ್ಥಿತವಾಗಿ ನಾಶಪಡಿಸಲಾಗುತ್ತಿದೆ. ‘ಅಮೂಲ್’ ಮತ್ತು ‘ನಂದಿನಿ’ ವಿಚಾರದಲ್ಲಿ ಗೊಂದಲಗಳನ್ನು ಸೃಷ್ಟಿಸಿ ಸಾಮರಸ್ಯವನ್ನು ಕದಡಲಾಯಿತು’ ಎಂದು ಕಳವಳ ವ್ಯಕ್ತಪಡಿಸಿದರು.

‘ಮೌಲಾನಾ ಅಬುಲ್ ಕಲಾಂ ಆಜಾದ್ ಅವರಿಂದ ಅಬ್ದುಲ್ ಕಲಾಂವರೆಗಿನ ಅಲ್ಪಸಂಖ್ಯಾತ ಮುಖಂಡರು ದೇಶಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಕ್ರಿಶ್ಚಿಯನ್ ಸಮುದಾಯದ ಅನೇಕ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಗಳನ್ನು ಹುಟ್ಟು ಹಾಕಿ ಈ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿವೆ. ಇಂದು ನಿರ್ದಿಷ್ಟ ನಂಬಿಕೆ ಆಧರಿಸಿ ಈ ಸಮುದಾಯಗಳಿಗೆ ಅವಮಾನಕರ ರೀತಿಯಲ್ಲಿ ಬ್ರ್ಯಾಂಡ್ ಮಾಡುತ್ತಿರುವುದು ಎಷ್ಟು ಸರಿ’ ಎಂದು ಪ್ರಶ್ನಿಸಿದರು.

‘ಧರ್ಮ ಮತ್ತು ರಾಜಕೀಯವನ್ನು ಪ್ರತ್ಯೇಕವಾಗಿ ನೋಡಬೇಕು. ವಿವಿಧ ಹಿನ್ನೆಲೆಯ ವ್ಯಕ್ತಿಗಳಿಗೆ ಸಾಂವಿಧಾನಿಕ ಸಂಸ್ಥೆಗಳು ಸೇರಿ ಶಾಸಕಾಂಗ, ನ್ಯಾಯಾಂಗದಲ್ಲಿ ಪ್ರಾತಿನಿಧ್ಯ ನೀಡಬೇಕು. ಆದರೆ, ದೇಶದಲ್ಲಿ ಕೆಲವೇ ವ್ಯಕ್ತಿಗಳನ್ನು ಬೆಳೆಸಲಾಗುತ್ತಿದೆ’ ಎಂದು ದೂರಿದರು.

ಸಾಹಿತಿ ಹಂ.ಪ. ನಾಗರಾಜಯ್ಯ ಅಭಿಪ್ರಾಯ

‘ಹಣವಲ್ಲ, ವಿದ್ವತ್ ನಂಬಿ ಜೀವಿಸಿದೆವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು ಹಣ ನಂಬಿ ಬದುಕಿದವರಲ್ಲ. ಬದಲಾಗಿ, ವಿದ್ವತ್ ನಂಬಿ ಜೀವಿಸಿದೆವು’ ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ತಿಳಿಸಿದರು.

ಶೇಷಾದ್ರಿಪುರ ಕಾಲೇಜಿನ ಕನ್ನಡ ಸಂಘ ಮತ್ತು ಕನ್ನಡ ವಿಭಾಗ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಗೌರವಾಭಿನಂದನೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ, ಮಾತನಾಡಿದರು.

‘ನಾವು ನೀರಿಗಿಂತಲೂ ವಿದ್ವತ್‌ಗೆ ಪ್ರಾಮುಖ್ಯತೆ ನೀಡುತ್ತೇವೆ. ಮಳೆ ಬಂದರೆ ನೀರು ಮತ್ತೆ ಬರುತ್ತದೆ. ಆದರೆ, ಒಮ್ಮೆ ನಮ್ಮ ಜನಮಾನಸದಿಂದ ವಿದ್ವತ್ ಮರೆಯಾದರೆ ಮತ್ತೆ ಸೃಷ್ಟಿಸಿಕೊಳ್ಳಲು ನೂರಾರು ವರ್ಷಗಳು ಬೇಕಾಗುತ್ತವೆ’ ಎಂದು ಹೇಳಿದರು.

ಗೌರವಾಭಿನಂದನೆ ಸ್ವೀಕರಿಸಿದ ಸಾಹಿತಿ ಅ.ರಾ.ಮಿತ್ರ, ‘ವ್ಯಕ್ತಿಯ ಹಿರಿತನ ವಯಸ್ಸಿನಿಂದ ನಿರ್ಧಾರವಾಗಬಾರದು. ಬದಲಾಗಿ, ಆತನ ಮನಸ್ಸಿನಿಂದ ತೀರ್ಮಾನವಾಗಬೇಕು. ಹೃದಯದಿಂದ ಹೃದಯಕ್ಕೆ ನಡೆಸುವ ಸಂವಾದ ಸಾಮರ್ಥ್ಯ ಆತನ ಹಿರಿತನದ ಅಳತೆಗೋಲಾಗಿರುತ್ತದೆ. ಉತ್ತಮ ರೀತಿಯಲ್ಲಿ ಸಂವಹನ ನಡೆಸುತ್ತ ನಮ್ಮ ಸುತ್ತಲಿನ ಪರಿಸರವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು’ ಎಂದು ತಿಳಿಸಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಇದ್ದರು.

ಕಾರ್ಯಕ್ರಮದಲ್ಲಿ ಹಂ.ಪ.ನಾಗರಾಜಯ್ಯ ಹಾಗೂ ಅ.ರಾ. ಮಿತ್ರ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಸನ್ಮಾನಿಸಿದರು. ವಿದ್ವಾಂಸ ಮಲ್ಲೇಪುರಂ ಜಿ.ವೆಂಕಟೇಶ, ವೂಡೇ ಪಿ.ಕೃಷ್ಣ, ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಇದ್ದಾರೆ

ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತರಾದ ಎಸ್‌.ಎಂ.ಕೃಷ್ಣ ಹಾಗೂ ಅವರ ಪತ್ನಿಯನ್ನು ಮಲೆನಾಡಿನ ಸಾಂಸ್ಕೃತಿಕ ಸಂಘಟನೆ ಸಹ್ಯಾದ್ರಿ ಸಂಘದ ಪರವಾಗಿ ನಗರದಲ್ಲಿ ಇತ್ತೀಚೆಗೆ ಸನ್ಮಾನಿಸಲಾಯಿತು. ಸಂಘದ ಪದಾಧಿಕಾರಿಗಳಾದ ಪುರುಷೋತ್ತಮ ಗೌಡ, ಡಿ.ಸಿ ಶ್ರೀಧರ್, ಕೆ.ಟಿ. ನಾಗರಾಜ್, ಇ.ವಿ ಸತ್ಯನಾರಾಯಣ್ ಗಂಗಪ್ಪಗೌಡ, ಎಚ್‌.ಸಿ ಜಯಪ್ರಕಾಶ್, ಆಶಾ ಬಾಲರಾಜ್, ನಾಗರತ್ನ ಗೌಡ, ವೀರಭದ್ರ ಗೌಡ, ಚೂಡಪ್ಪ ಗೌಡ, ಪಿ.ಎಸ್ ರಾಜಣ್ಣ ಇದ್ದರು

ಟೈಗರ್ ಕಪ್ ಕ್ರಿಕೆಟ್ ಟೂರ್ನಿ: ದೀಕ್ಷ ಶತಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಕ್ಷ ಎಸ್. (111) ಅವರ ಶತಕದ ಬಲದಿಂದ ಮೇವರಿಕ್ ಮಾಸ್ಟರ್ಸ್ ತಂಡವು ಟೈಗರ್ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಗೆಲುವು ದಾಖಲಿಸಿತು.

ಗ್ಲೋಬಲ್ ತಾಂತ್ರಿಕ ಅಕಾಡೆಮಿ ಮೈದಾನದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಮೇವರಿಕ್ ಮಾಸ್ಟರ್ಸ್ 82 ರನ್‌ಗಳಿಂದ ರಘು ಕ್ರಿಕೆಟ್ ಅಕಾಡೆಮಿ ವಿರುದ್ಧ ಗೆದ್ದಿತು.

ಇನ್ನೊಂದು ಪಂದ್ಯದಲ್ಲಿ ಬೆಳಗಾವಿಯ ಯೂನಿಯನ್ ಜಿಮ್ ಖಾನಾ ತಂಡವು 5 ವಿಕೆಟ್‌ಗಳಿಂದ ಸೌತ್ ಕ್ರಿಕೆಟರ್ಸ್ ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರುಗಳು: ಮೇವರಿಕ್ ಮಾಸ್ಟರ್ಸ್: 30 ಓವರ್‌ಗಳಲ್ಲಿ 2 ವಿಕೆಟ್‌ಗೆ 233 (ದೀಕ್ಷ ಎಸ್. 111, ಪ್ರಣೀತ್ ಗೌಡ 26). **ರಘು ಕ್ರಿಕೆಟ್ ಅಕಾಡೆಮಿ:** 30 ಓವರ್‌ಗಳಲ್ಲಿ 151 (ಸೂರ್ಯ 50, ಸೂರಜ್ ಸುಧಾಕರ್ 37). **ಫಲಿತಾಂಶ:** ಮೇವರಿಕ್ ಮಾಸ್ಟರ್ಸ್‌ಗೆ 82 ರನ್‌ಗಳ ಜಯ.

ಸೌತ್ ಕ್ರಿಕೆಟರ್ಸ್: 30 ಓವರ್‌ಗಳಲ್ಲಿ 9 ವಿಕೆಟ್‌ಗೆ 142 (ಅಖಿಲೇಶ್ ಪ್ರಧಾನ್ 56, ಸಾಯಿ ಕುಲಕರ್ಣಿ 27; ಮೊಹಮ್ಮದ್ ಜಿಯಾನ್ 22ಕ್ಕೆ 2, ರೇಯಸ್ ರಾಜ್ ಮಧುಸೂದನ್ 19ಕ್ಕೆ2, ಫರ್ಹಾನ್ ಖಾನ್ 17ಕ್ಕೆ 2). **ಯೂನಿಯನ್ ಜಿಮ್‌ಖಾನಾ:** 24.3 ಓವರ್‌ಗಳಲ್ಲಿ 5 ವಿಕೆಟ್‌ಗೆ 143 (ರೇಯಸ್ ರಾಜ್ 51, ವಿವಾನ್ ಭುಸದ್ 25). **ಫಲಿತಾಂಶ:** ಯೂನಿಯನ್ ಜಿಮ್‌ಖಾನಾ ತಂಡಕ್ಕೆ 5 ವಿಕೆಟ್‌ಗಳ ಜಯ

‘ವಿಶ್ವ ಪುಸ್ತಕ ದಿನಾಚರಣೆ’: ಸಾಧಕರಿಗೆ ಸನ್ಮಾನ

‘ಸೆಸ್ ಹಣ ಸದ್ಬಳಕೆ ಆಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿನ ಎಲ್ಲ ಹಂತದ ಗ್ರಂಥಾಲಯಗಳು ಅಭಿವೃದ್ಧಿ ಆದಾಗ ಓದುಗರಿಗೆ ಹತ್ತಿರವಾಗಲು ಸಾಧ್ಯ’ ಎಂದು ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ್ ಹೇಳಿದರು.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ಈಚೆಗೆ ಆಯೋಜಿಸಿದ್ದ ‘ವಿಶ್ವ ಪುಸ್ತಕ ದಿನಾಚರಣೆ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಗ್ರಂಥಾಲಯಗಳ ಅಭಿವೃದ್ಧಿಗಾಗಿ ವಿಧಿಸುವ ಸೆಸ್ ಹಣ ಸದ್ಬಳಕೆ ಆಗಬೇಕು. ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಇದರ ಸದ್ಬಳಕೆಗೆ ಗಮನಹರಿಸಬೇಕು’ ಎಂದರು.

ಪತ್ರಕರ್ತ ಗಿರೀಶ್‌ರಾವ್ ಹತ್ವಾರ್ (ಜೋಗಿ) ಅವರು, ‘ಸಿನಿಮಾ ನಟ-ನಟಿಯರಲ್ಲಿ ಓದುವ ಹವ್ಯಾಸ ಇಲ್ಲ. ಹಿಂದೆ ಈ ಸ್ಥಿತಿ ಇರಲಿಲ್ಲ. ನಿರ್ಮಾಪಕಿ ದಿವಂಗತ ಪಾರ್ವತಮ್ಮ ರಾಜ್‌ಕುಮಾರ್ ಅವರಿಗೆ ಕಾದಂಬರಿ ಓದುವ ಅಭ್ಯಾಸವಿತ್ತು. ಡಾ.ರಾಜ್‌ಕುಮಾರ್ ಅವರು ತಾವು ಓದಿದ ಕಾದಂಬರಿಗಳ ಕುರಿತು ಚಿತ್ರ ನಿರ್ಮಾಪಕರು, ನಿರ್ದೇಶಕರ ಜೊತೆಗೆ ಚರ್ಚಿಸುತ್ತಿದ್ದರು. ಹೀಗಾಗಿ ಮಯೂರ ಸೇರಿದಂತೆ ಹಲವು ಉತ್ತಮ ಕಾದಂಬರಿ ಆಧಾರಿತ ಚಿತ್ರಗಳು ಬಂದವು’ ಎಂದರು.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಕಾರ್ಯದರ್ಶಿ ಆರ್.ದೊಡ್ಡೇಗೌಡ ಅವರು, ‘ಪುಸ್ತಕ ದಾನ ಸಂಸ್ಕೃತಿ ಬೆಳೆಸಿಕೊಳ್ಳಬೇಕು. ಮನೆಯಲ್ಲೇ ಪುಟ್ಟ ಗ್ರಂಥಾಲಯವಿದ್ದರೆ ಓದುವ ಹವ್ಯಾಸ ನಿರಂತರವಾಗಿ ಇರಲಿದೆ’ ಎಂದು ತಿಳಿಸಿದರು.

ವಿಶ್ವ ಪುಸ್ತಕ ದಿನ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಜ್ಞಾನಯೋಗಿ ಪ್ರಕಾಶನದ ಜ್ಞಾನಯೋಗಿ, ವಿಕ್ರಂ ಪ್ರಕಾಶನದ ನಂದಾ ಹರಿಪ್ರಸಾದ್, ಕನ್ನಡ ಪರಿಚಾರಕಿ ಶೋಭಾ ಮತ್ತು ಪುಸ್ತಕ ಪರಿಚಾರಕ ರಾಮಚಂದ್ರಯ್ಯ ಅವರನ್ನು ಗೌರವಿಸಲಾಯಿತು. (ನಿಂತವರು ಎಡದಿಂದ) ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದ ಸಹ ಕಾರ್ಯದರ್ಶಿ ಬಿ.ಕೆ.ಸುರೇಶ್, ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಆರ್. ದೊಡ್ಡೇಗೌಡ, ಕಾರ್ಯಕಾರಿ ಸಮಿತಿ ಸದಸ್ಯ ಕೆ.ಎಸ್.ಮುರಳಿ, ವಿಜಯಾ ನಿಡಸಾಲೆ, ಪತ್ರಕರ್ತ ಗಿರೀಶ್ ರಾವ್ ಹತ್ವಾರ್, ಖಜಾಂಚಿ ಹೇಮಂತ್ ಕುಮಾರ್, ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ.ಸೋಮಶೇಖರ್, ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಇದ್ದರು

–ಪ್ರಜಾವಾಣಿ ಚಿತ್ರ

ಫುಟ್‌ಬಾಲ್: ರಿಷಿ, ಎನ್‌ಗವಾಂಗ್ ಹ್ಯಾಟ್ರಿಕ್ ಗೋಲು

ಬೆಂಗಳೂರು: ರಿಷಿ ಹಾಗೂ ಎನ್‌ಗವಾಂಗ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಯಂಗ್ ಮುಸ್ಲಿಮ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಯಂಗ್ ಮುಸ್ಲಿಮ್ಸ್ 14–0 ಗೋಲುಗಳಿಂದ ಭಾರತ್ ಮಾತಾ ತಂಡವನ್ನು ಸೋಲಿಸಿತು.

ರಿಷಿ 2, 20 ಮತ್ತು 50ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರೆ, ಎನ್‌ಗವಾಂಗ್ 6, 10 ಮತ್ತು 12ನೇ ನಿಮಿಷಗಳಲ್ಲಿ ಚೆಂಡನ್ನು ಗುರಿ ಸೇರಿಸಿದರು. ವಿಜೇತ ತಂಡದ ಪರ ಆಶಿಶ್ (19 ಮತ್ತು 43ನೇ ನಿ.), ಮಹೇಶ್ (21 ಮತ್ತು 26ನೇ ನಿ.), ರಾಕೇಶ್ (25ನೇ ನಿ.), ಬ್ರಿಜೇಶ್ (30ನೇ ನಿ.), ಆದರ್ಶ್ (34ನೇ ನಿ.) ಹಾಗೂ ಹಾರ್ದಿಕ್ (41ನೇ ನಿ.) ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ನವರತ್ನ ಎಫ್‌ಸಿ 2–2ರಿಂದ ಬೆಂಗಳೂರು ಫ್ಯಾಂಟಮ್ ತಂಡದೊಂದಿಗೆ ಡ್ರಾ ಸಾಧಿಸಿತು. ನವರತ್ನ ಪರ ರಾಜು (26ನೇ ನಿ.), ಮಿಥಿಲ್ (41ನೇ ನಿ.), ಫ್ಯಾಂಟಮ್ ಪರ ಲಾಲ್‌ದಿನ್‌ಮೆವಿಯಾ (4ನೇ ನಿ.) ಹಾಗೂ ನಿಶಾಂತ್ ಭಟ್ (60 + 2ನೇ ನಿ.) ಗೋಲು ದಾಖಲಿಸಿದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ
ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ ಬೆಂಗಳೂರು – 560001

ವಿದ್ಯಾರ್ಥಿಗಳ ಅನಿಸಿಕೆ

ಶುಲ್ಕ ಭರಿಸಲು ನೆರವಾಯಿತು

ಎಸ್ಸೆಸ್ಸೆಲ್ಸಿ ಪ್ರತಿಭಾವಂತರಿಗೆ 'ಪ್ರಜಾವಾಣಿ' ಪತ್ರಿಕೆ ನೀಡುತ್ತಿರುವ ಶೈಕ್ಷಣಿಕ ಸಹಾಯಧನವು ಬಡ, ಮಧ್ಯಮ ವರ್ಗದ ಮಕ್ಕಳ ಶಿಕ್ಷಣ ಮುಂದುವರಿಕೆಗೆ ಸಹಾಯವಾಗಿದೆ. ಪತ್ರಿಕೆಯು ನೀಡಿದ ನೆರವಿನಿಂದ ನಾನು ಕಾಲೇಜು ಶುಲ್ಕ ಭರಿಸಿದೆ. ಒಂದಷ್ಟು ಪುಸ್ತಕ ಹಾಗೂ ಸಾಮಗ್ರಿ ಖರೀದಿಸಿದೆ. ಶಿಕ್ಷಣಕ್ಕೆ ಪೂರಕವಾದ ಇಂಥ ಕಾರ್ಯಕ್ರಮಗಳು ಪತ್ರಿಕೆಯಿಂದ ನಿರಂತರವಾಗಿ ಮುಂದುವರಿಯಲಿ ಎಂದು ಆಶಿಸುತ್ತೇನೆ.

ರಿತಿಕಾ, ಉಡುಪಿ ಜಿಲ್ಲೆ

ಪುಸ್ತಕ ಖರೀದಿಸಿದೆ

'ಪ್ರಜಾವಾಣಿ' ನೀಡಿದ ಶಿಷ್ಯವೇತನದಿಂದ ಪುಸ್ತಕಗಳನ್ನು ಖರೀದಿಸಲು ಅನುಕೂಲವಾಯಿತು. ಪ್ರಥಮ ಪಿಯುಸಿಯಲ್ಲಿ ಓದಲು ಸಹಕಾರಿಯಾಯಿತು. ಈಗ ವಿಜ್ಞಾನ ವಿಷಯದಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದು, ಮುಂದೆ ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡುತ್ತೇನೆ.

ಪತ್ರಿಕೆ ನೀಡುವ ಶಿಷ್ಯವೇತನದಿಂದ ನನ್ನಂಥ ಅನೇಕ ವಿದ್ಯಾರ್ಥಿಗಳಿಗೆ ಅನುಕೂಲವಾಗಿದ್ದು, 'ಪ್ರಜಾವಾಣಿ' ಬಳಗಕ್ಕೆ ಕೃತಜ್ಞತೆಗಳು.

ಚಿರಂತ್ ವಿ., ಹಾಸನ

ಬಿಬಿಎಂಪಿ ಅಧಿಕಾರಿ ಬಳಿ 400 ಬ್ಲೇಝರ್!

ಅಧಿಕಾರಿಯ ಐಷಾರಾಮಿ ಜೀವನ ಶೈಲಿ ಕಂಡು ದಂಗಾದ ಲೋಕಾಯುಕ್ತ ಪೊಲೀಸರು

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪ ಎದುರಿಸುತ್ತಿರುವ ಬಿಬಿಎಂಪಿಯ ಯಲಹಂಕ ವಲಯದ ನಗರ ಯೋಜನಾ ವಿಭಾಗದ ಸಹಾಯಕ ನಿರ್ದೇಶಕ ಕೆ.ಎಲ್. ಗಂಗಾಧರಯ್ಯ ಅವರ ಬಳಿ 400 ಬ್ಲೇಝರ್‌ಗಳು ಪತ್ತೆಯಾಗಿವೆ!

ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ಘಟಕವು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಗಂಗಾಧರಯ್ಯ ವಿರುದ್ಧ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸುತ್ತಿದೆ. ಆರೋಪಿಗೆ ಸಂಬಂಧಿಸಿದ ಏಳು ಸ್ಥಳಗಳ ಮೇಲೆ ಸೋಮವಾರ ದಾಳಿ ಮಾಡಿ, ಶೋಧ ನಡೆಸಲಾಗಿದೆ.

ಗಂಗಾಧರಯ್ಯ

'ಯಲಹಂಕದಲ್ಲಿರುವ ಅಧಿಕಾರಿಯ ಮನೆಯಲ್ಲೇ 400 ಬ್ಲೇಝರ್‌ಗಳು ಪತ್ತೆಯಾಗಿದ್ದು, ಅವುಗಳ ಮೌಲ್ಯ ₹ 40 ಲಕ್ಷಕ್ಕೂ ಹೆಚ್ಚು' ಎಂದು ಲೋಕಾಯುಕ್ತದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಈ ಅಧಿಕಾರಿಯ ಮನೆಯ ಒಂದು ಕೋಣೆಯಲ್ಲಿ ಬಟ್ಟೆ ಮಾರಾಟ ಮಳಿಗೆಗಳಲ್ಲಿ ಇರಿಸುವಂತೆ ವ್ಯವಸ್ಥಿತವಾಗಿ ಬ್ಲೇಝರ್‌ಗಳನ್ನು ಜೋಡಿಸಿಡಲಾಗಿತ್ತು. ತಲಾ ₹ 10,000ದಂತೆ ದರ ಲೆಕ್ಕ ಹಾಕಿದರೂ ₹ 40 ಲಕ್ಷ ದಾಟುತ್ತದೆ. ದುಬಾರಿ ಬೆಲೆಯ ಹಲವು ಬ್ಲೇಝರ್‌ಗಳೂ ಗಂಗಾಧರಯ್ಯ ಸಂಗ್ರಹದಲ್ಲಿವೆ ಎಂದು ತನಿಖಾ ಸಂಸ್ಥೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

₹ 4 ಲಕ್ಷ ಟೈಲರ್ ಬಿಲ್: ಗಂಗಾಧರಯ್ಯ ಟೈಲರ್ ಒಬ್ಬರಿಗೆ ₹ 4 ಲಕ್ಷ ಬಿಲ್ ಪಾವತಿಸಿರುವುದಕ್ಕೆ ಸಂಬಂಧಿಸಿದ ದಾಖಲೆಗಳು ಶೋಧದ ವೇಳೆ ಪತ್ತೆಯಾಗಿವೆ. ಈ ಬಿಲ್‌ಗಳನ್ನೂ ವಶಕ್ಕೆ ಪಡೆದಿದ್ದು, ಅಧಿಕಾರಿಯ ಆದಾಯ ಮತ್ತು ವೆಚ್ಚದ ಲೆಕ್ಕಕ್ಕೆ ಟೈಲರ್ ಬಿಲ್‌ನ ಮೊತ್ತವನ್ನೂ ಸೇರಿಸಿಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

'ಆರೋಪಿ ಅಧಿಕಾರಿಯ ಬಳಿ ಅಮೆರಿಕದ ಡಾಲರ್, ದುಬೈನ ದಿರ್ಹಾಮ್ ಮತ್ತು ಈಜಿಪ್ಟ್‌ನ ಪೌಂಡ್ ಪತ್ತೆಯಾಗಿದ್ದವು. ಗಂಗಾಧರಯ್ಯ ಐಷಾರಾಮಿ ಜೀವನ ನಡೆಸುತ್ತಿದ್ದರು. ಅದಕ್ಕಾಗಿ ಬೃಹತ್ ಮೊತ್ತ ವೆಚ್ಚ ಮಾಡಿರುವ ಸುಳಿವು ಲಭಿಸಿದೆ. ಆ ಬಗ್ಗೆಯೂ ಮಾಹಿತಿ ಕಲೆಹಾಕಲಾಗುತ್ತಿದೆ. ವಿದೇಶ ಪ್ರವಾಸದ ವಿವರಗಳನ್ನೂ ಪತ್ತೆ ಮಾಡಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಆಭರಣಗಳಿಗಾಗಿ ಹುಡುಕಾಟ

ಗಂಗಾಧರಯ್ಯ ಮನೆಯಲ್ಲಿ ಶೋಧ ನಡೆಸಿದಾಗ ಸುಮಾರು ₹ 73 ಲಕ್ಷ ಮೌಲ್ಯದ ಚಿನ್ನ, ಬೆಳ್ಳಿ ಮತ್ತು ವಜ್ರದ ಆಭರಣಗಳು ಪತ್ತೆಯಾಗಿದ್ದವು. ಬ್ಯಾಂಕ್ ಲಾಕರ್‌ಗಳಲ್ಲಿ 350 ಗ್ರಾಂ.ನಷ್ಟು ಚಿನ್ನಾಭರಣ ಸಿಕ್ಕಿದೆ. ಆದರೆ, ಅಧಿಕಾರಿಯ ಮನೆಯಲ್ಲಿ ಬೃಹತ್ ಸಂಖ್ಯೆಯ ಆಭರಣದ ಖಾಲಿ ಡಬ್ಬಗಳು ಪತ್ತೆಯಾಗಿವೆ. ಆ ಆಭರಣಗಳ ಪತ್ತೆಗಾಗಿ ಲೋಕಾಯುಕ್ತದ ಅಧಿಕಾರಿಗಳು ಹುಡುಕಾಟ ಮುಂದುವರಿಸಿದ್ದಾರೆ.

'ಈ ಅಧಿಕಾರಿಯ ಮನೆಯಲ್ಲಿ ಸಿಕ್ಕಿರುವ ಆಭರಣಗಳ ಖಾಲಿ ಡಬ್ಬಿಗಳು ಹಾಗೂ ಪತ್ತೆಯಾಗಿರುವ ಆಭರಣಗಳ ಮಧ್ಯೆ ದೊಡ್ಡ ವ್ಯತ್ಯಾಸ ಇದೆ. ಉಳಿದ ಆಭರಣಗಳು ಎಲ್ಲಿವೆ ಎಂಬುದರ ಕುರಿತು ಆರೋಪಿಯು ಮಾಹಿತಿ ನೀಡಿಲ್ಲ. ಈ ಆಭರಣಗಳ ಪತ್ತೆಗಾಗಿ ಪ್ರಯತ್ನಿಸಲಾಗುತ್ತಿದೆ' ಎಂದು ತನಿಖಾ ಸಂಸ್ಥೆಯ ಮೂಲಗಳು ತಿಳಿಸಿವೆ.

ಪರಶುರಾಂಪುರದಲ್ಲಿ 100ಕ್ಕೂ ಹೆಚ್ಚು ಎಕರೆ ಅಡಿಕೆ, ತೆಂಗು, ಬಾಳೆ ಬೆಳೆನಷ್ಟ

ಬಿರುಗಾಳಿ ಸಹಿತ ಆಲಿಕಲ್ಲು ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ, ಶಿವಮೊಗ್ಗ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಮಂಡ್ಯ ಜಿಲ್ಲೆಯ ವಿವಿಧೆಡೆ ಮಂಗಳವಾರ ತಡರಾತ್ರಿ ಹಾಗೂ ಬುಧವಾರ ಮಳೆಯಾಗಿದೆ. ಹಲವೆಡೆ ಆಲಿಕಲ್ಲು ಮಳೆಯಾಗಿದ್ದು, ಅಪಾರ ಪ್ರಮಾಣದಲ್ಲಿ ಬೆಳೆ ನಷ್ಟವಾಗಿದೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಧರ್ಮಪುರ ಸಮೀಪದ ಬುರುಡುಕುಂಟೆಯಲ್ಲಿ ಆಲಿಕಲ್ಲು ಮಳೆಗೆ ಪಪ್ಪಾಯ ತೋಟ, ಅಡಿಕೆ ತೋಟದಲ್ಲಿನ ಗಿಡಗಳು ನೆಲಕ್ಕುರುಳಿವೆ. ಪಪ್ಪಾಯ ಮತ್ತು ದಾಳಿಂಬೆ ಸಂಪೂರ್ಣ ಹಾಳಾಗಿವೆ.

ಚಳ್ಳಕೆರೆ ತಾಲ್ಲೂಕಿನ ಪರಶುರಾಂಪುರ ಹೋಬಳಿ ವ್ಯಾಪ್ತಿಯಲ್ಲಿ ಆಲಿಕಲ್ಲು ಬಿದ್ದ ಪರಿಣಾಮ 100ಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ಅಡಿಕೆ, ತೆಂಗು ಹಾಗೂ ಬಾಳೆ ಬೆಳೆ ಹಾನಿಯಾಗಿದೆ. ತಾಲ್ಲೂಕಿನಲ್ಲಿ ₹ 60 ಲಕ್ಷ ಮೌಲ್ಯದ ತೋಟಗಾರಿಕಾ ಬೆಳೆ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ ಎಂದು ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಡಾ. ವಿರೂಪಾಕ್ಷಪ್ಪ ಮಾಹಿತಿ ನೀಡಿದ್ದಾರೆ.

ತಳಕು, ನಾಯಕನಹಟ್ಟಿ ಹೋಬಳಿಯಲ್ಲಿ ಮಂಗಳವಾರ ಮಳೆಗೆ ಅಪಾರ ಪ್ರಮಾಣದ ಬೆಳೆ ನಷ್ಟವಾಗಿದೆ.

ಚಳ್ಳಕೆರೆ ತಾಲ್ಲೂಕಿನ ದೊಡ್ಡಬಾದಿಹಳ್ಳಿಯ ರೈತ ಕುಬೇರಪ್ಪ ಅವರು 6 ಎಕರೆಯಲ್ಲಿ ಬೆಳೆದಿದ್ದ ದಾಳಿಂಬೆ ಸಂಪೂರ್ಣ ನೆಲಕ್ಕುರುಳಿದೆ. 8 ಎಕರೆ ಮೆಕ್ಕೆಜೋಳ, 13 ಎಕರೆಯಲ್ಲಿನ ಮಾವಿನ ಮರಗಳು ಗಾಳಿ ರಭಸಕ್ಕೆ ನೆಲಕ್ಕುಳಿರುಳಿವೆ. ಕಟಾವು ಹಂತದಲ್ಲಿದ್ದ ದಾಳಿಂಬೆ ಮತ್ತು ಮಾವಿನ ಮರಗಳಿಗೆ ಆಲಿಕಲ್ಲು ಹೊಡೆದು ಹೂವು-ಹಣ್ಣಿಗೆ ಏಟು ಬಿದ್ದಿದೆ.

(ಶಿವಮೊಗ್ಗ ವರದಿ): ಜಿಲ್ಲೆಯ ಹೊಸನಗರ ತಾಲ್ಲೂಕಿನ ಹಲವೆಡೆ, ರಿಪ್ಪನ್‌ಪೇಟೆ, ಕೋಣಂದೂರಿನಲ್ಲಿ ಬುಧವಾರ ಸಾಧಾರಣ ಮಳೆಯಾಗಿದೆ.

(ಮಂಗಳೂರು ವರದಿ): ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ, ಸುಳ್ಯ, ಸುಬ್ರಹ್ಮಣ್ಯ ಭಾಗದಲ್ಲಿ ಬುಧವಾರ ಮಳೆ ಸುರಿಯಿತು. ಧರ್ಮಸ್ಥಳ, ಉಜಿರೆ, ಮುಂಡಾಜೆ, ನಿಡ್ಲೆಯಲ್ಲಿ 2 ಗಂಟೆ ಮಳೆ ಸುರಿಯಿತು. ಉಡುಪಿ ಜಿಲ್ಲೆಯ ಹೆಬ್ರಿಯಲ್ಲಿ ತುಂತುರು ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಬೀರೂರು ಸುತ್ತಮುತ್ತ ಗುಡುಗು, ಮಿಂಚು ಸಹಿತ ಮಳೆ ಸುರಿಯಿತು. ತರೀಕೆರೆ ತಾಲ್ಲೂಕಿನ ರಂಗೇನಹಳ್ಳಿ, ಲಕ್ಕವಳ್ಳಿ, ದುಗ್ಲಾಪುರ, ಭಾವಿಕೆರೆ ಭಾಗಗಳಲ್ಲಿ ಧಾರಾಕಾರ ಮಳೆಯಿಂದ ಅಡಿಕೆ, ಬಾಳೆ ಗಿಡಗಳು ನೆಲಕ್ಕುರುಳಿದವು. ಆಲ್ದೂರು ಭಾಗದಲ್ಲಿ ಒಂದು ತಾಸು ಮಳೆಯಾಗಿದೆ. ಈ ವರ್ಷ ವಾಡಿಕೆ ಮಳೆ ಬಾರದೆ ರೈತರಿಗೆ ತೀವ್ರ ತೊಂದರೆಯಾಗಿತ್ತು.

(ಮಂಡ್ಯ ವರದಿ): ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಬುಧವಾರ ಗುಡುಗುಸಹಿತ ಮಳೆ ಆಯಿತು.

(ಮಡಿಕೇರಿ ವರದಿ): ತಾಲ್ಲೂಕಿನ ಕರಿಕೆ, ಪೆರಾಜೆ, ಭಾಗಮಂಡಲದಲ್ಲಿ ಬುಧವಾರ ಬಿರುಸಿನ ಮಳೆಯಾಗಿದೆ.

ಚಿತ್ರದುರ್ಗ ಜಿಲ್ಲೆಯ ಬುರುಡುಕುಂಟೆಯಲ್ಲಿ ಮಂಗಳವಾರ ರಾತ್ರಿ ಆಲಿಕಲ್ಲು ಮಳೆಗೆ ಮೂರ್ತಪ್ಪ ಅವರ ತೋಟದಲ್ಲಿ ಬಾಳೆ, ಅಡಿಕೆ ಬೆಳೆಗಳು ನೆಲಕ್ಕುರುಳಿವೆ

ಸಿಡಿಲು ಬಡಿದು ರೈತ ಸಾವು

ರಾಯಚೂರು: ತಾಲ್ಲೂಕಿನ ಸಿಂಗನೋಡಿ ಗ್ರಾಮದಲ್ಲಿ ಮಂಗಳವಾರ ತಡರಾತ್ರಿ ಸಿಡಿಲು ಬಡಿದು ರೈತ ನರಸಪ್ಪ ಮಲ್ಲಪ್ಪ (48) ಮೃತಪಟ್ಟಿದ್ದಾರೆ. ಜಮೀನಿನಲ್ಲಿರುವ ಮಾರೆಮ್ಮ ದೇವಿ ಪೂಜೆ ಸಲುವಾಗಿ ರಾತ್ರಿ ಅಲ್ಲಿಯೇ ತಂಗಿದ್ದ ವೇಳೆ ಸಿಡಿಲು ಬಡಿದಿದೆ.

ರಾಜ್ಯದಾದ್ಯಂತ ಮಳೆ ಹೆಚ್ಚಳ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಗುರುವಾರ ಹಾಗೂ ಶುಕ್ರವಾರ ಗುಡುಗು ಸಹಿತ ಮಳೆಯಾಗಲಿದ್ದು, ಶನಿವಾರದಿಂದ ಮಳೆಯ ಪ್ರಮಾಣ ಹೆಚ್ಚಳವಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಬೀದರ್, ಕಲಬುರಗಿ, ಯಾದಗಿರಿ ಜಿಲ್ಲೆಯ ಒಂದೆರಡು ಕಡೆ ಎರಡು ದಿನ ಭಾರಿ ಮಳೆಯಾಗಲಿದೆ. ಬಾಗಲಕೋಟೆ, ಧಾರವಾಡ, ರಾಯಚೂರು, ಕೊಪ್ಪಳ, ವಿಜಯಪುರ ಹಾಗೂ ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಮಂಡ್ಯ, ಮೈಸೂರು, ತುಮಕೂರು, ವಿಜಯನಗರ, ಶಿವಮೊಗ್ಗ ಜಿಲ್ಲೆಯ ಒಂದೆರಡು ಕಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಕರಾವಳಿಯ ಎಲ್ಲಾ ಜಿಲ್ಲೆಗಳಲ್ಲಿ ಒಂದೆರಡು ಕಡೆ ಮಳೆಯಾಗಲಿದೆ. ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ ಎಂದು ಇಲಾಖೆ ತಿಳಿಸಿದೆ.

ಮೇ 20, 21ಕ್ಕೆ ಸಿಇಟಿ ಪೂರಕ ಪರೀಕ್ಷೆ: ಫಲಿತಾಂಶ ಪರಿಗಣನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ ಅಥವಾ ಕಡಿಮೆ ಅಂಕಗಳು ಬಂದ ಕಾರಣ ಪೂರಕ ಪರೀಕ್ಷೆ ತೆಗೆದುಕೊಳ್ಳುತ್ತಿರುವ ಅಭ್ಯರ್ಥಿಗಳು ಮೇ 20, 21ರಂದು ನಡೆಯುವ ಸಿಇಟಿಗೆ ಹಾಜರಾಗಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ.

ಸಿಇಟಿ ಫಲಿತಾಂಶ ಪ್ರಕಟವಾದ ನಂತರ ವಿದ್ಯಾರ್ಥಿ ಪಡೆದ ರ‍್ಯಾಂಕ್ ಹಾಗೂ ಪೂರಕ ಪರೀಕ್ಷೆಯ ಅಂಕಗಳನ್ನು ಪರಿಗಣಿಸಿ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಸೀಟು ಹಂಚಿಕೆ ಮಾಡಲಾಗುತ್ತದೆ.

'ಮುಸ್ಲಿಮರಿಗೆ ಮೀಸಲಾತಿ ಜಾತ್ಯತೀತ ತತ್ವಕ್ಕೆ ವಿರುದ್ಧ'

ಒಂದನೇ ಪುಟದಿಂದ...

ಇದೇ ವೇಳೆ, ನ್ಯಾಯಪೀಠಕ್ಕೆ ಪ್ರಮಾಣಪತ್ರವನ್ನೂ ಸಲ್ಲಿಸಿರುವ ರಾಜ್ಯ ಸರ್ಕಾರ, 'ಸಮಾಜದಲ್ಲಿ ಬಹು ಕಾಲದಿಂದ ಹಿಂದುಳಿದ ಹಾಗೂ ತಾರತಮ್ಯ ಎದುರಿಸಿದ ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಒದಗಿಸಲಾಗುವುದು. ಆದರೆ, ಈ ಸೌಲಭ್ಯವನ್ನು ಒಂದು ಧರ್ಮಕ್ಕೆ ಸಂಪೂರ್ಣವಾಗಿ ವಿಸ್ತರಿಸಲು ಸಾಧ್ಯವಾಗದು' ಎಂದು ಸ್ಪಷ್ಟಪಡಿಸಿದೆ.

'ಮುಸ್ಲಿಮರಿಗೆ ಮೀಸಲಾತಿ ನೀಡಿರುವ ನಿರ್ಧಾರ ಸಾಮಾಜಿಕ ನ್ಯಾಯ ಮತ್ತು ಜಾತ್ಯತೀತ ಸಿದ್ಧಾಂತದ ವಿರುದ್ಧವಾಗಿದೆ ಎಂದಿರುವ ರಾಜ್ಯ ಸರ್ಕಾರ, 2002ರ ಮೀಸಲಾತಿ ಆದೇಶದಲ್ಲಿ ಗ್ರೂಪ್ 1 (ಆರ್ಥಿಕವಾಗಿ ಹಿಂದುಳಿದಿರುವ) ಎಂದು ಗುರುತಿಸಿಕೊಂಡಿರುವ ಮುಸ್ಲಿಮರಿಗೆ ಮಾತ್ರ ಮೀಸಲಾತಿಯ ಸೌಲಭ್ಯ ಮುಂದುವರಿಯಲಿದೆ' ಎಂದು ವಾದಿಸಿದೆ.

'ಮುಸ್ಲಿಮರಲ್ಲಿ ಸುಮಾರು 17 ಉಪ ಜಾತಿಗಳಿವೆ. ಅವುಗಳೆಲ್ಲವೂ ಹಿಂದುಳಿದ ವರ್ಗದಲ್ಲಿಯೇ ಇವೆ. ಇಲ್ಲಿಯೂ ಕಡಿಮೆ ಆದಾಯ ಹೊಂದಿದವರಿಗೆ ಮೀಸಲಾತಿ ಸೌಲಭ್ಯ ಸಿಗುತ್ತಿತ್ತು. ಮುಸ್ಲಿಮರಿಗೆ ಮೀಸಲಾತಿ ಹಿಂಪಡೆದ ಬಳಿಕವೂ ಅವರಿಗೆ ಅನ್ಯಾಯವಾಗುವುದಿಲ್ಲ. ಅವರಿಗೆ ಸದ್ಯದ ಸೌಲಭ್ಯಗಳು ಮುಂದುವರಿಯಲಿವೆ. ಅವರಿಗೆ ರೂಪಿಸಿದ್ದ ಮಾನದಂಡಗಳು ಬದಲಾಗಿಲ್ಲ' ಎಂದೂ ಸರ್ಕಾರ ಸ್ಪಷ್ಟಪಡಿಸಿದೆ.

'ಸಂವಿಧಾನದ ಪರಿಚ್ಛೇದ 14, 15 ಹಾಗೂ 16ರ ನಿಯಮಗಳ ಅನುಸಾರ ಪ್ರಜೆಗಳನ್ನು ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗ (ಎಸ್‌ಇಬಿಸಿ) ಎಂದು ವರ್ಗೀಕರಿಸಬಹುದು. ಕೆಲವು ಆಯೋಗಗಳು ಮುಸ್ಲಿಮರನ್ನು ಹಿಂದುಳಿದ ಜಾತಿಗೆ ಸೇರಿಸಲು ಶಿಫಾರಸು ಮಾಡಿವೆ. ಆದರೆ, ಈ ಕುರಿತು ಕಾನೂನು ಪ್ರಕಾರ ನಿರ್ಧಾರ ತೆಗೆದುಕೊಳ್ಳುವುದು ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತದೆ' ಎಂದು ಹೇಳಿದೆ.

'ಕೇಂದ್ರದ ಮೀಸಲು ಪಟ್ಟಿಯಲ್ಲಿ ಕೂಡಾ ಧರ್ಮದ ಆಧಾರದಲ್ಲಿ ಮುಸ್ಲಿಂ ಸಮುದಾಯಕ್ಕೆ ಯಾವುದೇ ಮೀಸಲಾತಿ ನೀಡಲಾಗಿಲ್ಲ' ಎಂಬ ಅಂಶವನ್ನು ಒತ್ತಿ ಹೇಳಿರುವ ಸರ್ಕಾರ, 'ದೇಶದಲ್ಲಿ ಕೇರಳ ರಾಜ್ಯವನ್ನು ಹೊರತುಪಡಿಸಿ ಯಾವುದೇ ರಾಜ್ಯದಲ್ಲಿ ಕೂಡ ಸಂಪೂರ್ಣ ಮುಸ್ಲಿಂ ಸಮುದಾಯಕ್ಕೆ ಮೀಸಲಾತಿ ನೀಡಿಲ್ಲ' ಎಂದು ಸ್ಪಷ್ಟಪಡಿಸಿದೆ.

'ಮುಸ್ಲಿಂ ಧರ್ಮದ ಹಲವಾರು ಸಮುದಾಯಗಳು ಎಸ್‌ಇಬಿಸಿ ಪಟ್ಟಿಯಲ್ಲಿ ಗುರುತಿಸಿಕೊಂಡಿದ್ದು, ಈ ಸಮುದಾಯಗಳಿಗೆ ಮೀಸಲಾತಿ ಮುಂದುವರಿಯಲಿದೆ. ಆದರೆ, ಕೇವಲ ಧರ್ಮದ ಆಧಾರದಲ್ಲಿ ಮೀಸಲಾತಿ ನೀಡುವ ಪದ್ಧತಿ ಕೇರಳದಲ್ಲಷ್ಟೇ ಜಾರಿಯಲ್ಲಿದೆ' ಎಂದು ಸರ್ಕಾರ ಹೇಳಿದೆ.

'ಧರ್ಮವನ್ನಷ್ಟೇ ಆಧರಿಸಿ ಮೀಸಲಾತಿ ನೀಡುವುದು ಸಾಮಾಜಿಕ ನ್ಯಾಯದ ಸಿದ್ಧಾಂತಕ್ಕೆ ವಿರುದ್ಧವಾಗಿದೆ. ಸಾಮಾಜಿಕ ನ್ಯಾಯವೆಂದರೆ ಸಮಾಜದೊಳಗೆ ಹಿಂದುಳಿದವರು ಹಾಗೂ ತಾರತಮ್ಯ ಎದುರಿಸಿದವರಿಗೆ ರಕ್ಷಣೆ ನೀಡುವುದು. ಇದನ್ನು ಒಂದು ಸಂಪೂರ್ಣ ಧರ್ಮಕ್ಕೆ ನೀಡುವುದು ಸಾಮಾಜಿಕ ನ್ಯಾಯ ಮತ್ತು ಸಂವಿಧಾನದ ನೈತಿಕತೆಗೆ ವಿರುದ್ಧವಾಗಿದೆ. ಆದ್ದರಿಂದ, ಧರ್ಮದ ಆಧಾರದಲ್ಲಿ ಯಾವುದೇ ಸಮುದಾಯಕ್ಕೆ ಮೀಸಲಾತಿ ವಿಸ್ತರಿಸಲಾಗದು' ಎಂದು ತಿಳಿಸಿದೆ.

'ಕರ್ನಾಟಕ ಹೈಕೋರ್ಟ್ ಮಾರ್ಚ್ 23ರಂದು ನೀಡಿರುವ ಆದೇಶದ ಆಧಾರದಲ್ಲಿ ಮುಸ್ಲಿಮರ ಮೀಸಲಾತಿಯನ್ನು ಹಿಂಪಡೆಯುವ ತೀರ್ಮಾನವನ್ನು ಮಾರ್ಚ್ 27ರಂದು ತೆಗೆದುಕೊಳ್ಳಲಾಗಿದೆ' ಎಂದೂ ಸರ್ಕಾರ ಹೇಳಿಕೊಂಡಿದೆ.

ನಿಧನ ವಾರ್ತೆ

ದೇವಕಿಸುತ

ಬೆಂಗಳೂರು: ಕನ್ನಡ ಪರ ಚಿಂತಕ, ಕವಿ ದೇವಕಿಸುತ(76) ಅವರು ಬುಧವಾರ ನಿಧನರಾದರು.

ನಟನೆಯ ಕನಸು ಹೊತ್ತು 1972ರಲ್ಲಿ ಬೆಂಗಳೂರಿಗೆ ಬಂದಿದ್ದ ಅವರು ಕೊನೆಯಲ್ಲಿ ಹಿಡಿದಿದ್ದು ಟೈಲರಿಂಗ್ ವೃತ್ತಿ. ಈ ವೃತ್ತಿಯಲ್ಲಿದ್ದುಕೊಂಡೇ ಸಾಹಿತ್ಯ ಲೋಕದತ್ತ ಹೆಜ್ಜೆ ಇಟ್ಟರು. 'ಪ್ರಜಾವಾಣಿ'ಯಲ್ಲಿ ಅವರ ಅನೇಕ ಬರಹ, ಕವಿತೆಗಳು ಪ್ರಕಟವಾಗಿವೆ. ಅವರಿಗೆ ಪತ್ನಿ, ಮೂವರು ಮಕ್ಕಳಿದ್ದಾರೆ. ಅವರ ಹುಟ್ಟೂರು ಸುಳ್ಯದ ಅರಂತೋಡು ಗ್ರಾಮದಲ್ಲಿ ಏ.27ರಂದು ಬೆಳಿಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ.

म.प्र. गृह निर्माण एवं अधोसंरचना विकास मण्डल

निविदा निरस्तीकरण सूचना

शिवांगी परिसर गोयलाखुर्द उज्जैन में भवन निर्माण कार्य 63 एम.आई.जी. 'ए', 20 एम.आई.जी. 'बी-1' 26 एम.आई.जी. 'बी-2', 7 एल.आई.जी., 22 ई. डब्ल्यू.एस. एवं विकास कार्य योजना की द्वितीय निविदा आई.डी. क्रमांक 2023_MPHID_270222_1 का आमंत्रण दिनांक 27.04.2023 से ऑनलाइन किया जाना था जिसकी विज्ञप्ति दिनांक 26.04.2023 को प्रकाशित हुई है, अपरिहार्य कारणों से निरस्त की जाती है।

Email : eednhbujn@mp.gov.in | f/mphidb | /mphidb | कार्यपालन यंत्री संभाग-उज्जैन

म.प्र. माध्यम/109620/2023



ನಿಮ್ಮ ಕೇಬಲ್/ಡಿಟಿಎಚ್ ಅಪರೇಟರ್‌ಗಳನ್ನು ಸಂಪರ್ಕಿಸಿ

ಜಿಯೋ ಟಿವಿಯಲ್ಲೂ ಲಭ್ಯ

ಚುನಾವಣಾ ಪ್ರಚಾರ ಸಭೆಗಳು

27 ಏಪ್ರಿಲ್ 2023 | ಗುರುವಾರ

ಶ್ರೀ ಬಿ.ಎಸ್. ಯಡಿಯೂರಪ್ಪ
ಮಾನ್ಯ ಸಂಸದೀಯ ಮಂಡಳಿಯ ಸದಸ್ಯರು, ಬಿಜೆಪಿ ಹಾಗೂ ಮಾಜಿ ಮುಖ್ಯಮಂತ್ರಿಗಳು
ಬೆ. 11:00 ಬೆಳಗಾವಿ ಉತ್ತರ
ಮ 1:30 ರಾಮದುರ್ಗ
ಮ. 3:30 ಮುದ್ದೇಬಿಹಾಳ ರೋಡ್ ಶೋ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ

ಶಿಗ್ಗಾಂವಿ ವಿ.ಸ. ಕ್ಷೇತ್ರ
ಬೆ. 10:30 ತಡಸ
ಬೆ. 11:30 ಕುನ್ನೂರ
ಮ. 12:0 ದುಂಡಶಿ
ಮ. 2:00 ಹೊಸೂರು
ಮ. 2:30 ಕೋಣನಕೇರಿ
ಮ. 3:30 ಅಂದಲಗಿ

ಹಾನಗಲ್ ವಿ.ಸ. ಕ್ಷೇತ್ರ
ಸಂ. 4:30 ಬೊಮ್ಮನಹಳ್ಳಿ
ಸಂ. 5:00 ಹೋಟನಹಳ್ಳಿ
ಸಂ. 6:00 ಗುಡ್ಡದ ಚೆನ್ನಾಪುರ
ಸಂ. 7:00 ಕುಂದೂರು

ಶ್ರೀ ನಳಿನ್ ಕುಮಾರ್ ಕಟೀಲ್
ಮಾನ್ಯ ರಾಜ್ಯಾಧ್ಯಕ್ಷರು, ಬಿಜೆಪಿ
ಬೆ. 9:30 ಮಂಗಳೂರು ದಕ್ಷಿಣ
ಬೆ. 11:00 ಸುಳ್ಯ

ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಕೇಂದ್ರ ಹಣಕಾಸು ಸಚಿವರು
ಮ. 12:00 ಬ್ಯಾಟರಾಯನಪುರ
ಸಂ. 4:30 ಮಲ್ಲೇಶ್ವರಂ, ಬೆಂಗಳೂರು ರೋಡ್ ಶೋ

ಶ್ರೀಮತಿ ಸ್ಮೃತಿ ಇರಾನಿ
ಸನ್ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಅಲ್ಪ ಸಂಖ್ಯಾತ ಕಲ್ಯಾಣ ಸಚಿವರು
ಬೆ. 11:30 ಖಾನಾಪುರ
ಮ. 2:00 ಹಿಂಡಲಗಾ
ಸಂ. 4:30 ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ರೋಡ್ ಶೋ

ಶ್ರೀ ಅರ್ಜುನ್ ರಾಮ್ ಮೇಘ್‌ವಾಲ್
ಮಾನ್ಯ ಕೇಂದ್ರ ಸಹಾಯಕ ಸಂಸದೀಯ ವ್ಯವಹಾರಗಳು ಮತ್ತು ಸಂಸ್ಕೃತಿ ಖಾತೆ ಸಚಿವರು
ಬೆ. 11:30 ಚಿಕ್ಕಪೇಟೆ
ಮ. 3:00 ಶಾಂತಿನಗರ

ಶ್ರೀ ಸಿ.ಟಿ. ರವಿ
ಮಾನ್ಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು, ಬಿಜೆಪಿ
ಬೆ. 10:30 ದೇವನಹಳ್ಳಿ
ಬೆ. 11:00 ಚಿಂತಾಮಣಿ
ಮ. 3:00 ಬಾಗೇಪಲ್ಲಿ ರೋಡ್ ಶೋ



ಶ್ರೀ ಬಂಡಿ ಸಂಜಯ್ ಕುಮಾರ್
ಮಾನ್ಯ ರಾಜ್ಯಾಧ್ಯಕ್ಷರು, ಬಿಜೆಪಿ ತೆಲಂಗಾಣ
ಬೆ. 10:30 ಗೌರಿಬಿದನೂರು ರೋಡ್ ಶೋ
ಮ. 3:00 ಬಾಗೇಪಲ್ಲಿ ರೋಡ್ ಶೋ

ಶ್ರೀ ಸುದೀಪ್
ಖ್ಯಾತ ಚಲನಚಿತ್ರ ನಟರು
ಶ್ರೀ ಛಲವಾದಿ ನಾರಾಯಣ ಸ್ವಾಮಿ
ಮಾನ್ಯ ವಿಧಾನಪರಿಷತ್ ಸದಸ್ಯರು
ರೋಡ್ ಶೋ
ಬೆ. 8:00 ಸಂಡೂರು | ಮ. 12.00 ಹಿರೇಕೇರೂರು
ಬೆ. 9:00 ಕೂಡ್ಲಗಿ | ಮ. 2:30 ಬ್ಯಾಡಗಿ
ಬೆ. 10:30 ರಾಣೆಬೆನ್ನೂರು | ಸಂ. 4:00 ಕುಂದಗೋಳ

ಬನ್ನಿ, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳೋಣ

ಕಮಲದ ಬಟನ್ ಒತ್ತಿ ಬಿಜೆಪಿ ಗೆಲ್ಲಿಸಿ

ಪ್ರಕಟಣೆ : ಬಿಜೆಪಿ ಕರ್ನಾಟಕ

ಬಂಡಾಯ ಅರಗಿಸಿಕೊಳ್ಳುವ ಶಕ್ತಿ ಬಿಜೆಪಿಗಿದೆ: ಶೋಭಾ

• ಎಸ್. ರವಿಪ್ರಕಾಶ್

ಪ್ರಜಾವಾಣಿ ಸಂದರ್ಶನ

ಶೋಭಾ ಕರಂದ್ಲಾಜೆ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಬೆಂಗಳೂರು: ಬಿಜೆಪಿಗೆ ಬಂಡಾಯವನ್ನು ಎದುರಿಸುವ ಶಕ್ತಿ ಇದೆ. ಹೊಸ ಪ್ರಯೋಗವನ್ನು ರಾಜ್ಯದ ಜನ ಒಪ್ಪಿಕೊಳ್ಳುತ್ತಾರೆ. ಮೋದಿಯವರ ವೇಗಕ್ಕೆ ತಕ್ಕಂತೆ ಹೆಜ್ಜೆ ಹಾಕುವಂತಹ ಸರ್ಕಾರ ರಾಜ್ಯದಲ್ಲಿ ಮತ್ತೆ ಬರಬೇಕಿದೆ ಎಂದು ಕೇಂದ್ರ ಸಚಿವೆ ಹಾಗೂ ರಾಜ್ಯ ಬಿಜೆಪಿ ಚುನಾವಣಾ ಉಸ್ತುವಾರಿ ಸಮಿತಿ ಸಂಚಾಲಕಿ ಶೋಭಾ ಕರಂದ್ಲಾಜೆ ಪ್ರತಿಪಾದಿಸಿದರು.

‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದ ಸಾರರೂಪ ಇಲ್ಲಿದೆ.

• **ರಾಜ್ಯದ ಜನ ಬಿಜೆಪಿಗೆ ಏಕೆ ಮತ ಹಾಕಬೇಕು?**

ಮತ್ತೆ ಡಬಲ್ ಎಂಜಿನ್ ಸರ್ಕಾರವನ್ನು ಅಧಿಕಾರಕ್ಕೆ ತರುವ ಸಲುವಾಗಿ ಬಿಜೆಪಿಗೇ ಮತ ಹಾಕಬೇಕು. ನರೇಂದ್ರ ಮೋದಿ ಜಾರಿ ಮಾಡಿದ ಯೋಜನೆಗಳನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಿಸಲು ರಾಜ್ಯದಲ್ಲೂ ಬಿಜೆಪಿ ಸರ್ಕಾರವೇ ಇರಬೇಕು. ಬೇರೆ ಪಕ್ಷದ ಸರ್ಕಾರಗಳು ಇದ್ದರೆ ಅಭಿವೃದ್ಧಿ ಸೇರಿದಂತೆ ಯಾವುದೇ ವಿಚಾರದಲ್ಲೂ ಕೇಂದ್ರಕ್ಕೆ ಸಹಕಾರ ನೀಡುವುದಿಲ್ಲ. ಮೋದಿಯವರ ಅಭಿವೃದ್ಧಿಯ ವೇಗಕ್ಕೆ ತಕ್ಕಂತೆ ಹೆಜ್ಜೆ ಹಾಕುವ ಸರ್ಕಾರದ ಅಗತ್ಯವಿದೆ.

• **ನಾಲ್ಕು ವರ್ಷಗಳಲ್ಲಿ ನಿರೀಕ್ಷೆಗೆ ತಕ್ಕಷ್ಟು ಅಭಿವೃದ್ಧಿ ಆಗಿದೆಯೇ?**

ಖಂಡಿತಾ ಆಗಿದೆ. ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರಗಳು ಇದ್ದಾಗ ಮಾತ್ರ ಯೋಜನೆಗಳು ತ್ವರಿತಗತಿಯಲ್ಲಿ ಜನರಿಗೆ ತಲುಪುತ್ತವೆ. ಬೇರೆ ಪಕ್ಷಗಳ ಸರ್ಕಾರಗಳು ಇರುವ ಕಡೆಗಳಲ್ಲಿ ಕೇಂದ್ರದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಬಿಡುವುದಿಲ್ಲ. ರಾಜ್ಯದಲ್ಲೂ ಜೆಡಿಎಸ್–ಕಾಂಗ್ರೆಸ್ ಸರ್ಕಾರ ಇದ್ದಾಗ ಕೇಂದ್ರದ ಯೋಜನೆಗಳು ಜಾರಿ ಆಗುತ್ತಿರಲಿಲ್ಲ. ನನ್ನ ಇಲಾಖೆಯದ್ದೇ ಉದಾಹರಣೆಗೆ ತೆಗೆದುಕೊಂಡರೆ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಕಿಸಾನ್ ಸಮ್ಮಾನ್ ಯೋಜನೆಯಡಿ 17 ರೈತರು ಮಾತ್ರ ನೋಂದಣಿ ಮಾಡಿಕೊಂಡಿದ್ದರು. ಬಿಜೆಪಿ ಸರ್ಕಾರ ಬಂದ ಮೇಲೆ 55 ಲಕ್ಷ ರೈತರು ನೋಂದಣಿ ಮಾಡಿಸಿಕೊಂಡಿದ್ದಾರೆ.

ಶೇ 40 ಭ್ರಷ್ಟಾಚಾರ ಮುಳುವಾಗುತ್ತದೆಯೇ?

• **2018 ರ ಚುನಾವಣೆಯಲ್ಲಿ ಮೋದಿಯವರು ಸಿದ್ದರಾಮಯ್ಯ ಸರ್ಕಾರಕ್ಕೆ ಶೇ 10 ಕಮಿಷನ್ ಸರ್ಕಾರ ಸೀದಾರೂಪಾಯ್ಯಾ ಸರ್ಕಾರ ಎಂದು ಲೇವಡಿ ಮಾಡಿದ್ದರು. ಈಗ ಕಾಂಗ್ರೆಸ್ ಶೇ 40 ಭ್ರಷ್ಟಾಚಾರದ ಆರೋಪ ಮಾಡಿದೆ, ಇದು ನಿಮಗೆ ಮುಳುವಾಗುತ್ತದೆಯೇ?**

ಕಾಂಗ್ರೆಸ್‌ಗೆ ಚುನಾವಣೆಯಲ್ಲಿ ಅಜೆಂಡಾವೇ ಇಲ್ಲ. ಅವರ ಅವಧಿಯಲ್ಲಿ ಅಭಿವೃದ್ಧಿ ಆಗದ ಕಾರಣ, ಅಭಿವೃದ್ಧಿ ಆಧಾರದಲ್ಲಿ ಮತ ಕೇಳಲು ಆಗದೇ ಇಂತಹ ಆರೋಪ ಮಾಡುತ್ತಿದ್ದಾರೆ. ತಮ್ಮ ಭಷ್ಟಾಚಾರವನ್ನು ಮುಚ್ಚಲು 2013 ರಲ್ಲಿ ಲೋಕಾಯುಕ್ತ ಮುಚ್ಚಿ ಎಸಿಬಿಗೆ ಅಧಿಕಾರ ನೀಡಿದರು. ನಮ್ಮ ಸರ್ಕಾರದಲ್ಲಿ ಭ್ರಷ್ಟಾಚಾರಿಗಳಿಗೆ ರಕ್ಷಣೆ ಇಲ್ಲ ಎಂಬುದಕ್ಕೆ ಮಾಡಾಳ್ ವಿರೂಪಾಕ್ಷಪ್ಪ ಅವರ ಪ್ರಕರಣವೇ ಸಾಕ್ಷಿ.

• **ಬಿಎಸ್‌ವೈ–ಬೊಮ್ಮಾಯಿ ಯಾರ ಆಡಳಿತಕ್ಕೆ ಮೆಚ್ಚುಗೆ?**

ಯಡಿಯೂರಪ್ಪ ಆಡಳಿತದಲ್ಲಿ ಸಾಕಷ್ಟು ಸಂಕಷ್ಟಗಳು ಎದುರಾದವು. ಅಧಿಕಾರ ಚುಕ್ಕಾಣಿ ಹಿಡಿಯುತ್ತಿದ್ದಂತೆ ಪ್ರವಾಹ, ಭೂಕುಸಿತ ಎದುರಾಯಿತು. ಅದು ಮುಗಿಯುತ್ತಿದಂತೆ ಕೋವಿಡ್ ಆವರಿಸಿತು. ಜನರ ಪ್ರಾಣ ಉಳಿಸುವುದಕ್ಕೇ ಶ್ರಮಿಸಿದರು. ಇಷ್ಟಾಗಿಯೂ ಆರ್ಥಿಕ ಮತ್ತು ಅಭಿವೃದ್ಧಿ ಹಿನ್ನಡೆ ಆಗಲಿಲ್ಲ. ಬೊಮ್ಮಾಯಿ ಅವರು ಯಡಿಯೂರಪ್ಪ ಪರಂಪರೆಯನ್ನೇ ಮುಂದುವರಿಸಿದ್ದಾರೆ.

• **ಈ ಬಾರಿ 75 ಹೊಸಬರಿಗೆ ಟಿಕೆಟ್ ನೀಡಿದ್ದು, ಸಾಕಷ್ಟು ಹಿರಿಯರನ್ನು ಕೈಬಿಟ್ಟಿದ್ದೀರಿ. ಇದು ಪ್ರಯೋಗ ಎನ್ನುವುದಕ್ಕಿಂತ ಅಪಾಯಕಾರಿ ನಡೆ ಅಲ್ಲವೇ?**

ವಿವಿಧ ರಾಜ್ಯಗಳಲ್ಲಿ ಚುನಾವಣೆ ನಡೆದಾಗ ಈ ಪ್ರಯೋಗವನ್ನು ನಡೆಸಲಾಗಿದೆ. ಉತ್ತರಪ್ರದೇಶ ಮತ್ತು ಗುಜರಾತ್ ಚುನಾವಣೆಗಳಲ್ಲೂ ಹಲವು ಹಿರಿಯರಿಗೆ ಟಿಕೆಟ್ ನಿರಾಕರಿಸಲಾಗಿತ್ತು. ಅಲ್ಲೂ ಬಂಡಾಯ, ಪಕ್ಷಾಂತರಗಳು ಆಗಿದ್ದವು. ನಮಗೂ ಆಗ ಇದು ಅಪಾಯಕಾರಿ ನಡೆ ಎಂದೇ ಅನ್ನಿಸಿತ್ತು. ಆದರೆ ಜನ ನಮ್ಮ ಪ್ರಯೋಗವನ್ನು ಒಪ್ಪಿದ್ದರು. ಜನರಿಗೂ ಹೊಸ ಮುಖಗಳು ಬೇಕಿತ್ತು. ಕರ್ನಾಟಕದ ಜನ ಈ ಪ್ರಯೋಗವನ್ನು ಒಪ್ಪುತ್ತಾರೆ.

• **ಹೊಸ ಮುಖ ಎಂದು ಪ್ರಭಾವಿಗಳ ಮಕ್ಕಳು ಮತ್ತು ಕುಟುಂಬದವರಿಗೆ ಟಿಕೆಟ್ ಕೊಟ್ಟಿದ್ದೀರಲ್ಲವೇ?**

ಹಾಗೇನೂ ಇಲ್ಲ, ಬಿ.ವೈ. ವಿಜಯೇಂದ್ರ ಅವರ ವಿಷಯವನ್ನೇ ತೆಗೆದುಕೊಂಡರೆ ಅವರು ಪಕ್ಷದಲ್ಲಿ ಹಲವು ಹುದ್ದೆಗಳಲ್ಲಿ ಇದ್ದರು. ಈಗ ಪಕ್ಷದ ಉಪಾಧ್ಯಕ್ಷರೂ ಹೌದು. ಹಿಂದೆ ಹಲವು ಉಪಚುನಾವಣೆಗಳಲ್ಲೂ ಕೆಲಸ ಮಾಡಿದ್ದಾರೆ. ಪಕ್ಷದಲ್ಲಿ ಶ್ರಮಪಟ್ಟವರಿಗೆ ಕೊಟ್ಟಿದ್ದೇವೆ. ಮನೆಯವರು ಎಂಬ ಕಾರಣಕ್ಕೆ ಕೊಟ್ಟಿಲ್ಲ.

• **ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನದಿಂದ ಇಳಿದರು. ಜಗದೀಶ ಶೆಟ್ಟರ್ ಮತ್ತು ಲಕ್ಷ್ಮಣ ಸವದಿ ಬಂಡಾಯ ಎದ್ದು ಕಾಂಗ್ರೆಸ್ ಸೇರಿದರು. ಲಿಂಗಾಯತರನ್ನು ನಿರ್ಲಕ್ಷ್ಯ ಮಾಡಿದ ವಾದಕ್ಕೆ ಪುಷ್ಟಿ ಸಿಕ್ಕಿದಂತಾಗಿದೆಯಲ್ಲ?**

ಶೆಟ್ಟರ್ ಮತ್ತು ಸವದಿ ಅವರಿಗೆ ಪಕ್ಷ ಸಾಕಷ್ಟು ಅವಕಾಶ ಕಲ್ಪಿಸಿದೆ. ಸವದಿಯವರನ್ನು ಬೇರೆ ಪಕ್ಷದಿಂದ ಕರೆತಂದು ಶಾಸಕ, ಸಚಿವ, ವಿಧಾನಪರಿಷತ್ ಸದಸ್ಯ ಮತ್ತು ಉಪಮುಖ್ಯಮಂತ್ರಿಯನ್ನೂ ಮಾಡಲಾಗಿತ್ತು. ಶೆಟ್ಟರ್ ಅವರು ಕರ್ನಾಟಕದಲ್ಲಿ ಅತ್ಯುನ್ನತ ಸ್ಥಾನವಾದ ಮುಖ್ಯಮಂತ್ರಿ ಹುದ್ದೆ ಪಡೆದ ಬಳಿಕವೂ ಶಾಸಕರಾಗಲು ಹಟ ಹಿಡಿದರು. ಅವರಿಗೆ ಯಾವ ಕಾರಣಕ್ಕೆ ಟಿಕೆಟ್ ನಿರಾಕರಿಸಲಾಗುತ್ತಿದೆ ಮತ್ತು ಭವಿಷ್ಯದಲ್ಲಿ ದೊಡ್ಡ ಹುದ್ದೆ ನೀಡುವ ಬಗ್ಗೆಯೂ ಮೊದಲೇ ಸೂಚನೆ ನೀಡಲಾಗಿತ್ತು. ಬಿಜೆಪಿಗೆ ಬಂಡಾಯ ಅರಗಿಸಿಕೊಳ್ಳುವ ಶಕ್ತಿ ಇದೆ. ನಮ್ಮ ಬೂತ್ ಮಟ್ಟದ ಕಾರ್ಯಕರ್ತರು ಅಭ್ಯರ್ಥಿಗಳು ಯಾರು ಆಗಬೇಕು ಎಂಬುದನ್ನು ತೀರ್ಮಾನಿಸುತ್ತಾರೆ.

ಅಧಿಕಾರ ನಡೆಸಿದ ಅಲ್ಪಾವಧಿಯಲ್ಲೇ ಮೂವರನ್ನು ಮುಖ್ಯಮಂತ್ರಿ ಮಾಡಿದ್ದೇವೆ. ಅಲ್ಲದೇ ವಿರೋಧ ಪಕ್ಷದ ನಾಯಕ, ಪಕ್ಷದ ಅಧ್ಯಕ್ಷ, ಕೇಂದ್ರದಲ್ಲಿ ಸಚಿವ ಸ್ಥಾನವನ್ನೂ ಅವರಿಗೆ ನೀಡಿದ್ದೇವೆ. ಬಿಜೆಪಿ ಲಿಂಗಾಯತರ ಜತೆ ಇದೆ. ಲಿಂಗಾಯತರು ಬಿಜೆಪಿ ಜತೆಗಿದ್ದಾರೆ. ಲಿಂಗಾಯತರಿಗೆ ಮೀಸಲಾತಿಯನ್ನೂ ಹೆಚ್ಚಿಸಿದ್ದೇವೆ. ಆದರೆ, ಕಾಂಗ್ರೆಸ್ ಲಿಂಗಾಯತ ಸಮುದಾಯಕ್ಕೆ ಏನು ಮಾಡಿದೆ?

• **ಈ ಬಾರಿ ಹಿಂದುತ್ವಕ್ಕಿಂತ ಲಿಂಗಾಯತ ಅಸ್ತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿದ ಹಾಗಿದೆ?**

ಬಿಜೆಪಿ ಎಲ್ಲ ಸಮುದಾಯವನ್ನು ಒಟ್ಟಿಗೆ ಕರೆದುಕೊಂಡು ಹೋಗುತ್ತಿದೆ. ಹಿಂದುತ್ವದ ವಿಚಾರ ಈಗಲೂ ಇದೆ. ಸಿದ್ದರಾಮಯ್ಯ ತಮ್ಮ ಅವಧಿಯಲ್ಲಿ ನಾಲ್ಕು ದೊಡ್ಡ ತಪ್ಪುಗಳು ಮಾಡಿದರು. ಟಿಪ್ಪು ಜಯಂತಿಗೆ ಚಾಲನೆ ನೀಡಿದರು, ಪಿಎಫ್‌ಐ ಕಾರ್ಯಕರ್ತರು ಮತ್ತು ಭಯೋತ್ಪಾದಕರನ್ನು ಜೈಲಿನಿಂದ ಬಿಡಿಸಿದರು. ಲಿಂಗಾಯತ ಧರ್ಮವನ್ನು ಒಡೆಯಲು ಹೋದರು. ಶಾಲಾ ಮಕ್ಕಳ ಹಂತದಲ್ಲೂ ಜಾತಿಯನ್ನು ತಂದರು.

• **ನೀವು ಮುಖ್ಯಮಂತ್ರಿ ಹುದ್ದೆ ಆಕಾಂಕ್ಷಿಯೇ?**

ಖಂಡಿತಾ ಇಲ್ಲ. ಕೇಂದ್ರದ ಸಚಿವಳಾಗಿ ಕೆಲಸ ಮಾಡುತ್ತಾ ಇಡೀ ದೇಶ ಸುತ್ತುವ ಅವಕಾಶ ಸಿಕ್ಕಿದೆ. ಮೋದಿ ಸರ್ಕಾರದಲ್ಲಿ ಕಲಿಯುವುದು ಸಾಕಷ್ಟಿದೆ. 2023 ವಿಧಾನಸಭೆ ಚುನಾವಣೆ ಮುಗಿದ ನಂತರ ಮತ್ತೆ ದೆಹಲಿಗೆ ಹೋಗುತ್ತೇನೆ. ರಾಜ್ಯಕ್ಕೆ ಬರುವುದಿಲ್ಲ.

ಅಜ್ಜಿ ಇಂದಿರಾ ಗಾಂಧಿಗೆ ರಾಜಕೀಯ ಪುನರ್ಜನ್ಮ ನೀಡಿದ್ದ ಜಿಲ್ಲೆಯಲ್ಲಿ ಮೊಮ್ಮಗಳ ಪ್ರಚಾರ

‘ಚಿಕ್ಕಮಗಳೂರು ಜಿಲ್ಲೆ ಜನರಿಗೆ ಆಭಾರಿ’

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಅಜ್ಜಿ ಇಂದಿರಾ ಗಾಂಧಿ ಅವರಿಗೆ ರಾಜಕೀಯ ಪುನರ್ಜನ್ಮ ನೀಡಿದ್ದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮೊಮ್ಮಗಳು ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಗುರುವಾರ ಪ್ರಚಾರ ನಡೆಸಿದರು. ಬಾಳೆಹೊನ್ನೂರಿನ ಕಲಾ ರಂಗ ಕ್ರೀಡಾಂಗಣದಲ್ಲಿ ತುಂತುರು ಮಳೆ ಲೆಕ್ಕಿಸದೆ ಭಾಷಣ ಮಾಡಿ ಮೋಡಿ ಮಾಡಿದರು.

ಜಿಲ್ಲೆಗೆ ಪ್ರಥಮ ಬಾರಿಗೆ ಭೇಟಿ ನೀಡಿದ ಪ್ರಿಯಾಂಕಾ ಅವರಿಗೆ ಅಡಿಕೆಯಿಂದ ತಯಾರಿಸಿದ ಹಾರ ಹಾಕಲಾಯಿತು.

ಪ್ರಿಯಾಂಕಾ ಮಾತನಾಡಿ, ‘ಶೃಂಗೇರಿಯಲ್ಲಿ ಶಾರದಾದೇವಿ ದರ್ಶನ ಮಾಡಿದೆ. ಶಾರದಾಪೀಠದ ಸ್ವಾಮೀಜಿ ಅವರ ಆಶೀರ್ವಾದ ಪಡೆದೆ. ಸಹೋದರ ರಾಹುಲ್ ಅವರಿಗೂ ಅವರ ಆಶೀರ್ವಾದ ಬೇಡಿದೆ. ನಮ್ಮ ಅಜ್ಜಿ ಇಂದಿರಾ ಗಾಂಧಿ, ಅಪ್ಪ ರಾಜೀವ್‌ಗಾಂಧಿ ಅವರು ಶೃಂಗೇರಿಗೆ ಭೇಟಿ ನೀಡಿದ್ದನ್ನು ಸ್ವಾಮೀಜಿ ನೆನಪಿಸಿಕೊಂಡರು’ ಎಂದು ತಿಳಿಸಿದರು.

‘1978ರಲ್ಲಿ ಇಂದಿರಾ ಇಲ್ಲಿಗೆ ಭೇಟಿ ನೀಡಿದ್ದ ಸಂದರ್ಭ ಸಂಘರ್ಷದ ಸಮಯವಾಗಿತ್ತು. ನಮ್ಮ ಕುಟುಂಬ ಈಗ ಅಂಥದ್ದೇ ಸಂಘರ್ಷ ಎದುರಿಸುತ್ತಿದೆ. ಅಜ್ಜಿ ಇಂದಿರಾ ಅವರು ಇದೇ ಮೈದಾನದಲ್ಲಿ ಭಾಷಣ ಮಾಡಿದ್ದರು, ಅವತ್ತೂ ಮಳೆ ಸುರಿದಿತ್ತು. ಮಳೆ ಶುಭ ಸಂಕೇತ, ಇವತ್ತೂ ಮಳೆಯಾಗಿದ್ದು ದೇವರ ಆಶೀರ್ವಾದ ಎಂದು ಭಾವಿಸಿದ್ದೇನೆ’ ಎಂದರು.

‘ಅಜ್ಜಿ ಇಂದಿರಾ ಗಾಂಧಿ ಅವರ ಜೀವನದ ಅತ್ಯಂತ ಕಷ್ಟಕರ ಸಂದರ್ಭದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಜನರು ಅವರಿಗೆ ಆಶೀರ್ವಾದ ಮಾಡಿದ್ದರು. ಅದನ್ನು ನಾವು ಎಂದಿಗೂ ಮರೆಯಲ್ಲ. ನಮ್ಮ ಕುಟುಂಬ ಜಿಲ್ಲೆ ಜನತೆಗೆ ಸದಾ ಅಭಾರಿಯಾಗಿರುತ್ತದೆ’ ಎಂದು ಹೇಳಿದರು.

‘ಇಂದಿರಾಗಾಂಧಿ ವಿರುದ್ಧ ಲೋಕಸಭೆಯಲ್ಲಿ ಕೇಸು ಹಾಕಿ, ಸಂಸತ್ತಿನಿಂದ ಹೊರಗಿಡಲಾಗಿತ್ತು. ಇಂದಿರಾ ಅವರನ್ನು ಮತ್ತೆ ಲೋಕಸಭೆಗೆ ಆಯ್ಕೆ ಮಾಡಿದ್ದು, ಅತ್ಮವಿಶ್ವಾಸ ತುಂಬಿ, ಹೋರಾಟ ಮಾಡಿ ಎಂದು ಸಂದೇಶವನ್ನು ನೀಡಿದ್ದು ಈ ಜಿಲ್ಲೆಯ ಜನರು’ ಎಂದು ಸ್ಮರಿಸಿದರು.

‘ಇಂದಿರಾ ಅವರ ಮೊಮ್ಮಗ ರಾಹುಲ್ ವಿರುದ್ಧ ಸುಳ್ಳು ಕೇಸು ಹಾಕಿ ಲೋಕಸಭೆಯಿಂದ ಹೊರಗಿಟ್ಟಿರುವ ಈ ಸಂದರ್ಭದಲ್ಲಿ ನಿಮ್ಮ ಮುಂದೆ ಬಂದಿದ್ದೇನೆ. ದೇಶದ ಜನ ನಮ್ಮೊಂದಿಗೆ ನಿಲ್ಲುತ್ತಾರೆ, ರಾಹುಲ್ ಗಾಂಧಿ ಅವರನ್ನು ಮತ್ತೆ ಲೋಕಸಭೆಗೆ ಕಳಿಸುತ್ತಾರೆ ಎಂಬ ವಿಶ್ವಾಸ ನಮ್ಮ ಕುಟುಂಬಕ್ಕೆ ಇದೆ. ಸತ್ಯಕ್ಕಾಗಿ ಸಂಘರ್ಷ ಮಾಡುತ್ತಿದ್ದೇವೆ’ ಎಂದರು.

‘ರೈತರ ಬೆಳೆಗೆ ಯೋಗ್ಯ ಬೆಲೆ ಲಭಿಸುತ್ತಿಲ್ಲ, ಬೆಳೆಗೆ ತಗುಲಿರುವ ರೋಗಕ್ಕೆ ಔಷಧಿ ಇಲ್ಲ. ಕೃಷಿಕರ ಸಾಲಮನ್ನಾ ಮಾಡಿಲ್ಲ, ಎಲ್ಲ ಕೃಷಿ ವಸ್ತುಗಳಿಗೂ ಈ ಸರ್ಕಾರ ಜಿಎಸ್‌ಟಿ ವಿಧಿಸಿದೆ’ ಎಂದು ದೂರಿದರು.

‘ಈ ಭಾಗದಲ್ಲಿ ಅಡಿಕೆಗೆ ಹಳದಿ ಎಲೆ, ಎಲೆ ಚುಕ್ಕಿರೋಗ ಬಾಧಿಸುತ್ತಿದೆ. ಅಡಿಕೆ ತೋಟಗಳು ಹಾಳಾಗಿವೆ. ಆದರೆ, ಸರ್ಕಾರದಿಂದ ಪರಿಹಾರ ದೊರೆತಿಲ್ಲ ಎಂಬದು ಗೊತ್ತಿದೆ. ಕಾಂಗ್ರೆಸ್ ಆಡಳಿತ ಚುಕ್ಕಾಣಿ ಹಿಡಿದರೆ ಬೆಳೆಗಳಿಗೆ ಸರಿಯಾದ ಬೆಲೆ ನೀಡುವ ಕೆಲಸ ಮಾಡುತ್ತೇವೆ’ ಎಂದು ಭರವಸೆ ನೀಡಿದರು. ಇದಕ್ಕೂ ಮುನ್ನ ಅವರು ಬಾಳೆಹೊನ್ನೂರಿನ ರಂಭಾಪುರಿ ಪೀಠಕ್ಕೆ ಭೇಟಿ ನೀಡಿದರು.

ಮೈಲಾರಿಯಲ್ಲಿ ದೋಸೆ ಚಪ್ಪರಿಸಿದ ಪ್ರಿಯಾಂಕಾ

ಮೈಸೂರು: ವಿಐಪಿಗಳ ಆತಿಥ್ಯಕ್ಕೆ ಹೆಸರುವಾಸಿಯಾದ ನಗರದ ‘ರ್‍ಯಾಡಿಸನ್ ಬ್ಲೂ’ ಹೋಟೆಲ್ ಪ್ರವೇಶದ್ವಾರದಲ್ಲೇ ಬುಧವಾರ ಬೆಳಿಗ್ಗೆ 9.15ಕ್ಕೆ ಜನವೋ ಜನ. ಕೆಲವರು ಕುತೂಹಲದಿಂದ ಮೊಬೈಲ್‌ನಲ್ಲಿ ಚಿತ್ರ ಕ್ಲಿಕ್ಕಿಸಿಕೊಂಡರೆ, ಕೆಲವರು ಘೋಷಣೆ ಕೂಗುತ್ತಿದ್ದರು. ಅಲ್ಲಿದ್ದ ಎಲ್ಲರನ್ನೂ ಆಕರ್ಷಿಸಿದ್ದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ.

ದುಬಾರಿ ಹೋಟೆಲ್‌ನಲ್ಲಿದ್ದರೂ, ಬೆಳಗ್ಗಿನ ಉಪಹಾರ ಸೇವನೆಗೆ ಅವರು ಆಯ್ದುಕೊಂಡಿದ್ದು ರುಚಿಯಾದ ದೋಸೆ, ಇಡ್ಲಿಗೆ ಹೆಸರಾದ ಸಯ್ಯಾಜಿ ರಾವ್ ರಸ್ತೆಯ ‘ಮೈಲಾರಿ ಅಗ್ರಹಾರ’ ಹೋಟೆಲ್. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೆವಾಲಾ ಜೊತೆಗೆ ವಿಶೇಷ ಭದ್ರತೆಯಲ್ಲಿ ‘ಮೈಲಾರಿ ಹೋಟೆಲ್’ಗೆ ಬಂದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಬುಧವಾರ ಮೈಸೂರಿನ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ‘ಮೈಲಾರಿ ಅಗ್ರಹಾರ‘ ಹೋಟೆಲ್‌ನಲ್ಲಿ ದೋಸೆ ಸವಿದರು. ಈ ವೇಳೆ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೆವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇದ್ದರು

ಕಾರಿನಿಂದ ಕೆಳಗಿಳಿದು, ಸೀದಾ ಅಡುಗೆ ಕೋಣೆಗೆ ತೆರಳಿ, ಕಾವಲಿಗೆ ಹಿಟ್ಟು ಹಾಕಿ ಒಂದು ದೋಸೆ ತಯಾರಿಸಿದರು. ಹೋಟೆಲ್ ಸಿಬ್ಬಂದಿ ಜೊತೆಗೆ ನಿಮಿಷಗಳ ಕಾಲ ಹರಟಿದರು.

ನಂತರ ಡಿ.ಕೆ.ಶಿವಕುಮಾರ್ ಜೊತೆಗೆ ದೋಸೆ ಸವಿಯಲು ಆರಂಭಿಸಿದರು. ‘ಮೇಡಂಗೆ ಇನ್ನೊಂದು ಸ್ವಲ್ಪ ಚಟ್ನಿ ಹಾಕಿ, ಟೇಸ್ಟ್ ತುಂಬಾ ಚೆನ್ನಾಗಿದೆ’ ಎಂದು ಡಿಕೆಶಿ ಹೇಳುತ್ತಿದ್ದಂತೆಯೇ ಪ್ರಿಯಾಂಕಾ ಇಡ್ಲಿಯನ್ನು ಸವಿದು, ನೀರು ಕುಡಿದು ಬಾಯಾರಿಕೆ ತಣಿಸಿಕೊಂಡರು. ಅಲ್ಲಿದ್ದ ಮಕ್ಕಳನ್ನು ಪಕ್ಕಕ್ಕೆ ಕರೆದು ಸಂಭಾಷಣೆ ನಡೆಸಿದರು.

ಮಾಧ್ಯಮದವರು ಒಳನುಗ್ಗಿ ವಿಡಿಯೊ ತೆಗೆಯಲು ಮುಂದಾದ ವೇಳೆ ಭದ್ರತಾ ಸಿಬ್ಬಂದಿ ತಡೆಯೊಡ್ಡಿದರು. ಕೊನೆಗೆ ಒಬ್ಬರಿಗೆ ಮಾತ್ರ ಅನುವು ಮಾಡಿಕೊಟ್ಟರು. ತಿಂಡಿ ತಿನ್ನುತ್ತಲೇ, ಮಕ್ಕಳ ಜೊತೆ ಫೋಟೋಗೆ ಪೋಸ್ ನೀಡಿದರು.

ಬಳಿಕ ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು,‘ದೋಸೆ ತುಂಬಾ ರುಚಿಯಾಗಿತ್ತು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ರಾಜ್ಯದಲ್ಲಿರುವ ಬಿಜೆಪಿ ಸರ್ಕಾರವು ಎಲ್ಲ ಕ್ಷೇತ್ರದಲ್ಲಿ ವಿಫಲವಾಗಿದ್ದು, ಜನರು ರೋಸಿ ಹೋಗಿದ್ದಾರೆ. ರಾಜ್ಯದ ಸಮಗ್ರ ಅಭಿವೃದ್ಧಿ, ಭ್ರಷ್ಟಾಚಾರ ಮುಕ್ತ ಸರ್ಕಾರ ರಚನೆಗೆ ಕಾಂಗ್ರೆಸ್ ಬೆಂಬಲಿಸಬೇಕು‘ ಎಂದು ಮನವಿ ಮಾಡಿ, ಕಾರಿನಲ್ಲಿ ಹೊರಟು ಹೋದರು.

ರೋಡ್ ಶೋ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಮಂಡ್ಯದಲ್ಲಿ ಬುಧವಾರ ಬಿಜೆಪಿ ಅಭ್ಯರ್ಥಿಗಳ ಪರ ರೋಡ್ ಶೋ ನಡೆಸಿದರು

ಸಂತೋಷ್ ಬಹಿರಂಗ ಯುದ್ಧಕ್ಕೆ ಬರಲಿ: ಶೆಟ್ಟರ್

ಒಂದನೇ ಪುಟದಿಂದ...

ಬಿಎಸ್‌ವೈ ಟೀಕೆ ಆಶೀರ್ವಾದವಿದ್ದಂತೆ: ‘ನನಗೆ ಟಿಕೆಟ್ ಕೊಡಿಸಲು ಯಡಿಯೂರಪ್ಪ ಕೊನೆ ಕ್ಷಣದವರೆಗೂ ಪ್ರಯತ್ನಿಸಿದ್ದರು. ಟಿಕೆಟ್ ಕೊಡದಿದ್ದರೆ ಪಕ್ಷಕ್ಕೆ ತೊಂದರೆಯಾಗಲಿದೆ ಎಂದೂ ಎಚ್ಚರಿಸಿದ್ದು ನನಗೆ ಗೊತ್ತಿದೆ. ಟಿಕೆಟ್ ತಪ್ಪಿರುವ ವಿಷಯದಲ್ಲಿ ನಾನು ಯಾವತ್ತೂ ಯಡಿಯೂರಪ್ಪ ವಿರುದ್ಧ ಮಾತನಾಡಿಲ್ಲ. ಇದನ್ನು ಅವರು ಅರ್ಥ ಮಾಡಿಕೊಳ್ಳಬೇಕು’ ಎಂದರು.

‘ಯಡಿಯೂರಪ್ಪ ಅಸಹಾಯಕರಾಗಿದ್ದಾರೆ. ವರಿಷ್ಠರ ಒತ್ತಡಕ್ಕೆ ಮಣಿದು, ಸಮಾಜದ 50–60 ಜನರ ಸಭೆ ನಡೆಸಿದ್ದರು. ಅದೇನೂ ಇಡೀ ಸಮಾಜದವರ ಸಭೆಯಾಗಿರಲಿಲ್ಲ. ನನ್ನ ವಿರುದ್ಧ ನೇರವಾಗಿ ಟೀಕಿಸಿದ್ದಾರೆ. ಅದಕ್ಕೇನೂ ಪ್ರತಿಕ್ರಿಯಿಸಲ್ಲ. ಅವರ ಟೀಕೆಯನ್ನೂ ಆಶೀರ್ವಾದ ಅಂದು ಕೊಳ್ಳುತ್ತೇನೆ’ ಎಂದರು.

‘ನಾನು ಈ ಮಟ್ಟಕ್ಕೆ ಬೆಳೆಯಲು ಯಡಿಯೂರಪ್ಪ ಅವರೂ ಕಾರಣರಾಗಿದ್ದಾರೆ. ಅವರ ಬಗ್ಗೆ ಅಪಾರ ಗೌರವವಿದೆ. ಅವರ ಬಗ್ಗೆ ನಾನೆಂದೂ ಅಗೌರವದಿಂದ ನಡೆದುಕೊಂಡಿಲ್ಲ. ಯಾವ ಆರೋಪವನ್ನೂ ಮಾಡಿಲ್ಲ’ ಎಂದರು.

ನನ್ನ ಮೇಲೇಕೆ ‘ಮೋದಿ ಅಸ್ತ್ರ’?: ‘ನಾನು ಬಡಪಾಯಿ. ಗೌರವದಿಂದ ನಡೆಸಿಕೊಳ್ಳಲಿಲ್ಲವೆಂದು ಬಿಜೆಪಿ ಬಿಟ್ಟು ಹೊರ ಬಂದೆ. ನಾನೊಬ್ಬನೇ ಅಲ್ಲ, ಹಲವು ಮುಖಂಡರು ಪಕ್ಷ ಬಿಟ್ಟುಹೋಗಿದ್ದಾರೆ. ಆದರೂ, ನನ್ನನ್ನೇ ಏಕೆ ಟಾರ್ಗೆಟ್ ಮಾಡಲಾಗುತ್ತಿದೆ’ ಎಂದು ಜಗದೀಶ ಶೆಟ್ಟರ್ ಅಳಲು ತೋಡಿಕೊಂಡರು.

‘ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರ ಸಣ್ಣ ಕ್ಷೇತ್ರ. ಈ ಕ್ಷೇತ್ರದಲ್ಲಿ ಬಿಜೆಪಿಯ ರಾಷ್ಟ್ರೀಯ ನಾಯಕರಾದ ಅಮಿತ್ ಶಾ, ಜೆ.ಪಿ. ನಡ್ಡಾ, ಸ್ಮೃತಿ ಇರಾನಿ ಹಾಗೂ ರಾಜ್ಯದ ಪ್ರಮುಖ ನಾಯಕರಾದ ಬಿ.ಎಸ್. ಯಡಿಯೂರಪ್ಪ ಅವರನ್ನು ಕರೆತಂದಿದ್ದಾರೆ. ನನ್ನ ಮೇಲೆ ಏಕೆ ಈ ಪ್ರಹಾರ’ ಎಂದು ಪ್ರಶ್ನಿಸಿದರು.

‘ಶೆಟ್ಟರ್ ಹೋಗಿದ್ದನ್ನೇ ದೊಡ್ಡ ಅಪರಾಧ ಎನ್ನುವಂತೆ ಬಿಂಬಿಸಲಾಗುತ್ತಿದೆ. ಒಂದು ರೀತಿ ಆಂದೋಲನದಂತೆ ನನ್ನ ವಿರುದ್ಧ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ನಾಯಕರು ಪ್ರಚಾರ ಕೈಗೊಂಡಿದ್ದಾರೆ. ನಾನು ಪಕ್ಷಕ್ಕೆ ಏನು ಅನ್ಯಾಯ ಮಾಡಿದ್ದೇನೆ? ಏನು ದ್ರೋಹ ಮಾಡಿದ್ದೇನೆ? ಮತ್ತೊಂದು ಅವಧಿಗೆ ಸ್ಪರ್ಧಿಸಲು ಟಿಕೆಟ್ ಕೊಡಿ ಎಂದು ಕೇಳಿದ್ದೆ ತಪ್ಪಾ?’ ಎಂದು ಪ್ರಶ್ನಿಸಿದರು.

ಬಿಜೆಪಿಯಲ್ಲಿ ಸಿದ್ಧಾಂತ ಎಲ್ಲಿದೆ?

‘ಪಕ್ಷದಲ್ಲಿ ಎಲ್ಲಿ ಸಿದ್ಧಾಂತಗಳು ಉಳಿದಿವೆ? ನಿನ್ನೆ- ಮೊನ್ನೆ ಬಂದವರಿಗೆ, 80 ಅಪರಾಧ ಪ್ರಕರಣಗಳಿರುವ ಮಣಿಕಂಠ ರಾಠೋಡ ಅವರಿಗೆ ಟಿಕೆಟ್ ನೀಡುವಾಗ ಹಾಗೂ ಆಪರೇಷನ್ ಕಮಲದ ಮೂಲಕ ಪಕ್ಷಕ್ಕೆ ಕರೆ ತಂದವರಿಗೆ ಟಿಕೆಟ್ ನೀಡುವಾಗ ತತ್ವ,ಸಿದ್ಧಾಂತಗಳು ಎಲ್ಲಿ ಹೋಗಿದ್ದವು’ ಎಂದು ಜಗದೀಶ ಶೆಟ್ಟರ್ ಪ್ರಶ್ನಿಸಿದರು.

‘ಪಕ್ಷ ಬಿಟ್ಟು ಹೊರ ಹೋಗಿ ಕೆಜೆಪಿ ಸ್ಥಾಪಿಸಿದ್ದ ಯಡಿಯೂರಪ್ಪ ಅವರನ್ನು ವಾಪಸ್ ಪಕ್ಷಕ್ಕೆ ಕರೆತಂದಾಗ ಸಿದ್ಧಾಂತಗಳು ಎಲ್ಲಿ ಹೋಗಿದ್ದವು? ತಮ್ಮ ವಿರುದ್ಧ ಸಿ.ಡಿ ಪ್ರಸಾರ ಮಾಡದಂತೆ ಮಾಧ್ಯಮಗಳ ಮೇಲೆ 6–7 ಸಚಿವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಾಗ ಎಲ್ಲಿದ್ದವು ತತ್ವ ಸಿದ್ಧಾಂತಗಳು?’ ಎಂದು ಹರಿಹಾಯ್ದರು.

ಕೇಂದ್ರ ಸಚಿವ ಜೋಶಿಗೆ ಎಚ್ಚರಿಕೆ

‘ಪಕ್ಷ ಬಿಟ್ಟು ಹೋಗಿದ್ದಕ್ಕೆ ನನ್ನ ಬಗ್ಗೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಲಘುವಾಗಿ ಮಾತನಾಡಿದ್ದಾರೆ. ನಾನು ಸಂಘರ್ಷಕ್ಕೆ ಇಳಿದ ಮೇಲೆ ಆ ಸ್ಥಾನ, ಈ ಸ್ಥಾನ ನೀಡುವ ಬಗ್ಗೆ ಅವರು ಹೇಳಿಕೆ ನೀಡಿದ್ದಾರೆ. ಜೋಶಿ ಅವರೇ ಇದು ಬಹಳ ದಿನ ನಡೆಯಲ್ಲ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಇದರ ಪರಿಣಾಮ ಗೊತ್ತಾಗಲಿದೆ’ ಎಂದು ಜಗದೀಶ ಶೆಟ್ಟರ್ ಎಚ್ಚರಿಕೆ ನೀಡಿದರು.

‘ಕೇವಲ ಒಂದು ಟಿಕೆಟ್‌ಗಾಗಿ ತತ್ವ– ಸಿದ್ಧಾಂತಗಳಿಗೆ ತಿಲಾಂಜಲಿ ಇಟ್ಟು ಪಕ್ಷ ಬಿಟ್ಟು ಹೋಗಿದ್ದೇನೆ ಎಂದು ಜೋಶಿ ಹೇಳಿಕೆ ನೀಡಿದ್ದಾರೆ. ಇದು ಕೇವಲ ಟಿಕೆಟ್ ಪ್ರಶ್ನೆ ಅಲ್ಲ. ನನ್ನ ಸ್ವಾಭಿಮಾನದ ಪ್ರಶ್ನೆಯೂ ಅಡಗಿದೆ’ ಎಂದು ತಮ್ಮ ನಡೆಯನ್ನು ಸಮರ್ಥಿಸಿಕೊಂಡರು.

‘ನನ್ನದು ಒಂದೇ ಪ್ರಶ್ನೆ. ಕೊನೆ ಕ್ಷಣದಲ್ಲಿ ನನಗೆ ಟಿಕೆಟ್ ಏಕೆ ತಪ್ಪಿಸಿದೀರಿ? ವಾರದ ಮುಂಚೆ ಕರೆದು ಮಾತನಾಡಿಸಲಿಲ್ಲವೇಕೆ? ಗೌರವಯುತವಾಗಿ ಏಕೆ ನಡೆಸಿಕೊಳ್ಳಲಿಲ್ಲ? ನಾನು ಸಂಘರ್ಷಕ್ಕೆ ಇಳಿದ ಮೇಲೆ ನನ್ನ ಜೊತೆ ಮಾತುಕತೆ ನಡೆಸಲು ಬಂದಿದ್ದೀರಿ. ಯಾಕೆ ಟಿಕೆಟ್ ನಿರಾಕರಿಸಿದೀರಿ ಎನ್ನುವುದಕ್ಕೆ ಇದುವರೆಗೂ ಉತ್ತರ ಸಿಕ್ಕಿಲ್ಲ. ಅಮಿತ್ ಶಾ ಕೂಡ ಏನೂ ಹೇಳಿಲ್ಲ. ಹೇಳಿದ್ದರೆ ಪಕ್ಷ ಬಿಡುತ್ತಿರಲಿಲ್ಲ’ ಎಂದು ಹೇಳಿದರು.

ಡಿಕೆಶಿ ವಿರುದ್ಧ ಶೋಭಾ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಪತ್ರಕರ್ತರ ವಿರುದ್ಧ ಗೂಂಡಾಗಿರಿ ವರ್ತನೆ ತೋರಿದ್ದು, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಬಿಜೆಪಿ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿ ಶೋಭಾ ಕರಂದ್ಲಾಜೆ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದಾರೆ.

ತಮ್ಮ ಸುದ್ದಿಗೋಷ್ಠಿಗೆ ಪತ್ರಕರ್ತರು ಬರಲಿಲ್ಲ ಎಂಬ ಕಾರಣಕ್ಕೆ ಅವರೆಲ್ಲರನ್ನೂ ಕೆಲಸದಿಂದ ತೆಗೆಸುವುದಾಗಿ ಬೆದರಿಕೆ ಹಾಕಿದ್ದಾರೆ. ಆದ್ದರಿಂದ ಅವರಿಗೆ ತಕ್ಷಣವೇ ನೋಟಿಸ್ ನೀಡಬೇಕು ಎಂದು ಮುಖ್ಯ ಚುನಾವಣಾಧಿಕಾರಿಯವರಿಗೆ ಸಲ್ಲಿಸಿದ ಮನವಿಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಪಕ್ಷ ಸಾಮಾಜಿಕ ಮಾಧ್ಯಮ ದುರ್ಬಳಕೆ ಮಾಡುತ್ತಿದೆ. ತೆಲಂಗಾಣದ ವಿಡಿಯೊವೊಂದನ್ನು ಬಳಸಿ, ರಾಜ್ಯದಲ್ಲಿ ಬಿಜೆಪಿಯ ಮಾಧ್ಯಮ ವಾಹನಕ್ಕೆ ಕಲ್ಲು ಹೊಡೆದಿದ್ದಾರೆ ಎಂದು ಬಿಂಬಿಸಿದ್ದಾರೆ. ಈ ಮೂಲಕ ಸಮಾಜಕ್ಕೆ ತಪ್ಪು ಸಂದೇಶ ನೀಡುವ ಕೆಲಸ ಮಾಡಿದೆ ಎಂದು ಮನವಿಯಲ್ಲಿ ವಿವರಿಸಿದ್ದಾರೆ.

ಮೀಸಲಾತಿ: ಒಕ್ಕಲಿಗರು, ಲಿಂಗಾಯತರು ಭಿಕ್ಷುಕರೇ?– ಸುರ್ಜೇವಾಲಾ, ಡಿಕೆಶಿ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಜ್ಯ ಬಿಜೆಪಿ ಸರ್ಕಾರ ಮುಸಲ್ಮಾನರಿಗಿದ್ದ ಮೀಸಲಾತಿ ಕಡಿತಗೊಳಿಸಿ ಒಕ್ಕಲಿಗರು, ಲಿಂಗಾಯತರಿಗೆ ಶೇಕಡಾ 2 ಮೀಸಲಾತಿ ಹೆಚ್ಚಿಸಿದೆ. ಹಾಗಿದ್ದರೆ, ಲಿಂಗಾಯತರು, ಒಕ್ಕಲಿಗರು ಭಿಕ್ಷುಕರೇ?’ ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕಿಡಿಕಾರಿದರು.

ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ಮೀಸಲಾತಿ ವಿಚಾರದಲ್ಲಿ ಮಾತು ತಪ್ಪಿರುವ ಬಿಜೆಪಿಯು, ದೇಶದ ರಾಜಕೀಯ ಇತಿಹಾಸದಲ್ಲಿ ಪರಮ ವಿಶ್ವಾಸದ್ರೋಹಿ ಪಾರ್ಟಿ ಎಂದು ಹೆಸರಾಗಿದೆ. ಜನರಿಗೆ ಭರವಸೆ ನೀಡಿ, ಸುಪ್ರೀಂಕೋರ್ಟ್ ನಲ್ಲಿ ಅದಕ್ಕೆ ವಿರುದ್ಧವಾದ ಪ್ರಮಾಣಪತ್ರ ಸಲ್ಲಿಸಿದೆ. ಚುನಾವಣೆ ವೇಳೆ ಮೀಸಲಾತಿಯ ಜೇನುಗೂಡಿಗೆ ಕೈ ಹಾಕಿ, ಯಾವ ಸಮಾಜಕ್ಕೂ ನ್ಯಾಯ ಕಲ್ಪಿಸದೇ, ಅನ್ಯಾಯವೆಸಗಿದೆ’ ಎಂದು ದೂರಿದರು.

‘ಜನಸಂಖ್ಯೆ ಆಧಾರದಲ್ಲಿ ಮೀಸಲಾತಿ ನೀಡಬೇಕೆಂದು ಬೇಡಿಕೆಯಿಟ್ಟಿದ್ದೆವು. ಮುಸಲ್ಮಾನರಿಗೆ ನೀಡಿದ್ದ ಮೀಸಲಾತಿ ಕಿತ್ತು ಹಾಕಿದ್ದಾರೆ. ಅವರನ್ನು ದೇಶದಿಂದಲೇ ಓಡಿಸುತ್ತೀರಾ? ಅದು ಅಸಾಧ್ಯ. ಸಂವಿಧಾನದಡಿ ಹಕ್ಕು ಪಡೆಯಲು ಅವರಿಗೂ ಅವಕಾಶವಿದೆ. ಪರಿಶಿಷ್ಟ ಜಾತಿ, ಪಂಗಡದ ಮೀಸಲಾತಿಯನ್ನು ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರಿಸುವ ಪ್ರಸ್ತಾಪವಿಲ್ಲ ಎಂದು ಕೇಂದ್ರ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣದ ರಾಜ್ಯ ಸಚಿವ ಎ. ನಾರಾಯಣ ಸ್ವಾಮಿ ಅವರೇ ಸಂಸತ್ತಿನಲ್ಲಿ ಉತ್ತರ ನೀಡಿದ್ದಾರೆ. ರಾಜ್ಯ ಸರ್ಕಾರದ ತೀರ್ಮಾನವನ್ನೇ, ಕೇಂದ್ರ ಸರ್ಕಾರ ಸ್ಪಷ್ಟವಾಗಿ ತಿರಸ್ಕರಿಸಿದೆ’ ಎಂದರು.

ಬೆಳಗಾವಿಯ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಬುಧವಾರ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಭುಜ ತಟ್ಟಿದರು

ಸೋಮಣ್ಣ ವಿರುದ್ಧ ಆಮಿಷದ ಆರೋಪ: ತನಿಖೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ವಸತಿ ಸಚಿವ ವಿ. ಸೋಮಣ್ಣ ಅವರು ನಾಮಪತ್ರ ಹಿಂಪಡೆಯುವಂತೆ ಜೆಡಿಎಸ್ ಅಭ್ಯರ್ಥಿ ಮಲ್ಲಿಕಾರ್ಜುನಸ್ವಾಮಿ (ಆಲೂರು ಮಲ್ಲು) ಅವರಿಗೆ ಆಮಿಷ ಒಡ್ಡಿರುವ ಆರೋಪದ ಕುರಿತು ತನಿಖೆ ನಡೆಸಲು ಸ್ಥಳೀಯ ಚುನಾವಣಾಧಿಕಾರಿಗೆ ಸೂಚಿಸಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಅವರು, ‘ಸೋಮಣ್ಣ ದೂರವಾಣಿ ಮೂಲಕ ಪ್ರತಿಸ್ಪರ್ಧಿ ಅಭ್ಯರ್ಥಿಗೆ ಆಮಿಷ ಒಡ್ಡಿದ್ದಾರೆ ಎಂಬ ಆರೋಪ ಗಮನಕ್ಕೆ ಬಂದಿದೆ. ಆಡಿಯೊ ತುಣುಕಿನ ಸತ್ಯಾಸತ್ಯತೆ ಕುರಿತು ತನಿಖೆ ನಡೆಸುವಂತೆ ಚುನಾವಣಾಧಿಕಾರಿಗೆ ಸೂಚನೆ ನೀಡಲಾಗಿದೆ’ ಎಂದರು.

ಕಾಂಗ್ರೆಸ್ ಮಾಜಿ ಶಾಸಕ ಶಫಿ ಜೆಡಿಎಸ್ ತೆಕ್ಕೆಗೆ

ತುಮಕೂರು: ಅಳಿಯ ರಫಿಕ್ ಅಹಮ್ಮದ್ ಅವರಿಗೆ ಕಾಂಗ್ರೆಸ್ ಟಿಕೆಟ್ ಕೈ ತಪ್ಪಿದ್ದಕ್ಕೆ ಮುನಿಸಿಕೊಂಡು, ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದ ಮಾಜಿ ಶಾಸಕ ಶಫಿ ಅಹ್ಮದ್ ಅವರು ಜೆಡಿಎಸ್ ಸೇರಲು ಸಜ್ಜಾಗಿದ್ದಾರೆ.

ಶಫಿ ಅಹ್ಮದ್

ಗುರುವಾರ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಸಮ್ಮುಖದಲ್ಲಿ ಅವರು ಬೆಂಬಲಿಗರೊಂದಿಗೆ ಜೆಡಿಎಸ್ ಸೇರಲಿದ್ದಾರೆ.

ನಾಲ್ಕು ದಶಕಗಳಿಂದ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಬೆಳೆಸಿದ್ದ ಶಫಿ ಅಹ್ಮದ್ ಕಾಂಗ್ರೆಸ್‌ನಿಂದ ಎರಡು ಬಾರಿ ಶಾಸಕರಾಗಿದ್ದರು. ಅಳಿಯ ಹಾಗೂ ಮಾಜಿ ಶಾಸಕ ರಫಿಕ್ ಅಹ್ಮದ್ ಸಹ ಜೆಡಿಎಸ್ ಸೇರ್ಪಡೆಯಾಗುವ ಸಾಧ್ಯತೆ ಇದೆ. ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಮಂಗಳವಾರ ಶಫಿ ಅಹ್ಮಮದ್ ಮನೆಗೆ ತೆರಳಿ ಜೆಡಿಎಸ್‌ಗೆ ಆಹ್ವಾನಿಸಿದ್ದರು.

₹ 25 ಸಾವಿರಕ್ಕೆ ಮತದಾರರ ದತ್ತಾಂಶ ಮಾರಾಟ

ಒಂದನೇ ಪುಟದಿಂದ...

‘ಹಣದ ಪಡೆದು ಮತದಾರರ ಮಾಹಿತಿ ಮಾರಾಟ ಮಾಡುತ್ತಿದ್ದಾರೆಂದು ಚುನಾವಣೆ ಅಧಿಕಾರಿಗಳು ದೂರು ನೀಡಿದ್ದು ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ. ತನಿಖಾ ಹಂತದಲ್ಲಿರುವ ಕಾರಣ ಸಂಸ್ಥೆಯ ಹೆಸರು ಬಹಿರಂಗ ಪಡಿಸುವುದಿಲ್ಲ’ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ನವೆಂಬರ್‌ನಲ್ಲಿ ‘ಚಿಲುಮೆ ಸಂಸ್ಥೆ’ಯೂ ಮತದಾರರ ದತ್ತಾಂಶ ಮಾರಾಟ ಮಾಡಿತ್ತು. ಅದೇ ಮಾದರಿಯಲ್ಲಿ ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಕ್ಷೇತ್ರಗಳಲ್ಲಿ ಕೋರಮಂಗಲದ ಸಂಸ್ಥೆಯೂ ಸಮೀಕ್ಷೆ ನಡೆಸಿದೆ ಎನ್ನಲಾಗಿದೆ.

‘ಮತದಾರರ ಸಂಪೂರ್ಣ ವಿವರವನ್ನು ಸಂಸ್ಥೆ ಸಂಗ್ರಹಿಸಿತ್ತು. ಪ್ರತ್ಯೇಕ ಆ್ಯಪ್ ಸಹ ಬಳಸಿತ್ತು. ಮತದಾರರ ಮಾಹಿತಿ, ಹೆಸರು, ವಿಳಾಸ, ಜಾತಿ, ಮತದಾರರು ಕಳೆದ ಚುನಾವಣೆಯಲ್ಲಿ ಯಾವ ಪಕ್ಷವನ್ನು ಬೆಂಬಲಿಸಿದ್ದರು? ಈ ಬಾರಿಯ ಯಾವ ಪಕ್ಷ ಬೆಂಬಲಿಸಲಿದ್ದಾರೆ? ಎನ್ನುವ ಮಾಹಿತಿ ಸಂಗ್ರಹಿಸಿತ್ತು’ ಎಂದು ಮೂಲಗಳು ತಿಳಿಸಿವೆ.

‘ಸಂಸ್ಥೆಯು ತನ್ನ ವೆಬ್‌ಸೈಟ್‌ನಲ್ಲಿ ಮತದಾರರ ಮೊಬೈಲ್ ಸಂಖ್ಯೆ ಹಾಕಿತ್ತು. ₹ 25 ಸಾವಿರ ನೀಡಿದರೆ ಲಾಗ್‌ಇನ್ ಐಡಿ ನೀಡುತ್ತಿತ್ತು’ ಎಂದು ಹೇಳಿವೆ.

‘ಸುಮಾರು 6 ಲಕ್ಷದಷ್ಟು ಮತದಾರರ ಮಾಹಿತಿ ಈ ಸಂಸ್ಥೆಯ ಬಳಿ ಇತ್ತು. ಇದು ನಿರ್ದಿಷ್ಟ ಕ್ಷೇತ್ರದ ಮತದಾರರ ಪಟ್ಟಿಯೇ ಅಥವಾ ಅಲ್ಲವೇ ಎಂಬುದು ತನಿಖೆಯಿಂದ ಗೊತ್ತಾಗಬೇಕಿದೆ’ ಎಂದು ತಿಳಿಸಿವೆ.

‘ಅಭ್ಯರ್ಥಿಗಳಿಗೆ ಆಮಿಷ’: ಈ ವೆಬ್‌ಸೈಟ್ ತೆರೆದ ತಕ್ಷಣವೇ ಸ್ವಾಗತ ಎಂಬ ಸಂದೇಶ ಬರುತ್ತಿದೆ. ಜತೆಗೆ, ₹ 25 ಸಾವಿರದ ಜತೆಗೆ ₹ 500 ಸೇವಾ ಶುಲ್ಕ ನೀಡಿದರೆ ನಿಮ್ಮ ಕ್ಷೇತ್ರದ ಮತದಾರರ ವಿವರ ಪಡೆದು ಈ ಚುನಾವಣೆಯಲ್ಲಿ ಜಯಿಸಿ’ ಎಂಬ ಆಮಿಷದ ಜಾಹೀರಾತು ಬರುತ್ತಿದೆ. ಮೊಬೈಲ್ ಸಂಖ್ಯೆಗೆ ಪ್ರಣಾಳಿಕೆ, ಧ್ವನಿ ಮುದ್ರಿಕೆ ಹಾಗೂ ಸಂದೇಶ ಕಳುಹಿಸಬಹುದು. ಹಣವು ಜಮೆ ರೂಪದಲ್ಲಿ ಇರಲಿದೆ. ಒಂದು ವೇಳೆ ಸೋತರೆ ಹಣ ವಾಪಸ್ ಪಡೆಯಬಹುದು’ ಎಂದು ಸಂಸ್ಥೆ ಹೇಳಿಕೊಂಡಿದೆ.

ಪಕ್ಷೇತರ ಅಭ್ಯರ್ಥಿಯೊಬ್ಬರು ನೀಡಿದ್ದ ಸುಳಿವು ಆಧರಿಸಿ ‘ದಿ ನ್ಯೂಸ್ ಮಿನಿಟ್’ ವೆಬ್‌ಸೈಟ್ ತನಿಖಾ ವರದಿ ಪ್ರಕಟಿಸಿತ್ತು. ಬಳಿಕ ಚುನಾವಣಾಧಿಕಾರಿಯು ಪೊಲೀಸರಿಗೆ ದೂರು ನೀಡಿದ್ದರು.

ಸೋಲಲೆಂದು ಶೆಟ್ಟರ್ ಅಭ್ಯರ್ಥಿಯಾಗಿಸಿಲ್ಲ: ಖರ್ಗೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಜಗದೀಶ ಶೆಟ್ಟರ್ ಅವರು ತಮ್ಮ ಸ್ವಾಭಿಮಾನಕ್ಕೆ ಧಕ್ಕೆಯಾಗಿದ್ದರಿಂದ ಕಾಂಗ್ರೆಸ್‌ಗೆ ಬಂದಿದ್ದಾರೆ. ಅವರನ್ನು ಸೋಲಿಸಿದರೆ ಇನ್ನೊಬ್ಬರಿಗೆ ಪಾಠ ಕಲಿಸಿದಂತಾಗುತ್ತದೆ ಎಂದು ಬಿಜೆಪಿಯವರು ಹಣಬಲ, ತೋಳ್ಬಲ ಬಳಕೆ ಮಾಡುತ್ತಿದ್ದಾರೆ. ಸೋಲಲೆಂದು ಅವರನ್ನು ಅಭ್ಯರ್ಥಿಯನ್ನಾಗಿ ಮಾಡಿಲ್ಲ. ನಾವೂನು ಅಷ್ಟೇ ಧೈರ್ಯದಿಂದ ಎದುರಿಸುತ್ತೇವೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಾನು ಲೋಕಸಭಾ ಚುನಾವಣೆಯಲ್ಲಿ ಸೋತೆ. ಅದಕ್ಕೆ ಕಾರಣಗಳು ಗೊತ್ತಿವೆ. ಇನ್ನೊಬ್ಬರತ್ತ ಬೆರಳು ಮಾಡುವುದಿಲ್ಲ. ರಾಜ್ಯಸಭೆ ವಿರೋಧ ಪಕ್ಷದ ನಾಯಕನಾಗಿ ರಾಜ್ಯದ ಜನರ ಧ್ವನಿಯಾಗಿ, ರಾಜ್ಯಕ್ಕೆ ಹೆಸರು ಬರುವ ರೀತಿ ಕೆಲಸ ಮಾಡಿದ್ದೇನೆ’ ಎಂದರು.

‘ಮೋದಿ, ಅಮಿತ್ ಶಾ ಚುನಾವಣೆ ಸಂದರ್ಭದಲ್ಲಿ ರಾಜ್ಯಕ್ಕೆ ಬಂದು ಪ್ರಚಾರ ಮಾಡಿದ್ದರೆ ಯಾವುದೇ ಆಕ್ಷೇಪ ಇರುತ್ತಿರಲಿಲ್ಲ. ಎರಡು ತಿಂಗಳ ಹಿಂದಿನಿಂದಲೇ ಸರ್ಕಾರಿ ಕಾರ್ಯಕ್ರಮಗಳ ಉದ್ಘಾಟನೆಯಲ್ಲಿ, ಸರ್ಕಾರದ ಹಣದಲ್ಲಿ ಪಕ್ಷದ ಪರ ಪ್ರಚಾರ ಮಾಡಿದರು’ ಎಂದು ಆರೋಪಿಸಿದರು. ‘ಮೋದಿ ದೇಶದ ಪ್ರಧಾನಿಯಾಗಿ ರಾಜ್ಯಕ್ಕೆ ಯಾವುದೇ ದೊಡ್ಡ ಕೊಡುಗೆ ಕೊಟ್ಟಿಲ್ಲ. ರಾಜ್ಯದಲ್ಲಿ ಸರ್ಕಾರಿ ಸ್ವಾಮ್ಯದ ಘಟಕಗಳನ್ನು ಒಂದೊಂದಾಗಿ ಮಾರಾಟ ಮಾಡುತ್ತಿದ್ದಾರೆ. ಇದಕ್ಕಾಗಿಯೇ ಈ ಸರ್ಕಾರವನ್ನು ಕಿತ್ತೊಗೆಯಲು ಹೋರಾಟ ಮಾಡುತ್ತಿದ್ದೇವೆ’ ಎಂದರು.

‘ನಮ್ಮನ್ನು ಅಧಿಕಾರಕ್ಕೆ ತಂದರೆ ಮುಸ್ಲಿಮರಿಗೆ ಹೇಗೆ ಮೀಸಲಾತಿ ನೀಡುತ್ತೇವೆ ಎಂದು ತೋರಿಸುತ್ತೇವೆ. ಅದಕ್ಕೆ ಬೇಕಾದ ಎಲ್ಲ ರೂಪುರೇಷೆಗಳು ನಮ್ಮ ಬಳಿ ಇವೆ’ ಎಂದರು. ‘ಮುಂದಿನ ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷ ಕರ್ನಾಟಕವನ್ನು ಎಟಿಎಂ ಆಗಿ ಬಳಸಿಕೊಳ್ಳಲಿದೆ’ ಎಂಬ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯಿಸಿ, ‘ನಾವು ಎಟಿಎಂ ಆದರೆ, ರಾಜ್ಯದ ಖಜಾನೆಯ ಕೀಲಿಕೈ ಅವರ ಬಳಿಯೇ ಇದೆ. ಪೆಗಾಸಸ್‌ನಿಂದ ಎಲ್ಲರ ಮೇಲೂ ಕಣ್ಣಿಡುತ್ತಿದ್ದಾರೆ. ಇಂಥ ಹೇಳಿಕೆಗಳಿಂದ ಜನರ ದಾರಿ ತಪ್ಪಿಸಬಾರದು’ ಎಂದರು.

ಅಂಚಿಗೆ ತಳ್ಳಲ್ಪಟ್ಟ ಮುಸ್ಲಿಂ ನಾಯಕತ್ವ

• ವೈ.ಗ. ಜಗದೀಶ್

ಒಂದು ಕಾಲದಲ್ಲಿ ಧರ್ಮದ ಹಂಗಿಲ್ಲದೇ ಎಲ್ಲರೂ ಒಪ್ಪುವಂತಹ ಅನೇಕ ಮುಸ್ಲಿಂ ನಾಯಕರು ಕರ್ನಾಟಕದ ರಾಜಕೀಯದಲ್ಲಿ ಸಕ್ರಿಯರಾಗಿದ್ದರು. ಯಾವಾಗ ಬಿಜೆಪಿ ಪ್ರಬಲವಾಗಿ ನೆಲೆಯೂರಿತೋ ಆ ಬಳಿಕ ಮುಸ್ಲಿಂ ನಾಯಕತ್ವವೆಂಬುದು ಎಲ್ಲ ಪಕ್ಷಗಳಲ್ಲೂ ಅಂಚಿಗೆ ತಳ್ಳಲ್ಪಟ್ಟು, ಈಗ ಪ್ರಾತಿನಿಧಿಕವೆಂಬ ಸ್ಥಿತಿಗೆ ತಲುಪಿದೆ. ಧಾರ್ಮಿಕ ಭೇದವಿಲ್ಲದೇ ಎಲ್ಲರನ್ನೂ ಸಮಾನರಾಗಿ ಕಾಣುವ ಮನೋಭಾವ ಜನಮಾನಸದಲ್ಲಿ ಇನ್ನೂ ಭದ್ರವಾಗಿಯೇ ಇದೆ. ಯಾರು ಎಷ್ಟೇ ಮಸಲತ್ತು ನಡೆಸಿದರೂ ಸರ್ವಜನಾಂಗದ ಶಾಂತಿಯ ತೋಟವಾಗಿ ಕರ್ನಾಟಕ ಉಳಿದಿದೆ. ಹಾಗಿದ್ದರೂ ಮುಸ್ಲಿಮರನ್ನು ಕಾಪಾಡುವುದಕ್ಕಾಗಿಯೇ ಉದ್ಭವಿಸಿದ್ದೇವೆ ಎಂದು ಬಿಂಬಿಸಿಕೊಂಡು ಪ್ರತ್ಯೇಕತೆಯನ್ನು ಬೇರೂರಿಸಲು ಯತ್ನಿಸುತ್ತಿರುವ ಎಸ್‌ಡಿಪಿಐ ಹಾಗೂ ಅಸಾಸುದ್ದೀನ್ ಒವೈಸಿಯ ಎಐಎಂಐಎಂ ಪಕ್ಷಗಳು ಮುಸ್ಲಿಂ ನಾಯಕತ್ವವನ್ನು ಮುಖ್ಯವಾಹಿನಿಯಿಂದ ಆಚೆಗೆ ಕರೆದೊಯ್ಯುವ ಅಪಾಯಕಾರಿ ಹಾದಿಯನ್ನು ಹಿಡಿದಿವೆ.

ಚಿತ್ರದುರ್ಗದ ಚಳ್ಳಕೆರೆಯವರಾದರೂ ಬೆಂಗಳೂರಿನಲ್ಲಿ ತಮ್ಮ ರಾಜಕೀಯ ನೆಲೆ ಕಂಡುಕೊಂಡಿದ್ದ ಸಿ.ಕೆ. ಜಾಫರ್ ಷರೀಫ್ ಮುಸ್ಲಿಂ ಸಮುದಾಯದ ಆಚೆಗೂ ತಮ್ಮ ಪ್ರಭಾವಳಿಯನ್ನು ವಿಸ್ತರಿಸಿಕೊಂಡಿದ್ದರು. ಪ್ರಭಾವಿ ನಾಯಕನಾಗಿ ಬೆಳೆದರೂ ಮುಖ್ಯಮಂತ್ರಿಯಾಗುವ ಅವಕಾಶ ಅವರಿಗೆ ಲಭಿಸಲಿಲ್ಲ. ರಾಮಕೃಷ್ಣ ಹೆಗಡೆ ಅವರ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದ ಅಬ್ದುಲ್ ನಜೀರ್ ಸಾಬ್, ಕುಡಿಯುವ ನೀರಿನ ಕೊರತೆ ನೀಗಲು ಸ್ಪಂದಿಸಿ 'ನೀರ್ ಸಾಬ್' ಎಂದೇ ಜನಪ್ರಿಯರಾಗಿದ್ದರು. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗೆ ಮುನ್ನುಡಿ ಬರೆದಿದ್ದರು.

ಅಪ್ಪಟ ಕನ್ನಡ ಹೋರಾಟಗಾರ, ಕವಿ, ಲೇಖಕರೂ ಆಗಿದ್ದ ಬಿ.ಎಂ. ಇದಿನಬ್ಬ ಉಳ್ಳಾಲ ಕ್ಷೇತ್ರದಿಂದ ಮೂರು ಬಾರಿ ಗೆದ್ದಿದ್ದರು. ಇದೇ ಮಾದರಿಯೊಳಗೆ ಜಾತಿ ಧರ್ಮದ ಹಂಗಿಲ್ಲದೇ ಎಲ್ಲ ಸಮುದಾಯದವರ ವಿಶ್ವಾಸವನ್ನು ಗಳಿಸಿ ಗೆಲ್ಲುತ್ತಿದ್ದವರು ಮೈಸೂರಿನ ಅಜೀಜ್ ಸೇಠ್, ಚಿಕ್ಕಮಗಳೂರಿನ ಸಗೀರ್ ಅಹಮದ್, ದಕ್ಷಿಣ ಕನ್ನಡದ ಯು.ಟಿ. ಫರೀದ್ ಹಾಗೂ ಬಿ.ಎ. ಮೊಯಿದ್ದೀನ್, ಹುಮನಾಬಾದ್‌ನ ಮೆರಾಜುದ್ದೀನ್ ಪಟೇಲ್. ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರೂ ಆಗಿದ್ದ ಮೆರಾಜುದ್ದೀನ್ ಪಟೇಲ್, ಸಚಿವರಾಗಿಯೂ ಕೆಲಸ ಮಾಡಿದ್ದರು. ಈಗ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರಾಗಿರುವ ಸಿ.ಎಂ. ಇಬ್ರಾಹಿಂ ಸಮಸ್ತ ಮುಸ್ಲಿಮರ ನಾಯಕ ಎಂದು ಗುರುತಿಸಿಕೊಳ್ಳದಿದ್ದರೂ ಕನ್ನಡ ಭಾಷೆಯ ಮೇಲಿನ ಹಿಡಿತ, ಮೊನಚು ಹಾಗೂ ಹಾಸ್ಯ ಬೆರೆತ ಮಾತುಗಾರಿಕೆಯಿಂದ ಚಿರಪರಿಚಿತರು. ಕಲ್ಯಾಣ ಕರ್ನಾಟಕ ಭಾಗದಲ್ಲಿ ತಮ್ಮದೇ ಪ್ರಭಾವ ಹೊಂದಿದ್ದವರು ಕಾಂಗ್ರೆಸ್‌ನ ಖಮರುಲ್ ಇಸ್ಲಾಂ. ಕೇಂದ್ರ ಸಚಿವರಾಗಿದ್ದ ರೆಹಮಾನ್ ಖಾನ್, ಎಸ್.ಎಂ. ಕೃಷ್ಣ ಸರ್ಕಾರದಲ್ಲಿ ಸಚಿವರಾಗಿದ್ದ ನಫೀಜಾ ಫಸಲ್, ಜನತಾದಳ, ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿದ್ದ ಆರ್. ರೋಷನ್ ಬೇಗ್, ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್, ಮಾಜಿ ಸಚಿವರಾದ ತನ್ವೀರ್ ಸೇಠ್, ಜಮೀರ್ ಅಹಮದ್ ಖಾನ್, ರಿಜ್ವಾನ್ ಅರ್ಷದ್, ಎನ್.ಎ. ಹ್ಯಾರಿಸ್ ಇವರನ್ನೂ ಗುರುತಿಸಬಹುದು.

ದಶಕಗಳ ಹಿಂದೆ ಕರ್ನಾಟಕದ ರಾಜಕಾರಣ ಎಲ್ಲ ಸಮುದಾಯವನ್ನೂ ಒಳಗೊಳ್ಳುವ ರೀತಿಯಲ್ಲಿತ್ತು. ಈಗ ಮುಸ್ಲಿಂ ಸಮುದಾಯವನ್ನು ಪ್ರಭಾವಿಸುವ ಅನೇಕ ಶಾಸಕರಿದ್ದರೂ ಆ ಪೈಕಿ, ಕರ್ನಾಟಕದ ವಿವಿಧ ಕ್ಷೇತ್ರಗಳನ್ನು ಪ್ರಭಾವಿಸುವ ಶಕ್ತಿ ಇರುವುದು ಜಮೀರ್ ಅಹಮದ್ ಖಾನ್‌ಗೆ ಮಾತ್ರ. ಇವರು ಜೆಡಿಎಸ್‌ನಿಂದ ಕಾಂಗ್ರೆಸ್ ಬಂದ ಬಳಿ, ಮುಸ್ಲಿಂ ನಾಯಕತ್ವಕ್ಕಾಗಿ ಕಾಂಗ್ರೆಸ್‌ನೊಳಗೆ ಪೈಪೋಟಿ ನಡೆದು, ಅಲ್ಲಿಯೂ ವಿಘಟನೆಯ ಪರ್ವ ಆರಂಭವಾಯಿತು.

ಪ್ರತ್ಯೇಕತೆಯ ಕಡೆ: ಮುಸ್ಲಿಂ ನಾಯಕರನ್ನು ಧರ್ಮಕ್ಕೆ ಸೀಮಿತಗೊಳಿಸುವ, ಅವರನ್ನು ಒಳಗೊಳ್ಳುವ ರಾಜಕಾರಣದ ಬದಲು ಪ್ರತ್ಯೇಕಿಸಿ ನೋಡಿ 'ಮೀಸಲು' ನಿಗದಿ ಮಾಡುವುದು ಆರಂಭವಾಗಿದ್ದು ಬಿಜೆಪಿ ಪ್ರಬಲಗೊಂಡ ಮೇಲೆಯೇ. ಅಲ್ಲಿಯವರೆಗೆ ಧರ್ಮದ ಆಧಾರದಲ್ಲಿ ರಾಜಕೀಯ ಪ್ರಾತಿನಿಧ್ಯ ನೀಡುವ ಪರಿಪಾಟ ಕರ್ನಾಟಕದಲ್ಲಿ ಇರಲಿಲ್ಲ. ಜಾಫರ್ ಷರೀಫ್, ನಜೀರ್ ಸಾಬ್, ಅಜೀಜ್ ಸೇಠ್, ಸಗೀರ್, ಮೊಯಿದ್ದೀನ್ ಸಚಿವರಾಗಿದ್ದು ಮುಸ್ಲಿಂ ಎಂಬ ಕಾರಣಕ್ಕಿಂತ ಅವರಲ್ಲಿನ ಸಾಮರ್ಥ್ಯದ ಕಾರಣಕ್ಕೆ.

ಹಿಂದೂಗಳ ಮತ ಕ್ರೋಡೀಕರಣಕ್ಕಾಗಿ ಮುಸ್ಲಿಮರ ವಿರುದ್ಧ ದ್ವೇಷ ಬಿತ್ತುವ, ಅವರನ್ನು ದೇಶವಿರೋಧಿಗಳು ಎಂದು ಬಿಂಬಿಸುವ ಕೆಲಸ ದೇಶದಲ್ಲಿ ನಡೆದಂತೆ ಕರ್ನಾಟಕದಲ್ಲಿಯೂ ನಡೆಯಿತು. ಆದರೆ, ಅದಕ್ಕೆ ಸುದೀರ್ಘ ಇತಿಹಾಸವೇನೂ ಇಲ್ಲ. ಏಕೆಂದರೆ 2008ರಲ್ಲಿ ಅಧಿಕಾರಕ್ಕೇರಿದ ಬಿ.ಎಸ್. ಯಡಿಯೂರಪ್ಪ ಅವರು, ಪ್ರಾಧ್ಯಾಪಕರಾಗಿದ್ದ ಮುಮ್ತಾಜ್ ಅಲಿ ಖಾನ್ ಅವರನ್ನು ವಿಧಾನಪರಿಷತ್ತಿಗೆ ನಾಮನಿರ್ದೇಶನ ಮಾಡಿ ಸಚಿವರಾಗಿಯೂ ನೇಮಿಸಿದ್ದರು. ತಮ್ಮ ಸಂಪುಟದಲ್ಲಿಯೂ ಅಲ್ಪಸಂಖ್ಯಾತರೊಬ್ಬರು ಸಚಿವರಾಗಿರಬೇಕು ಎಂಬ ಔದಾರ್ಯ ಮತ್ತು ಸೌಹಾರ್ದ ಭಾವನೆ ಯಡಿಯೂರಪ್ಪ ಅವರಿಗೆ ಇತ್ತು.

ಆರಂಭದ ದಶಕಗಳಲ್ಲಿ ಹುಬ್ಬಳ್ಳಿಯ ಈದ್ಗಾ ಮೈದಾನ, ಚಿಕ್ಕಮಗಳೂರಿನ ಬಾಬಾಬುಡನ್‌ಗಿರಿ ಹಾಗೂ ಕರಾವಳಿಯಲ್ಲಿ ಗೋಸಾಗಣೆ ವಿರುದ್ಧ ಹಾಗೂ ಪ್ರೇಮಿಗಳನ್ನು ಬೆನ್ನಟ್ಟಿ ಹೊಡೆಯುವ ಮತೀಯ ಗೂಂಡಾಗಿರಿಯಂತಹ ವಿಷಯಗಳನ್ನು ಮುಂದೆ ತಂದು ಕೋಮು ಧ್ರುವೀಕರಣದ ಯತ್ನ ನಡೆದಿತ್ತು. ಅದರ ಫಲವೂ ಬಿಜೆಪಿಗೆ ದಕ್ಕಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದು, ಬಿಜೆಪಿ ತೀವ್ರ ಹಿನ್ನಡೆ ಅನುಭವಿಸಿದ ಬಳಿಕ ಮುಸ್ಲಿಂ ಸಮುದಾಯವನ್ನು ಗುರಿಯಾಗಿಸುವ ರಾಜಕಾರಣ, 'ಹಿಂದು'ಗಳ ಹತ್ಯೆಯಾಗುತ್ತದೆ ಎಂಬ ಹುಯಿಲು, ಗೋಮಾಂಸ ವಿಚಾರ, ಟಿಪ್ಪು ಜಯಂತಿಗೆ ವಿರೋಧದಂತಹ ವಿಷಯಗಳು ಮುನ್ನೆಲೆಗೆ ಬಂದವು. 2018ರ ಚುನಾವಣೆಯಲ್ಲಿ ಇದೇ ಪ್ರಮುಖ ವಿಷಯವಾಗಿ ಕಾಡಿತ್ತು. ಅದು ಬಿಜೆಪಿಗೆ ಬಲ ತಂದುಕೊಟ್ಟರೆ, ಕಾಂಗ್ರೆಸ್‌ಗೆ ದೊಡ್ಡ ಮಟ್ಟದ ಹಿನ್ನಡೆಯನ್ನು ಉಂಟು ಮಾಡಿತು.

2019ರಲ್ಲಿ ಯಡಿಯೂರಪ್ಪ ಮತ್ತೆ ಮುಖ್ಯಮಂತ್ರಿಯಾದಾಗ ಮತೀಯ ವಿಷಯಗಳನ್ನು ಮುಂದಿಟ್ಟು ರಾಜಕಾರಣ ಮಾಡುವ ಕೆಲಸಕ್ಕೆ ಚುರುಕು ನೀಡಲಾಯಿತು. ಆದರೆ, ಟಿಪ್ಪು ಜಯಂತಿಯನ್ನು ಸರ್ಕಾರದಿಂದ ಆಚರಿಸುವ ತೀರ್ಮಾನ ಕೈಬಿಡಲಾಯಿತು. ಯಡಿಯೂರಪ್ಪ ರಾಜೀನಾಮೆ ಕೊಟ್ಟ ಬಳಿಕ, ಸರ್ಕಾರಿ ಪ್ರಾಯೋಜಿತ 'ದ್ವೇಷ ರಾಜಕಾರಣ', 'ಕ್ರಿಯೆಗೆ ಪ್ರತಿಕ್ರಿಯೆ'ಯ ಹೆಸರಿನಲ್ಲಿ ಹೊಸ ಕಸುವಿನಿಂದ ಎದ್ದುನಿಂತಿತು. ಪಠ್ಯಪರಿಷ್ಕರಣೆ ಇದರ ಮೊದಲ ಅಧ್ಯಾಯವಾದರೆ, ಹಿಜಾಬ್, ಆಜಾನ್, ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧದಂತಹ ಹೊಸ ವಿವಾದವನ್ನು ಹುಟ್ಟಿಸಲಾಯಿತು. ಸರ್ಕಾರದ ಕೊನೆಯ ದಿನಗಳಲ್ಲಿ ಮುಸ್ಲಿಮರಿಗೆ ಇದ್ದ ಶೇ 4ರಷ್ಟು ಮೀಸಲಾತಿಯನ್ನು ಕಿತ್ತುಕೊಂಡು ಅದನ್ನು ಲಿಂಗಾಯತ-ಒಕ್ಕಲಿಗರ ತಲಾ ಶೇ 2ರಷ್ಟು ಹಂಚುವ ತೀರ್ಮಾನ ಮಾಡಲಾಯಿತು.

2013–2018ರ ಅವಧಿಯಲ್ಲಿ ಬಿಜೆಪಿಯ ಕೋಮು ಧ್ರುವೀಕರಣದ ಯತ್ನವನ್ನು ಏರುಧ್ವನಿಯಲ್ಲಿ ಖಂಡಿಸುತ್ತಿದ್ದ ಕಾಂಗ್ರೆಸ್ ನಾಯಕರು, ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ತಮ್ಮ ವರಸೆಯನ್ನೇ ಬದಲಿಸಿದರು. ಸಿದ್ದರಾಮಯ್ಯ ಮಾತ್ರ ಸರ್ಕಾರದ ನಡೆಯನ್ನು ಗಟ್ಟಿ ಮಾತುಗಳಲ್ಲಿ ಖಂಡಿಸುತ್ತಾ ಬಂದರು. ಈ ವಿವಾದಗಳ ಬಗ್ಗೆ ಮಾತನಾಡಿದರೆ, ತಮ್ಮ ಕ್ಷೇತ್ರದ ಹಿಂದುಗಳ ಮತಗಳು ಎಲ್ಲಿ ದೂರವಾಗುತ್ತವೋ ಎಂಬ ಭಯದಲ್ಲಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿದಂತೆ ಬಹುತೇಕರು ಮೌನಕ್ಕೆ ಶರಣಾದರು. ಸಿದ್ದರಾಮಯ್ಯ ಬಿಟ್ಟರೆ, ಈ ವಿಷಯದಲ್ಲಿ ಸ್ಪಷ್ಟ ನಿಲುವು ತೆಗೆದುಕೊಂಡು, ಅದನ್ನು ಏರಿದ ಧ್ವನಿಯಲ್ಲಿ ಟೀಕೆ ಮಾಡುತ್ತಾ ಬಂದವರು ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ.

ಚುನಾವಣೆ ಹೊತ್ತಿಗೆ, ಈ ಭಯ ಮತ್ತಷ್ಟು ಹೆಚ್ಚಾಯಿತು. ಮುಸ್ಲಿಮರನ್ನು ಸಹೋದರರಂತೆ ಕಾಣುತ್ತಿದ್ದವರು ಅವರನ್ನು ಪರಕೀಯರಂತೆ ನೋಡಲು ಆರಂಭಿಸಿದರು. ರಾಜಕೀಯ ಪಕ್ಷದ ಒಳಮನೆಯೊಳಗೆ ಕೂಡ ಇಂತಹದೇ ವಾತಾವರಣ ಸೃಷ್ಟಿಯಾಯಿತು. ಹೀಗೆ ಸಮುದಾಯವನ್ನು ಪ್ರತ್ಯೇಕಿಸಿ ನೋಡುವ, ಅವರನ್ನು ಸಮಸ್ತ ಜನರ ನಾಯಕರೆಂದು ಒಪ್ಪಿಕೊಳ್ಳದ ಪರಿಸ್ಥಿತಿಯನ್ನು ವ್ಯವಸ್ಥಿತವಾಗಿ ನಿರ್ಮಾಣಮಾಡಲಾಯಿತು. ಇದರ ಲಾಭವನ್ನು ಎಸ್‌ಡಿಪಿಐ ಪಡೆಯಿತು.

ಜಾಫರ್ ಷರೀಫ್ · ಅಬ್ದುಲ್ ನಜೀರ್ ಸಾಬ್ · ಅಜೀಜ್ ಸೇಠ್ · ಮೆರಾಜುದ್ದೀನ್ ಪಟೇಲ್ · ಸಿ.ಎಂ. ಇಬ್ರಾಹಿಂ · ರೋಷನ್ ಬೇಗ್ · ಖಮರುಲ್ ಇಸ್ಲಾಂ · ಬಿ.ಎಂ.ಇದಿನಬ್ಬ
ಬಿ.ಎ.ಮೊಯ್ದೀನ್ · ಯು.ಟಿ.ಫರೀದ್ · ಸಗೀರ್ ಅಹಮದ್ · ತನ್ವೀರ್ ಸೇಠ್ · ಯು.ಟಿ. ಖಾದರ್ · ಜಮೀರ್ ಅಹಮದ್ · ನಫೀಜಾ ಫಸಲ್ · ರಿಜ್ವಾನ್ ಅರ್ಷದ್

2023: ಮುಸ್ಲಿಂ ಅಭ್ಯರ್ಥಿಗಳು

ಕಾಂಗ್ರೆಸ್	ಜೆಡಿಎಸ್	ಬಿಜೆಪಿ	KRS PARTY	AAP
14	22	00	03	18

15ನೇ ವಿಧಾನಸಭೆಯಲ್ಲಿ ಮುಸ್ಲಿಂ ಶಾಸಕರು

- ಯು.ಟಿ. ಖಾದರ್
- ಎನ್.ಎ. ಹ್ಯಾರೀಸ್
- ಜಮೀರ್ ಅಹಮ್ಮದ್ ಖಾನ್
- ರಹೀಂ ಖಾನ್
- ಕನೀಜ್ ಫಾತಿಮಾ
- ರಿಜ್ವಾನ್ ಅರ್ಷದ್
- ತನ್ವೀರ್ ಸೇಠ್
- ರೋಷನ್ ಬೇಗ್*

*ಮೈತ್ರಿ ಸರ್ಕಾರ ಬೀಳಿಸುವ ಸಮಯದಲ್ಲಿ ರಾಜೀನಾಮೆ. ಅವರು ಪ್ರತಿನಿಧಿಸುತ್ತಿದ್ದ ಕ್ಷೇತ್ರದಿಂದ ರಿಜ್ವಾನ್ ಆಯ್ಕೆ

ಎಸ್‌ಡಿಪಿಐ: ಧರ್ಮಕೇಂದ್ರಿತ ರಾಜಕೀಯ

ಬಿಜೆಪಿ ನಡೆಸುತ್ತಿರುವ ಹಿಂದೂ ಮತಗಳ ಧ್ರುವೀಕರಣಕ್ಕೆ ಪರ್ಯಾಯವಾಗಿ ತಲೆ ಎತ್ತಿದ್ದೇ ಸೋಶಿಯಲ್ ಡೆಮಾಕ್ರಾಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ). 'ದ್ವೇಷ ರಾಜಕಾರಣ' ಪ್ರಬಲವಾಗಿರುವ ಕರ್ನಾಟಕದ ಕರಾವಳಿ, ಕೊಡಗು, ಶಿವಮೊಗ್ಗದಲ್ಲಿ ತನ್ನ ಚಟುವಟಿಕೆ ಆರಂಭಿಸಿದ ಎಸ್‌ಡಿಪಿಐ, 'ಮುಸ್ಲಿಮರು ಅಭದ್ರತೆಯಿಂದ ನರಳುತ್ತಿದ್ದಾರೆ, ಅವರಿಗೆ ರಕ್ಷಣೆ ಇಲ್ಲ' ಎಂದು ಬಿಂಬಿಸುತ್ತಾ ಧರ್ಮಕೇಂದ್ರಿತ ರಾಜಕೀಯವನ್ನು ಮುನ್ನೆಲೆಗೆ ತಂದಿತು. ಸಂಘಪರಿವಾರದ ಸಂಘಟನೆಗಳ ಕಾರ್ಯಕರ್ತರ ಜತೆ ಮುಖಾಮುಖಿಯಾದ ಎಸ್‌ಡಿಪಿಐನ ಮೂಲ ಸಂಘಟನೆ ಪಿಎಫ್‌ಐ, ದ್ವೇಷ ರಾಜಕಾರಣವನ್ನೇ ತನ್ನ ಬಂಡವಾಳವಾಗಿಸಿಕೊಂಡಿತು. ಬಿಜೆಪಿಯನ್ನು ಎದುರಿಸಲು ಹಾಗೂ ಕಾಂಗ್ರೆಸ್, ಜೆಡಿಎಸ್‌ಗೆ ಪರ್ಯಾಯವಾಗಿ ತಾವು ಒಗ್ಗಟ್ಟಾಗಬೇಕು ಎಂಬ ಹುಸಿ ಧರ್ಮಾಂಧತೆಯನ್ನೂ ಬಿತ್ತಿತು. ಎಸ್‌ಡಿಪಿಐಯನ್ನು ಬಿಜೆಪಿ ಪ್ರಬಲವಾಗಿ ವಿರೋಧಿಸುತ್ತಿದೆಯಾದರೂ ಚುನಾವಣೆಗಳಲ್ಲಿ ಕಮಲ ಪಕ್ಷ ಅರಳಲು ಎಸ್‌ಡಿಪಿಐ ಮತ ವಿಭಜನೆಯ ರಾಜಕೀಯ ನೆರವಾಗಿದೆ ಎಂಬುದು ರಹಸ್ಯವೇನಲ್ಲ. ಕಾಂಗ್ರೆಸ್ ಕೆಲವು ಕಡೆ ಸೋಲಲು ಎಸ್‌ಡಿಪಿಐ ಕಾರಣವಾಗಿದ್ದೂ ಉಂಟು. ಮುಸ್ಲಿಮರ ವಿಷಯದಲ್ಲಿ ಕಾಂಗ್ರೆಸ್ ನಾಯಕರ ನಡೆಯೂ ಇದಕ್ಕೆ ಪೂರಕ ಅಂಶಗಳಲ್ಲಿ ಒಂದು. ಎಸ್‌ಡಿಪಿಐ ನಡೆ, ಮುಸ್ಲಿಂ ನಾಯಕತ್ವ ಪ್ರತ್ಯೇಕವಾಗಿ ಗುರುತಿಸಿಕೊಳ್ಳುವ ತಂತ್ರಗಾರಿಕೆಯನ್ನೂ ಹೊಂದಿದೆ.

ಸೆಲೆಬ್ರಿಟಿ ಮಾತು

ವ್ಯಕ್ತಿ ನೋಡಿ ಮತ ಹಾಕಿ



ಶಿವಾಜಿ ಕಾಗಣೀಕರ್
ಪರಿಸರವಾದಿ, ಬೆಳಗಾವಿ

ಪ್ರಸ್ತುತ ರಾಜಕಾರಣದಲ್ಲಿ 'ಪಕ್ಷಾಂತರ' ಪ್ರಕ್ರಿಯೆ ಸಾಮಾನ್ಯ. ಇಂದು ಒಂದು ಪಕ್ಷದೊಂದಿಗೆ ಗುರುತಿಸಿಕೊಂಡ ವ್ಯಕ್ತಿ, ನಾಳೆ ಮತ್ತೊಂದು ಪಕ್ಷದಲ್ಲಿರುತ್ತಾರೆ. ಹಾಗಾಗಿ ಪ್ರತಿ ಚುನಾವಣೆಯಲ್ಲಿ ನಾವು ಉತ್ತಮ ಚಾರಿತ್ರ್ಯ ಹೊಂದಿದ ವ್ಯಕ್ತಿ ನೋಡಿ ಮತ ಚಲಾಯಿಸಬೇಕೇ ಹೊರತು, ಯಾವುದೇ ಪಕ್ಷವನ್ನಲ್ಲ. ಆಗ ಸಮಾಜಕ್ಕೊಬ್ಬ ಒಳ್ಳೆಯ ಜನಪ್ರತಿನಿಧಿ ಸಮರ್ಪಿಸಿದ ಶ್ರೇಯವೂ ನಮ್ಮದಾಗುತ್ತದೆ. ವಿವಿಧ ಕಾರಣ ನೀಡಿ ಮತದಾನದಿಂದ ಯಾರೂ ದೂರ ಉಳಿಯಬಾರದು.

ಮಾತಿನೇಟು

75 ವರ್ಷಗಳಲ್ಲಿ ಕಾಂಗ್ರೆಸ್ ಏನನ್ನೂ ಮಾಡಿಲ್ಲ, ನಾವೇ ಈಗ ದೇಶ ಹೊತ್ತು ನಿಂತಿದ್ದೇವೆ ಎಂಬರ್ಥದಲ್ಲಿ ಮೋದಿ ಮಾತನಾಡುತ್ತಾರೆ. ನೆಹರೂ ಅವರ ಕಾಲದಿಂದಲೂ ದೇಶದಾದ್ಯಂತ ಅಣೆಕಟ್ಟೆಗಳು, ವಿಶ್ವವಿದ್ಯಾಲಯಗಳು, ಉದ್ಯಮ ವಲಯವನ್ನು ಕಟ್ಟಿದ್ದು ಯಾರು? ಸ್ವತಃ ಮೋದಿಗೇ, ಅಮಿತ್ ಶಾಗೆ ನಾವೇ ಶಿಕ್ಷಣ ಕೊಡಿಸಿದ್ದೇವೆ.

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ



ಆರು ಸಲ ಶಾಸಕನಾಗಿ ಆಯ್ಕೆಯಾಗಿದ್ದೇನೆ. ದೊಡ್ಡ ನಾಯಕನಾಗಿ ಬೆಳೆದಿದ್ದೇನೆ. ಇಷ್ಟು ವರ್ಷ ರಾಜಕೀಯದಲ್ಲಿ ಇದ್ದ ನನ್ನನ್ನು ಒಂದು ಕ್ಷಣದಲ್ಲಿ ಹೊಸಕಿಹಾಕಿದರೆ ಸುಮ್ಮನೆ ಇರಬೇಕಾ? ಗುಲಾಮನ ರೀತಿಯಲ್ಲಿ ಇರಬೇಕಾ?

ಜಗದೀಶ ಶೆಟ್ಟರ್, ಕಾಂಗ್ರೆಸ್ ಅಭ್ಯರ್ಥಿ, ಹು–ಧಾ ಸೆಂಟ್ರಲ್ ಕ್ಷೇತ್ರ

ಕಾಂಗ್ರೆಸ್ ಭದ್ರಕೋಟೆಗಳಾಗಿದ್ದ ರಾಯ್‌ಬರೇಲಿ ಮತ್ತು ಅಮೇಠಿಯನ್ನೇ ಬಿಜೆಪಿಯವರು ಬಿಟ್ಟಿಲ್ಲ. ಇನ್ನು ಕನಕಪುರವನ್ನು ಬಿಡುತ್ತೇವೆಯೇ. ರಾಜಕೀಯದಲ್ಲಿ ಯಾರಿಗೂ ಭದ್ರಕೋಟೆ ಇರುವುದಿಲ್ಲ. ಜನರನ್ನು ಭಯದಲ್ಲಿಟ್ಟು ಗೆದ್ದ ತಕ್ಷಣ ಭದ್ರಕೋಟೆ ಎಂದು ಭಾವಿಸಬಾರದು.

ಸಿ.ಟಿ. ರವಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಪ್ರಜಾ ಪತ್ರ

ಬಂಡವಾಳ ಹೂಡುವವರಿಗೆ ಮತ ಬೇಡ

ಮತದಾನ ಪ್ರತಿಯೊಬ್ಬ ಪ್ರಜೆಯ ಆದ್ಯ ಕರ್ತವ್ಯ. ಸಮಾಜದ ಎಲ್ಲ ವರ್ಗಕ್ಕೂ ಸಂವಿಧಾನ ಸಮಾನವಾಗಿ ಮತದಾನ ಮಾಡುವ ಹಕ್ಕು ನೀಡಿದೆ. ಮತದಾರರು ಯಾವುದೇ ಆಮಿಷಗಳಿಗೆ ಬಲಿಯಾಗಬಾರದು. ಇದು ಪ್ರಜಾಪ್ರಭುತ್ವಕ್ಕೆ ಮಾಡುವ ಅವಮಾನ. ವಿದ್ಯಾವಂತರು, ಐಟಿ–ಬಿಟಿ ಸಿಬ್ಬಂದಿ ಮತದಾನದಿಂದ ಹಿಂದೆ ಸರಿಯುತ್ತಿರುವುದು ಪ್ರಜಾಪ್ರಭುತ್ವಕ್ಕೆ ದೊಡ್ಡ ಹಿನ್ನಡೆಯಾಗಿದೆ. ಶೇಕಡ 100ರಷ್ಟು ಮತದಾನ ಮಾಡಿದರೆ ಮಾತ್ರ ಪ್ರಜಾಪ್ರಭುತ್ವದ ಹಬ್ಬ ಅರ್ಥಪೂರ್ಣ ಆಚರಣೆಯಾಗುತ್ತದೆ. ರಾಜಕೀಯಕ್ಕೆ ಬಂಡವಾಳ ಹೂಡಿ ಬಂಡವಾಳ ಮಾಡುವವರಿಗೆ ಮತ ಹಾಕಬಾರದು. ಜನಸಾಮಾನ್ಯರ ಸಮಸ್ಯೆಗಳನ್ನು ಪರಿಹರಿಸುವ ಶಕ್ತಿ ಮತ್ತು ಮನಸ್ಸು ಇರುವ ಅಭ್ಯರ್ಥಿಗೆ ಮತದಾನ ಮಾಡಬೇಕು.

ಹರೀಶ್ ಸಿ.ಕೆ., ಹಾಸನ

ಜನರ ಕಷ್ಟಕ್ಕೆ ಸ್ಪಂದಿಸುವವರಿಗೆ ಮತ ನೀಡಿ

ದೇಶದ ಪ್ರಜೆಗಳ ಕಷ್ಟಗಳನ್ನು ಯಾರೂ ಕೇಳುವುದಿಲ್ಲ. ಚುನಾವಣೆ ಬಂದಾಗ ರಾಜಕಾರಣಿಗಳು ಕೇಳೋದು ಮತ ಮಾತ್ರ. ಪ್ರತಿಯೊಬ್ಬರಿಗೂ ಕುಡಿಯುವ ನೀರು, ಶೌಚಾಲಯ, ವಸತಿ , ಉದ್ಯೋಗ, ಶಿಕ್ಷಣ, ರಸ್ತೆ, ಆರೋಗ್ಯ ಸೌಲಭ್ಯ ಕಲ್ಪಿಸಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದು ದಶಕಗಳೇ ಕಳೆದರೂ ಸಾಕಷ್ಟು ಮಂದಿಗೆ ಮೂಲಸೌಲಭ್ಯ ದೊರೆತಿಲ್ಲ. ಜನಪ್ರತಿನಿಧಿಗಳು ಈ ಬಗ್ಗೆ ಗಮನ ಹರಿಸಿಲ್ಲ. ಹಾಗಾಗಿ ಸಾರ್ವಜನಿಕರ ಕಷ್ಟಗಳಿಗೆ ಸ್ಪಂದಿಸುವವರನ್ನು ಆಯ್ಕೆ ಮಾಡಬೇಕು. ಮತ ಚಲಾಯಿಸುವುದನ್ನು ಮರೆಯಬಾರದು.

ದಿವ್ಯಶ್ರೀ ಹೊನ್ನಯ್ಯ, ಚಾಮರಾಜನಗರ

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಸತ್ತರಷ್ಟೇ ಸಿಗತಾವ ಅನುಕಂಪದ ವೋಟು

• ಸಿದ್ದಯ್ಯ ಹಿರೇಮಠ

ಚುನಾವಣಾ ಪುರಾಣ

'ಅಣ್ಣಾ ನಮ್ ಕ್ಯಾಂಡಿಡೇಟ್‌ಗೆ ಮತದಾರರಿಂದ ಅನುಕಂಪ ಹರಿದು ಬರುತ್ತಂತ?'

ಭ್ರಷ್ಟಾಚಾರ ಪ್ರಕರಣದಲ್ಲಿ ಸಿಕ್ಕಾಕ್ಯಂಡು, ತಿಂಗಳುಗಟ್ಟಲೇ ಜೈಲಲ್ಲಿದ್ದು, ಷರತ್ತುಬದ್ಧ ಜಾಮೀನಿನ ಮೇಲೆ ಹೊರಬಂದ ಬಳಿಕ ಒಂದು ಕೈ ನೋಡಿದರಾಯ್ತು ಅಂತ ಎಲೆಕ್ಷನ್‌ಗೆ ನಿಂತ ತನ್ನ ನೆಚ್ಚಿನ ನಾಯಕನ ಪರ ಪ್ರಚಾರದಲ್ಲಿ ತೊಡಗಿದ್ದ ಸಿಂಗ್ನಳ್ಳಿ ಸೀನ ಒಗ್ಗರಣೆ ಮೆಣ್ಸಿನ್‌ಕಾಯ್ ಅಂಗಡಿ ಮುಂದೆ ಕುಳಿತಿದ್ದ ಆಪ್ತಮಿತ್ರ ಕಿಟಗೇರಿ ಕೊಟ್ರಪ್ಪನ ಹತ್ರ ಈ ರೀತಿ ಅಚ್ಚರಿಯಿಂದ ಕೇಳಿದ.

'ನೀ ಬಲು ಬೇಸದಿಯಲ್ಲಲೇ.. ಎಂಥಾ ಪ್ರಶ್ನೆ ಅಂತ ಕೇಳ್ತಿಗೀ ಅಂತೀನಿ. ನಂಗೊತ್ತಿದ್ದಿದ್ದು ಏನಪಂದ್ರ, ಗಂಡ ಸತ್ತ್ರ ಹೆಣತಿಗೆ, ಅಪ್ಪ ಸತ್ತ್ರ ಮಗನೀಗೆ, ಅಣ್ಣ ಸತ್ತ್ರ ತಮ್ಮನಿಗಿ ಟಿಕೆಟ್ ಕೊಟ್ರಪಂದ್ರ ಜನಾ ಕಣ್ಣೀರಿಗೆ ಕರಗಿ, ಮರಗಿ ಅನುಕಂಪ ತೋರ್ಸಿ ವೋಟ್ ಹಾಕ್ತಾರ. ನೀ ಏನ್ ಹೇಳ್ತಲೇ.. ರೊಕ್ಕಾ ತಿಂದ್ ಸಿಗೆಬಿದ್ದು, ಜೈಲಿಗ್ಯೋಗಿ ಬಂದಾತಗ ಯಾರಾನಾ ಮರಗ್ತಾರನ್ಲೇ?

ಮರುಪ್ರಶ್ನೆ ಕೇಳಿದೊಡನೇ ತಬ್ಬಿಬ್ಬಾದ ಸೀನ ಸುಧಾರಿಸಿಕೊಂಡು ಕೇಳಿದ, 'ಏನ್ಯೆತೆ ಗೊತ್ತಿಲ್ಲಪಾ. ನಮ್ ಊರಾಕ ಒಂದಿಬ್ರು ಹಂಗ್ ಮಾತ್ಯಾಡದ್ ಕೇಳಸ್ಯಂಡು ಕಣಪೀಜಾಗಿದ್ಯಾ. ನಿನ್ನ ಹತ್ರ ಡೌಟ್ ಕ್ಲಿಯರ್ ಮಾಡ್ಕ್ಯಂಡ್ರಾತಂತ ಕೇಳಿದ್ಯಾ. ಅದಕ್ಯಾಕ ಇಷ್ಟ್ ಸಿಟ್ಟಿಗೇಳ್ತ್ಯಲೇ?

ಮತ್ತೊಂದು ಪ್ರಶ್ನೆ ಧುತ್ತನೇ ಬಂದಿದ್ದರಿಂದ ಸುಧಾರಿಸಿಕೊಂಡ ಮತ್ತೆ ಮಾತಿಗಿಳಿದ ಕೊಟ್ರಪ್ಪ, 'ಹೋಗಲೇ ನೀ ಹೇಳಿದಂಗ ಮಂದ್ಯೆಲ್ಲ ಮರಗಿ ಇಂಥೌರ್ಗೆಲ್ಲಾ ವೋಟ್ ಕೊಟ್ ಬುಟ್ರ, ಸೋಲೌರರೆ ಯಾರಂತೀನಿ. ಈಗ್ ನೋಡಪಾ ಎಲೆಕ್ಷನ್‌ಗೆ ನಿಂತೌರೆಲ್ಲಾ ಯಾರ್ ಸುದ್ಧದಾರಲೇ, ಒಂದಿಲ್ಲಾ ಒಂದ್ ಸಲಾ ಜೈಲಿಗೆ ಹೋಗಿ ಬಂದೌರು, ಇನ್ನೇನ್ ಜೈಲಿಗೆ ಹೋಗೌರೇ ಅಲ್ಲೇನು. ಹಿಂದ್ಕ, ಚಳವಳಿ, ಹೋರಾಟಾ ಅಂತ್ಯಲ್ಲಾ ಬೀದೀಗಿಳ್ದು ಜೈಲಿಗೋಗಿ ಬಂದೌರಿಗಿ ಜನ್ಯೆಲ್ಲಾ ಹುಚ್ಚೆದ್ದು ವೋಟ್ ಹಾಕ್ತಿದ್ರಂತ ಕೇಳೀನಿ. ಮರ್ಡರ್ ಮಾಡಿ ಒಳಗೋದೌರು, ಮಣ್ಣ್ ಗ್ಯಬರಿ ಒಳಗೋದೌರು, ರೊಕ್ಕಾ ತಿಂದು, ಔರಿವ್ರ ಜ್ಯತಿಗಿ ಜ್ಯಗಳಾಡಿ ಒಳಗೋದೌರು ಎಲೆಕ್ಷನ್ನಿಗಿ ನಿಂತ್ರ ಯಾರ್ ವೋಟ್ ಹಾಕ್ತಾರಪಂತೀನಿ? ಇಂಥಾ ಹುಚ್ಚುಚ್ ಪ್ರಶ್ನೆ ಕೇಳ್ತ್ಯಲ್ಲಾ ನೀ ಎಂಥಾ ಗಣಮಗಂತೀನಿ?

'ಹೌದಪಾ ನೀ ತಿಳದಾತದಿ.. ಹೇಳ್ತಿದಿ ಅಂತ ಕೇಳಿದ್ಯಾ. ಮತ್ತ, ಈಟ್ ದಿನಿದ್ದ ಪಾರ್ಟಿ ಬುಟ್ಟು ಬ್ಯಾರೇ ಪಾರ್ಟಿಗೆ ಹೋದೌರಿಗೂ ಅನುಕಂಪ ತೋರಸ್ತಾರಂತ ಸುದ್ದಿ ಐತ್ಯಲ್ಲಾ, ಅಂಥೌರಿಗ್ಯಲ್ಲಾ ವೋಟ್ ಬೀಳಕುಲ್ಲಂತೀಗ್ಯಾ? ಡೌಟ್ ಕ್ಲಿಯರ್ ಆದಂತೆ ಕಾಣಿಸದೆ ಸೀನ ಮತ್ತೆ ಕೇಳೇಬಿಟ್ಟ.

ಲೇ ಒಮ್ಮೆ ಹೇಳಿದ್ದನ್ನ ಸರಿಯಾಗಿ ಕೇಳಿಸ್ಗ್ಯಳಲೇ ಖೋಡಿ.. ನಾ ಮೊದಲೇ ಹೇಳಿಲ್ಲಾ, ಸತ್ತರಷ್ಟ ಅನುಕಂಪ ಸಿಗತೈತಿ ಅಂತ. ನಿನ್ ಮಾತ್ ಕೇಳೀದ್ರಪಂದ್ರ, ಅನುಕಂಪ ಹುಡಿಕ್ಯಂಡ್ ಬರಬೌದಂತ ತಿಳಕಂಡು ಮುಂದಿನ ಸಲಾ ಎಲೆಕ್ಷನ್‌ನ್ಯಾಗ ನಿಲ್ಲಬೇಕಂತ ಯಾರನರ ಸಾಯ್ ಬಡದು, ಒಳಗೋಗಿ ಬರಂಗ ಕಾಣ್ತೆಪಾ. ಈಗಿದ್ದ ಪಾರ್ಟ್ಯಾಗ ಇದ್ರೇ ವೋಟ್ ಬೀಳಂಗಿಲ್ಲ ಅಂಬೋ ಸ್ಥಿತಿ ಆದ. ಅದರಾಗ ನೀ ಪಾರ್ಟಿ ಬುಟ್ಕೋದ್ರ ವೋಟ್ ಬೀಳ್ತಾವಾ ಅಂತ ಕೇಳ್ತ್ಯಲ್ಲ.. ಬರೇ ಇದೇ ಆತು ನಡ್ಯಲೇ ಪುಗ್ಸಟ್ಟೆ ಏನೇನಾರ ಕೇಳಬ್ಯಾಡಾ ತಿನ್ನಾಕ ಏನರ ಆರ್ಡರ್ ಮಾಡು...' ಅಂತ ಕೊಟ್ರಪ್ಪ ಸೀನನಿಗೇ ಆರ್ಡರ್ ಮಾಡಿದ.

ಚಿತ್ರ: ಭಾವು ಪತ್ತಾರ್

ಕಿಚ್ಚ ಸುದೀಪ್ ಪ್ರಚಾರದ ರಂಗು

ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ತೋರಣಗಲ್ಲು ಸಮೀಪದ ದೊಡ್ಡ ಅಂತಾಪುರದಲ್ಲಿ ನಟ ಕಿಚ್ಚ ಸುದೀಪ್ ಬಿಜೆಪಿ ಅಭ್ಯರ್ಥಿ ಶಿಲ್ಪಾ ರಾಘವೇಂದ್ರ ಪರ ಬುಧವಾರ ಪ್ರಚಾರ ನಡೆಸಿದರು

'ರಾಜ್ಯವನ್ನು ಅವಮಾನಿಸಿದ ಶಾ'

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದರೆ ದಂಗೆಗಳು ಏಳುತ್ತವೆ ಎಂದು ಹೇಳಿ ಅಮಿತ್ ಶಾ ಅವರು ಕರ್ನಾಟಕದ ಜನತೆಯನ್ನು ಅವಮಾನಿಸಿದ್ದಾರೆ. ನಾವೇನು ದಂಗೆಕೋರರೇ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಿಡಿಕಾರಿದರು.

ಚಿಕ್ಕೋಡಿಯಲ್ಲಿ ಬುಧವಾರ ಕಾಂಗ್ರೆಸ್ ಅಭ್ಯರ್ಥಿಗಳ ಪ್ರಚಾರ ಸಭೆ ಯಲ್ಲಿ ಮಾತನಾಡಿದ ಅವರು, 'ಕೇಂದ್ರ ಗೃಹಮಂತ್ರಿಯಾದವರೇ ಈ ರೀತಿ ಹೇಳಿಕೆ ನೀಡಿದ್ದು ಅಚ್ಚರಿ. ಕರ್ನಾಟಕದ ಜನರೆಲ್ಲ ದಂಗೆಕೋರರು, ಅವರನ್ನು ಮೋದಿ ಮಾತ್ರ ನಿಯಂತ್ರಣ ಮಾಡುತ್ತಿದ್ದಾರೆ ಎಂದು ಅಮಿತ್ ಶಾ ನೇರವಾಗಿ ಹೇಳಿದ್ದಾರೆ. ರಾಜ್ಯದ ಜನರ ಮನಸ್ಸಿಗೆ ನೋವು ನೀಡಿದ್ದಾರೆ' ಎಂದು ದೂರಿದರು.

'ಜಾತಿ, ಧರ್ಮಗಳ ಮಧ್ಯೆ ಕಲಹ ತಂದಿಟ್ಟು ದಂಗೆ ಎಬ್ಬಿಸುವವರು ಬಿಜೆಪಿಯವರು. ಮುಂದಿನ ಬಾರಿ ಬಿಜೆಪಿಯನ್ನು ಅಧಿಕಾರಕ್ಕೆ ತರದಿದ್ದರೆ ದಂಗೆ ಎಬ್ಬಿಸುತ್ತೇವೆ ಎಂದು ಅವರೇ ಹೇಳಿಕೊಂಡಿದ್ದಾರೆ. ಈ ವಿಷಯವನ್ನು ಇಷ್ಟಕ್ಕೇ ಬಿಡುವುದಿಲ್ಲ. ಅಮಿತ್ ಶಾ ವಿರುದ್ಧ ಸುಪ್ರೀಂ ಕೋರ್ಟಿನಲ್ಲಿ ದಾವೆ ಹೂಡುತ್ತೇವೆ. ಹೇಳಿಕೆ ಕುರಿತು ಚುನಾವಣಾ ಆಯೋಗಕ್ಕೂ ದೂರು ಸಲ್ಲಿಸುತ್ತೇವೆ' ಎಂದು ಖರ್ಗೆ ಹೇಳಿದರು.

ಅಮಿತ್ ಶಾಗೆ ಈಗ 55 ವರ್ಷ ವಯಸ್ಸು. ಆದರೆ, ನಾನು ಶಾಸಕ–ಸಂಸದನಾಗಿಯೇ 55 ವರ್ಷ ಕಳೆದಿದ್ದೇನೆ. ಅವರು ಈಗ ದೇಶ ನೋಡುತ್ತಿದ್ದಾರೆ, ಎಂದೂ ಹರಿಹಾಯ್ದರು.

'ನಾರಾಯಣಭಾಯಿ ಕಚಾಡಿಯಾ ಎಂಬ ಗುಜರಾತಿನ ಸಂಸದ ವೈದ್ಯರೊಬ್ಬರ ಮೇಲೆ ಹಲ್ಲೆ– ನಿಂದನೆ ಮಾಡಿದ್ದ. ಜಾತಿ ನಿಂದನೆ ಪ್ರಕರಣದಲ್ಲಿ ಅವನಿಗೆ ಮೂರೂವರೆ ವರ್ಷ ಶಿಕ್ಷೆ ಆಗಿದೆ. ಇದೂವರೆಗೂ ಆ ವ್ಯಕ್ತಿ ಸಂಸತ್‌ನಲ್ಲಿದ್ದಾರೆ. ಆದರೆ, ರಾಹುಲ್ ಗಾಂಧಿ ಅವರು ವಿರೋಧ ಪಕ್ಷವನ್ನು ಟೀಕಿಸಿದ್ದಕ್ಕೆ ಅವರ ಮೇಲೆ ಕೇಸ್ ಹಾಕಿ, ಸಂಸತ್ ಸ್ಥಾನದಿಂದಲೇ ಅನರ್ಹ ಮಾಡಿದರು.

ಜೆಡಿಎಸ್‌ಗೆ ಮರಳಿದ ಆಲ್ಕೋಡ್

ಬೆಂಗಳೂರು: ಮಾಜಿ ಸಚಿವ ಆಲ್ಕೋಡ್ ಹನುಮಂತಪ್ಪ ಅವರು ಕಾಂಗ್ರೆಸ್ ತೊರೆದು ಬುಧವಾರ ಜೆಡಿಎಸ್ ಪಕ್ಷಕ್ಕೆ ಮರಳಿದರು. ಅವರನ್ನು ಜೆಡಿಎಸ್ ರಾಜ್ಯ ಘಟಕದ ಕಾರ್ಯಾಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಜೆಡಿಎಸ್ ಪ್ರಧಾನ ಕಚೇರಿ ಜೆ.ಪಿ. ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರು ಹನುಮಂತಪ್ಪ ಅವರನ್ನು ಜೆಡಿಎಸ್‌ಗೆ ಬರಮಾಡಿಕೊಂಡರು.

ಹನುಮಂತಪ್ಪ, ಕುಮಾರಸ್ವಾಮಿ ನೇತೃತ್ವದ ಜೆಡಿಎಸ್‌–ಬಿಜೆಪಿ ಸಮ್ಮಿಶ್ರ ಸರ್ಕಾರದಲ್ಲಿ ಸಚಿವರಾಗಿದ್ದರು. 2018ರಲ್ಲಿ ಕಾಂಗ್ರೆಸ್ ಸೇರಿದ್ದರು. ಈ ಚುನಾವಣೆಯಲ್ಲಿ ಲಿಂಗಸಗೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು. ಟಿಕೆಟ್ ಕೈತಪ್ಪಿರುವ ಕಾರಣದಿಂದ ಕಾಂಗ್ರೆಸ್ ತೊರೆದು ಜೆಡಿಎಸ್‌ಗೆ ಮರಳಿದ್ದಾರೆ.

ಕ್ಷೇತ್ರದ ಕೂಗು

- **ಕ್ಷೇತ್ರ: ಯಲ್ಲಾಪುರ–ಮುಂಡಗೋಡ**
- **ಶಾಸಕ:ಶಿವರಾಮ ಹೆಬ್ಬಾರ** (ಬಿಜೆಪಿ)

▸ ಯಲ್ಲಾಪುರ ಪಟ್ಟಣಕ್ಕೆ ಕುಡಿಯುವ ನೀರು ಪೂರೈಕೆ ಯೋಜನೆ ಬೇಡಿಕೆ ಇದೆ. ಮುಂಡಗೋಡ ತಾಲ್ಲೂಕಿನಲ್ಲಿ ಕೆರೆ ತುಂಬಿಸುವ ಯೋಜನೆ ಪೂರ್ಣಗೊಂಡಿಲ್ಲ ಎಂಬ ಕೂಗಿದೆ.

- **ಕ್ಷೇತ್ರ: ಶಿರಸಿ–ಸಿದ್ದಾಪುರ**
- **ಶಾಸಕ: ವಿಶ್ವೇಶ್ವರ ಹೆಗಡೆ ಕಾಗೇರಿ** (ಬಿಜೆಪಿ)

▸ ಶಿರಸಿ ಪ್ರತ್ಯೇಕ ಜಿಲ್ಲೆ ರಚನೆ, ತಾಳಗುಪ್ಪ–ಹುಬ್ಬಳ್ಳಿ ರೈಲ್ವೆ ಯೋಜನೆ, ಕಾಲುಸಂಕಗಳ ನಿರ್ಮಾಣ, ಸಿದ್ದಾಪುರದಲ್ಲಿ ಸಾರಿಗೆ ಘಟಕ ಸ್ಥಾಪನೆಯ ಬೇಡಿಕೆಗಳಿವೆ. ಶಿರಸಿಯ ಹಳೆ ಬಸ್ ನಿಲ್ದಾಣ ಕಾಮಗಾರಿ ನನೆಗುದಿಗೆ ಬಿದ್ದಿದೆ.

- **ಕ್ಷೇತ್ರ: ಕಾರವಾರ–ಅಂಕೋಲಾ**
- **ಶಾಸಕಿ:ರೂಪಾಲಿ ನಾಯ್ಕ** (ಬಿಜೆಪಿ)

▸ ಕಾರವಾರ ತಾಲ್ಲೂಕಿನ ಮುಡಗೇರಿಯಲ್ಲಿ ಕೈಗಾರಿಕೆ ವಸಾಹತು ಪ್ರದೇಶದಲ್ಲಿ ಕೈಗಾರಿಕೆ ಸ್ಥಾಪಿಸಬೇಕು, ನೌಕಾನೆಲೆ ಸಂತ್ರಸ್ತ ಕುಟುಂಬಗಳಿಗೆ ಉದ್ಯೋಗ ಒದಗಿಸಬೇಕು ಎಂಬ ಬೇಡಿಕೆ ಇದೆ. ಉಳಗಾ–ಕೆರವಡಿ, ಮಂಜುಗುಣಿ ಸೇತುವೆ ಕಾಮಗಾರಿ ಅರ್ಧಕ್ಕೆ ನಿಂತಿವೆ. ಹುಬ್ಬಳ್ಳಿ–ಅಂಕೋಲಾ ರೈಲ್ವೆ ಯೋಜನೆ ಜಾರಿಗೆ ಒತ್ತಡವಿದೆ.

- **ಕ್ಷೇತ್ರ: ಕುಮಟಾ–ಹೊನ್ನಾವರ**
- **ಶಾಸಕ:ದಿನಕರ ಶೆಟ್ಟಿ** (ಬಿಜೆಪಿ)

▸ ಕುಮಟಾದಲ್ಲಿ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ, ಹೊನ್ನಾವರದಲ್ಲಿ ಸಾರಿಗೆ ಘಟಕ, ಶರಾವತಿ ಕುಡಿಯುವ ನೀರಿನ ಯೋಜನೆ ಭರವಸೆ ಈಡೇರಿಲ್ಲ. ಗೋಕರ್ಣದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕ ಸೌಕರ್ಯಗಳ ಬೇಡಿಕೆ ಇದೆ.

- **ಕ್ಷೇತ್ರ:ಭಟ್ಕಳ–ಹೊನ್ನಾವರ**
- **ಶಾಸಕ:ಸುನೀಲ ನಾಯ್ಕ** (ಬಿಜೆಪಿ)

▸ ಭಟ್ಕಳ ಪಟ್ಟಣದಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಅಂಡರಪಾಸ್ ನಿರ್ಮಾಣ, ಮುರ್ಡೇಶ್ವರ ತಾಣ ಅಭಿವೃದ್ಧಿಯ ಬೇಡಿಕೆ ಇದೆ. ಭಟ್ಕಳದ ಸರ್ಕಾರಿ ಆಸ್ಪತ್ರೆ ಮೇಲ್ದರ್ಜೆಗೇರಿಸುವ ಭರವಸೆ ಈಡೇರಿಲ್ಲ.

- **ಕ್ಷೇತ್ರ: ಹಳಿಯಾಳ–ಜೊಯಿಡಾ**
- **ಶಾಸಕ: ಆರ್.ವಿ.ದೇಶಪಾಂಡೆ** (ಕಾಂಗ್ರೆಸ್)

▸ ಹಳಿಯಾಳ ಪಟ್ಟಣದಲ್ಲಿ ಒಳಚರಂಡಿ ಯೋಜನೆ ಅಪೂರ್ಣವಾಗಿದೆ. ದಾಂಡೇಲಿ ನಗರಕ್ಕೆ ನೀರು ಪೂರೈಕೆ ಯೋಜನೆ, ಒಳಚರಂಡಿ ನಿರ್ಮಿಸುವ ಅಗತ್ಯವಿದೆ.



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನಮ್ಮ ಅಂತರಂಗದ ಪುಸ್ತಕ ತೆರೆಯುವ ತನಕ ಉಳಿದೆಲ್ಲಾ ಪುಸ್ತಕಗಳು ನಿಷ್ಪ್ರಯೋಜಕ.

-ಸ್ವಾಮಿ ವಿವೇಕಾನಂದ

ಕುಸ್ತಿಪಟುಗಳ ದೂರುಗಳಿಗೆ ಸ್ಪಂದಿಸದ ಸರ್ಕಾರದ ಧೋರಣೆ ಅಕ್ಷಮ್ಯ

ಒಲಿಂಪಿಕ್ ಕೂಟದಲ್ಲಿ ತ್ರಿವರ್ಣ ಧ್ವಜವು ಹೆಮ್ಮೆಯಿಂದ ಹಾರಾಡುವಂತಹ ಸಾಧನೆ ಮಾಡಿರುವ ಭಾರತದ ಕುಸ್ತಿಪಟುಗಳು ಸ್ವದೇಶದಲ್ಲಿಯೇ ತಮಗಾದ ಅನ್ಯಾಯದ ವಿರುದ್ಧ ಧ್ವನಿಯೆತ್ತಿ ಬೀದಿಗಿಳಿದಿದ್ದಾರೆ. ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಮತ್ತು ಕೆಲವು ಕೋಚ್‌ಗಳು ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ, ಅವರನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿ ದೆಹಲಿಯಲ್ಲಿ ನಾಲ್ಕು ದಿನಗಳಿಂದ ಧರಣಿ ನಡೆಸುತ್ತಿದ್ದಾರೆ. ಇಷ್ಟಾಗಿಯೂ ಬ್ರಿಜ್ ಭೂಷಣ್ ವಿರುದ್ಧ ದೆಹಲಿ ಪೊಲೀಸರು ಎಫ್‌ಐಆರ್ ಕೂಡ ದಾಖಲಿಸಿಲ್ಲ. ಕೇಂದ್ರದ ಆಡಳಿತಾರೂಢ ಬಿಜೆಪಿ ಸಂಸದರೂ ಆಗಿರುವ ಬ್ರಿಜ್ ಭೂಷಣ್ ಪ್ರಭಾವಕ್ಕೆ ಪೊಲೀಸರು ಮಣಿದಿದ್ದಾರೆ ಎನ್ನುವ ಅನುಮಾನಗಳು ವ್ಯಕ್ತವಾಗಿವೆ. ವಿಶ್ವ ಚಾಂಪಿಯನ್‌ಷಿಪ್, ಒಲಿಂಪಿಕ್ಸ್ ಹಾಗೂ ಏಷ್ಯನ್ ಕ್ರೀಡಾಕೂಟಗಳಲ್ಲಿ ಪದಕ ಜಯಿಸಿರುವ ಪೈಲ್ವಾನರು ನೀಡಿರುವ ದೂರು ಹಾಗೂ ಮಾಡಿರುವ ಹೋರಾಟಕ್ಕೆ ಬೆಲೆ ಇಲ್ಲದಂತಾಗಿದೆ. ಇದು ನಾಚಿಕೆಗೇಡು. ಅಷ್ಟಕ್ಕೂ ಪೈಲ್ವಾನರ ಬಳಗವು ಈ ರೀತಿ ಧರಣಿ ಕುಳಿತಿರುವುದು ಇದು ಎರಡನೇ ಸಲ. ಮೂರು ತಿಂಗಳ ಹಿಂದೆ ಒಲಿಂಪಿಯನ್ ಕುಸ್ತಿಪಟುಗಳಾದ ವಿನೇಶಾ ಫೋಗಟ್, ಸಾಕ್ಷಿ ಮಲಿಕ್, ರವಿ ದಹಿಯಾ, ಬಜರಂಗ್ ಪೂನಿಯಾ ಸೇರಿದಂತೆ ಹಲವು ಪೈಲ್ವಾನರು ದೆಹಲಿಯ ಜಂತರ್ ಮಂತರ್‌ನಲ್ಲಿ ಮೂರು ದಿನಗಳ ಕಾಲ ಅಹೋರಾತ್ರಿ ಧರಣಿ ನಡೆಸಿದ್ದರು. ಆಗ ಪ್ರಕರಣಗಳ ತನಿಖೆಗೆ ಕೇಂದ್ರ ಸರ್ಕಾರವು ಒಲಿಂಪಿಯನ್ ಬಾಕ್ಸಿಂಗ್ ಪಟು ಮೇರಿ ಕೋಮ್ ಅವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿತ್ತು. ಅಲ್ಲದೆ ಆರೋಪಿ ಬ್ರಿಜ್ ಭೂಷಣ್ ಅವರನ್ನು ತಾತ್ಕಾಲಿಕವಾಗಿ ಅಮಾನತುಗೊಳಿಸುವುದಾಗಿಯೂ ಹೇಳಿತ್ತು. ಆದರೆ ಹೇಳಿದ ರೀತಿ ಸರ್ಕಾರ ನಡೆದುಕೊಳ್ಳಲಿಲ್ಲ. ಅದೇ ಕುಸ್ತಿಪಟುಗಳು ಈಗ ಮತ್ತೆ ರಸ್ತೆಗಿಳಿಯಲು ಸರ್ಕಾರದ ವೈಫಲ್ಯವೇ ಕಾರಣ. ಕುಸ್ತಿಪಟುಗಳು ಈಗ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ಈ ಪ್ರಕರಣದಲ್ಲಿ ದೂರು ನೀಡಿರುವ ಏಳು ಸಂತ್ರಸ್ತೆಯರಲ್ಲಿ ಒಬ್ಬ ಬಾಲಕಿಯೂ ಇದ್ದಾಳೆ. ಅದರಿಂದಾಗಿ ಈ ಪ್ರಕರಣವು ಪೋಕ್ಸೊ ಕಾಯ್ದೆಯಡಿಯಲ್ಲಿಯೂ ಬರುತ್ತದೆ. ಆದರೂ ಈ ಸಂಬಂಧ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿಲ್ಲ. ಆದ್ದರಿಂದಲೇ ದೆಹಲಿ ಪೊಲೀಸರಿಗೆ ಸುಪ್ರೀಂ ಕೋರ್ಟ್ ನೋಟಿಸ್ ಜಾರಿ ಮಾಡಿದೆ.

ಕ್ರೀಡಾರಂಗದಲ್ಲಿ ಹೆಣ್ಣುಮಕ್ಕಳಿಗೆ ಸುರಕ್ಷಿತ ವಾತಾವರಣ ಸೃಷ್ಟಿಸಿಕೊಡುವುದು ಸರ್ಕಾರ ಹಾಗೂ ಸಮಾಜದ ಆದ್ಯ ಕರ್ತವ್ಯ

ಮೇರಿ ಕೋಮ್ ಸಮಿತಿಯು ನೀಡಿದ ವರದಿಯನ್ನೂ ಕ್ರೀಡಾ ಇಲಾಖೆ ಬಹಿರಂಗಪಡಿಸಿಲ್ಲ. ಇದು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಆರೋಪಿಗಳು ರಾಜಾರೋಷವಾಗಿ ತಿರುಗಾಡಿಕೊಂಡಿದ್ದಾರೆ, ಅಲ್ಲದೆ ಸಾಕ್ಷ್ಯ ನಾಶಗೊಳಿಸಲು ಯತ್ನಿಸಿದ್ದಾರೆ ಮತ್ತು ದೂರು ಹಿಂಪಡೆಯಲು ಸಂತ್ರಸ್ತರಿಗೆ ಜೀವಬೆದರಿಕೆ ಹಾಕಿದ್ದಾರೆ ಎಂದೂ ಧರಣಿನಿರತ ಕುಸ್ತಿಪಟುಗಳು ದೂರಿದ್ದಾರೆ. ಆರೋಪಗಳಿಗೆ ಪೂರಕವಾದ ಸಾಕ್ಷ್ಯಾಧಾರಗಳು ತಮ್ಮ ಬಳಿ ಇವೆ ಎಂದೂ ಕ್ರೀಡಾಪಟುಗಳು ಹೇಳಿದ್ದಾರೆ. ಆದರೂ ಕ್ರಮ ಜರುಗಿಸಿಲ್ಲ ಎಂಬುದು ಅವರ ಆಕ್ರೋಶಕ್ಕೆ ಕಾರಣವಾಗಿದೆ. ಏಕೆಂದರೆ, ಆರೋಪಿ ಸಿಂಗ್ ಒಂದು ದಶಕದಿಂದ ಕುಸ್ತಿ ಫೆಡರೇಷನ್ ಅಧ್ಯಕ್ಷರಾಗಿದ್ದಾರೆ. ಸರ್ಕಾರದ ಮಟ್ಟದಲ್ಲಿ ಮತ್ತು ಕ್ರೀಡಾಕ್ಷೇತ್ರದಲ್ಲಿ ಬಹಳ ಪ್ರಭಾವ ಹೊಂದಿದ್ದಾರೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, ಲೈಂಗಿಕ ದೌರ್ಜನ್ಯದ ವಿರುದ್ಧ ಧ್ವನಿ ಎತ್ತಿದ ಕುಸ್ತಿಪಟುಗಳಲ್ಲಿ ಹೆಚ್ಚಿನವರು ಬಿಜೆಪಿಯೊಂದಿಗೆ ಗುರುತಿಸಿಕೊಂಡಿರುವವರು. ಇದೀಗ ಕೆಲವು ವಿರೋಧ ಪಕ್ಷಗಳು ಕುಸ್ತಿಪಟುಗಳ ಹೋರಾಟಕ್ಕೆ ಬೆಂಬಲ ಸೂಚಿಸಿವೆ. ಇದರಿಂದಾಗಿ ಈ ವಿಷಯವು ರಾಜಕೀಯ ಬಣ್ಣ ಪಡೆದುಕೊಳ್ಳುತ್ತಿದೆ. ಆದರೆ, ಯಾರದೋ ಬೆಂಬಲ ಅಥವಾ ರಾಜಕಾರಣಿಗಳ ಆರೋಪ– ಪ್ರತ್ಯಾರೋಪಗಳಿಗಿಂತ ಕ್ರೀಡೆ ಹಾಗೂ ದೇಶದ ಗೌರವ ಪ್ರಮುಖವಾದುದು. ಕುಸ್ತಿ, ಅಥ್ಲೆಟಿಕ್ಸ್ ಸೇರಿದಂತೆ ಬಹಳಷ್ಟು ಕ್ರೀಡೆಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳ ಹೆಣ್ಣುಮಕ್ಕಳು ಪದಕ ಸಾಧನೆಗಳನ್ನೂ ಮಾಡುತ್ತಿದ್ದಾರೆ. ಅದಕ್ಕೆ ಪೂರಕವಾಗಿ ಸುರಕ್ಷಿತ ವಾತಾವರಣ ಸೃಷ್ಟಿಸಿಕೊಡುವುದು ಸರ್ಕಾರ ಹಾಗೂ ಸಮಾಜದ ಕರ್ತವ್ಯ. ಆದರೆ ಖ್ಯಾತನಾಮ ಕುಸ್ತಿಪಟುಗಳು ಎರಡು ಬಾರಿ ರಸ್ತೆಗಿಳಿದು ಧರಣಿ ನಡೆಸಿದರೂ ಆರೋಪಿಗಳ ವಿರುದ್ಧ ಯಾವುದೇ ಕ್ರಮ ಜರುಗಿಸಿಲ್ಲ. ಆಳುವವರ ಇಂತಹ ಧೋರಣೆಯು ದುಷ್ಟಶಕ್ತಿಗಳಿಗೆ ಮತ್ತಷ್ಟು ಬಲ ತುಂಬುತ್ತದೆ. ಇದರಿಂದಾಗಿ ಕ್ರೀಡಾರಂಗದಲ್ಲಿ ಹೆಣ್ಣುಮಕ್ಕಳ ಸಾಧನೆಯ ಓಟಕ್ಕೆ ತಡೆ ಬೀಳುತ್ತದೆ. ಸರ್ಕಾರವು ಕೂಡಲೇ ಎಚ್ಚೆತ್ತುಕೊಂಡು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಹೆಣ್ಣುಮಕ್ಕಳು ಧೈರ್ಯದಿಂದ ಕ್ರೀಡಾಸಾಧನೆ ಮಾಡುವಂತಹ ವಾತಾವರಣ ನಿರ್ಮಿಸಬೇಕು.

ದಿನದ ಟ್ವೀಟ್

ಬೆದರಿಕೆ ಅಲ್ಲವೇ?

‘ಕಾಂಗ್ರೆಸ್ ಗೆದ್ದರೆ ಕರ್ನಾಟಕದಲ್ಲಿ ಗಲಭೆಗಳು ಉಂಟಾಗುತ್ತವೆ’ ಎಂದು (ಕೇಂದ್ರ) ಗೃಹ ಸಚಿವರು ಹೇಳುವುದು ನೇರಾನೇರ ಬೆದರಿಕೆ ಒಡ್ಡಿದಂತೆ ಅಲ್ಲವೇ?

ಅಜಯ್ ಕಾಮತ್, ನೇತ್ರತಜ್ಞ

ಕಿಡಿನುಡಿ

ನನಗೆ ನೋವಾಗಿದೆ ಮತ್ತು ನಮ್ಮ ಬೌದ್ಧಿಕ ವಲಯಕ್ಕೆ ಏನಾಗಿದೆ ಎಂದು ಕೆಲವೊಮ್ಮೆ ಯೋಚಿಸುತ್ತೇನೆ. ಬಲವಂತವಾಗಿ ಬಾಯಿ ಮುಚ್ಚಿಸಲಾಗುತ್ತಿದೆ ಎಂಬುದರ ಬಗ್ಗೆ ದೀರ್ಘ ಲೇಖನಗಳನ್ನು ಬರೆಯಲಾಗಿದೆ. ಆದರೆ, ದೇಶದಲ್ಲಿ ಒತ್ತಾಯದಿಂದ ಬಾಯಿ ಮುಚ್ಚಿಸುವುದು ಹೇಗೆ ಸಾಧ್ಯ? ಇಷ್ಟೊಂದು ವ್ಯಾಪಕ ಪ್ರಮಾಣದ ಅಭಿವ್ಯಕ್ತಿ ಸ್ವಾತಂತ್ರ್ಯ ವಿಶ್ವದ ಬೇರೆ ಯಾವ ದೇಶದಲ್ಲಿಯೂ ಕಂಡುಬರುವುದಿಲ್ಲ.



ಜಗದೀಪ್ ಧನಕರ್, ಉಪರಾಷ್ಟ್ರಪತಿ

25 ವರ್ಷಗಳ ಹಿಂದೆ

ಸೋಮವಾರ, 27-4-1998

• **ಕಲ್ಬುರ್ಗಿಯಲ್ಲಿ ಭಾರಿ ಮಳೆ ಅಪಾರ ಹಾನಿ, 4 ಸಾವು**

ಕಲ್ಬುರ್ಗಿ, ಏ. 26– ಜಿಲ್ಲೆಯಲ್ಲಿ ಹಿಂದೆಂದೂ ಕಾಣದಂತೆ ಆಕಾಶದಿಂದ ಅಪ್ಪಳಿಸಿ ಬಿದ್ದ ಒಂದರಿಂದ ಐದು ಕಿ.ಗ್ರಾಂ. ತೂಕದವರೆಗಿನ ಆಲಿಕಲ್ಲುಗಳ ಆರ್ಭಟ, ಸುರಿಮಳೆ ಮತ್ತು ಬಿರುಗಾಳಿಗೆ ತತ್ತರಿಸಿಹೋದ ಜೇವರ್ಗಿ ತಾಲ್ಲೂಕಿನ ಕಲ್ಲಹಂಗರಗ ಮತ್ತು ನೆಲೋಗಿ ಗ್ರಾಮಗಳಲ್ಲಿ ನಾಲ್ವರು ಮೃತಪಟ್ಟಿದ್ದಾರೆ.

ಸುಮಾರು 50 ಮಂದಿ ಗಾಯಗೊಂಡಿದ್ದಾರೆ. ನೂರಾರು ಕುರಿಗಳು ಸತ್ತು ಸುಮಾರು 70 ಮನೆಗಳು ಹಾನಿಗೊಂಡ ಘಟನೆ ಶನಿವಾರ ರಾತ್ರಿ ಸಂಭವಿಸಿದೆ.

• **ಮೇಲ್ಮನೆಗೆ ದಳದ ಐವರು ಅಭ್ಯರ್ಥಿಗಳ ಸ್ಪರ್ಧೆ**

ಬೆಂಗಳೂರು, ಏ. 26– ರಾಜ್ಯ ವಿಧಾನಸಭೆಯಿಂದ ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ನಡೆಯಲಿರುವ ಚುನಾವಣೆಗೆ ಜನತಾ ದಳದಿಂದ ಅಧಿಕೃತ ಅಭ್ಯರ್ಥಿಗಳಾಗಿ ಕಾನೂನು ಸಚಿವ ಎಂ.ಸಿ.ನಾಣಯ್ಯ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ಎಲ್.ಶಂಕರ್, ಹುಬ್ಬಳ್ಳಿಯ ಇಸ್ಮಾಯಿಲ್ ಕಾಲೇಬುಡ್ಡೆ, ದೇವದುರ್ಗದ ಹನುಮಂತಪ್ಪ ಅಲ್ಕೋಡ್ ಹಾಗೂ ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಕೆ.ಎಚ್.ಶ್ರೀನಿವಾಸ್ ಅವರು ಪಕ್ಷದ ಸಂಸದೀಯ ಮಂಡಳಿ ಸಭೆಯಲ್ಲಿ ಇಂದು ಇಲ್ಲಿ ಸರ್ವಾನುಮತದಿಂದ ಆಯ್ಕೆಯಾದರು.

ಬೆಳಗಾವಿ, ವಿಜಾಪುರ ಶಿಕ್ಷಕರ ಕ್ಷೇತ್ರದಿಂದ ಎಸ್.ಎಸ್.ಪೂಜಾರ್, ಬೆಳಗಾವಿ–ವಿಜಾಪುರ ಪದವೀಧರ ಕ್ಷೇತ್ರದಿಂದ ಎಸ್.ಎಂ.ಲಾತೂರ್ ಅವರನ್ನು ಅಭ್ಯರ್ಥಿಗಳನ್ನಾಗಿ ಮಂಡಳಿಯು ಆಯ್ಕೆ ಮಾಡಿದೆ.

ರಾಜ್ಯಸಭೆಗೆ ಆಯ್ಕೆಯಾದ ಪ್ರೊ. ಎ.ಲಕ್ಷ್ಮೀಸಾಗರ್ ಅವರ ಸ್ಥಾನಕ್ಕೆ ಮುಂದಿನ ತಿಂಗಳು ನಡೆಯುವ ಚುನಾವಣೆಗೆ ಮಾಜಿ ಶಾಸಕ ದಾವಣಗೆರೆಯ ಕೆ.ಮಲ್ಲಪ್ಪ ಅವರನ್ನು ಚುನಾವಣೆಗೆ ನಿಲ್ಲಿಸಲು ನಿರ್ಧರಿಸಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 27-4-1973

• **ನ್ಯಾಯಮೂರ್ತಿ ಶೆಲಾತ್, ಹೆಗಡೆ ಮತ್ತು ಗ್ರೋವರ್ ರಾಜೀನಾಮೆ**

ನವದೆಹಲಿ, ಏ. 26– ತಮ್ಮ ಮೂವರು ಸಹೋದ್ಯೋಗಿಗಳ ಸೇವಾ ಹಿರಿತನವನ್ನು ಹಿಂದೂಡಿ ರಾಷ್ಟ್ರಪತಿಯಿಂದ ಬುಧವಾರ ಭಾರತದ ಸರ್ವೋಚ್ಚ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧೀಶರಾಗಿ ನೇಮಕಗೊಂಡ ಅಜಿತನಾಥ ರಾಯ್ ಅವರು ಇಂದು ಹೊಸ ಹುದ್ದೆಯ ಪ್ರಮಾಣವಚನ ಸ್ವೀಕರಿಸಿದ ಎಂಟು ಗಂಟೆ ಒಳಗಾಗಿ ಮೂವರು ನ್ಯಾಯಾಧೀಶರು– ಶೆಲಾತ್, ಕೆ.ಎಸ್.ಹೆಗಡೆ ಮತ್ತು ಗ್ರೋವರ್ ಅವರು ರಾಜೀನಾಮೆ ಸಲ್ಲಿಸಿದರು.

ಈ ಮೂವರು ನ್ಯಾಯಾಧೀಶರುಗಳ ಸೇವಾ ಹಿರಿತನವನ್ನು ಕಡೆಗಣಿಸಿ ನ್ಯಾಯಮೂರ್ತಿ ಅಜಿತನಾಥ ರಾಯ್ ಅವರನ್ನು ಶ್ರೇಷ್ಠ ನ್ಯಾಯಾಧೀಶರಾಗಿ ಬುಧವಾರ ನೇಮಿಸಲಾಯಿತು.

• **ವಿರೋಧಿ ಪ್ರತಿಭಟನೆ, ಆರೋಪಗಳ ನಡುವೆ ರಾಯ್ ನೇಮಕ ಸಮರ್ಥನೆ**

ನವದೆಹಲಿ, ಏ. 26– ಮೂವರು ಹಿರಿಯ ನ್ಯಾಯಾಧೀಶರನ್ನು ಕಡೆಗಣಿಸಿ ನ್ಯಾಯಮೂರ್ತಿ ಅಜಿತನಾಥ ರಾಯ್ ಅವರನ್ನು ಭಾರತದ ಶ್ರೇಷ್ಠ ನ್ಯಾಯಾಧೀಶರಾಗಿ ನೇಮಕ ಮಾಡಿದ ಬಗ್ಗೆ ಇಂದು ಲೋಕಸಭೆಯಲ್ಲಿ ವಿರೋಧಿ ಸದಸ್ಯರು ಉಗ್ರ ಪ್ರತಿಭಟನೆ ವ್ಯಕ್ತಪಡಿಸಿದರು.

ವಿರೋಧಿ ಸದಸ್ಯರ ಕೂಗಾಟ, ಗೊಂದಲಗಳ ಮಧ್ಯೆ ಕಾನೂನು ಸಚಿವ ಗೋಖಲೆ ಅವರು, ಅಜಿತನಾಥ ರಾಯ್ ಅವರ ನೇಮಕ ಅಕ್ಷರಶಃ ಸಂವಿಧಾನಕ್ಕೆ ಅನುಗುಣವಾಗಿದೆ ಎಂದು ಪ್ರಬಲವಾಗಿ ಸಮರ್ಥಿಸಿಕೊಂಡರು.

ಬಿಜೆಪಿ ಪ್ರಯೋಗ ಈಗಲ್ಲದಿದ್ದರೆ ಇನ್ಯಾವಾಗ? ಪರಿಣಾಮ– ಫಲಾಫಲ?

ಹೋದರೆ ಒಂದು ಕಲ್ಲು, ಬಿದ್ದರೆ ಮಾವು

ಅನುಸಂಧಾನ

ರವೀಂದ್ರ ಭಟ್ಟ

ರಾಜ್ಯ ವಿಧಾನಸಭಾ ಚುನಾವಣೆ ಕಣ ಸಿದ್ಧವಾದ ನಂತರವೂ ಬಿಜೆಪಿ ಅಭ್ಯರ್ಥಿಗಳ ಆಯ್ಕೆಯಲ್ಲಿ ಮಾಡಿದ ಪ್ರಯೋಗ ಕುರಿತ ಮಾತು ಮುಗಿದಿಲ್ಲ. ಅಭ್ಯರ್ಥಿಗಳ ಪಟ್ಟಿ ಜೊತೆಗೆ ಬಿಜೆಪಿ ಕೆಲವು ಅಚ್ಚರಿಗಳನ್ನೂ ಪ್ರಕಟಿಸಿತು. ಹಲವಾರು ಶಾಸಕರಿಗೆ ಟಿಕೆಟ್ ನೀಡಲಿಲ್ಲ. 72 ಕ್ಷೇತ್ರಗಳಲ್ಲಿ ಹೊಸ ಮುಖಗಳಿಗೆ ಮಣೆ ಹಾಕಿತು. ಬಿಜೆಪಿಯ ಈ ನಡೆಯಲ್ಲಿ ದೂರಾಲೋಚನೆ ಮತ್ತು ದುರಾಲೋಚನೆ ಎರಡೂ ಇವೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ದೂರಾಲೋಚನೆ ಏನಪಾ ಎಂದರೆ, ಪಕ್ಷವನ್ನು ಹೊಸದಾಗಿ ಕಟ್ಟುವುದು, ಆಡಳಿತ ವಿರೋಧಿ ಅಲೆಯನ್ನು ಆದಷ್ಟೂ ತಡೆಯುವುದು, ಕರ್ನಾಟಕದಲ್ಲಿ ಬಿಜೆಪಿ ಎಂದರೆ ಅವೇ ಹಳೇ ಮುಖಗಳು ಎನ್ನುವ ಭಾವನೆಯನ್ನು ತೊಡೆದುಹಾಕುವುದು, ಹೊಸ ನಾಯಕತ್ವಕ್ಕೆ ಮಣೆ ಹಾಕುವುದು, ಪಕ್ಷ ಸಂಘಟನೆಯಲ್ಲಿ ಹಳಬರನ್ನು ಬಳಸಿಕೊಂಡು ಹೊಸ ಮುಖಗಳಿಗೆ ಅವಕಾಶ ನೀಡುವುದು. ಒಂದು ರಾಜಕೀಯ ಪಕ್ಷಕ್ಕೆ ಇವೆಲ್ಲಾ ಒಳ್ಳೆಯ ಆಲೋಚನೆಗಳೇ ಹೌದು. ಆದರೆ ವಿರೋಧ ಪಕ್ಷಗಳು ಮತ್ತು ಬಿಜೆಪಿಯಲ್ಲಿಯೇ ಇರುವ ಹಲವರು ಇದು ಬರೀ ದೂರಾಲೋಚನೆ ಅಲ್ಲ, ಇದರ ಹಿಂದೆ ದುರಾಲೋಚನೆಯೂ ಇದೆ ಎಂದು ಗುರುತಿಸುತ್ತಾರೆ.

ಹಾಗಾದರೆ ದುರಾಲೋಚನೆ ಏನು? ಕರ್ನಾಟಕದ ಮಟ್ಟಿಗೆ ಬಿಜೆಪಿ ಎಂದರೆ ಯಡಿಯೂರಪ್ಪ, ಈಶ್ವರಪ್ಪ, ಜಗದೀಶ ಶೆಟ್ಟರ್ ಎಂದಾಗಿತ್ತು. ರಾಜ್ಯದಲ್ಲಿ ಬಿಜೆಪಿ ಪ್ರವರ್ಧಮಾನಕ್ಕೆ ಬಂದಾಗಿನಿಂದ ಈ ಚುನಾವಣೆಯ ಹೊತ್ತಿನವರೆಗೂ ಬಿಜೆಪಿಗೆ ಬಹುಮತ ಬಂದರೆ ಮುಖ್ಯಮಂತ್ರಿ ಯಾರು ಎಂಬ ಪ್ರಶ್ನೆಯ ಅಗತ್ಯವೇ ಇರಲಿಲ್ಲ. ಪಕ್ಷದ ಎಲ್ಲ ನಾಯಕರೂ ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಮಾಡಲು ಶ್ರಮಪಡುತ್ತಿದ್ದರು ಮತ್ತು ಅದು ಸಹಜ ಆಯ್ಕೆಯಾಗಿತ್ತು. ಆದರೆ ಇದೇ ಮೊದಲ ಬಾರಿಗೆ, ಮುಖ್ಯಮಂತ್ರಿ ಯಾರಾಗಬೇಕು ಎನ್ನುವುದಕ್ಕೆ ಸರಳ ಉತ್ತರ ಇಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲೇ ಚುನಾವಣೆ ನಡೆಸುತ್ತೇವೆ ಎಂದು ಕೇಂದ್ರದ ನಾಯಕರು ಹೇಳುತ್ತಾರೆಯೇ ವಿನಾ ಪಕ್ಷ ಅಧಿಕಾರಕ್ಕೆ ಬಂದರೆ ಅವರನ್ನೇ ಮುಖ್ಯಮಂತ್ರಿ ಮಾಡುತ್ತೇವೆ ಎಂದು ನೇರವಾಗಿ ಹೇಳುತ್ತಿಲ್ಲ. ಇಲ್ಲಿದೆ ಅಸಲಿ ಆಟ.

ಮುಖ್ಯಮಂತ್ರಿ ಗಾದಿಗೆ ಟವೆಲ್ ಹಾಕಲು ಬೊಮ್ಮಾಯಿ ಸೇರಿ ಬಹಳಷ್ಟು ಮಂದಿ ಬಿಜೆಪಿಯಲ್ಲಿದ್ದರು. ಅವರಲ್ಲಿ ಮುಖ್ಯರೆಂದರೆ, ಜಗದೀಶ ಶೆಟ್ಟರ್, ಕೆ.ಎಸ್.ಈಶ್ವರಪ್ಪ, ಲಕ್ಷ್ಮಣ ಸವದಿ, ಸಿ.ಟಿ.ರವಿ, ಆರ್.ಅಶೋಕ, ಸಿ.ಎನ್.ಅಶ್ವತ್ಥನಾರಾಯಣ, ವಿ.ಸೋಮಣ್ಣ, ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಕ್ಕೆ ಇಳಿಸುವ ಕಾಲದಲ್ಲಿ ಅರವಿಂದ ಬೆಲ್ಲದ ಮತ್ತು ಬಿ.ವೈ.ವಿಜಯೇಂದ್ರ ಅವರ ಹೆಸರುಗಳೂ ಈ ಸ್ಥಾನಕ್ಕೆ ಕೇಳಿಬಂದಿದ್ದವು. ಆದರೆ ಈಗ ಅವರ ಹೆಸರು ಅಷ್ಟೊಂದು ಚಾಲ್ತಿಯಲ್ಲಿ ಇಲ್ಲ. ಬದಲಾದ ಕಾಲದ ಮಹಿಮೆ ಅದು.

ಚುನಾವಣೆ ಘೋಷಣೆಗೆ ಮೊದಲೇ ಯಡಿಯೂರಪ್ಪ ಅವರು ಚುನಾವಣಾ ರಾಜಕೀಯದಿಂದ ನಿವೃತ್ತರಾಗಿಬಿಟ್ಟರು. ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡುವ ಮೊದಲೇ ಈಶ್ವರಪ್ಪ ಅವರೂ ನಿವೃತ್ತಿ ಘೋಷಿಸಿದರು. ಇದೇ ಸಂದರ್ಭದಲ್ಲಿ, ಜಗದೀಶ ಶೆಟ್ಟರ್ ಅವರಿಗೂ ಟಿಕೆಟ್ ನಿರಾಕರಿಸಲಾಯಿತು. ಯಡಿಯೂರಪ್ಪ, ಈಶ್ವರಪ್ಪ ಅವರಂತೆ ಶೆಟ್ಟರ್ ಅವರು ಹೈಕಮಾಂಡ್ ಮಾತು ಕೇಳಲಿಲ್ಲ. ತಿರುಗಿಬಿದ್ದರು. ಪಕ್ಷ ತ್ಯಜಿಸಿ ಕಾಂಗ್ರೆಸ್ ಪಕ್ಷ ಸೇರಿದರು. ಅದೇ ರೀತಿ ಲಕ್ಷ್ಮಣ ಸವದಿ ಅವರಿಗೂ ಟಿಕೆಟ್ ನೀಡುವುದಿಲ್ಲ ಎಂಬ ಸ್ಪಷ್ಟ ಸಂದೇಶ ಹೈಕಮಾಂಡ್‌ನಿಂದ ಬಂದಿತ್ತು. ಅವರೂ ಕಾಂಗ್ರೆಸ್ ಸೇರಿದರು. ಇದರಿಂದ ಬಿಜೆಪಿಗೆ ಲಾಭವಾಯಿತೋ ನಷ್ಟವಾಯಿತೋ ಎನ್ನುವುದು ಚುನಾವಣಾ ಫಲಿತಾಂಶದ ದಿನ ಗೊತ್ತಾಗುತ್ತದೆ. ಆದರೆ ಬಿಜೆಪಿಯಲ್ಲಿ ಮುಖ್ಯಮಂತ್ರಿ ಗಾದಿ ಆಕಾಂಕ್ಷಿಗಳಲ್ಲಿ ನಾಲ್ಕು ಮಂದಿ ಕಡಿಮೆಯಾದರು ಎನ್ನುವುದು ಸತ್ಯ.

ಹಳೆ ಬೇರು ಹೊಸ ಚಿಗುರು ಎಂಬ ತತ್ವದ ಆಧಾರದಲ್ಲಿ ಟಿಕೆಟ್ ನೀಡಲಾಗಿದೆ, ವಯಸ್ಸಾದವರನ್ನು ಹಿಂದಕ್ಕೆ ಸರಿಸುವುದು, ವಂಶಾಡಳಿತ ಕೊನೆಗಾಣಿಸುವುದು, ಸ್ವಚ್ಛ, ಪ್ರಾಮಾಣಿಕ ಮುಖಗಳಿಗೆ ಆದ್ಯತೆ ನೀಡಲು ಈ ರೀತಿ ಮಾಡಲಾಗಿದೆ ಎಂದು ಬಿಜೆಪಿ ನಾಯಕರು ಸಮರ್ಥಿಸಿಕೊಳ್ಳುತ್ತಾರೆ. ಆದರೆ ಇದೆಲ್ಲಾ ಬರೀ ಲೊಳಲೊಟ್ಟೆ. ಬಿಜೆಪಿ ಪ್ರಕಟಿಸಿರುವ ಟಿಕೆಟ್ ಪಟ್ಟಿಯನ್ನು ನೋಡಿದರೆ, ಅದರಲ್ಲಿ ಅಣ್ಣ, ತಮ್ಮ, ಅಪ್ಪ, ಮಗ, ಸೊಸೆ, ಹೆಂಡತಿ ಹೀಗೆ ಎಲ್ಲರಿಗೂ ಟಿಕೆಟ್ ನೀಡಲಾಗಿದೆ. ರೌಡಿ ಶೀಟರ್‌ಗಳಿಗೂ ಟಿಕೆಟ್ ಸಿಕ್ಕಿದೆ. 70ರ ಗಡಿ ದಾಟಿದವರೂ ಟಿಕೆಟ್ ಪಡೆದುಕೊಂಡಿದ್ದಾರೆ. ರಾಜ್ಯದಲ್ಲಿ ಶೇ 40 ಭ್ರಷ್ಟಾಚಾರದ ಆರೋಪ ಭುಗಿಲೆದ್ದಾಗ ಮತ್ತು ಮೀಸಲಾತಿ ಹೋರಾಟ ಹೆಚ್ಚಾದಾಗಲೇ, ಸ್ವಂತ ಬಲದಲ್ಲಿ ಪಕ್ಷ ಈ ಬಾರಿ ಅಧಿಕಾರಕ್ಕೆ ಬರುವುದಿಲ್ಲ ಎನ್ನುವುದು ಬಿಜೆಪಿಗೆ ಮನದಟ್ಟಾಗಿತ್ತು. ಆಡಳಿತ ವಿರೋಧಿ ಅಲೆ ಸಾಕಷ್ಟು ಕಾಣಿಸಿಕೊಂಡಿತ್ತು. ಬಿಜೆಪಿ ಆಂತರಿಕವಾಗಿ ನಡೆಸಿದ ಸಮೀಕ್ಷೆಗಳಲ್ಲಿಯೂ ಪಕ್ಷಕ್ಕೆ ಬಹುಮತ ಬರುವ ಸಾಧ್ಯತೆ ಇಲ್ಲ ಎನ್ನುವುದು ಗ್ಯಾರಂಟಿಯಾಗಿತ್ತು. ಹೊಸ ಪ್ರಯೋಗ ಮಾಡುವುದಕ್ಕೆ ಇದೇ ಸಕಾಲ ಎಂದು ಬಿಜೆಪಿ ಹೈಕಮಾಂಡ್ ಚಿಂತನೆ ಮಾಡಿರಲಿಕ್ಕೂ ಸಾಕು. ಈಗ ಹೊಸ ಸಾಹಸಕ್ಕೆ ಕೈಹಾಕಿದರೆ ‘ಹೋದರೆ ಒಂದು ಕಲ್ಲು, ಬಿದ್ದರೆ ಮಾವಿನಕಾಯಿ’ ಎನ್ನುವುದು ಅದರ ಆಲೋಚನೆಯಾಗಿದೆ ಎಂಬುದು ಪಕ್ಷದೊಳಗಿನವರೇ ಹೇಳುವ ಮಾತು. ಹೊಸ ಪ್ರಯೋಗವನ್ನು ಈಗಲೂ ಮಾಡದಿದ್ದರೆ ಮತ್ತ್ಯಾವಾಗ ಮಾಡುವುದು ಎಂದೂ ಹಿರಿಯ ನಾಯಕರು ಪ್ರಶ್ನೆ ಮಾಡುತ್ತಾರೆ.

ಟಿಕೆಟ್ ಹಂಚಿಕೆಯಲ್ಲಿ ಮಾಡಿದ ಪ್ರಯೋಗ ಚುನಾವಣೆಯಲ್ಲಿಯೂ ಮುಂದುವರಿಯುತ್ತದೆಯೇ ಎಂಬ ಪ್ರಶ್ನೆಯೂ ಇದೆ. ಅದಕ್ಕೆ ಪುರಾವೆ ಎಂದರೆ, ಆರ್. ಅಶೋಕ ಮತ್ತು ವಿ.ಸೋಮಣ್ಣ ಅವರಿಗೆ ಎರಡು ಕಡೆ ಟಿಕೆಟ್ ನೀಡಿದ್ದು. ಅಶೋಕ ಅವರು ಒಕ್ಕಲಿಗರು. ಅವರನ್ನು ಒಕ್ಕಲಿಗ ನಾಯಕನನ್ನಾಗಿ ಮಾಡಲು ಪಕ್ಷ ಬಹಳಷ್ಟು ಪ್ರಯತ್ನಪಟ್ಟಿತು. ಮಂಡ್ಯ, ರಾಮನಗರ ಜಿಲ್ಲಾ ಉಸ್ತುವಾರಿಯನ್ನಾಗಿ ಮಾಡಿತು. ಕೆಂಪೇಗೌಡ ಪ್ರತಿಮೆ ಸ್ಥಾಪನೆಯಲ್ಲಿ ಹೆಚ್ಚಿನ ಅವಕಾಶ ನೀಡಿತು. ಅವರು ಉಪಮುಖ್ಯಮಂತ್ರಿಯೂ ಆಗಿದ್ದವರು. ಕಂದಾಯ ಸಚಿವರಾಗಿಯೂ ತಕ್ಕಮಟ್ಟಿಗೆ ಕೆಲಸ ಮಾಡಿದ್ದಾರೆ. ಕನಕಪುರದಲ್ಲಿ ಡಿ.ಕೆ.ಶಿವಕುಮಾರ್ ಅವರನ್ನು ಎದುರಿಸುವ ಸಾಹಸಕ್ಕೆ ಅವರನ್ನು ಇಳಿಸುವ ಮೂಲಕ ಅವರಿಗೆ ಅಂತಿಮ ಅವಕಾಶ ನೀಡಲಾಗಿದೆ. ಇದರಲ್ಲಿ ಗೆದ್ದರೆ ಅವರು ಒಕ್ಕಲಿಗರ ನಾಯಕರಾಗಿ ಹೊರಹೊಮ್ಮುತ್ತಾರೆ. ಸೋತರೆ? ಕಾಲವೇ ಉತ್ತರಿಸಬೇಕು.

ಇದೇ ತಂತ್ರವನ್ನು ಸೋಮಣ್ಣ ಅವರ ವಿಚಾರದಲ್ಲಿಯೂ ಅನುಸರಿಸಲಾಗಿದೆ. ರಾಮಕೃಷ್ಣ ಹೆಗಡೆ ಅವರ ನಂತರ ಲಿಂಗಾಯತರಿಗೆ ಯಡಿಯೂರಪ್ಪ ಅವರೇ ಸರ್ವಶ್ರೇಷ್ಠ ನಾಯಕ. ಅದರಲ್ಲಿ ಅನುಮಾನವೇ ಇಲ್ಲ. ಆದರೆ ಈ ಬಾರಿ ಅವರು ಚುನಾವಣೆಗೆ ಸ್ಪರ್ಧೆ ಮಾಡದೇ ಇರುವುದರಿಂದ ಅವರಂತೂ ಮುಂದೆ ಮುಖ್ಯಮಂತ್ರಿಯಾಗುವ ಸಾಧ್ಯತೆಯಿಲ್ಲ. ಲಿಂಗಾಯತ ಮಠಗಳೊಂದಿಗೆ ಆತ್ಮೀಯ ಸಂಬಂಧ ಹೊಂದಿದವರಲ್ಲಿ ಅಗ್ರಗಣ್ಯರು ಎಂದರೆ ಯಡಿಯೂರಪ್ಪ ಬಿಟ್ಟರೆ ಅದು ಸೋಮಣ್ಣ ಮಾತ್ರ. ಅವರಿಗೂ ಚಾಮರಾಜನಗರ ಮತ್ತು ವರುಣ ಕ್ಷೇತ್ರಗಳ ಟಿಕೆಟ್ ನೀಡಲಾಗಿದೆ. ಅವರು ಸಹ ಗೆದ್ದು ಬಂದರೆ ಯಡಿಯೂರಪ್ಪ ಉತ್ತರಾಧಿಕಾರಿ, ಇಲ್ಲವಾದರೆ ಅವರಿಗೂ ನಿವೃತ್ತಿಯೇ ಗತಿ ಎಂಬಲ್ಲಿಗೆ, ಬಿಜೆಪಿಯಲ್ಲಿ ಮುಖ್ಯಮಂತ್ರಿ ಕುರ್ಚಿಗೆ ಟವೆಲ್ ಹಾಕುವ ಇನ್ನಿಬ್ಬರಿಗೂ ತಡೆ ಒಡ್ಡಿದಂತಾಗಿದೆ.

ಶೆಟ್ಟರ್ ಕಾಂಗ್ರೆಸ್ ಸೇರಿರುವುದರಿಂದ ಉತ್ತರ ಕರ್ನಾಟಕದಲ್ಲಿ ಬಿಜೆಪಿಯನ್ನು ಗೆಲ್ಲಿಸುವ ಜವಾಬ್ದಾರಿ ಕೊಂಚವಾದರೂ ಅರವಿಂದ ಬೆಲ್ಲದ ಅವರ ಮೇಲಿದೆ. ಅದರಲ್ಲಿ ಅವರು ಗೆದ್ದರೆ ಹೈಕಮಾಂಡ್ ಗಮನ ಸೆಳೆಯಬಹುದು. ಇಲ್ಲವಾದರೆ ಅವರ ಓಟಕ್ಕೂ ತಡೆ. ಅಲ್ಲಿಗೆ ಬಿಜೆಪಿಯಲ್ಲಿ ಮುಖ್ಯಮಂತ್ರಿ ಹುದ್ದೆಗೆ ಸ್ಪರ್ಧೆ ಮಾಡುವ ಏಳು ಮಂದಿ ಹೊರಬಿದ್ದಂತಾಗುತ್ತದೆ. ಆದರೂ ಇನ್ನೂ ಕೆಲವರಿದ್ದಾರೆ. ಅವರಿಗೆ ಚುನಾವಣಾ ಕಣದಲ್ಲಿಯೇ ಅಡೆತಡೆಗಳು ಎದುರಾಗಬಹುದು. ಯಾರಿಗೆ ಗೊತ್ತು? ಸೋಲುವರೋ? ಗೆಲ್ಲುವರೋ? ಮೇ 13ಕ್ಕೆ ಗೊತ್ತಾಗುತ್ತದೆ. ಆದರೆ ಒಂದಂತೂ ನಿಜ. ಈ ಬಾರಿ ಚುನಾವಣಾ ಫಲಿತಾಂಶ ಅಚ್ಚರಿಗಳ ಮೂಟೆಯಾಗಿರುತ್ತದೆ. ಹೊಸ ಹೊಸ ಅಚ್ಚರಿಗಳನ್ನು ನೋಡಲು ನಾವು ಸಿದ್ಧರಾಗಬೇಕು. ಪಿಕ್ಚರ್ ಅಭಿ ಬಾಕಿ ಹೈ.

ಚುರುಮುರಿ

‘ಸಿರಿ ನಗರಂ’ ಗೆಲ್ಗೆ!

• ನಾರಾಯಣ ರಾಯಚೂರ್

‘ನೋಡಿದೆಯೇನೆ ಬೆಂಗಳೂರಿನ ಭಾಗ್ಯವಾ?’ ಭಾರತದ ಮೂರನೇ ‘ಸಿರಿ ನಗರ’ ಬೆಂಗಳೂರಂತೆ!’

‘ಗಿರಿ ನಗರ ಗೊತ್ತು, ಇದು ಯಾವುದುರೀ ಸಿರಿ ನಗರ! ಸಿರಿ ಧಾನ್ಯವೋ? ಸಿರಿ ನಗರವೋ?’

‘ಲಂಡನ್ನಿನ ಒಂದು ಸಮೀಕ್ಷಾ ಸಂಸ್ಥೆ ಪ್ರತಿ ವರ್ಷ ಶ್ರೀಮಂತ ರಾಷ್ಟ್ರ-ನಗರಗಳ ಪಟ್ಟಿ ತಯಾರು ಮಾಡುತ್ತಂತೆ. ಈ ವರ್ಷ ಭಾರತದ ಶ್ರೀಮಂತ ನಗರಗಳ ಪಟ್ಟಿಯಲ್ಲಿ ಮುಂಬೈ, ಡೆಲ್ಲಿ ಬಿಟ್ಟರೆ ನಮ್ಮ ಬೆಂಗಳೂರಿಗೆ 3ನೇ ಸ್ಥಾನ ಕಣೇ’.

‘ಮೊನ್ನೆ ವಿಶ್ವ ‘ಜನಸಂಖ್ಯೆ ಪಟ್ಟಿ’ಯಲ್ಲಿ ಭಾರತ ಮೊದಲನೇ ಸ್ಥಾನ ಪಡಕೊಂಡ ಸುದ್ದಿ ಬಂದಿತ್ತು, ಈಗ ನಮ್ಮ ಬೆಂಗಳೂರಿಗೆ ಕುಬೇರ ನಗರ ಪಟ್ಟವೇ?! ಸರಿಯಾಗಿ ಸಮೀಕ್ಷೆ ಮಾಡಿದ್ದಾರೋ ಅಥವಾ ಇಲ್ಲಿನ ರಿಚ್ಮಂಡ್ ಟೌನು, ಡಾಲರ್ಸ್ ಕಾಲೊನಿ, ಮಹಾಲಕ್ಷ್ಮಿ ಲೇಔಟ್ ಅಂತ ಹೆಸರು ಕೇಳಿಬಿಟ್ಟು ಈ ತೀರ್ಮಾನಕ್ಕೆ ಬಂದಿದಾರೋ?’

‘ಹಾಗಲ್ಲಾ ಕಣೆ, ಅವೆಲ್ಲಾ ಅಂತರರಾಷ್ಟ್ರೀಯ ಖ್ಯಾತಿಯ ಸಂಸ್ಥೆಗಳು, ಜವಾಬ್ದಾರಿಯಿಂದ ಮಾಡಿರ್ತಾವೆ. ಬೆಂಗಳೂರಲ್ಲಿ ಎಂಟು– ಹತ್ತು ಕೋಟಿಗೂ ಹೆಚ್ಚು ಹಣ ಇರೋರು ಲಕ್ಷಾಂತರ ಮಂದಿ ಇದ್ದಾರಂತೆ ಮಹರಾಯ್ತಿ’.

‘ಅಲ್ಲಾರಿ, ಅವರು ನಮ್ಮ ಸ್ಲಮ್ಮು, ಕೆಳ ಮಧ್ಯಮ ವರ್ಗದ ಪ್ರದೇಶಗಳ ಕಡೆ ಗಮನ ಹರಿಸಿದ್ದರೋ? ಬೆರಳೆಣಿಕೆಯಷ್ಟು ಶ್ರೀಮಂತರನ್ನ ನೋಡಿಬಿಟ್ಟು ಶ್ರೀಮಂತ ನಗರ ಅಂದ್ಬಿಟ್ಟರ’.

‘ಅವುಗಳ ಬಗ್ಗೆ ಅವರು ತಲೆಕೆಡಿಸಿ ಕೊಳ್ಳೊಲ್ಲ, ಅದನ್ನು ಸರ್ಕಾರಿ ಸಮೀಕ್ಷೆಗಳು ಹಾಗೋ ಹೀಗೋ ಮಾಡ್ಕೋಬಹುದು, ಅವರಿಗೇನಿದ್ದರೂ ಶ್ರೀಮಂತರ ಮೇಲೇ ಕಣ್ಣು. ಬಡವರೇನು? ಲೆಕ್ಕಕ್ಕೆ ಸಿಗಲಾರದಷ್ಟು ಇರ್ತಾರೆ’.

‘ಅಲ್ಲಾ, ಈ ಕುಬೇರರು ಈ ಸಿರಿ ನಗರದಿಂದ ಗಳಿಸಿರೋ ಸಂಪತ್ತಿನ ಸ್ವಲ್ಪ ಲಾಭಾಂಶಾನ ‘ಕೆರೆಯ ನೀರನು ಕೆರೆಗೆ ಚೆಲ್ಲಿ’ ಅನ್ನೋ ಹಾಗೆ ಇಲ್ಲಿನ ಕೆರೆಗಳು, ರಸ್ತೆಗಳು, ಗ್ರಂಥಾಲಯ, ರಂಗಮಂದಿರಗಳ ಅಭಿವೃದ್ಧಿಗೆ ಬಳಸಿದರೆ ಈ ‘ಸಿರಿ-ಬೆಂಗಳೂರಿನ ಸಂಭ್ರಮ’ವನ್ನ ಹಿರಿಹಿರಿ ಹಿಗ್ಗಿನಿಂದ ಆಚರಿಸಬಹುದು’.

‘ಒಪ್ಪಿದೆ ನಿನ್ನ ಪಾಯಿಂಟು. ನಮ್ಮ ‘ಹೋಮ್’ ಮಿನಿಸ್ಟರ್ ಅಲ್ವೇ ತಾವು? ಸ್ವಲ್ಪ ಎಫ್.ಎಂ ಆನ್ ಮಾಡ್ತಿರಾ?’

‘ಸಿರಿವಂತನಾದರೂ ಕನ್ನಡ ನಾಡಲ್ಲೆ ಮೆರೆವೆ…’ ಹಾಡು ಜೋರಾಗಿ ಕೇಳಿಸುತ್ತಿತ್ತು.

ಸಂಗತ

ಅಕ್ಕನಷ್ಟು ಜಾಣೆಯಲ್ಲ ಇವಳು…!

ಪರೀಕ್ಷಾ ಅಂಕಗಳು ಮಕ್ಕಳ ಸಾಮರ್ಥ್ಯದ ಅಳತೆಗೋಲುಗಳಲ್ಲ

• ಡಾ. ಎಚ್.ಬಿ.ಚಂದ್ರಶೇಖರ್

ಪರಿಚಿತರೊಬ್ಬರು ಇತ್ತೀಚೆಗೆ ತಮ್ಮ ಇಬ್ಬರು ಮಕ್ಕಳೊಂದಿಗೆ ನನ್ನನ್ನು ಭೇಟಿಯಾದಾಗ, ಐದನೇ ತರಗತಿ ಓದುತ್ತಿರುವ ಅವರ ದೊಡ್ಡ ಮಗಳನ್ನು ಪರಿಚಯಿಸುತ್ತಾ ‘ಇವಳು ಬಹಳ ಜಾಣೆ, 96 ಪರ್ಸೆಂಟ್ ಮಾರ್ಕ್ಸ್ ಪಡೆದಿದ್ದಾಳೆ’ ಎಂದರು. ಮೂರನೇ ತರಗತಿ ಓದುತ್ತಿರುವ ತಮ್ಮ ಇನ್ನೊಬ್ಬ ಮಗಳನ್ನು ಪರಿಚಯಿಸುತ್ತಾ ‘ಅಕ್ಕನಷ್ಟು ಜಾಣೆಯಲ್ಲ ಇವಳು. ಕಡಿಮೆ ಮಾರ್ಕ್ಸ್ ತಗೊಂಡಿದ್ದಾಳೆ’ ಎಂದರು. ಮಕ್ಕಳನ್ನು ಹೋಲಿಕೆ ಮಾಡಬೇಡಿ ಎಂದು ಅವರಿಗೆ ಹೇಳುವುದು ಹೇಗೆ ಎಂದು ಯೋಚಿಸುತ್ತಿರುವಾಗಲೇ, ಕಿರಿ ಮಗಳ ಕಣ್ಣಾಲಿಗಳು ತುಂಬಿಬಂದು, ಒಂದೆರಡು ಹನಿ ಕಣ್ಣೀರು ಜಾರಿ ನೆಲ ತಾಕಿದವು.

ಆಗ ನಾನು, ಮಕ್ಕಳ ಮನಸ್ಸು ಸೂಕ್ಷ್ಮವಾಗಿರುತ್ತದೆ, ಅವರನ್ನು ಅಂಕಗಳ ಆಧಾರದ ಮೇಲೆ ಹೋಲಿಸಿ, ಅವಮಾನಿಸುವುದು ಬೇಡ ಎಂದು ಮನವಿ ಮಾಡಿದೆ. ದುಃಖಿತಳಾಗಿದ್ದ ಬಾಲಕಿಗೆ ಒಂದಷ್ಟು ಸಮಾಧಾನದ ಮಾತುಗಳನ್ನಾಡಿದೆ.

ಪರೀಕ್ಷೆ ಮುಗಿದು ಫಲಿತಾಂಶ ಪ್ರಕಟವಾಗುವ ಸಂದರ್ಭದಲ್ಲಿ, ಮಕ್ಕಳು ಪಡೆದ ಅಂಕಗಳ ಆಧಾರದ ಮೇಲೆ ಅವರನ್ನು ಹೊಗಳುವುದು, ಇತರ ಮಕ್ಕಳೊಂದಿಗೆ ಅವರನ್ನು ಹೋಲಿಸಿ ಹೀಯಾಳಿಸುವುದು, ತೆಗಳುವುದನ್ನು ಪೋಷಕರು ಹಾಗೂ ಕೆಲ ಶಿಕ್ಷಕರು ತಮಗರಿವಿಲ್ಲದೇ ‘ಸಹಜ’ ಎಂಬಂತೆ ಮಾಡುತ್ತಾರೆ. ಇದನ್ನು ಮಕ್ಕಳ ಒಳ್ಳೆಯದಕ್ಕಾಗಿಯೇ ತಾವು ಮಾಡುತ್ತಿದ್ದೇವೆ ಎಂದು ಅನೇಕರು ನಂಬುತ್ತಾರೆ ಹಾಗೂ ತಮ್ಮ ಕೃತ್ಯವನ್ನು ಸಮರ್ಥಿಸಿಕೊಳ್ಳುತ್ತಾರೆ. ಈ ರೀತಿ ಮಾಡುವುದರಿಂದ ಮಕ್ಕಳು ಮುಂದಿನ ತರಗತಿಗಳಲ್ಲಿ ತಮ್ಮ ಅಂಕ ಗಳಿಕೆಯ ಸಾಮರ್ಥ್ಯವನ್ನು ಉತ್ತಮಪಡಿಸಿಕೊಳ್ಳುತ್ತಾರೆ ಎಂಬ ನಿಲುವು ಅನೇಕರದ್ದಾಗಿರುತ್ತದೆ.

ಮೊನ್ನೆ ಬಂದ ದ್ವಿತೀಯ ಪಿಯು ಫಲಿತಾಂಶದಲ್ಲಿ ಶೇ 95ಕ್ಕೂ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳ ಅನೇಕ ಪೋಷಕರು, ಇನ್ನೊಂದಷ್ಟು ಅಂಕ ಬರಬೇಕಿತ್ತು ಎಂದು ಹಲುಬುವುದನ್ನು ಗಮನಿಸಿದ್ದೇನೆ. ನನ್ನ ಪರಿಚಿತ ಶಿಕ್ಷಕರೊಬ್ಬರು ಅವರ ಶಾಲೆಯಲ್ಲಿ ನಡೆದ ಪ್ರಕರಣವನ್ನು ನನ್ನೊಂದಿಗೆ ಹಂಚಿಕೊಂಡರು. ಒಂದನೇ ತರಗತಿ ಓದುತ್ತಿರುವ ವಿದ್ಯಾರ್ಥಿನಿಯ ಪೋಷಕರೊಬ್ಬರು ತಮ್ಮ ಮಗಳು ಎಷ್ಟು ಅಂಕ ತೆಗೆದರೂ ಸಮಾಧಾನವಿಲ್ಲದಂತೆ ವರ್ತಿಸುವುದರ ಜೊತೆಗೆ ತರಗತಿಯಲ್ಲಿ ಹೆಚ್ಚು ಅಂಕ ಪಡೆದ ಇತರ ವಿದ್ಯಾರ್ಥಿಗಳ ಉತ್ತರಪತ್ರಿಕೆಗಳನ್ನು ತೋರಿಸಲು ಪಟ್ಟುಹಿಡಿಯುತ್ತಾರೆ. ಅತ್ಯುತ್ತಮ ಅಂಕ ಪಡೆಯುವ ಆ ಬಾಲಕಿಯು ‘ನನ್ನ ಅಮ್ಮನಿಗೆ ಎಷ್ಟು ಅಂಕ ತೆಗೆದರೂ ಸಂತೋಷವಿಲ್ಲ’ ಎಂದು ಶಿಕ್ಷಕರ ಹತ್ತಿರ ಬೇಸರ ತೋಡಿಕೊಂಡಿದ್ದಾಳೆ.

ಮಕ್ಕಳನ್ನು ತಮ್ಮ ಓರಗೆಯ ಇತರ ಮಕ್ಕಳೊಂದಿಗೆ ಹೋಲಿಸುವುದರಿಂದ ಅವರಲ್ಲಿ ಆತಂಕ ಹಾಗೂ ಒತ್ತಡ ಉಂಟಾಗುತ್ತವೆ. ಮಕ್ಕಳ ಆತ್ಮಗೌರವಕ್ಕೆ ಕುಂದುಂಟಾಗುತ್ತದೆ. ಅಂಕಗಳು ಮಕ್ಕಳ ಸಾಮರ್ಥ್ಯದ ಅಳತೆಗೋಲುಗಳಲ್ಲ. ಕಡಿಮೆ ಅಂಕಗಳನ್ನು ಗಳಿಸಿ, ಪರೀಕ್ಷೆಯಲ್ಲಿ ಪಾಸಾದ ಅನೇಕರು ತಮ್ಮ ಭವಿಷ್ಯದ ಜೀವನವನ್ನು ಉತ್ತಮವಾಗಿ ಕಟ್ಟಿಕೊಂಡ ಅನೇಕ ಉದಾಹರಣೆಗಳಿವೆ. ಅಂಕಗಳಿಗೆ ವಿಪರೀತ ಪ್ರಾಶಸ್ತ್ಯ ಕೊಡುವುದರಿಂದ ನೈಜ ಕಲಿಕೆಯ ಆನಂದದಿಂದ ಮಕ್ಕಳು ವಂಚಿತರಾಗುವ ಅಪಾಯವಿರುತ್ತದೆ.

ಅಂಕ ಗಳಿಸಲು ವಿದ್ಯಾರ್ಥಿಗಳು ಕಂಠಪಾಠದ ಮೊರೆ ಹೋಗುತ್ತಾರೆ. ಓದಿ, ನೆನಪಿನಲ್ಲಿ ಇಟ್ಟುಕೊಂಡು ಪರೀಕ್ಷೆ ಬರೆದು, ಹೆಚ್ಚು ಅಂಕ ಪಡೆದಲ್ಲಿ ತನ್ನ ಕೆಲಸ ಮುಗಿಯಿತು ಎಂಬ ಭಾವನೆ ಮಕ್ಕಳಲ್ಲಿ ಬರುವ ಸಾಧ್ಯತೆ ಇರುತ್ತದೆ. ಶಿಕ್ಷಕರೂ ಅಂಕ ಗಳಿಸುವ ವಿವಿಧ ರೀತಿಯ ತಂತ್ರಗಳನ್ನು ಮಕ್ಕಳಿಗೆ ಕಲಿಸಿಕೊಡುವುದರಲ್ಲಿ ತಮ್ಮ ಶ್ರಮ, ಸಮಯ ವಿನಿಯೋಗಿಸುವ ಕಾರಣ, ಮಕ್ಕಳಿಗೆ ಕಲಿಕೆಯ ನಿಜ ಆನಂದದ ರುಚಿಯನ್ನು ತೋರ್ಪಡಿಸಲು ಅವರಿಗೆ ಸಾಧ್ಯವಾಗುವುದಿಲ್ಲ.



ಅಂಕಗಳಿಗೆ ಅತಿ ಹೆಚ್ಚು ಒತ್ತು ನೀಡುವ ಶಿಕ್ಷಣ ವ್ಯವಸ್ಥೆಯಿಂದ ಮಕ್ಕಳ ವ್ಯಕ್ತಿತ್ವದ ವಿಕಾಸಕ್ಕೆ ಧಕ್ಕೆಯಾಗುತ್ತದೆ. ಅತಿ ಹೆಚ್ಚು ಅಂಕಗಳನ್ನು ಗಳಿಸುವುದು ಮಾತ್ರ ಮನ್ನಣೆ, ಪ್ರಶಂಸೆಗೆ ದಾರಿ ಎಂದು ಎಲ್ಲರೂ ಭಾವಿಸತೊಡಗಿದರೆ ಕಲೆ, ಕ್ರೀಡೆ, ಸಂಗೀತ, ನೃತ್ಯ, ನಾಟಕದಂತಹ ಸೃಜನಶೀಲ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳುವವರು ದೊರೆಯದೇ ಸಮಾಜವು ಬಡ ಹಾಗೂ ಕಳಾಹೀನವಾಗುತ್ತದೆ. ಅಂಕ ಗಳಿಕೆಯನ್ನು ನಿರ್ಲಕ್ಷಿಸಲಾಗದು. ಆದಾಗ್ಯೂ ಒಂದೊಂದು ಅಂಕವನ್ನೂ ನೆಪವಾಗಿರಿಸಿಕೊಂಡು, ಇತರ ಮಕ್ಕಳೊಂದಿಗೆ ಹೋಲಿಸುತ್ತಾ ಅವರ ಮನನೋಯಿಸಬಾರದೆಂಬ ತಿಳಿವಳಿಕೆಯನ್ನು ಪೋಷಕರು ಹಾಗೂ ಶಿಕ್ಷಣ ಸಂಸ್ಥೆಗಳಿಗೆ ನೀಡಲು ಇದು ಸಕಾಲ.

ಪುಟ್ಟ ಜೀವಗಳು ಪುಸ್ತಕ ಚೀಲದ ಭಾರ ಹೊರಲಾರದೆ ದೈಹಿಕವಾಗಿ ಬಳಲಿದರೆ, ಮಾಹಿತಿಯ ಮಣ ಭಾರದಿಂದ ಮಾನಸಿಕವಾಗಿ ನಲುಗುತ್ತಿವೆ. ಇದನ್ನು ಗಮನದಲ್ಲಿಟ್ಟು, ಮಕ್ಕಳ ಮೈ ಮನಸ್ಸು ಹಗುರವಾಗಿಸುವ ಕಾರ್ಯಗಳಾಗಬೇಕು. ಮಕ್ಕಳ ದೃಷ್ಟಿಯಲ್ಲಿ ಆಕರ್ಷಕವೆನಿಸುವ ರೀತಿಯಲ್ಲಿ ಪಠ್ಯಪುಸ್ತಕಗಳು, ಪಾಠ ಬೋಧನೆ, ಮೌಲ್ಯಮಾಪನ ವ್ಯವಸ್ಥೆಯನ್ನು ಮರು ರೂಪಿಸುವ ಕಾರ್ಯವಾಗಬೇಕು.

ಜೀವನದ ಸವಾಲುಗಳಿಗೆ ಮಕ್ಕಳನ್ನು ಸಜ್ಜುಗೊಳಿಸಲು ಪುಸ್ತಕಗಳ ಜೊತೆಗೆ ಜೀವನಾನುಭವ ಹಾಗೂ ಕೌಶಲ ಅಗತ್ಯ. ಈ ದಿಸೆಯಲ್ಲಿ ಮಕ್ಕಳು ತಯಾರಾಗಬೇಕೆಂದಲ್ಲಿ ಅಂಕ ಪ್ರಧಾನ ವ್ಯವಸ್ಥೆಯಿಂದ ಜೀವನಕೌಶಲ ಕೇಂದ್ರಿತವಾದ ಶಿಕ್ಷಣ ರೂಪಿಸುವೆಡೆಗೆ ಪೋಷಕರನ್ನು ಜಾಗೃತಗೊಳಿಸಬೇಕಾದ ಅವಶ್ಯಕತೆ ಇದೆ.

ವಾಚಕರ ವಾಣಿ

ನ್ಯಾಯೋಚಿತ ಚುನಾವಣೆ ಅಣಕಿಸುವ ಕುತಂತ್ರ

ಕರ್ನಾಟಕದಲ್ಲಿ ಚುನಾವಣಾ ಕಣ ರಂಗೇರಿರುವ ಈ ಹೊತ್ತಿನಲ್ಲಿ, ಎಲ್ಲಾ ರಾಜಕೀಯ ಪಕ್ಷಗಳು ಹೊಸಬರಿಗೆ ಅವಕಾಶ ಮಾಡಿಕೊಡುವ ನೆಪದಲ್ಲಿ ಹಳಬರನ್ನು ಮೂಲೆಗುಂಪು ಮಾಡಿವೆ. ಚುನಾವಣೆ ನಡೆಯುವ ಮೊದಲೇ ಮುಖ್ಯಮಂತ್ರಿಯನ್ನು ಬದಲಾಯಿಸುವುದು, ಹಿಂದಿನ ಚುನಾವಣೆಯಲ್ಲಿ ಆಯ್ಕೆಯಾಗಿ ಐದು ವರ್ಷ ಶಾಸಕರಾಗಿದ್ದವರ ಕೆಲಸದ ಗುಣಮಟ್ಟವನ್ನು ಒರೆಗೆ ಹಚ್ಚುವ ಅವಕಾಶ ಕೊಡದೇ ಹೊಸ ಅಭ್ಯರ್ಥಿಯನ್ನು ನಿಲ್ಲಿಸುವುದು, ಹಣಬಲ ಅಥವಾ ಜಾತಿಬಲ ಇರುವವರನ್ನು ಮಾತ್ರ ಮುನ್ನೆಲೆಗೆ ತಂದು, ‘ಪಕ್ಷದ ಸಿದ್ಧಾಂತ ಮುಖ್ಯ’ ಎಂದು ಹೇಳಿಕೊಳ್ಳುವುದು, ಈ ಎಲ್ಲವೂ ನ್ಯಾಯೋಚಿತ ಚುನಾವಣೆಯನ್ನು ಅಣಕಿಸುವ ಕುತಂತ್ರಗಳೇ ಆಗಿವೆ.

ನಾಡಿನ ಜನ ಪಕ್ಷಕ್ಕೆ ಮತ ಕೊಡುವ ಬದಲು, ವ್ಯಕ್ತಿಯ ಯೋಗ್ಯತೆಯ ಅನುಸಾರವಾಗಿ ಮತ ಚಲಾಯಿಸುವುದು ಇಂದು ಬೇಕಾಗಿದೆ. ಯೋಗ್ಯ ವ್ಯಕ್ತಿ ಯಾರು ಎಂದರೆ, ಮತದಾರರ ಕ್ಷೇತ್ರಗಳಲ್ಲಿ ನೆಲೆ ನಿಂತು ಅಲ್ಲಿನ ಜನರ ಸುಖ ದುಃಖಗಳಲ್ಲಿ ಭಾಗಿಯಾಗುವ ಜನಪ್ರತಿನಿಧಿ ಎಂದಷ್ಟೇ ಅರ್ಥ ಮಾಡಿಕೊಳ್ಳುವುದು ಆರೋಗ್ಯಕರ. ದಿಲ್ಲಿಯಿಂದ ಇಲ್ಲಿಗೆ ಬಂದು ಬಣ್ಣದ ಮಾತಾಡುವ ರಾಜಕೀಯ ಪಕ್ಷಗಳ ಪ್ರಚಾರಕರನ್ನು ಕಡೆಗಣಿಸಿ, ಕರ್ನಾಟಕದ ಜನ ವಿಧಾನಸಭೆಗೆ ಯೋಗ್ಯರನ್ನು ಆರಿಸಬೇಕಾಗಿದೆ.

ಶ್ರೀಕಂಠ, ಬೆಂಗಳೂರು

ಹೀಗಿದೆ ನಿಷ್ಠೆ!

ರಾಜಕೀಯವೆಂದರೆ
ಇಷ್ಟೇ…
ಯಾವ ಪಕ್ಷ
ಹಾರ ಹಾಕಿ
ಸ್ವಾಗತಿಸುವುದೋ
ಅದಕ್ಕೇ ತಮ್ಮ ನಿಷ್ಠೆ…!

ಆರ್.ಸುನೀಲ್, ತರೀಕೆರೆ

ಹೆಚ್ಚಿಸಬೇಕಿದೆ ಗ್ರಾಮಸಭೆಯ ಮಹತ್ವ

ಗ್ರಾಮಸಭೆಯ ಮಹತ್ವ ಕುರಿತ ಗುರುರಾಜ ಎಸ್. ದಾವಣಗೆರೆ ಅವರ ಲೇಖನ (ಪ್ರ.ವಾ., ಏ. 25) ಚೆನ್ನಾಗಿ ಮೂಡಿಬಂದಿದೆ. ಗ್ರಾಮಸಭೆಯ ತೀರ್ಮಾನವೇ ಅಂತಿಮ ಎಂದು ಕಾನೂನು ಇರುವುದು ನಿಜ. ಆದರೆ ಅಲ್ಲಿ ನಡೆಯುತ್ತಿರುವುದೇ ಬೇರೆ. ಕನಿಷ್ಠ ಕೋರಂಗೆ ಬೇಕಾದ ಮತದಾರರು ಹಾಗೂ ಎಲ್ಲಾ ಇಲಾಖೆಗಳ ಅಧಿಕಾರಿಗಳ ಪ್ರತಿನಿಧಿಗಳು ಭಾಗವಹಿಸದೇ ಗ್ರಾಮಸಭೆಗಳು ಕಾಟಾಚಾರಕ್ಕೆ ನಡೆಯುತ್ತಿವೆ.

ಇನ್ನು ಗ್ರಾಮಸಭೆಗಳ ನಿರ್ಣಯದ ಪುಸ್ತಕದಲ್ಲಿ ಕೊನೆಗೆ ಖಾಲಿ ಜಾಗ ಬಿಟ್ಟು, ಗ್ರಾಮಸ್ಥರ ಸಹಿ ಮಾಡಿಸಿ, ಆಮೇಲೆ ತಮಗೆ ಹೇಗೆ ಬೇಕೋ ಹಾಗೆ ನಿರ್ಣಯಗಳನ್ನು ಬರೆದುಕೊಳ್ಳುವ ಪರಿಪಾಟವೂ ನಡೆಯುತ್ತಿದೆ. ಹಾಗಾಗಿ, ಈ ಗ್ರಾಮಸಭೆಗಳು ಜನರ ನಿರಾಸಕ್ತಿಗೆ ಕಾರಣವಾಗಿವೆ. ಇದಕ್ಕೆ ಸರ್ಕಾರವು ಗ್ರಾಮಸಭೆಗಳ ಮಹತ್ವ ಹೆಚ್ಚಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಅವಹೇಳನಕಾರಿ ಭಾಷಣ ಭೂಷಣವಲ್ಲ

ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ ಅವರು ಹುಬ್ಬಳ್ಳಿಯಲ್ಲಿ ಚುನಾವಣೆ ಪ್ರಚಾರದ ವೇಳೆ ಜಗದೀಶ ಶೆಟ್ಟರ್ ಅವರನ್ನು ಪಕ್ಷದ್ರೋಹಿ ಎಂದೆಲ್ಲಾ ಟೀಕಿಸಿದ್ದಾರೆ. ಅಲ್ಲದೆ, ಅವರನ್ನು ಚುನಾವಣೆಯಲ್ಲಿ ಸೋಲಿಸಿ ಎಂದು ಕರೆ ಕೊಟ್ಟಿದ್ದಾರೆ. ತಮ್ಮನ್ನು ತಾವೇ ಲಿಂಗಾಯತ ನಾಯಕ ಎಂದುಕೊಂಡಿರುವ ಯಡಿಯೂರಪ್ಪ ಅವರು ಕೆಜೆಪಿ ಕಟ್ಟಿದಾಗ ಲಿಂಗಾಯತರು ಅವರನ್ನು ಯಾಕೆ ಬೆಂಬಲಿಸಲಿಲ್ಲ? ಆಗ ಅವರು ಮಾಡಿದ್ದು ಪಕ್ಷ ನಿಷ್ಠೆಯೇ? ಯಾವುದೇ ಒತ್ತಡಕ್ಕೆ ಒಳಗಾಗಿ ಪ್ರಬುದ್ಧ ರಾಜಕಾರಣಿಯೊಬ್ಬ ಈ ರೀತಿ ಅವಹೇಳನಕಾರಿ ಭಾಷಣ ಮಾಡುವುದು ಭೂಷಣವಲ್ಲ. ಅಖಾಡ ಎಂದ ಮೇಲೆ ಸೋಲು ಗೆಲುವು ಇದ್ದದ್ದೇ. ತಮ್ಮನ್ನು ಗೆಲ್ಲಿಸಿ, ತಮ್ಮ ಪಕ್ಷವನ್ನು ಗೆಲ್ಲಿಸಿ ಎಂದು ಕೇಳಿಕೊಳ್ಳುವುದು ಧರ್ಮವೇ ವಿನಾ ವ್ಯಕ್ತಿಯ ಹೆಸರು ಹೇಳಿ, ಅವರನ್ನು ಸೋಲಿಸಿ ಎಂದು ಹೇಳುವುದು ಸಮಂಜಸವಲ್ಲ.

ಹಾಗೆ ನೋಡಿದರೆ ಯಡಿಯೂರಪ್ಪನವರ ಮೇಲೆ ಹತ್ತು ಹಲವು ಆರೋಪಗಳಿವೆ. ಅವರು ಜೈಲಿನ ಬಾಗಿಲು ತಟ್ಟಿ ಬಂದಿದ್ದಾರೆ. ಅಂತಹ ಕಳಂಕ ಶೆಟ್ಟರ್‌ಗೆ ಅಂಟಿಲ್ಲ. ಇಲ್ಲಿ ಶೆಟ್ಟರ್ ಚುನಾಯಿತರಾದರೆ ಯಡಿಯೂರಪ್ಪನವರ ಮಾತಿಗೆ ಹೇಗೆ ಬೆಲೆ ಕಟ್ಟಬಹುದು?

ಪ್ರಕಾಶ್ ಮಲ್ಕಿಒಡೆಯರ್, ಹೂವಿನಹಡಗಲಿ, ವಿಜಯನಗರ

‘ಪಾರ್ಕ್’ ಆದಾಯ ಸುಧಾರಿಸೀತು ಹೇಗೆ?

ರಾಜ್ಯದ ಮೃಗಾಲಯಗಳ ಆದಾಯ ಇದೇ ಮೊದಲ ಬಾರಿಗೆ ₹ 100 ಕೋಟಿ ದಾಟಿದ ಸುದ್ದಿ ತಿಳಿದು ಬಹಳ ಖುಷಿಯಾಯಿತು. ಆದಾಯ ಗಳಿಸುವಲ್ಲಿ ಬೆಂಗಳೂರಿನ ಬನ್ನೇರುಘಟ್ಟ ಮೃಗಾಲಯ ಮೊದಲ ಸ್ಥಾನದಲ್ಲಿದ್ದರೆ, ದಾವಣಗೆರೆಯ ಆನಗೋಡು ಪಾರ್ಕ್‌ನ ಮೃಗಾಲಯ ಕೊನೆಯ ಸ್ಥಾನದಲ್ಲಿದೆ. ಆನಗೋಡು ಪಾರ್ಕ್‌ಗೆ ಇತ್ತೀಚೆಗೆ ನಮ್ಮೂರಿನ ಸುಮಾರು 20 ಮಕ್ಕಳ ಜೊತೆಗೆ ಐವರು ದೊಡ್ಡವರು ಒಂದು ದಿನದ ಪಿಕ್ನಿಕ್ ಹೋಗಿದ್ದೆವು. ಉದ್ಯಾನದ ಅವ್ಯವಸ್ಥೆ ಕಂಡು, ಯಾಕಾದರೂ ಇಲ್ಲಿಗೆ ಬಂದೆವೋ ಎನಿಸಿತು. ಮೊದಲಿಗೆ ಟಿಕೆಟ್ ಪಡೆಯಲು ಮುಂದಾದೆವು. ಟಿಕೆಟ್‌ನ ಮೊತ್ತ ಒಟ್ಟು ₹ 350 (ಮಕ್ಕಳಿಗೆ ತಲಾ ₹ 10, ದೊಡ್ಡವರಿಗೆ ₹ 20, ವಾಹನ ನಿಲುಗಡೆಗೆ ₹ 50). ದುಡ್ಡು ಕೊಟ್ಟು ‘ಟಿಕೆಟ್ ಕೊಡಿ’ ಎಂದರೆ, ‘ಟಿಕೆಟ್ ನೀಡುವ ಮಷೀನ್ ಸರಿ ಇಲ್ಲ, ನೀವು ಒಳಗಡೆ ಹೋಗಿ, ಯಾರಾದರೂ ಕೇಳಿದರೆ ನನ್ನನ್ನು ತೋರಿಸಿ’ ಎಂದರು! ನಾನು ಹಟ ಬಿಡದೆ ‘ಇಲ್ಲ, ನೀವು ಟಿಕೆಟ್ ಕೊಡಲೇಬೇಕು’ ಎಂದು ಕೇಳಿದರೆ, ಆಗ ಅವರು ‘ಇಷ್ಟವಿದ್ದರೆ ಒಳಗೆ ಹೋಗಿ, ಇಲ್ಲವೆಂದರೆ ವಾಪಸ್ ಹೋಗಿ’ ಎಂದು ದಬಾಯಿಸಿದರು. ಕೊನೆಗೆ ಏನೂ ಮಾಡಲಾಗದೆ, ಹಣ ಕೊಟ್ಟರೂ ಟಿಕೆಟ್ ಇಲ್ಲದೆ ಅಷ್ಟೂ ಜನ ಒಳಗಡೆ ಹೋಗಿ ನೋಡಿದರೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಮಕ್ಕಳ ಆಟದ ಸಾಮಗ್ರಿಗಳು ಕಿತ್ತು ಹೋಗಿವೆ, ಆಸನಗಳಿಗೆ ನೆರಳಿನ ವ್ಯವಸ್ಥೆ ಇಲ್ಲ… ಒಟ್ಟಿನಲ್ಲಿ ಪಾರ್ಕ್ ಅವ್ಯವಸ್ಥೆಯ ಆಗರವಾಗಿದೆ.

ಪಾರ್ಕ್ ನೋಡಿಕೊಂಡು, ವ್ಯವಸ್ಥೆಗೆ ಹಿಡಿಶಾಪ ಹಾಕುತ್ತ ಹೊರಬಂದೆವು. ಹೀಗಿದ್ದರೆ ಈ ಉದ್ಯಾನದ ಆದಾಯ ಇನ್ನೆಲ್ಲಿ ದ್ವಿಗುಣವಾಗಲು ಸಾಧ್ಯ? ಮೊದಲು ಟಿಕೆಟ್ ಸರಿಯಾಗಿ ಕೊಡುತ್ತಿದ್ದಾರೆಯೇ ಎಂದು ಸಂಬಂಧಪಟ್ಟ ಅಧಿಕಾರಿಗಳು ಪರೀಕ್ಷಿಸಲಿ. ಅಂದಿನ ದಿನ ಕೆಲಸದಲ್ಲಿ ಇದ್ದ ವ್ಯಕ್ತಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಲಿ. ಹಾಗಾದರೆ ಮಾತ್ರ ಪಾರ್ಕ್‌ನ ಆದಾಯ ಸ್ವಲ್ಪ ಮಟ್ಟಿಗೆ ಸುಧಾರಿಸಬಹುದು.

ರಾಜು ಬಿ. ಲಕ್ಕಂಪುರ, ಜಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ರಾಜ್ಯದ ಶೇ 78ರಷ್ಟು ಜಲಮೂಲ ನಿರುಪಯುಕ್ತ

ಕೇಂದ್ರ ಜಲಶಕ್ತಿ ಸಚಿವಾಲಯದ ಮೊದಲ ಗಣತಿಯಲ್ಲಿ ಉಲ್ಲೇಖ

ಪ್ರಜಾವಾಣಿ ವಾರ್ತೆ

ದೇಶದಲ್ಲಿರುವ ವಿವಿಧ ಸ್ವರೂಪದ ಜಲಮೂಲಗಳ ಸಮಗ್ರ ಮಾಹಿತಿಯನ್ನು ಸಂಗ್ರಹಿಸುವ ಉದ್ದೇಶದಿಂದ ಕೇಂದ್ರ ಜಲಶಕ್ತಿ ಸಚಿವಾಲಯವು ಇದೇ ಮೊದಲ ಬಾರಿಗೆ ದೇಶದ ಜಲಮೂಲಗಳ ಗಣತಿ ನಡೆಸಿ, ವರದಿ ಬಿಡುಗಡೆ ಮಾಡಿದೆ. ಕೊಳ, ಕೆರೆ, ಸರೋವರ, ಜಲಾಶಯ, ಜಲಸಂರಕ್ಷಣೆ ಉದ್ದೇಶಕ್ಕೆ ಕಟ್ಟಲಾದ ಜಲಸಂಗ್ರಹಾಗಾರಗಳು ಎಷ್ಟು ಸಂಖ್ಯೆಯಲ್ಲಿವೆ, ಅವುಗಳ ಗಾತ್ರ, ಬಳಕೆಯ ಸ್ಥಿತಿಗತಿ, ಒತ್ತುವರಿ ಸ್ಥಿತಿ, ಸಂಗ್ರಹ ಸಾಮರ್ಥ್ಯ ಮೊದಲಾದ ವಿವರಗಳನ್ನು ದಾಖಲಿಸುವ ಯತ್ನ ಮಾಡಲಾಗಿದೆ.

ಸಂಸತ್ತಿನ ಸ್ಥಾಯಿಸಮಿತಿಯ ಶಿಫಾರಸಿನ ಆಧಾರದ ಮೇಲೆ ಗಣತಿಯನ್ನು ಕೈಗೊಳ್ಳಲಾಗಿತ್ತು. ಸಣ್ಣ ನೀರಾವರಿಯ ಆರನೇ ಗಣತಿಯ ಜೊತೆಯಲ್ಲಿ ಈ ಗಣತಿಯನ್ನೂ ನಡೆಸಲಾಗಿದೆ. ದೇಶದಲ್ಲಿ 24.24 ಲಕ್ಷ ಜಲಮೂಲಗಳನ್ನು ಗಣತಿ ವೇಳೆ ಗುರುತಿಸಲಾಗಿದೆ. ಈ ಪೈಕಿ ಕೊಳಗಳ ಪ್ರಮಾಣ ಶೇ 59ರಷ್ಟಿದೆ. ಶೇ 27ರಷ್ಟು ಕೆರೆ ಹಾಗೂ ಸರೋವರಗಳಿವೆ. ಪಶ್ಚಿಮ ಬಂಗಾಳವು ಅತಿಹೆಚ್ಚು ಕೊಳಗಳು ಹಾಗೂ ಜಲಾಶಯಗಳನ್ನು ಹೊಂದಿದೆ. ಆಂಧ್ರ ಪ್ರದೇಶದಲ್ಲಿ ಅತಿಹೆಚ್ಚು ಕೆರೆಗಳಿವೆ. ತಮಿಳುನಾಡಿನಲ್ಲಿ ಅಧಿಕ ಸರೋವರಗಳಿವೆ. ಮಹಾರಾಷ್ಟ್ರದಲ್ಲಿ ಹೆಚ್ಚಿನ ಪ್ರಮಾಣದ ಜಲಸಂರಕ್ಷಣೆ ಯೋಜನೆಗಳು ಜಾರಿಯಲ್ಲಿವೆ ಎಂದು ಗಣತಿಯ ದತ್ತಾಂಶಗಳು ತಿಳಿಸುತ್ತವೆ.

ಕೈಗಾರಿಕೆ, ಕುಡಿಯುವ ನೀರು, ಮೀನುಗಾರಿಕೆ, ಮನರಂಜನೆ, ಅಂತರ್ಜಲ ಮರುಪೂರಣ ಮೊದಲಾದ ಉದ್ದೇಶಕ್ಕೆ ನಿರ್ಮಿಸಲಾಗಿರುವ ಜಲಮೂಲಗಳನ್ನೂ ಗಣತಿಯಲ್ಲಿ ಪರಿಗಣಿಸಲಾಗಿದೆ. ಜಲಮೂಲಗಳ ಹಂಚಿಕೆ ವಿಚಾರದಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶಗಳ ನಡುವೆ ಭಾರಿ ಅಂತರವಿದೆ. ಜನರು ಅಧಿಕವಾಗಿ ನೆಲೆಸಿರುವ ನಗರ ಹಾಗೂ ಪಟ್ಟಣ ಪ್ರದೇಶಗಳಿಗೆ ಶೇ 3ರಷ್ಟು ಜಲಮೂಲಗಳು ಮಾತ್ರ ಆಸರೆಯಾಗಿವೆ. ಈ ದತ್ತಾಂಶಗಳು ನಗರ ಯೋಜನೆ, ನೀರು ಪೂರೈಕೆಯಂತಹ ಯೋಜನೆಗಳನ್ನು ರೂಪಿಸಲು ನೆರವಾಗಲಿವೆ. ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲೂ ಗಣತಿ ಕಾರ್ಯವನ್ನು ನಡೆಸಲಾಗಿದೆ. ಆಯಾ ರಾಜ್ಯಗಳ ಭೌಗೋಳಿಕ ವಿನ್ಯಾಸ ಹಾಗೂ ಗಾತ್ರದ ಆಧಾರದ ಮೇಲೆ ಜಲಮೂಲಗಳ ಸಂಖ್ಯೆಯಲ್ಲಿ ವ್ಯತ್ಯಾಸವಿದೆ. ಕೆಲವು ರಾಜ್ಯಗಳಲ್ಲಿ ನೈಸರ್ಗಿಕ ಜಲಮೂಲಗಳ ಸಂಖ್ಯೆ ಅಧಿಕವಾಗಿದ್ದರೆ, ಕೆಲವು ರಾಜ್ಯಗಳಲ್ಲಿ ಮಾನವ ನಿರ್ಮಿತ ಜಲಮೂಲಗಳೂ ಹೆಚ್ಚಾಗಿವೆ.

ಸಿಗದ ಸ್ಪಷ್ಟ ಚಿತ್ರಣ: ಜಲಮೂಲಗಳ ಬಗ್ಗೆ ಮೊದಲ ಬಾರಿ ಸಮಗ್ರ ಮಾಹಿತಿಯನ್ನು ನೀಡಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದ್ದರೂ, ಗಣತಿಯಲ್ಲಿ ಒದಗಿಸಿರುವ ದತ್ತಾಂಶಗಳನ್ನು ಗಮನಿಸಿದರೆ ಕೆಲವು ಅಪೂರ್ಣ ಮಾಹಿತಿಯಿಂದ ಕೂಡಿರುವುದು ಕಾಣುತ್ತದೆ. ದೇಶದಲ್ಲಿ ಎಷ್ಟು ಸಂಖ್ಯೆಯ ಜಲಮೂಲಗಳು ಒತ್ತುವರಿಯಾಗಿವೆ ಎಂಬ ದತ್ತಾಂಶ ವರದಿಯಲ್ಲಿದೆ. ಆದರೆ ಒತ್ತುವರಿಯಾಗಿರುವ ಜಲಮೂಲಗಳ ವಿಸ್ತೀರ್ಣ ಎಷ್ಟಿದೆ ಎಂಬುದನ್ನು ಈಗ ಬಿಡುಗಡೆಯಾಗಿರುವ ವರದಿಯಲ್ಲಿ ತಿಳಿಸಿಲ್ಲ. ಜಲಮೂಲವೊಂದು ಶೇಕಡವಾರು ಎಷ್ಟು ಪ್ರಮಾಣದಲ್ಲಿ ಒತ್ತುವರಿಯಾಗಿದೆ ಎಂದಷ್ಟೇ ಹೇಳಲಾಗಿದೆಯೇ ಹೊರತು, ಅದರ ಒಟ್ಟು ವಿಸ್ತೀರ್ಣ ಎಷ್ಟಿತ್ತು ಹಾಗೂ ಒತ್ತುವರಿಯಿಂದ ಕಳೆದುಕೊಂಡ ವಿಸ್ತೀರ್ಣ ಎಷ್ಟು ಎಂಬ ಮಾಹಿತಿ ಇಲ್ಲ.

ಈ ಗಣತಿಯಿಂದ ಜಲಮೂಲವೊಂದರ ಒತ್ತುವರಿಯ ಸಮಗ್ರ ಹಾಗೂ ನೈಜ ಮಾಹಿತಿ ಸಿಗುವುದಿಲ್ಲ. ರಾಜ್ಯದ ಎಲ್ಲೆಲ್ಲಿ ಒತ್ತುವರಿ ನಡೆದಿದೆ ಎಂದು ಈಗ ಬಿಡುಗಡೆಯಾಗಿರುವ ವರದಿಯಲ್ಲಿ ತಿಳಿಸಿಲ್ಲ. ನಿಷ್ಕ್ರಿಯಗೊಂಡಿರುವ ಜಲಮೂಲಗಳ ಮಾಹಿತಿಯನ್ನೂ ಗಣತಿ ನೀಡಿದೆ. ಜಲಮೂಲಗಳು ನಿರುಪಯುಕ್ತವಾಗಲು ಕಾರಣವಾದ ಅಂಶಗಳನ್ನೂ ಪಟ್ಟಿ ಮಾಡಲಾಗಿದೆ. ಆದರೆ, ಹೆಚ್ಚಿನ ಸಂಖ್ಯೆಯ ಜಲಮೂಲಗಳು ನಿರುಪಯುಕ್ತವಾಗಲು ಕಾರಣ ಏನು ಎಂಬುದನ್ನು ತಿಳಿಸಿಲ್ಲ. ಹಾಳಾಗಲು ಕಾರಣ ಏನೆಂದು ಗೊತ್ತಾಗದ ಜಲಮೂಲಗಳ ಪ್ರಮಾಣವೇ ಅಧಿಕ ಸಂಖ್ಯೆಯಲ್ಲಿದೆ. ಕಾರಣ ತಿಳಿಯದ ಜಲಮೂಲಗಳನ್ನು 'ಇತರೆ' ಎಂಬ ಪಟ್ಟಿಯಲ್ಲಿ ಸೇರಿಸಲಾಗಿದೆ.





- ಕರ್ನಾಟಕದಲ್ಲಿ 948 ಜಲಮೂಲಗಳು ಒತ್ತುವರಿಯಾಗಿದ್ದು, ಇವುಗಳಲ್ಲಿ ಕೆರೆಗಳ ಪಾಲೇ ಶೇ 75ರಷ್ಟಿದೆ
- 17,015 ಕೆರೆಗಳ ಪೈಕಿ 708 ಕೆರೆಗಳು ಹಾಗೂ 1892 ಸರೋವರಗಳ ಪೈಕಿ 22 ಸರೋವರಗಳು ಒತ್ತುವರಿಯಾಗಿವೆ
- ಒತ್ತುವರಿಯಾಗಿರುವ 948 ಜಲಮೂಲಗಳ ಪೈಕಿ 694 ಜಲಮೂಲಗಳಲ್ಲಿ ಮಾತ್ರ ಎಷ್ಟು ಪ್ರಮಾಣದ ಒತ್ತುವರಿ ನಡೆದಿದೆ ಎಂದು ಅಂದಾಜಿಸಲು ಸಾಧ್ಯವಾಗಿದೆ
- 948 ಜಲಮೂಲಗಳ ಪೈಕಿ ಶೇ 26ರಷ್ಟು ಜಲಮೂಲಗಳ (254) ಒತ್ತುವರಿ ಪ್ರಮಾಣವನ್ನು ನಿರ್ಧರಿಸಲು ಸಾಧ್ಯವಾಗಿಲ್ಲ
- ಶೇ 25ಕ್ಕಿಂತ ಕಡಿಮೆ ಪ್ರಮಾಣ ಒತ್ತುವರಿಗೆ ಒಳಗಾದ 601 ಜಲಮೂಲಗಳನ್ನು ರಾಜ್ಯದಲ್ಲಿ ಗುರುತಿಸಲಾಗಿದೆ; ಶೇ 75ಕ್ಕಿಂತ ಹೆಚ್ಚು ಒತ್ತುವರಿಯಾದ 21 ಜಲಮೂಲಗಳನ್ನು ಗುರುತಿಸಲಾಗಿದೆ
- ಶೇ 25ರಿಂದ ಶೇ 50ರಷ್ಟು ಒತ್ತುವರಿಯಾದ 51 ಜಲಮೂಲಗಳೂ ಹಾಗೂ ಶೇ 50ರಿಂದ 75ರಷ್ಟು ಒತ್ತುವರಿಯಾದ 21 ಜಲಮೂಲಗಳನ್ನು ಗುರುತಿಸಲಾಗಿದೆ

ತಾಳೆಯಾಗದ ಕೆರೆಗಳ ಲೆಕ್ಕ...

ಕೊಳ, ಕೆರೆ, ಸರೋವರ, ಜಲಾಶಯ, ಜಲಸಂರಕ್ಷಣೆ ಉದ್ದೇಶಕ್ಕೆ ಕಟ್ಟಲಾದ ಜಲಸಂಗ್ರಹಾಗಾರಗಳು ಸೇರಿದಂತೆ ಕರ್ನಾಟಕದಲ್ಲಿ 27,013 ಜಲಮೂಲಗಳನ್ನು ಗಣತಿಯಲ್ಲಿ ಉಲ್ಲೇಖಿಸಲಾಗಿದೆ. ಈ ಪೈಕಿ 18,907 ಕೆರೆ ಹಾಗೂ ಸರೋವರಗಳಿವೆ. ಆದರೆ, ಕರ್ನಾಟಕ ಸಾರ್ವಜನಿಕ ಜಮೀನು ನಿಗಮವು (ಕೆಪಿಎಲ್‌ಪಿಎಲ್) 2021ರಲ್ಲಿ ಪ್ರಕಟಿಸಿದ್ದ ಮಾಹಿತಿಯಂತೆ ರಾಜ್ಯದಲ್ಲಿ 40,483 ಕೆರೆಗಳಿವೆ. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ (ಕೆಟಿಸಿಡಿಎ) ಮಾಹಿತಿಯಂತೆ 2020ರಲ್ಲಿ ರಾಜ್ಯದಲ್ಲಿ 39,321 ಕೆರೆಗಳನ್ನು ಗುರುತಿಸಲಾಗಿದೆ. ಕರ್ನಾಟಕದ ಈ ಎರಡೂ ಪ್ರಾಧಿಕಾರಗಳು ನೀಡಿರುವ ಕೆರೆಗಳ ಮಾಹಿತಿಯಲ್ಲಿ ಅಲ್ಪ ಪ್ರಮಾಣದ ವ್ಯತ್ಯಾಸವಿದೆ. ಆದರೆ ಕೇಂದ್ರ ಸರ್ಕಾರದ ಗಣತಿಯಲ್ಲಿ ಹೇಳಲಾಗಿರುವ ಕೆರೆಗಳ ಸಂಖ್ಯೆಗೂ, ರಾಜ್ಯದ ಪ್ರಾಧಿಕಾರಗಳು ನೀಡಿರುವ ಕೆರೆಗಳ ಸಂಖ್ಯೆಗೂ ತಾಳೆಯಾಗುವುದಿಲ್ಲ. ಸರಿಸುಮಾರು 22 ಸಾವಿರದಷ್ಟು ವ್ಯತ್ಯಾಸ ಕಂಡುಬಂದಿದೆ. ಹೀಗಾಗಿ, ಕೇಂದ್ರ ಸರ್ಕಾರವು ಜಲಮೂಲಗಳ ಗಣತಿಗೆ ಆಯ್ದುಕೊಂಡ ವಿಧಾನದ ಬಗ್ಗೆ ಪ್ರಶ್ನೆಗಳು ಮೂಡಿವೆ.



ರಾಜ್ಯದಲ್ಲಿ ಮಾನವ ನಿರ್ಮಿತ ಜಲಮೂಲಗಳ ಸಂಖ್ಯೆ ತೀರಾ ಕಡಿಮೆ

ನೈಸರ್ಗಿಕವಾಗಿ ನಿರ್ಮಾಣವಾಗಿರುವ ಕರೆ, ಕಟ್ಟೆಯಂತಹ ನೀರು ಸಂಗ್ರಹಾಗಾರಗಳಿಂದ ಮಳೆಗಾಲದಲ್ಲಿ ಸಹಜವಾಗಿ ನೀರು ಸಂಗ್ರಹವಾಗುತ್ತದೆ. ಇದರ ಜೊತೆಗೆ ಜನರ ನಿತ್ಯದ ಬಳಕೆಗೆ ಹಾಗೂ ನೀರಾವರಿಗೆ ಅನುಕೂಲವಾಗುವಂತೆ ಕೆರೆಕಟ್ಟೆಗಳು, ಜಲಾಶಯ ಮೊದಲಾದ ಜಲಸಂಗ್ರಹಾಗಾರಗಳನ್ನು ನಿರ್ಮಿಸಲಾಗಿದೆ. ಹೀಗೆ ಮಾನವ ನಿರ್ಮಿತ ಜಲಮೂಲಗಳ ಪ್ರಮಾಣವು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿದೆ. ಪ್ರಾದೇಶಿಕ ಭೌಗೋಳಿಕ ರಚನೆ ಕಾರಣವನ್ನು ಹೊರತುಪಡಿಸಿದರೆ, ಎಲ್ಲ ರಾಜ್ಯಗಳಿಗೂ ಇಂತಹ ಜಲಮೂಲಗಳನ್ನು ನಿರ್ಮಿಸಲು ಸಾಮರ್ಥ್ಯವಿದೆ. ಆದರೆ ಕೆಲವು ರಾಜ್ಯಗಳು ಇದಕ್ಕೆ ನಿರಾಸಕ್ತಿ ತೋರಿವೆ ಎಂಬುದು ಗಣತಿ ವರದಿಯ ದತ್ತಾಂಶಗಳನ್ನು ಗಮನಿಸಿದರೆ ತಿಳಿಯುತ್ತದೆ.

ಈ ವಿಚಾರದಲ್ಲಿ ಕರ್ನಾಟಕ ಹಿಂದಿದೆ. ರಾಜ್ಯದ ಒಟ್ಟು 27,013 ಜಲಮೂಲಗಳ ಪೈಕಿ ನೈಸರ್ಗಿಕವಾಗಿ ನಿರ್ಮಾಣವಾಗಿರುವ ಜಲಮೂಲಗಳ ಸಂಖ್ಯೆಯೇ 26,293 ಇದೆ. ಅಂದರೆ ಕೇವಲ 720 ಜಲಮೂಲಗಳನ್ನು ಮಾತ್ರ ಈವರೆಗೆ ಕೃತಕವಾಗಿ ನಿರ್ಮಾಣ ಮಾಡಲಾಗಿದೆ. ಕೆರೆಗಳು, ಜಲಾಶಯಗಳು ಇದರಲ್ಲಿ ಸೇರಿವೆ. ಇಂತಹ ಮಾನವ ನಿರ್ಮಿತ ಜಲಸಂಗ್ರಹಾಗಾರಗಳ ಪ್ರಮಾಣ ಶೇ 2.4ರಷ್ಟು ಮಾತ್ರ ಎಂದು ಗಣತಿಯ ದತ್ತಾಂಶಗಳು ಹೇಳುತ್ತವೆ.

ಪಕ್ಕದ ಆಂಧ್ರ ಪ್ರದೇಶದ 19 ಲಕ್ಷ ಒಟ್ಟು ಜಲಮೂಲಗಳ ಪೈಕಿ, 26 ಸಾವಿರದಷ್ಟು ಜಲಮೂಲಗಳು ಮಾತ್ರ ನೈಸರ್ಗಿಕವಾಗಿ ನಿರ್ಮಾಣವಾಗಿವೆ. ಸುಮಾರು 16 ಲಕ್ಷದಷ್ಟು ಜಲಮೂಲಗಳನ್ನು ಕೃತಕವಾಗಿ ನಿರ್ಮಿಸಿ, ಕುಡಿಯುವ ನೀರು ಹಾಗೂ ನೀರಾವರಿಗೆ ಅವಕಾಶ ಕಲ್ಪಿಸಲಾಗಿದೆ. ಅಸ್ಸಾಂನಲ್ಲಿ 17.2 ಲಕ್ಷ ಜಲಮೂಲಗಳ ಪೈಕಿ 16.8 ಲಕ್ಷ ಜಲಮೂಲಗಳನ್ನು ಸರ್ಕಾರ ನಿರ್ಮಿಸಿದೆ. ಮಹಾರಾಷ್ಟ್ರ, ಹಿಮಾಚಲ ಪ್ರದೇಶದಲ್ಲೂ ಮಾನವ ನಿರ್ಮಿತ ಜಲಮೂಲಗಳೇ ಹೆಚ್ಚು. ಮೇಘಾಲಯದಂತಹ ಪುಟ್ಟ ರಾಜ್ಯದಲ್ಲಿ 13,120 ಕೃತಕ ಜಲಮೂಲಗಳನ್ನು ಸೃಷ್ಟಿಸಲಾಗಿದೆ.

5,874 ಜಲಮೂಲಗಳಷ್ಟೇ ಬಳಕೆ

ಕೊಳ, ಕೆರೆ, ಸರೋವರ, ಜಲಾಶಯ, ಜಲಸಂಗ್ರಹಾಗಾರಗಳು ಸೇರಿದಂತೆ ಕರ್ನಾಟಕದಲ್ಲಿ 27,013 ಜಲಮೂಲಗಳಿವೆ ಎಂದು ಗಣತಿ ಹೇಳಿದೆ. ಇದರ ಪ್ರಕಾರ, ರಾಜ್ಯದ ಎಲ್ಲ ಸ್ವರೂಪದ ಜಲಮೂಲಗಳ ಪೈಕಿ ಶೇ 78ರಷ್ಟು ಜಲಮೂಲಗಳು ನಿರುಪಯುಕ್ತವಾಗಿವೆ. ಇವು ಸೂಕ್ತ ರೀತಿಯಲ್ಲಿ ಬಳಕೆಯಾಗುತ್ತಿಲ್ಲ. ರಾಜ್ಯದಲ್ಲಿ 5,874 ಜಲಮೂಲಗಳಷ್ಟೇ ಬಳಕೆಯಾಗುತ್ತಿದ್ದು, ಉಳಿದ 21,139 ಜಲಮೂಲಗಳು ಸೂಕ್ತ ರೀತಿಯಲ್ಲಿ ಬಳಕೆಯಾಗುತ್ತಿಲ್ಲ ಎಂದು ವರದಿ ಅಭಿಪ್ರಾಯಪಟ್ಟಿದೆ. ವಿವಿಧ ರೀತಿಯ ಜಲಮೂಲಗಳ ಬಳಕೆ ವಿಚಾರದಲ್ಲಿ ಕರ್ನಾಟಕ ಹಿಂದೆ ಬಿದ್ದಿದೆ ಎಂಬುದು ಗಣತಿಯ ದತ್ತಾಂಶಗಳಿಂದ ತಿಳಿಯುತ್ತದೆ.

ಆದರೆ ಉಳಿದ ರಾಜ್ಯಗಳಲ್ಲಿ ಪರಿಸ್ಥಿತಿ ಕರ್ನಾಟಕಕ್ಕಿಂತ ಭಿನ್ನವಾಗಿದೆ. ಉದಾಹರಣೆಗೆ ಮಹಾರಾಷ್ಟ್ರದ 97,062 ಜಲಮೂಲಗಳಲ್ಲಿ ಬಳಕೆಯಾಗದೆ ಉಳಿದಿರುವುದು 1,029 ಮಾತ್ರ. ಅಂದರೆ ಶೇ 99ರಷ್ಟು ಜಲಮೂಲಗಳನ್ನು ಅಲ್ಲಿನ ಸರ್ಕಾರವು ಬಳಕೆಗೆ ಪೂರಕವಾದ ಸ್ಥಿತಿಯಲ್ಲಿ ಇಟ್ಟುಕೊಂಡಿದೆ. ಗುಜರಾತಿನಲ್ಲೂ ಶೇ 99ರಷ್ಟು ಜಲಮೂಲಗಳು ಉಪಯೋಗವಾಗುತ್ತಿವೆ. ಆಂಧ್ರ ಪ್ರದೇಶದಲ್ಲಿ ಶೇ 78ರಷ್ಟು ಜಲಮೂಲಗಳು ಬಳಕೆಗೆ ಯೋಗ್ಯವಾಗಿವೆ.



ಪ್ರಜಾವಾಣಿ ಗ್ರಾಫಿಕ್ಸ್

ಆಧಾರ: ಕೇಂದ್ರ ಜಲಶಕ್ತಿ ಸಚಿವಾಲಯದ ಜಲಮೂಲಗಳ ಗಣತಿ–ಭಾಗ 1

ಸಿನಿ ಸಮ್ಮಾನದ ನೆವದಲ್ಲಿ ರಾಜ್ ಮೊದಲ ಚಿತ್ರಾವಕಾಶದ ಸ್ಮರಣೆ

ಮದ್ರಾಸ್‌ನ ಕರ್ನಾಟಕ ಫಿಲ್ಮ್ಸ್‌ನಿಂದ ಒಮ್ಮೆ ರಾಜ್‌ಕುಮಾರ್ ಅವರಿಗೆ ಪತ್ರ ಬಂದಿತ್ತು. ಮೇಕಪ್ ಟೆಸ್ಟ್ ಎಲ್ಲ ಆದ ಮೇಲೆ ಆಯ್ಕೆಯಾದರೆ, 'ಬೇಡರ ಕಣ್ಣಪ್ಪ' ಸಿನಿಮಾದಲ್ಲಿ ನಟಿಸುವ ಅವಕಾಶ ಸಿಗಲಿದೆ ಎಂದು ಅದರಲ್ಲಿ ಉಲ್ಲೇಖಿಸಲಾಗಿತ್ತು. ಮದ್ರಾಸ್‌ಗೆ ಹೋಗಿ, ಮೇಕಪ್ ಟೆಸ್ಟ್ ಕೊಟ್ಟು ಬಂದರು.

ನಿರ್ದೇಶಕ ಎಲ್.ಎನ್. ಸಿಂಹ ಅವರೇನೊ ಮೆಚ್ಚಿಕೊಂಡಿದ್ದರು. ಆಯ್ಕೆಯಾದರೆ ಪತ್ರ ಹಾಕುವುದಾಗಿ ಹೇಳಿದ್ದರು. ಅದಕ್ಕಾಗಿ ರಾಜ್‌ಕುಮಾರ್ ನಿತ್ಯವೂ ಅಂಚೆಯವನನ್ನು ಎದಿರುನೋಡತೊಡಗಿದ್ದರು. 'ಪ್ರಜಾವಾಣಿ' ಪ್ರಕಟಿಸಿದ್ದ ಅವರ ಆತ್ಮಕಥೆಯಲ್ಲಿ ಆ ಸಂದರ್ಭವು ಸಣ್ಣಪುಟ್ಟ ವಿವರಗಳೊಂದಿಗೆ ದಾಖಲಾಗಿತ್ತು. ಅದರ ಪುಟ್ಟ ಭಾಗ ಹೀಗಿದೆ:

'ಒಂದು ದಿನ ಎಣ್ಣೆನೀರು ಹಾಕಿಕೊಳ್ಳುತ್ತಿದ್ದೆ. ತಲೆಯ ಮೇಲೆ ಬಿಸಿನೀರು ಬೀಳುತ್ತಿತ್ತು. ಮನಸ್ಸು ದುಃಖದಿಂದ ತುಂಬಿಹೋಗಿತ್ತು. 'ಮದರಾಸಿನಿಂದ ಸಮಾಚಾರವಿಲ್ಲ. ಜತೆಗೆ ನಾನು ಚಿತ್ರರಂಗಕ್ಕೆ ಹೋಗುವೆನೆಂದು ಇಲ್ಲೆಲ್ಲ ಪ್ರಚಾರವಾಗಿ ಹೋಗಿದೆ. ಮದುವೆಗೆ ಸಾಲ ಬೇರೆ ಆಗಿ... ಸಂಸಾರ ಬೆಳೆಯುತ್ತಿದೆ; ಏನು ಮಾಡಲಿ ಒಂದೂ ತೋಚುವುದಿಲ್ಲ' ದುಃಖ ಕಟ್ಟೆಯೊಡೆಯಿತು. ತಲೆಯ ಮೇಲೆ ಬೀಳುತ್ತಿದ್ದ ನೀರಿನ ಜತೆಯೇ ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯುತ್ತಿತ್ತು'. ಆ ಸಮಯದಲ್ಲಿ ಹೊರಗೆ ಅಂಚೆಯಣ್ಣನ ಕರೆ:

'ರಿಜಿಸ್ಟರ್ಡ್ ಪೋಸ್ಟ್'.

ಕಾಂಟ್ರಾಕ್ಟ್ ಸಮೇತ ಅಂಚೆಯ ಮೂಲಕ ಹಾಗೆ ರಾಜ್‌ಕುಮಾರ್ ಅವರಿಗೆ ಸಿನಿಮಾ ಅವಕಾಶ ಹುಡುಕಿಕೊಂಡು ಬಂದಿತ್ತು.

'ಪ್ರಜಾವಾಣಿ'ಯು ಸಿನಿಮಾಗೆ ಸಂಬಂಧಿಸಿದ ಇಂತಹ ಆಪ್ತವಾದ ಬರಹಗಳನ್ನು ದಶಕಗಳಿಂದ ನೀಡುತ್ತಾ ಬಂದಿದೆ. ಈಗ ಚಿತ್ರರಂಗದ ಗಟ್ಟಿಕಾಳುಗಳನ್ನು ಹೆಕ್ಕಿ, ಸನ್ಮಾನಿಸುವ ಗಳಿಗೆಗೆ ದಿನಗಣನೆ ಶುರುವಾಗಿದೆ. 'ಪ್ರಜಾವಾಣಿ ಸಿನಿ ಸಮ್ಮಾನ'ದ ಸ್ವರೂಪ ಹೇಗಿರಲಿದೆ ಎನ್ನುವುದು ಶೀಘ್ರದಲ್ಲೇ ಓದುಗರಿಗೆ ಇದೇ ಪುಟದಲ್ಲಿ ತಿಳಿಯಲಿದೆ.

ಸಿನಿ ಸಮ್ಮಾನದ ಮೊದಲ ಮಾಹಿತಿಗೆ ನೋಡಿ:

https://www.prajavani.net/cinesamman

ವಿದೇಶಕ್ಕೆ ಹಾರಲಿದ್ದಾನೆ 'ಮೈ ಹೀರೋ'

ಹಾಲಿವುಡ್ ನಟ ಜಿಲಾಲಿ ರೆಜ್ ಕಲ್ಲಾಹ್ ಮತ್ತು ನಟಿ ಅಂಕಿತಾ ಅಮರ್ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ಮೈ ಹೀರೊ' ಚಿತ್ರತಂಡ ವಿದೇಶಕ್ಕೆ ಹಾರಲು ಸಜ್ಜಾಗಿದೆ. ಎ.ವಿ.ಸ್ಟುಡಿಯೋಸ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ ಚಿತ್ರದ ದ್ವಿತೀಯ ಹಂತದ ಚಿತ್ರೀಕರಣ ಮುಕ್ತಾಯವಾಗಿದೆ. ಮಧ್ಯಪ್ರದೇಶದ ಮಹೇಶ್ವರ ಎಂಬ ಸ್ಥಳದಲ್ಲಿ ಚಿತ್ರದ ಹೆಚ್ಚಿನ ಮಾತಿನ ಭಾಗ ಹಾಗೂ ಒಂದು ಹಾಡು ಚಿತ್ರೀಕರಣಗೊಂಡಿದೆ. ಕೊನೆಯ ಹಂತದ ಚಿತ್ರೀಕರಣ ಅಮೆರಿಕದಲ್ಲಿ ನಡೆಯಲಿದ್ದು, ಅಲ್ಲಿನ ಸ್ಥಳೀಯ ಕಲಾವಿದರು ಭಾಗಿಯಾಗಲಿದ್ದಾರೆ ಎಂದು ಚಿತ್ರತಂಡ ಹೇಳಿದೆ.

ಬಾಲನಟ ವೇದಿಕ್ ಕೌಶಿಕ್, ದತ್ತಣ್ಣ, ಪ್ರಕಾಶ್ ಬೆಳವಾಡಿ, ನಿರಂಜನ್ ದೇಶಪಾಂಡೆ ಮೊದಲಾದವರು ಚಿತ್ರದಲ್ಲಿದ್ದಾರೆ. ಅವಿನಾಶ್ ವಿಜಯ ಕುಮಾರ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದು, ಎ.ವಿ.ಸ್ಟುಡಿಯೋಸ್ ಮೂಲಕ ಈ ಚಿತ್ರವನ್ನು ಅವರೇ ನಿರ್ಮಿಸುತ್ತಿದ್ದಾರೆ. ಗಗನ್ ಬಡೇರಿಯಾ ಸಂಗೀತ ನಿರ್ದೇಶನ ಹಾಗೂ ವೀನಸ್ ನಾಗರಾಜ್ ಅವರ ಛಾಯಾಗ್ರಹಣ ಚಿತ್ರಕ್ಕಿದೆ.

'ಇಡೀ ವಿಶ್ವದಲ್ಲೇ ಇರುವ ಸಾಮಾಜಿಕ ಸಮಸ್ಯೆಯೊಂದರ ಕುರಿತಾದ ಚಿತ್ರವಿದು. ಭಾರತ ಮತ್ತು ಅಮೆರಿಕದ ಪಾತ್ರಗಳು ಕಥೆಯಲ್ಲಿ ಇರುವುದರಿಂದ ಅಲ್ಲಿಯೇ ಚಿತ್ರೀಕರಣ ನಡೆಸುತ್ತಿದ್ದೇವೆ' ಎನ್ನುತ್ತಾರೆ ನಿರ್ದೇಶಕರು.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ತಕ್ಕದ್ದು-ದಕ್ಕಿದ್ದು

ಆರಿಗಾವುದು ತಕ್ಕದಾರಿಗಾವುದು ದಕ್ಕ - |
ದೀ ರಹಸ್ಯದಿನಾದ ಸಾಹ್ಯವುಪಕಾರ ||
ತಾರತಮ್ಯ ವಿವೇಕವರಿಯದಾ ಸಂಸ್ಕಾರ |
ಪ್ರೇರಕವೊ ಚಾರ್ಯಕ್ಕೆ – ಮಂಕುತಿಮ್ಮ || 871 ||

ಪದ-ಅರ್ಥ: ಆರಿಗಾವುದು = ಆರಿಗೆ (ಯಾರಿಗೆ) + ಆವುದು (ಆಗುವುದು), ತಕ್ಕ ದಾರಿಗಾವುದು = ತಕ್ಕದು + ಆರಿಗೆ + ಆವುದು, ದಕ್ಕದೀ- = ದಕ್ಕದು + ಈ, ರಹಸ್ಯದಿನಾದ = ರಹಸ್ಯದಿನ್ (ರಹಸ್ಯದಿಂದ) + ಆದ, ಸಾಹ್ಯವುಪಕಾರ = ಸಾಹ್ಯ(- ಸಹಾಯವಾದ) + ಉಪಕಾರ.

ವಾಚ್ಯಾರ್ಥ: ಯಾರಿಗೆ ಯಾವುದು ತಕ್ಕದ್ದು, ಯಾರಿಗೆ ಯಾವ ವಸ್ತು ದಕ್ಕದು ಎಂಬ ರಹಸ್ಯ ತಿಳಿದರೆ ಅದೊಂದು ಉಪಕಾರವಾದೀತು. ತಾರತಮ್ಯವಿವೇಕವನ್ನು ತಿಳಿಯದ ಸಂಸ್ಕಾರ ಕಳ್ಳತನಕ್ಕೆ ಪ್ರೇರಕವಾಗುತ್ತದೆ.

ವಿವರಣೆ: ಈ ಕಗ್ಗದಲ್ಲಿ ಎರಡು ಪದಗಳಿವೆ- ತಕ್ಕದ್ದು, ದಕ್ಕದ್ದು. ತಕ್ಕದು ಎಂದರೆ ನಮಗೆ ಅರ್ಹತೆ ಇರುವಂಥದ್ದು. ಯಾವುದನ್ನು ಹೊಂದುವುದಕ್ಕೆ ನನಗೆ ಅರ್ಹತೆ ಇದೆಯೋ ಅದನ್ನು ಪಡೆದರೆ ಅದು ತಕ್ಕುದಾದದ್ದು. ಅಸಾಮಾನ್ಯ ಸಾಧಕರೊಬ್ಬರಿಗೆ ರಾಷ್ಟ್ರ ಪ್ರಶಸ್ತಿ ಬಂದರೆ ಅದು ತಕ್ಕುದಾದದ್ದು, ಯೋಗ್ಯವಾದದ್ದು. ಅತ್ಯಂತ ಬಡವನೊಬ್ಬನಿಗೆ ನೂರು ಕೋಟಿ ರೂಪಾಯಿಯ ಲಾಟರಿ ಬಂದರೆ ಸಂತೋಷ. ಅವನು ಅದನ್ನು ಚೆನ್ನಾಗಿ ಬಳಸಿಕೊಂಡರೆ ಅದು ಅವನಿಗೆ ದಕ್ಕಿದಂತೆ. ಯಾರು ಯಾರದೋ ಮಾತು ಕೇಳಿ ಆತ ಹಣವನ್ನೆಲ್ಲ ಕಳೆದುಕೊಂಡರೆ, ಹಣ ಪಡೆದೂ ಆತ ದಕ್ಕಿಸಿಕೊಳ್ಳಲಿಲ್ಲ ಎನ್ನುತ್ತೇವೆ. ಯಾರಿಗೆ ಯಾವುದು ತಕ್ಕದು ಎಂಬುದೊಂದು ದೊಡ್ಡ ಜಿಜ್ಞಾಸೆ.

ಒಬ್ಬ ಬಡ ಬ್ರಾಹ್ಮಣ ತನ್ನ ಬಡತನಕ್ಕೆ ಬೇಸತ್ತು ಚಕ್ರವರ್ತಿಯ ಬಳಿಗೆ ಹೋದನಂತೆ ಈ ಬ್ರಾಹ್ಮಣನ ವಿದ್ವತ್ತಿಗೆ ರಾಜ ಬೆರಗಾದ. ಕೊನೆಗೆ ಬ್ರಾಹ್ಮಣ ತನ್ನ ದೀನಸ್ಥಿತಿಯನ್ನು ಹೇಳಿಕೊಂಡ. ಅತ್ಯಂತ ಸಂತೋಷದಲ್ಲಿದ್ದ ರಾಜ ಬ್ರಾಹ್ಮಣನಿಗೆ ಶ್ರೇಷ್ಠವಾದ ದಾನವನ್ನೇ ಕೊಡಬೇಕೆಂದು ತೀರ್ಮಾನಿಸಿ ತನ್ನ ಲಾಯದಲ್ಲಿದ್ದ ಮಂಗಲೀಕ ಆನೆಯನ್ನೇ ದಾನವಾಗಿ ಕೊಟ್ಟನಂತೆ. ಬ್ರಾಹ್ಮಣ ಎದೆಯೊಡೆದುಕೊಂಡ. ತನ್ನ ಹೊಟ್ಟೆಗೇ ಅನ್ನ ಪೂರೈಸಲಾರದವನು ಆನೆಯ ಹೊಟ್ಟೆಗೆ ಏನು ಹಾಕಿಯಾನು? ಬ್ರಾಹ್ಮಣ ದಾನಕ್ಕೆ ಅರ್ಹನೇ ಆದರೂ, ಅವನಿಗೆ ಯಾವುದು ತಕ್ಕದಾದದ್ದು ಎಂಬ ತೀರ್ಮಾನಕ್ಕೆ ವಿವೇಕ ಬೇಕು. ಒಬ್ಬ ರಾಜರು ಹಣಕಾಸಿನ ವಿಷಯಸ್ಥಿತಿಯಲ್ಲಿ ಸಿಕ್ಕಿದಾಗ ತಮ್ಮ ಅರಮನೆಯನ್ನೇ ವ್ಯಾಪಾರಿಯೊಬ್ಬರಿಗೆ ಒತ್ತೆ ಇಟ್ಟು ಹಣ ಪಡೆದರು. ವ್ಯಾಪಾರಿ ಅರಮನೆಯನ್ನು ಸಿನಿಮಾ ಶೂಟಿಂಗ್ ಮತ್ತಿತರ ಕಾರ್ಯಕ್ರಮಗಳಿಗೆ ಬಳಸಿ ಕೊಳಕು ಮಾಡಿದ. ಇಪ್ಪತ್ತು ವರ್ಷಗಳ ನಂತರ ರಾಜರು ಅರಮನೆಯನ್ನು ಬಿಡಿಸಿಕೊಂಡರು. ಆಗ ಒಂದು ಕಪಾಟಿನಲ್ಲಿ ನಾಲ್ಕು ಗಾಜಿನ ಗೋಲಿಗಳಿದ್ದವು. ಅವು ತುಂಬ ಕೊಳಗಾಗಿ ಕಪ್ಪಾಗಿದ್ದವು. ಅವುಗಳನ್ನು ಕುತೂಹಲದಿಂದ ತೊಳೆದು ನೋಡಿದರೆ ಅವು ವಜ್ರಗಳು! ಇಪ್ಪತ್ತು ವರ್ಷ ಅಲ್ಲಿಯೇ ಬಿದ್ದಿದ್ದವು. ಅವುಗಳನ್ನು ಎಷ್ಟು ಜನ ಬಳಸಿದ್ದರೋ. ಆದರೆ ಕೊನೆಗೆ ಅವು ದಕ್ಕಿದ್ದು ಮರಳಿ ರಾಜರಿಗೇ. ಯಾರಿಗೆ ಯಾವುದು ತಕ್ಕುದು, ಯಾವುದು ದಕ್ಕೀತು ಎಂಬುದು ರಹಸ್ಯ ತಿಳಿದರೆ ತುಂಬ ಉಪಕಾರ. ತಾರತಮ್ಯವನ್ನು ಅರಿಯದೆ ಮಾಡಿದ ಕ್ರಿಯೆ ಚಾರ್ಯಕ್ಕೆ ಕಾರಣವಾಗುತ್ತದೆ. ಅಸಮರ್ಥನಾದವನ ಕೈಯಲ್ಲಿ ಅಧಿಕಾರ, ಹಣ ಇದ್ದರೆ ಮತ್ತೊಬ್ಬರು ಅದನ್ನು ಕದಿಯುತ್ತಾರೆ, ದೋಚುತ್ತಾರೆ. ದಕ್ಕಿಸಿಕೊಳ್ಳಲಾಗದ ವಸ್ತುವನ್ನು ಮತ್ತೊಬ್ಬರು ಕದ್ದು, ಮೋಸಮಾಡಿ, ಪಡೆದು ದಕ್ಕಿಸಿಕೊಳ್ಳುತ್ತಾರೆ. ಅದಕ್ಕೆ ವಿವೇಕವಿಲ್ಲದ ಸಂಸ್ಕಾರ ಅನ್ಯಾಯದ, ಚಾರ್ಯಕ್ಕೆ ಕಾರಣವಾಗುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಗುರುವಾರ ಏಪ್ರಿಲ್ 27, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಶುದ್ಧ ಸಪ್ತಮಿ ಗಂ. 13-39 ನಕ್ಷತ್ರ: ಪುನರ್ವಸು ಗಂ. 7.00 ಯೋಗ: ಧೃತಿ ಗಂ. 08-47, ಕರಣ: ವಣಿಜ ಗಂ. 13-39, ಮೇಷ ಮಾಸದ 13 ನೇ ದಿನ, ಮಳೆನಕ್ಷತ್ರ: ಅಶ್ವಿನಿ 4. ರಾಹುಕಾಲ : ಮಧ್ಯಾಹ್ನ 01-30 – 03-00, ಸೂರ್ಯೋದಯ : 06-15 ಸೂರ್ಯಾಸ್ತ : 06-42, ಮುಸ್ಲಿಂ ದಿನಾಂಕ : 06 ಶವ್ವಾಲ್

ಅದೃಷ್ಟ ಸಂಖ್ಯೆ: 8, 2

ಮೇಷ: ಪ್ರಾಪ್ತ ವಯಸ್ಸಿನ ಮಗಳಿಗೆ ಸಂಬಂಧಿಕರಲ್ಲಿಯೇ ಅಥವಾ ಅಕ್ಕ- ಪಕ್ಕದ ಮನೆಯಲ್ಲಿಯೇ ವರ ನಿಶ್ಚಯವಾಗಿ ಮದುವೆಯ ತಯಾರಿ ನಡೆಸುವಿರಿ. ವಿದ್ಯಾರ್ಥಿ ಜೀವನ ಇಷ್ಟಪಡುವವರಿಗೆ ಅಧ್ಯಯನಕ್ಕೆ ಸಕಾಲವಾಗಿರುತ್ತದೆ.

ವೃಷಭ: ಸ್ವಾಧ್ಯಯನವನ್ನು ನಡೆಸದೆ ವಿದ್ಯಾರ್ಥಿಗಳ ಮುಂದೆ ಪಾಠ ಮಾಡಲು ತೆರಳಿ ವಿಷಯಗಳು ಅದಲು ಬದಲು ಮಾಡಿಕೊಳ್ಳುವ ಸಾಧ್ಯತೆ ಇದೆ. ಮನೆಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ನಿರೀಕ್ಷೆಗಿಂತ ಹೆಚ್ಚು ಜನರು ಬರಲಿದ್ದಾರೆ.

ಮಿಥುನ: ಕೆಲವು ವಸ್ತುಗಳ ದರ್ಶನದಿಂದ ಪೂರ್ವಾಶ್ರಮದ ಘಟನೆಗಳು ನೆನಪಾಗಿ ಅದನ್ನು ನಿಮ್ಮ ಜೊತೆಗಾರರೊಂದಿಗೆ ಹಂಚಿಕೊಳ್ಳುವಿರಿ. ವಿದ್ಯಾಭ್ಯಾಸದ ಸಮಯದಲ್ಲಿ ನೀವಂದುಕೊಂಡ ಹರಕೆಗಳನ್ನು ಪೂರೈಸುವ ಬಗ್ಗೆ ಯೋಚಿಸಿ.

ಕರ್ಕಾಟಕ: ಅತಿಥಿ ಭಾಷಣದ ವೇಳೆ ಶಾಸ್ತ್ರವಾಣಿಗಳನ್ನು ಹೇಳುವುದರಿಂದಾಗಿ ಮಾತಿನ ಘನತೆ ಹೆಚ್ಚುತ್ತದೆ. ಕುಲದೇವರ ಅಥವ ಕಾರಣೀಕ ಸ್ಥಳದ ಭೇಟಿಯಿಂದ ಪಾಪಗಳೆಲ್ಲವೂ ನಾಶವಾದ ದಿವ್ಯ ಅನುಭವ ಹೊಂದುವಿರಿ.

ಸಿಂಹ: ಸಂದರ್ಶಿಸಲು ಬರುವ ವ್ಯಕ್ತಿಯ ಬಳಿ ದರ್ಪದಿಂದ ನಡೆದುಕೊಳ್ಳುವುದು ಸರಿಯಾದ ವರ್ತನೆ ಆಗಿರುವುದಿಲ್ಲ. ತಿಳಿಯದೆ ಮಾಡಿದ ತಪ್ಪಿನಿಂದಾಗಿ ಅನುಭವಿಸುತ್ತಿರುವ ಕಷ್ಟಗಳಿಗೆ ಪರಿಹಾರವನ್ನು ಪ್ರಾಜ್ಞರಿಂದ ಪಡೆಯಿರಿ.

ಕನ್ಯಾ: ಉತ್ತಮ ಗುಣಮಟ್ಟದ್ದೆಂದು ತಿಳಿದು ತಂದಂತಹ ವಸ್ತುಗಳು ಕಳಪೆ ಪ್ರದರ್ಶನವನ್ನು ನೀಡುತ್ತವೆ. ನಿಮ್ಮ ವಸ್ತ್ರ ವಿನ್ಯಾಸ ಹಾಗೂ ಅದಕ್ಕೆ ತಕ್ಕ ಅಲಂಕಾರವು ಸಂದರ್ಭೋಚಿತವೆ ಎಂದು ಗಮನಿಸಿ. ಸಂಧಿವಾತವು ಕಾಡಬಹುದು.

ತುಲಾ: ಹೊಸ ಹೊಸ ವಿಷಯದ ಅಧ್ಯಯನದಲ್ಲಿ ನೀವು ತೋರಿಸುವ ಆಸಕ್ತಿಯನ್ನು ಹುರಿದುಂಬಿಸಲು ಅನುಕೂಲಕರವಾಗುವ ರೀತಿಯಲ್ಲಿ ಸುತ್ತಲಿನ ವಾತಾವರಣವನ್ನು ನಿರ್ಮಾಣ ಮಾಡಿಕೊಳ್ಳಿ. ಮುಖ್ಯ ವಿಚಾರ ಮರೆಯದಿರಿ.

ವೃಶ್ಚಿಕ: ಎದ್ದ ಸಮಯದಲ್ಲೆ ನಿಮಗೆ ಅಶುಭದ ಸಂಕೇತವೆಂದು ಕಂಡ ವಿಷಯಗಳ ಬಗ್ಗೆ ಹೆಚ್ಚಿನ ಯೋಚನೆಯ ಅಗತ್ಯವಿಲ್ಲ. ಸ್ನೇಹಿತರೊಡನೆ ಸುಂದರ ಸಂಜೆ ಕಳೆಯುವ ಅವಕಾಶ ತಪ್ಪಿಸಿಕೊಳ್ಳುವ ಯೋಚನೆ ಮಾಡದಿರಿ.

ಧನು: ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಸ್ವೀಕರಿಸುವ ಉತ್ತಮ ಅವಕಾಶಗಳು ಎದುರಾಗುವುವು. ಅದರಿಂದಾಗಿ ಸಮಾಜದಲ್ಲಿ ಪ್ರತಿಷ್ಠೆಯು ಹೆಚ್ಚಲಿದೆ. ಗೃಹಿಣಿಯ ಇಷ್ಟಾರ್ಥಗಳು ಮಕ್ಕಳಿಂದ ಸಿದ್ಧಿಯಾಗುವುದು.

ಮಕರ: ಸಾಮಾಜಿಕ ಕಾರ್ಯ ಮಾಡಿರುವ ಕಾರಣದಿಂದಾಗಿ ಸಮಾಜದಲ್ಲಿ ಗುರುತಿಸಲ್ಪಟ್ಟು ಸ್ಥಾನಮಾನ, ಗೌರವಕ್ಕೆ ಪಾತ್ರರಾಗುವಂತಾಗಲಿದೆ. ಕಮಿಷನ್ ಏಜೆಂಟರಿಗೆ ಮತ್ತು ರಿಯಲ್ ಎಸ್ಟೇಟ್ ವ್ಯಾಪಾರಿಗಳಿಗೆ ಅಧಿಕ ಲಾಭ ಇರಲಿದೆ.

ಕುಂಭ: ಜೀವನದಲ್ಲಿ ಅತಿಯಾಗಿ ನಂಬುವ ಅಥವಾ ಅತಿಯಾಗಿ ಅವಲಂಬಿಸಿರುವ ವ್ಯಕ್ತಿ ಜೊತೆ ಸಮಯ ಕಳೆಯುವಿರಿ. ಆಂತರಿಕ ಸಮಸ್ಯೆ ಬಗೆಹರಿಯಬೇಕಾದರೆ ಸಣ್ಣಪುಟ್ಟ ಬದಲಾವಣೆ ಮಾಡಿಕೊಳ್ಳಬೇಕಾಗುವುದು.

ಮೀನ: ಸಹಾಯಕ ವರ್ಗದವರ ಕಷ್ಟಗಳಿಗೆ ನೆರವಾಗುವ ಗುಣಗಳನ್ನು ಜೀವನದಲ್ಲಿ ರೂಢಿಸಿಕೊಳ್ಳಿ. ಸಾಂಸಾರಿಕ ಜವಾಬ್ದಾರಿಗಳು ಮನೆಯಲ್ಲಿನ ಜನರ ಹೆಚ್ಚಳದಿಂದಾಗಿ ಹೆಚ್ಚಲಿದೆ. ಆಸ್ಪತ್ರೆಯ ಭೇಟಿಯಿಂದಾಗಿ ಹಣ ಖರ್ಚಾಗಲಿದೆ.

ಪದಬಂಧ 5301

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಾಲ್ಕು ವೇದಗಳಲ್ಲಿ ಮೊದಲನೆಯದು (3)
4.ಭವದಲ್ಲಿ ಕೊನೆಗೊಂಡಿರುವ ಹುಟ್ಟು (3)
6.ದಾರಿಯಲ್ಲಿ ವಹಿಸಿಕೊಂಡಿರುವ ಹೊಣೆಗಾರಿಕೆ (5)
7.ಭವನದ ಮೇಲಿಂದ ಕಾಣುತ್ತಿರುವ ಆಕಾಶ(2)
9.ಮಾನವನಲ್ಲಿ ಹೊಸತು ಕಾಣುತಿದೆಯೇ?(2)
10.ಗುರುವಿಗೆ ತಕ್ಕವನು ಈ ವಿದ್ಯಾರ್ಥಿ! (2)
11.ಸುಪ್ರಭಾತದ ಹೊತ್ತಿನಲ್ಲಿ ಬಂದಿಳಿದ ಮಗ(2)
13.ಬುದ್ಧಿಭ್ರಮಣೆಯನ್ನು ಹೀಗೆ ಹೇಳಿ (5)
16.ತಲೆಬುರುಡೆಯ ಬುದ್ಧಿಶಕ್ತಿಗೆ ಆಧಾರವಾದ ಅವಯವ (3)
17.ಪುನಃ ಪುನಃ ಬಂದ ಸ್ಮರಣೆ!(3)

ಮೇಲಿಂದ ಕೆಳಕ್ಕೆ

1.ವರ್ಷದ ಎರಡೆರಡು ತಿಂಗಳುಗಳ ಅವಧಿ(4)
2.ರಾಕ್ಷಸ ಇಲ್ಲಿ ಕಾಣುತ್ತಿದ್ದಾನೆ (3)
3.ಸಾಬೂನು ಬಳಸಲು ಹೇಳಿದ ನೆಪ! (3)
4.ಈತ ತಿರುಗಾಡುವವನು (3)
5.ಅರವತ್ತು ವರ್ಷದ ಹುಟ್ಟಿದ ಹಬ್ಬ (4)
8.ಮುಂದೆ ಬರಲಿರುವ ಕಾಲ (3)
9.ಸ್ವಪ್ನವಿಲ್ಲಿ ನಿಜವಾಗಿದೆ (3)
10.ತಲೆ ಬರಹವಿದು (4)
12.ಕನ್ನಡಿಗ ಧರಿಸಿದ ಹೆಲ್ಮೆಟ್! (4)
13.ಮರುಳನ ಕೈಯ್ಯಲ್ಲಿರುವ ಉಸುಕು (3)
14.ಶೇಷ ಕೊನೆಗಿದ್ದಾಗಿನ ಹೆಚ್ಚಿನ ಗುಣ (3)
15.ಸಾಗಿಸುವಿಕೆಗೊಂದು ಪರ್ಯಾಯ ಪದ(3)



5300ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪಾಧ್ಯಾಯ 3.ಸುಭಾಷಿತ 5.ಮಧುರ 7.ಮಗ 8.ನರ 10.ಬಣವೆ 11.ತಾಕತ್ತು 13.ಮಿತಿ 15.ಕ್ಷರ 16.ಬಳಪ 18.ಕರೆಯೋಲೆ 19.ರಸಾಯನ

ಮೇಲಿಂದ ಕೆಳಕ್ಕೆ:
1.ಉಪಮಾನ 2.ಯಮ 3.ಸುರ 4.ತಣಿಗ 6.ಧುರೀಣ 7.ಮರುಭೂಮಿ 9.ರತ್ನಾಕರ 12.ಕಪಾಳ 14.ತಿರೋಧಾನ 15.ಕ್ಷಣಿಕ 16.ಬಲೆ 17.ಪರ

ಸುಡೊಕು 5687

	7	9			3		8	1
				8		2		9
8	1		2	6		7	3	
	8					1		5
	9	2	8	1	5		6	
5						8		
9		7	5					6
	5				2		4	
4	3		6		1			2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5686 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಹೊಸ ಇ.ವಿ. ಎಂಜಿ 'ಕಾಮಿಟ್'

ನವದೆಹಲಿ (ಪಿಟಿಐ): ಎಂಜಿ ಮೋಟರ್ ಇಂಡಿಯಾ ಕಂಪನಿಯು ಭಾರತದ ಮಾರುಕಟ್ಟೆಗೆ ಹೊಸ ವಿದ್ಯುತ್ ಚಾಲಿತ ವಾಹನ (ಇ.ವಿ.) 'ಕಾಮಿಟ್' ಬಿಡುಗಡೆ ಮಾಡಿದೆ. ಇದರ ಪರಿಚಯಾತ್ಮಕ ಬೆಲೆ ₹ 7.98 ಲಕ್ಷ. ಕಂಪನಿಯ ಎರಡನೇ ಇ.ವಿ. ಇದಾಗಿದೆ. ಜೆಡ್‌ಎಸ್ ಇ.ವಿ. ಈಗಾಗಲೇ ಮಾರುಕಟ್ಟೆಯಲ್ಲಿದೆ.

ಜಿಎಸ್‌ಇವಿ ಪ್ಲಾಟ್‌ಫಾರಂ ಅಡಿಯಲ್ಲಿ ಇದನ್ನು ಅಭಿವೃದ್ಧಿಪಡಿಸಲಾಗಿದೆ. ಇದನ್ನು ರೂಪಿಸಲು ಕಂಪನಿಯ ಮಾತೃಸಂಸ್ಥೆ ಚೀನಾದ ಎಸ್‌ಎಐಸಿ ಮೋಟರ್ ಕಾರ್ಪ್ ₹ 700 ಕೋಟಿ ಹೂಡಿಕೆ ಮಾಡಿದೆ. ಒಮ್ಮೆ ಚಾರ್ಜ್ ಮಾಡಿದರೆ 230 ಕಿಲೋ ಮೀಟರ್‌ವರೆಗೆ ಚಲಾಯಿಸಬಹುದು. 17.3 ಕಿಲೋ ವಾಟ್ ಲೀಥಿಯಂ ಅಯಾನ್ ಬ್ಯಾಟರಿಯನ್ನು ಇದು ಹೊಂದಿದೆ. 7 ಗಂಟೆಗಳಲ್ಲಿ ಬ್ಯಾಟರಿಯು ಪೂರ್ತಿ ಚಾರ್ಜ್ ಆಗುತ್ತದೆ ಎಂದು ಎಂದು ಎಂಜಿ ಮೋಟರ್ ಇಂಡಿಯಾದ ಅಧ್ಯಕ್ಷ ರಾಜೀವ್ ಛಾಬಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2 ಬಾಗಿಲಿರುವ ಈ ಹ್ಯಾಚ್, ಆಟೊಮೆಟಿಕ್ ಟ್ರಾನ್ಸ್‌ಮಿಷನ್, 2 ಫ್ರಂಟ್ ಏರ್‌ಬ್ಯಾಗ್ ಸೇರಿದಂತೆ ಹಲವು ವೈಶಿಷ್ಟ್ಯಗಳನ್ನು ಒಳಗೊಂಡಿದೆ ಎಂದು ಕಂಪನಿ ಹೇಳಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,769
ಇಂದಿನ ಅಂತ್ಯ	17,813
▲	44
ದಿನದ ಗರಿಷ್ಠ	17,827

ಕೊಬ್ಬರಿ ಧಾರಣೆ

ಕೆ.ಆರ್.ಪೇಟೆ	₹8250-8250
ತಿಪಟೂರು	₹8500-9108
ತುರುವೇಕೆರೆ	₹9100-9100

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹470

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1665(1665))
ಸೋಯಾ (ರಿಫೈನ್ಡ್)	₹980(980)
ಸೂರ್ಯಕಾಂತಿ (ರಿಫೈನ್ಡ್)	₹1040(1040)
ಪಾಮೋಲಿನ್	₹940(940)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1,000-1,600
ಮಧ್ಯಮ	₹800-1,000
ಸಣ್ಣ	₹400-800

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-450
ನಡುಗೋಲು	500-600
ರಾಶಿ	700-750
ರಾಶಿ ಉತ್ತಮ	800-900
ಜರಡಿ	1000 - 1050
ಹೆರಕಿದ್ದು	1,300-1,400
ಹಸಿರು ಸಾಧಾರಣ	850-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1200-1500
ಕಾಳು ಮೆಣಸು	470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40000
ಹಳತು	48000-53000
ಕುಮಟಾ	
ಚಿಪ್ಪು	29019-31999
ಕೋಕ	19999-30899
ಫ್ಯಾಕ್ಟರಿ	12089-21000
ಹಳೆಚಾಲಿ	36899-39319
ಹೊಸಚಾಲಿ	34709-36309
ಶಿವಮೊಗ್ಗ	
ಬೆಟ್ಟೆ	46569-53000
ಗೊರಬಲು	21991-33909
ರಾಶಿ	30179-47899
ಸರಕು	53000-79496
ಶಿರಸಿ	
ಬೆಟ್ಟೆ	33699-45899
ಬಿಳಿಗೋಟು	22999-31899
ಚಾಲಿ	33799-37619
ಕೆಂಪುಗೋಟು	27099-32199
ರಾಶಿ	43218-46508
ಸೊರಬ	
ಚಾಲಿ	31099-34299
ಕೋಕ	22099-22989

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15400	15400	15400	188.40 ಸೆಂಟ್ಸ್
ಎಸಿ	7980	7600	7800	
ಆರ್‌ಪಿ	10500	10625	10400	ಲಂಡನ್
ಆರ್‌ಸಿ	5830	228 on OT	5650	2419 ಡಾಲರ್ಸ್

ದ್ರವೀಕೃತ ನ್ಯಾನೊ ರಸಗೊಬ್ಬರ ಬಿಡುಗಡೆ ಮಾಡಿದ ಅಮಿತ್ ಶಾ

'ವೆಚ್ಚ ಇಳಿಕೆಗೆ ನ್ಯಾನೊ ಡಿಎಪಿ'

ನವದೆಹಲಿ (ಪಿಟಿಐ): ದೇಶದ ರೈತರು ದ್ರವೀಕೃತ ನ್ಯಾನೊ ಡಿಎಪಿ ಮತ್ತು ನ್ಯಾನೊ ಯೂರಿಯಾ ಬಳಕೆಯನ್ನು ಗರಿಷ್ಠ ಪ್ರಮಾಣದಲ್ಲಿ ಮಾಡಬೇಕು ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಕರೆ ನೀಡಿದ್ದಾರೆ. ಇವುಗಳನ್ನು ವ್ಯಾಪಕವಾಗಿ ಬಳಕೆ ಮಾಡುವುದರಿಂದ ದೇಶವು ರಸಗೊಬ್ಬರ ಉತ್ಪಾದನೆಯಲ್ಲಿ 'ಆತ್ಮನಿರ್ಭರ' ಆಗುತ್ತದೆ ಮತ್ತು ಆಮದು ಮೇಲಿನ ಅವಲಂಬನೆ ಕಡಿಮೆ ಆಗುತ್ತದೆ ಎಂದು ಅವರು ಹೇಳಿದ್ದಾರೆ.

ಇಫ್ಕೊ ಕಂಪನಿಯ ನ್ಯಾನೊ (ದ್ರವರೂಪ) ಡಿಎಪಿ ರಸಗೊಬ್ಬರವನ್ನು ವಾಣಿಜ್ಯ ಬಳಕೆಗೆ ಶಾ ಅವರು ಮುಕ್ತವಾಗಿಸಿದ್ದಾರೆ. ಇದರ ಬೆಲೆಯನ್ನು 500 ಮಿಲಿ ಲೀಟರ್‌ನ ಬಾಟಲಿಗೆ ₹ 600 ನಿಗದಿ ಮಾಡಲಾಗಿದೆ. ಇದು ಸಾಂಪ್ರದಾಯಿಕ ಡಿಎಪಿ ರಸಗೊಬ್ಬರದ ಈಗಿನ ಬೆಲೆಯ ಅರ್ಧಕ್ಕಿಂತ ಕಡಿಮೆ. ದ್ರವರೂಪದ ಗೊಬ್ಬರಗಳು ಕೃಷಿ ಉತ್ಪಾದನೆಯ ಪ್ರಮಾಣವನ್ನು ಮತ್ತು ಗುಣಮಟ್ಟವನ್ನು ಹೆಚ್ಚು ಮಾಡುತ್ತವೆ ಎಂದು ಶಾ ಅವರು ಹೇಳಿದ್ದಾರೆ.

ಮುಖ್ಯಾಂಶಗಳು

- ಕೃಷಿ ಉತ್ಪಾದನಾ ವೆಚ್ಚ ಶೇ 20ರವರೆಗೆ ತಗ್ಗಿಸಲು ಅವಕಾಶ
- ನ್ಯಾನೊ ಡಿಎಪಿಗೆ ಇಫ್ಕೊ ಪೇಟೆಂಟ್
- ನ್ಯಾನೊ ಡಿಎಪಿ ಬೆಲೆಯೂ ಕಡಿಮೆ

50 ಕೆ.ಜಿ. ತೂಕದ ಒಂದು ಚೀಲ ಸಾಂಪ್ರದಾಯಿಕ ಡಿಎಪಿ ಬೆಲೆ ಈಗ ₹ 1,350. 2023-23ರಲ್ಲಿ ಕೇಂದ್ರ ಸರ್ಕಾರವು ರಸಗೊಬ್ಬರ ಸಬ್ಸಿಡಿಗಾಗಿ ₹ 2.25 ಲಕ್ಷ ಕೋಟಿ ವೆಚ್ಚ ಮಾಡಿದೆ.

ಕೃಷಿ ಉತ್ಪಾದನೆಯಲ್ಲಿನ ವೆಚ್ಚವನ್ನು ನ್ಯಾನೊ ಡಿಎಪಿ ಬಳಸಿ ರೈತರು ಶೇ 6ರಿಂದ ಶೇ 20ರವರೆಗೆ ಕಡಿಮೆ ಮಾಡಬಹುದು. ನ್ಯಾನೊ ಯೂರಿಯಾ ಮತ್ತು ನ್ಯಾನೊ ಡಿಎಪಿಗೆ ಇಫ್ಕೊ ಕಂಪನಿಯು 20 ವರ್ಷಗಳ ಅವಧಿಗೆ ಪೇಟೆಂಟ್ ಪಡೆದಿದೆ ಎಂದು ಶಾ ಹೇಳಿದ್ದಾರೆ.

ಇಫ್ಕೊ ಕಂಪನಿಯು ನ್ಯಾನೊ ಡಿಎಪಿ ರಸಗೊಬ್ಬರವನ್ನು ಗುಜರಾತ್‌ನ ಕಲೋಲ್, ಕಾಂಡ್ಲಾ, ಒಡಿಶಾದ ಪಾರಾದೀಪ್‌ನಲ್ಲಿ ಇರುವ ಘಟಕದಲ್ಲಿ ತಯಾರಿಸಲಿದೆ. ಕಲೋಲ್ ಘಟಕದಲ್ಲಿ ಉತ್ಪಾದನೆಯು ಈಗಾಗಲೇ ಶುರುವಾಗಿದೆ. ಈ ವರ್ಷ 5 ಕೋಟಿ ಬಾಟಲಿ ನ್ಯಾನೊ (ದ್ರವರೂಪ) ಡಿಎಪಿ ಉತ್ಪಾದನೆ ಆಗಲಿದೆ. ಇದು 25 ಲಕ್ಷ ಟನ್ ಸಾಂಪ್ರದಾಯಿಕ ಡಿಎಪಿಗೆ ಸಮ.

ಇಫ್ಕೊ ಕಂಪನಿಯು 2025-26ರವರೆಗೆ ಉತ್ಪಾದಿಸಲಿರುವ 18 ಕೋಟಿ ಬಾಟಲ್ ನ್ಯಾನೊ ಡಿಎಪಿಯು 90 ಲಕ್ಷ ಟನ್ ಸಾಂಪ್ರದಾಯಿಕ ಡಿಎಪಿಗೆ ಪರ್ಯಾಯವಾಗಲಿದೆ ಎಂದು ಅಂದಾಜು ಮಾಡಲಾಗಿದೆ. ನ್ಯಾನೊ ಡಿಎಪಿಯಲ್ಲಿ ಶೇ 8ರಷ್ಟು ನೈಟ್ರೋಜನ್, ಶೇ 16ರಷ್ಟು ಫಾಸ್ಪರಸ್ ಇರುತ್ತದೆ. 2021ರ ಆಗಸ್ಟ್ ನಂತರ ಒಟ್ಟು 5.44 ಕೋಟಿ ಬಾಟಲಿ ನ್ಯಾನೊ ಯೂರಿಯಾ ಮಾರಾಟ ಮಾಡಿರುವುದಾಗಿ ಇಫ್ಕೊ ಹೇಳಿದೆ.

2021-22ರಲ್ಲಿ ದೇಶವು ಒಟ್ಟು 91.36 ಲಕ್ಷ ಟನ್ ಯೂರಿಯಾ, 54.62 ಲಕ್ಷ ಟನ್ ಡಿಎಪಿ ಆಮದು ಮಾಡಿಕೊಂಡಿದೆ.

ಮಾರುತಿ ಲಾಭ ಶೇ 42 ಹೆಚ್ಚಳ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯ ನಿವ್ವಳ ಲಾಭವು ಮಾರ್ಚ್ 31ಕ್ಕೆ ಕೊನೆಗೊಂಡ ನಾಲ್ಕನೇ ತ್ರೈಮಾಸಿದಲ್ಲಿ ಶೇಕಡ 42ರಷ್ಟು ಹೆಚ್ಚಾಗಿ ₹ 2,671 ಕೋಟಿಗೆ ಏರಿಕೆ ಆಗಿದೆ. 2021-22ರ ಜನವರಿ-ಮಾರ್ಚ್ ಅವಧಿಯಲ್ಲಿ ಕಂಪನಿಯು ₹ 1,876 ಕೋಟಿ ನಿವ್ವಳ ಲಾಭ ಗಳಿಸಿತ್ತು.

ನಾಲ್ಕನೇ ತ್ರೈಮಾಸಿಕದಲ್ಲಿ ಮಾರಾಟದ ನಿವ್ವಳ ಮೌಲ್ಯವು ₹ 26,749 ಕೋಟಿಯಿಂದ ₹ 32,060 ಕೋಟಿಗೆ ಏರಿಕೆ ಆಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ನಾಲ್ಕನೇ ತ್ರೈಮಾಸಿಕದಲ್ಲಿ 5.14 ಲಕ್ಷ ವಾಹನಗಳನ್ನು ಮಾರಾಟ

ಮಾಡಲಾಗಿದ್ದು, ಮಾರಾಟವು ಶೇ 5.3ರಷ್ಟು ಹೆಚ್ಚಾಗಿದೆ ಎಂದು ಹೇಳಿದೆ.

2022-23ನೇ ಹಣಕಾಸು ವರ್ಷಕ್ಕೆ ಕಂಪನಿಯ ನಿವ್ವಳ ಲಾಭ ₹ 8,211 ಕೋಟಿ ಆಗಿದೆ. ಅದಕ್ಕೂ ಹಿಂದಿನ ಹಣಕಾಸು ವರ್ಷದಲ್ಲಿ ₹ 3,879 ಕೋಟಿ ನಿವ್ವಳ ಲಾಭ ಗಳಿಸಿತ್ತು. ಮಾರಾಟದ ಮೌಲ್ಯವು ₹ 88,330 ಕೋಟಿಯಿಂದ ₹ 1,17,571 ಕೋಟಿಗೆ ಏರಿಕೆ ಕಂಡಿದೆ. ಹಣಕಾಸು ವರ್ಷದಲ್ಲಿ ಒಟ್ಟು ಮಾರಾಟವು 19.66 ಲಕ್ಷದಷ್ಟಾಗಿದೆ.

ಮಾರುಕಟ್ಟೆ ಬೇಡಿಕೆಯ ಅಂದಾಜನ್ನು ತಲುಪಲು 10 ಲಕ್ಷದವರೆಗೆ ವಾಹನಗಳ ಹೆಚ್ಚುವರಿ ತಯಾರಿಕೆಗೆ ಆಡಳಿತ ಮಂಡಳಿ ಒಪ್ಪಿಗೆ ನೀಡಿರುವುದಾಗಿ ಕಂಪನಿ ತಿಳಿಸಿದೆ.

ಲಾಭಾಂಶ: 2022-23ನೇ ಹಣಕಾಸು ವರ್ಷಕ್ಕೆ ಪ್ರತಿ ಷೇರಿಗೆ ₹ 90ರಷ್ಟು ಗರಿಷ್ಠ ಲಾಭಾಂಶ ನೀಡಲು ಕಂಪನಿಯ ಆಡಳಿತ ಮಂಡಳಿ ಶಿಫಾರಸು ಮಾಡಿದೆ. 2021-22ರಲ್ಲಿ ಪ್ರತಿ ಷೇರಿಗೆ ₹ 60ರಷ್ಟು ಲಾಭಾಂಶ ನೀಡಲಾಗಿತ್ತು.

ಮುಂಬೈ ಧಾರಣೆ

ಶೇಂಗಾ

26-4-2023

ಜಾವಾ 70/80(ಹೊಸ)	11050-11150
ಜಾವಾ 80/90(ಹೊಸ)	10750-10850
ದಪ್ಪ ಮಧ್ಯಪ್ರದೇಶ(ಹೊಸ)	10900-11000
ದಪ್ಪ ಗುಜರಾತ್(ಹೊಸ)	11900-12000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1675(1675)
ಒಂದು ವಾರದ ಡೆಲಿವರಿ	1670(1670)
ಸೋಯಾ ಕಚ್ಚಾ	895(895)
ಪಾಮ್ ವಾರದ ಡೆಲಿವರಿ	938(938)
ಸೂರ್ಯಕಾಂತಿ ಎಣ್ಣೆ ಕಚ್ಚಾ	920(920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	59,950(59,950)
ಬೆಳ್ಳಿ ಕೆ.ಜಿ	74,200 (74,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹303-518
ದ್ವಿತಳಿ (ಬಿ.ವಿ)	₹277-633

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹132.50

(ಪ್ರತಿ ಕೆ.ಜಿಗೆ)

ಮಹೀಂದ್ರ: ಹೊಸ ಬೊಲೆರೊ ಮ್ಯಾಕ್ಸ್ ಪಿಕಪ್ ಸರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ದೇಶದ ಮಾರುಕಟ್ಟೆಗೆ 'ಬೊಲೆರೊ ಮ್ಯಾಕ್ಸ್ ಪಿಕಪ್'ನ ಹೊಸ ಸರಣಿಯನ್ನು ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆಯು ₹ 7.85 ಲಕ್ಷದಿಂದ ಆರಂಭ ಆಗುತ್ತದೆ.

ಬೊಲೆರೊ ಮ್ಯಾಕ್ಸ್ ಪಿಕಪ್, ಎಚ್‌ಡಿ ಮತ್ತು ಸಿಟಿ ಎಂಬ ಎರಡು ಸರಣಿಗಳಲ್ಲಿ ಲಭ್ಯವಿದೆ. ಉತ್ತಮ ಮೈಲೇಜ್, ಆರಾಮದಾಯಕ, ಸುರಕ್ಷಿತ ಮತ್ತು ಹೆಚ್ಚಿನ ಪೇಲೋಡ್ ಸಾಮರ್ಥ್ಯವನ್ನು ಹೊಂದಿವೆ. ₹ 24,999 ಡೌನ್ ಪೇಮೆಂಟ್‌ನೊಂದಿಗೆ ಈ ಹೊಸ ಪಿಕಪ್‌ಗಳನ್ನು ಬುಕ್ ಮಾಡಬಹುದು. ಆಕರ್ಷಕ ಹಣಕಾಸಿನ ಯೋಜನೆಯ ಪ್ರಯೋಜನವನ್ನೂ ಪಡೆದುಕೊಳ್ಳಬಹುದು ಎಂದು ಕಂಪನಿ ತಿಳಿಸಿದೆ.

ಭಾರತದಲ್ಲಿ ತಯಾರಿಸಿ ಅಭಿಯಾನಕ್ಕೆ ಒತ್ತು ನೀಡಲು ಕಂಪನಿ ಬದ್ಧ.. ಗ್ರಾಹಕ ಕೇಂದ್ರಿತ ಅಷ್ಟೇ ಅಲ್ಲದೆ ಭಾರತದ ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡುವಂತಹ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವ ಬದ್ಧತೆಯನ್ನು ಕಂಪನಿಯ ಉತ್ಪನ್ನಗಳು ಪ್ರತಿಬಿಂಬಿಸುತ್ತವೆ. ಹೊಸ ಸರಣಿಯು ಹೋಲಿಸಲಾಗದ ಶಕ್ತಿ, ಗರಿಷ್ಠ ಪೇಲೋಡ್ ಸಾಮರ್ಥ್ಯ ಮತ್ತು ಗರಿಷ್ಠ ಮೈಲೇಜ್‌ನೊಂದಿಗೆ ಪ್ರತಿ ಪ್ರಯಾಣವನ್ನೂ ಪ್ರಯಾಸರಹಿತವಾಗಿಸುವ ಭರವಸೆ ನೀಡುತ್ತದೆ ಎಂದು ಕಂಪನಿಯ ಆಟೋಮೋಟಿವ್ ವಿಭಾಗದ ಅಧ್ಯಕ್ಷ ವಿಜಯ್ ನಕ್ರಾ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಚಿನ್ನ ₹ 590, ಬೆಳ್ಳಿ ₹ 420 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರವು ಬುಧವಾರ 10 ಗ್ರಾಂಗೆ ₹ 590ರಷ್ಟು ಹೆಚ್ಚಾಗಿ ₹ 61,040ರಂತೆ ಮಾರಾಟ ಆಯಿತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಹೆಚ್ಚಾಗಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿ ಧಾರಣೆ ಕೆ.ಜಿ.ಗೆ ₹ 420ರಷ್ಟು ಹೆಚ್ಚಾಗಿ ₹ 75,070ಕ್ಕೆ ಏರಿಕೆ ಆಯಿತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಒಂದು ಔನ್ಸ್‌ಗೆ (28.34 ಗ್ರಾಂ) 1,997 ಡಾಲರ್‌ನಂತೆ ಮತ್ತು ಬೆಳ್ಳಿ ಧಾರಣೆ ಒಂದು ಔನ್ಸ್‌ಗೆ 24.95 ಡಾಲರ್‌ನಂತೆ ಮಾರಾಟ ಆಯಿತು.

ಸಂಪರ್ಕ ಕಡಿದುಕೊಂಡ ಜಪಾನ್ ನೌಕೆ

ಕೇಪ್ ಕೆನವರಲ್ (ಎಪಿ): ಜಪಾನ್‌ನ ಐಸ್ಪೇಸ್ ಸಂಸ್ಥೆಯು ಚಂದ್ರನಲ್ಲಿಗೆ ಕಳುಹಿಸಿದ್ದ ಬಾಹ್ಯಾಕಾಶ ನೌಕೆಯೊಂದು ಅತ್ಯಂತ ಕೊನೆಯ ಕ್ಷಣದಲ್ಲಿ ನಿಯಂತ್ರಣ ಕೇಂದ್ರದ ಸಂಪರ್ಕ ಕಳೆದುಕೊಂಡಿದೆ. ನೌಕೆಯು ಪತನವಾಗಿರುವ ಸಾಧ್ಯತೆ ಇದೆ ಎಂದು ಸಂಸ್ಥೆ ಹೇಳಿದೆ.

ಗಂಟೆಗೆ 25 ಕಿಲೊ ಮೀಟರ್ ವೇಗದಲ್ಲಿ ಚಂದ್ರನ ಅಂಗಳದತ್ತ ಬರುತ್ತಿದ್ದ ಹಾಗೂ ಅಂಗಳದಲ್ಲಿ ಇಳಿಯಲು ಕೇವಲ 10 ಮೀಟರ್ ಎತ್ತರದಲ್ಲಿದ್ದ ನೌಕೆ ಆ ಹಂತದಲ್ಲಿ ಸಂಪರ್ಕ ಕಡಿದುಕೊಂಡಿತು ಎಂದು ಐಸ್ಪೇಸ್ ಸಂಸ್ಥೆ ಹೇಳಿದೆ.

ಬೋರ್ನ್‌ವೀಟಾಕ್ಕೆ ಎನ್‌ಸಿಪಿಸಿಆರ್ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಾಲಿಗೆ ಬೆರೆಸಿ ಸೇವಿಸುವ ಉತ್ಪನ್ನವಾದ ಬೋರ್ನ್‌ವೀಟಾ ಕುರಿತು ನೀಡಲಾಗಿರುವ ಸುಳ್ಳು ಮಾಹಿತಿಯುಳ್ಳ ಜಾಹೀರಾತು ಮತ್ತು ಉತ್ಪನ್ನದ ಪೊಟ್ಟಣದ ಮೇಲೆ ನೀಡಲಾಗಿರುವ ಮಾಹಿತಿಯನ್ನು ಹಿಂಪಡೆಯುವಂತೆ ಮಾಂಡೆಲೇಝ್ ಇಂಟರ್‌ನ್ಯಾಷನಲ್ ಸಂಸ್ಥೆಗೆ ಕೇಂದ್ರ ಸರ್ಕಾರ ಪತ್ರ ಬರೆದಿದೆ.

ಮಕ್ಕಳ ಬೆಳವಣಿಗೆಗೆ ಅನುಕೂಲವಾಗುವಂಥ ಆರೋಗ್ಯಕರ ಪೇಯ ಎಂದು ಹೇಳಿಕೊಂಡಿರುವ ಬೋರ್ನ್‌ವೀಟಾದಲ್ಲಿರುವ ಅಧಿಕ ಸಕ್ಕರೆ ಅಂಶವು ಮಕ್ಕಳ ಆರೋಗ್ಯದೃಷ್ಟಿಯಿಂದ ಉತ್ತಮವಲ್ಲ ಎಂದು ಮಕ್ಕಳ ಹಕ್ಕುಗಳ ರಕ್ಷಣೆ ರಾಷ್ಟ್ರೀಯ ಆಯೋಗ (ಎನ್‌ಸಿಪಿಸಿಆರ್) ಹೇಳಿದೆ.

ಉತ್ಪನ್ನದ ಕುರಿತು ವಿವರವಾದ ಮಾಹಿತಿ ನೀಡಲು ಮಾಂಡೆಲೇಝ್ ಸಂಸ್ಥೆಗೆ ಏಳು ದಿನಗಳ ಕಾಲಾವಕಾಶ ನೀಡಿದೆ.

ಪೊಟ್ಟಣದ ಮೇಲೆ ಕಡ್ಡಾಯವಾಗಿ ನಮೂದಿಸಬೇಕಾದ ಅಂಶಗಳನ್ನು ಬಹಿರಂಗಪಡಿಸಿಲ್ಲ. 'ಮಾಲ್ಟೊಡೆಕ್ಸ್ಟ್ರಿನ್' ಮತ್ತು 'ದ್ರವ ಗ್ಲೂಕೋಸ್' ಅಂಶಗಳನ್ನು ಸಕ್ಕರೆ ಅಂಶ ಎಂದು ನಮೂದಿಸಲಾಗಿಲ್ಲ. ಪೋಷಕಾಂಶ ಪ್ರಮಾಣದಲ್ಲಿ ಶೇ 10ಕ್ಕಿಂತ ಹೆಚ್ಚು ಸಕ್ಕರೆ ಅಂಶ ಬಳಕೆಯಾಗಿದ್ದರೆ ಉತ್ಪನ್ನದ ಕೋಡಿಂಗ್‌ಅನ್ನು ಕೆಂಪು ಬಣ್ಣದಲ್ಲಿ ನಮೂದಿಸಿರಬೇಕು. ಅದೂ ಆಗಿಲ್ಲ ಎಂದು ಹೇಳಿದೆ.

100 ಹೊಸ ಮಳಿಗೆ ತೆರೆಯಲಿರುವ ಜೋಸ್ ಆಲುಕ್ಕಾಸ್ ಕಂಪನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ಮಾರಾಟ ಕಂಪನಿ ಜೋಸ್ ಆಲುಕ್ಕಾಸ್, ₹ 5,500 ಕೋಟಿ ಹೂಡಿಕೆಯೊಂದಿಗೆ ಜಾಗತಿಕವಾಗಿ ಒಟ್ಟು 100 ಮಳಿಗೆಗಳನ್ನು ಹೊಸದಾಗಿ ಆರಂಭಿಸುತ್ತಿದೆ. ಇದು ದೇಶದ ಚಿನ್ನಾಭರಣ ಉದ್ಯಮದಲ್ಲಿ ಅತಿದೊಡ್ಡ ಪ್ರಮಾಣದ ವಿಸ್ತರಣಾ ಯೋಜನೆ ಎಂದು ಕಂಪನಿ ಹೇಳಿದೆ.

ಆರಂಭಿಕ ಹೆಜ್ಜೆಯಾಗಿ, ದಕ್ಷಿಣ ಭಾರತದ ನಗರಗಳಲ್ಲಿ ಹೆಚ್ಚಿನ ಮಳಿಗೆಗಳನ್ನು ಆರಂಭಿಸಲಾಗುತ್ತದೆ. ನಂತರದಲ್ಲಿ ದೇಶದ ಇತರ ನಗರಗಳಲ್ಲಿ ಮಳಿಗೆಗಳನ್ನು ತೆರೆಯಲಾಗುತ್ತದೆ. ಇದಾದ ನಂತರದಲ್ಲಿ ಜೋಸ್ ಆಲುಕ್ಕಾಸ್ ಕಂಪನಿಯು ಯುರೋಪ್, ಅಮೆರಿಕದ ಮಾರುಕಟ್ಟೆ ಕಡೆ ಸಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

'ಜಾಗತಿಕ ಮಟ್ಟದ ವಿನ್ಯಾಸಕಾರರ ಜೊತೆ ಪಾಲುದಾರಿಕೆ ಹೊಂದುವುದು ಕೂಡ ವಿಸ್ತರಣಾ ಯೋಜನೆಯ ಒಂದು ಭಾಗ. ಭಾರತ ಮೂಲದವರು ಇರುವ ದೇಶಗಳನ್ನು ಮಾತ್ರ ನಾವು ಗಮನದಲ್ಲಿ ಇಟ್ಟುಕೊಂಡಿಲ್ಲ. ಬದಲಿಗೆ, ವಿಶ್ವದ ಎಲ್ಲ ಪ್ರಮುಖ ನಗರಗಳನ್ನೂ ನಾವು ಪ್ರವೇಶಿಸಲಿದ್ದೇವೆ' ಎಂದು ಕಂಪನಿಯ ಅಧ್ಯಕ್ಷ ಜೋಸ್ ಆಲುಕ್ಕಾ ಹೇಳಿದ್ದಾರೆ.

ನಟ ಮಾಧವನ್ ಕಂಪನಿಯ ಬ್ರ್ಯಾಂಡ್ ರಾಯಭಾರಿ ಆಗಿರಲಿದ್ದಾರೆ. ಮಾಧವನ್ ಅವರ ಜೊತೆ ನಟಿ ಕೀರ್ತಿ ಸುರೇಶ್ ಅವರೂ ಕಂಪನಿಯ ಮುಂದಿನ ಅಭಿಯಾನಗಳಲ್ಲಿ ಇರಲಿದ್ದಾರೆ ಎಂದು ಪ್ರಕಟಣೆ ಹೇಳಿದೆ.



ಜೋಸ್ ಆಲುಕ್ಕಾಸ್ ರಾಯಭಾರಿ, ನಟ ಆರ್. ಮಾಧವನ್ (ಬಲದಿಂದ ಎರಡನೆಯವರು) ಅವರು ಚೆನ್ನೈನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಕಂಪನಿ ಅಧ್ಯಕ್ಷ ಜೋಸ್ ಆಲುಕ್ಕಾ, ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ವರ್ಗೀಸ್ ಆಲುಕ್ಕಾ, ಪಾಲ್ ಜೆ. ಆಲುಕ್ಕಾ ಮತ್ತು ಜಾನ್ ಆಲುಕ್ಕಾ ಇದ್ದಾರೆ

ಬಿಷಪ್‌ಗಳ ಸಭೆಯಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು: ಪೋಪ್ ನಿರ್ಧಾರ

ವ್ಯಾಟಿಕನ್ ಸಿಟಿ (ಎಪಿ): ಬಿಷಪ್‌ಗಳ ಮುಂಬರುವ ಸಭೆಯಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ನೀಡಲು ಪೋಪ್ ಫ್ರಾನ್ಸಿಸ್ ನಿರ್ಧರಿಸಿದ್ದಾರೆ.

ಇದೊಂದು ಅಭೂತಪೂರ್ವ ಬದಲಾವಣೆ. ಇದು ಮಹಿಳೆಯರಿಗೆ ಹೆಚ್ಚಿನ ನಿರ್ಧಾರ ತೆಗೆದುಕೊಳ್ಳುವ ಜವಾಬ್ದಾರಿ ನೀಡುವ ಮತ್ತು ಜನಸಾಮಾನ್ಯರಿಗೆ ಹೆಚ್ಚು ತಿಳಿಹೇಳುವ ಕ್ಯಾಥೋಲಿಕ್ ಚರ್ಚ್ ಆಶಯ ಪ್ರತಿಬಿಂಬಿಸುತ್ತದೆ ಎಂದೇ ಹೇಳಲಾಗುತ್ತಿದೆ.

ನಿಯತಕಾಲಿಕ ಸಭೆಗಳಿಗೆ ವಿಶ್ವದಾದ್ಯಂತ ಬಿಷಪ್‌ಗಳನ್ನು ಸೇರಿಸುವ ವ್ಯಾಟಿಕನ್ ಸಂಸ್ಥೆ ಸಿನೊಡ್ ಆಫ್ ಬಿಷಪ್‌ಗಳ ಆಡಳಿತವನ್ನು ನಿಯಂತ್ರಿಸುವ ನಿಯಮಾವಳಿಗಳ ಮಾರ್ಪಾಡಿಗೆ ಫ್ರಾನ್ಸಿಸ್ ಅನುಮೋದನೆ ನೀಡಿದ್ದಾರೆ.

ಈ ಹೊಸ ಬದಲಾವಣೆಗಳ ಅಡಿಯಲ್ಲಿ, ಧಾರ್ಮಿಕ ಆದೇಶಗಳಿಗೆ ಮತದಾನದ ಪ್ರತಿನಿಧಿಗಳಾಗಿ ಐವರು ಪಾದ್ರಿಗಳ ಜತೆಗೆ ಐವರು ಸಿಸ್ಟರ್‌ಗಳು ಇರಲಿದ್ದಾರೆ. ಇದಲ್ಲದೆ, ಸಿನೊಡ್‌ನ 70 ಬಿಷಪ್ ಅಲ್ಲದ ಸದಸ್ಯರನ್ನು ನೇಮಿಸಲು ಫ್ರಾನ್ಸಿಸ್ ನಿರ್ಧರಿಸಿದ್ದಾರೆ. ಇದರಲ್ಲಿ ಅರ್ಧದಷ್ಟು ಸದಸ್ಯರು ಮಹಿಳೆಯರೇ ಆಗಿರುತ್ತಾರೆ. ಅವರಿಗೂ ಮತದಾನದ ಹಕ್ಕು ಇರಲಿದೆ.

ಪೋಪ್ ಅವರಿಂದ ಅನುಮೋದಿತವಾಗಿರುವ ಮಾರ್ಪಾಡು ನಿಯಮಾವಳಿಗಳನ್ನು ವ್ಯಾಟಿಕನ್ ಬುಧವಾರ ಪ್ರಕಟಿಸಿದೆ. ಇದು ಚರ್ಚ್ ವ್ಯವಹಾರಗಳಲ್ಲಿ ನಿಷ್ಠಾವಂತರು ಹೆಚ್ಚಿನ ಪಾತ್ರ ವಹಿಸಬೇಕೆಂಬ ಪೋಪ್ ಅವರ ದೃಷ್ಟಿಕೋನವನ್ನು ಒತ್ತಿಹೇಳುತ್ತದೆ. ಇದನ್ನು ಬಹಳ ಹಿಂದಿನಿಂದಲೂ ಪಾದ್ರಿಗಳು, ಬಿಷಪ್‌ಗಳು ಮತ್ತು ಕಾರ್ಡಿನಲ್‌ಗಳಿಗೆ ಬಿಡಲಾಗಿತ್ತು.

ಸಿನೊಡ್‌ಗಳಲ್ಲಿ ಮತದಾನದ ಹಕ್ಕನ್ನು ನೀಡುವಂತೆ ಮಹಿಳೆಯರು ದಶಕಗಳಿಂದ ಒತ್ತಾಯಿಸಿದ್ದರು. ಇದುವರೆಗೆ ಪುರುಷರು ಮಾತ್ರ ಮತ ಚಲಾಯಿಸುತ್ತಿದ್ದರು. ಬಿಷಪ್‌ಗಳ ಮುಂದಿನ ಸಭೆ ಅಕ್ಟೋಬರ್‌ನಲ್ಲಿ ನಿಗದಿಪಡಿಸಲಾಗಿದೆ.

16ನೇ ವರ್ಷದ ಪುಣ್ಯ ತಿಥಿ | 1ನೇ ವರ್ಷದ ಪುಣ್ಯ ತಿಥಿ

ದಿ|| ಬಿ.ಜಯರಾಂ
DOD: 11.03.2006
ಮಾಜಿ ನಗರಸಭಾ ಸದಸ್ಯರು, ಮಲ್ಲೇಶ್ವರಂ

ರಾಮಕ್ಕ
ಲೇಟ್ ಬಿ. ಜಯರಾಂ ರವರ ಧರ್ಮಪತ್ನಿ
DOD: 27.04.2022

ಜೀವಾತ್ಮವು ಪರಮಾತ್ಮನಲ್ಲಿ ವಿಲೀನವಾಗುವುದೇ ಜೀವನದ ಸಾಕ್ಷಾತ್ಕಾರ
ದಿವಂಗತರ ಆತ್ಮಕ್ಕೆ ಶಾಂತಿ ಕೋರುವ
ಕುಟುಂಬ ವರ್ಗದವರು
ದೂರವಾಣಿ: 9845091138, 9845344442

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತಪರಿಹಾರ ಸ್ತ್ರೀಪುರುಷ ವಶೀಕರಣಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್. ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್ ಲೈನ್ ಕಂಪನಿಗಳಿಗೆ SSLC,PUC, ಡಿಗ್ರಿ,ಡಿಪ್ಲೋಮಾದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000/- 65,000/- ವಸತಿಯೂಟದೊಂದಿಗೆ 9036125229

ಉತ್ತಮ ಅನುಭವವುಳ್ಳ ಇಸ್ತ್ರಿ ಮಾಡುವವರು ಬೇಕಾಗಿದ್ದಾರೆ ಸಂಬಳ 23000/ 26000/. ಬೆಳಿಗ್ಗೆ 10.00ರಿಂದ ರಾತ್ರಿ8.00. ಆಫೀಸ್ ಸಹಾಯಕರು ಬೆಳಿಗ್ಗೆ9.30 ರಾತ್ರಿ9.00. ಸಂಬಳ 15000/. ಸ್ಟೋರ್ ಮ್ಯಾನೇಜರ್ (ಡ್ರೈ ಕ್ಲೀನಿಂಗ್‌ನಲ್ಲಿ ಅನುಭವವಿರಬೇಕು) ಬೆಳಿಗ್ಗೆ 9.30 ರಾತ್ರಿ9.00. ಸಂಬಳ 18,000/ 30,000/. ಸಂಪರ್ಕಿಸಿ: 9880266007,

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

Wanted

ಬೆಂಗಳೂರಿನಲ್ಲಿ ಮನೆ ಕೆಲಸ ಮಾಡುವವರು, ಮಕ್ಕಳನ್ನು ನೋಡಿ ಕೊಳ್ಳುವವರು (ಮಹಿಳೆ) ಬೇಕಾಗಿದ್ದಾರೆ. ಸಂಬಳ :10k ರಿಂದ 15k ಉಚಿತ ಊಟ ವಸತಿ ಸೌಲಭ್ಯವಿದೆ ಸಂಪರ್ಕಿಸಿ: 8296577964

ಬೇಕಾಗಿದ್ದಾರೆ: ಬೆಂಗಳೂರಿಗೆ ದಕ್ಷಿಣ ಭಾರತೀಯ ಅಡುಗೆಯವರು, ಸಹಾಯಕ ಅಡುಗೆಯವರು, ಗ್ರೈಂಡರ್ ಚಲಾಯಿಸುವವರು, ಹೋಟೆಲ್ ನಲ್ಲಿ 5ರಿಂದ 10ವರ್ಷ ಅನುಭವ ಇರುವವರು, ಆಹಾರ ವಸತಿಯುಚಿತ ನೀಡಲಾಗುವುದು. ಸಂಪರ್ಕಿಸಿ: 7676296610

ಕ್ಲಾಸಿಫೈಡ್ಸ್

EDUCATION CORNER

ರೆಂಟಲ್ ಪ್ರಾಪರ್ಟೀಸ್

Accommodation Available

Commercial

FOR RENT- Old P.B Road, beside Shrigandha Lodge, Davanagere, Ground Floor- 800sqft, 1st Floor- 4000sqft, 2nd Floor- 4000sqft, Terrace Floor- 4000sqft, Basement- 4000sqft, Contact- 9448028103

ಪ್ರವಾಸ

Travel

★ರಿಯಾಯಿತಿ ದರದಲ್ಲಿ★ ರೈಲು,ವಿಮಾನ, AC ಬಸ್ಸಿನಲ್ಲಿ 5.7.2023, 11.7.2023 11ದಿನಗಳು ಕಾಶಿ,ಗಯ,ಪ್ರಯಾಗ ದೆಹಲಿ,ಆಗ್ರಾ,ಮಥುರ,ಅಯೋಧ್ಯ ರೂ.29500 ಒಬ್ಬರಿಗೆ., ಆರ್.ಗಾಂಧಿ ಟೂರ್ಸ್. 9902433500, 9945445809, 08026760367. www.rgandhitours.com

"ಶ್ರೇಯಸ್‌ಟೂರ್ಸ್: 15.05.2023 13/06/21ದಿನಗಳು ಈಶಾನ್ಯ ರಾಜ್ಯಗಳ (ಸೆವೆನ್‌ಸಿಸ್ಟರ್ಸ್ ಪ್ರವಾಸ) ಅಸ್ಸಾಂ,ಅರುಣಾಚಲ, ಮೇಘಾಲಯ,ಮಣಿಪುರ ತ್ರಿಪುರ,ನಾಗಲ್ಯಾಂಡ್, ಮಿಝೋರಾಂ.22.05.2023 10ದಿನಗಳು 6ವಿಮಾನಗಳಲ್ಲಿ ಸಂಪೂರ್ಣ ನೇಪಾಳರಾಷ್ಟ್ರ ಪ್ರವಾಸ ಕಠ್ಮಂಡು ಪೋಕ್ರಾ ಮುಕ್ತಿನಾಥ ಮನಕಾಮನ,ಜನಕಪುರಿ, ಚಿತ್ವಾನ್ 10.07.2023 04/10ದಿನಗಳು ಅಮರನಾಥಯಾತ್ರಾ ವಿಶೇಷ ಲೇ ಲಡಾಖ್ ಶ್ರೀನಗರ ಕಾರ್ಗಿಲ್. 8073824856/ 6366322639/ 9206979202"

20/05/2023`ಮತ್ತು 29/5/2023ರಿಂದ`13ದಿನಗಳ ಹರಿದ್ವಾರ,ಚಾರುಧಾಮ್` ಮಸ್ಸೂರಿ,ನೈಮಿಷಾರಣ್ಯ, ಕಾಶಿ,ಆಗ್ರಾ`ಹಾಗೂ 30/6/2023ರಿಂದ 12ದಿನಗಳ ಅಮೃತಸರ್,ಅಮರನಾಥ್` ಕಾಶ್ಮೀರ,ವೈಷ್ಣೋದೇವಿ`ಇತ್ಯಾದಿ ಏಷ್ಯನ್`ಟ್ರಾವೆಲ್`ಲೈನ್ಸ್. 8105657052/ 9480182865 (ಷಣ್ಮುಗಾನಂದ).

DH ಪ್ರಜಾವಾಣಿ
Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164

CONNECT

ಫ್ಲೋರಲ್ ಡಿಸೈನ್

14ನೇ ಅಡ್ಡರಸ್ತೆ, ಕನಕ ನಗರ ಆರ್ ಟಿ ನಗರ, ಬೆಂಗಳೂರು – 560 032 Mob : 94485 93982

ಉತ್ತಮವಾದ ಬೆಳೆಗಳ ಬೆಳವಣಿಗೆಗೆ ನೀರಿನಲ್ಲಿ ಶೇಕಡ ನೂರರಷ್ಟು ಕರಗುವಂತಹ, ಹಲವು ಶ್ರೇಣಿಗಳ ಈ ಕೆಳಕಂಡ ರಸಗೊಬ್ಬರಗಳನ್ನು ನಾವು ಆಮದು ಮಾಡಿಕೊಂಡು ಕರ್ನಾಟಕದ ಎಲ್ಲಾ ಜಿಲ್ಲೆಗಳ ಮಾರುಕಟ್ಟೆಗೆ ಒದಗಿಸಲು ಬಯಸುತ್ತೇವೆ.

1.	NPK 12:11:18-Blaukorn
2.	Potassium Magnesium Sulphate-00:00:27 (+10)- (Kall Gazon
3.	NPK 09:00:43 (NovaTech Solub 9-0-43)
4.	Urea Phosphate-11:48:00 (Easy Start TE-Max)
5.	NPK-14:7:14 (+2) Granulated NPK- (DuraTec Top 14)
6.	NPK 07-08-34- (Basfoliar Fruit SP 07-08-34 (+4MgO+9S+TE))
7.	Concentrated Liqued Calcium and Boron-(Basfoliar CaBMag)
8.	Mixed Micro Nutrient-Foliar Spray Grade-1-(Fetrilon Combi-2)
9.	NPK. 00:40:37- (Basfoliar 0-40-37)
10.	Magnesium Liquid Nutrient-(Basfoliar Olivine Flo)

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ದಲೈಲಾಮಾಗೆ ಮ್ಯಾಗ್ಸೆಸ್ಸೆ ಪ್ರಶಸ್ತಿ ಪ್ರದಾನ

ಧರ್ಮಶಾಲಾ (ಪಿಟಿಐ): ಟಿಬೆಟಿಯನ್ ಧರ್ಮಗುರು ದಲೈಲಾಮಾ ಅವರಿಗೆ ಪ್ರತಿಷ್ಠಿತ ರೇಮನ್ ಮ್ಯಾಗ್ಸೆಸ್ಸೆ ಪ್ರಶಸ್ತಿಯನ್ನು ಬುಧವಾರ ಪ್ರದಾನ ಮಾಡಲಾಯಿತು.

ಮ್ಯಾಗ್ಸೆಸ್ಸೆ ಪ್ರಶಸ್ತಿ ಫೌಂಡೇಷನ್‌ನ ಅಧ್ಯಕ್ಷೆ ಸುಸಾನ್ನಾ ಬಿ ಅಫಾನ್ ಮತ್ತು ಫೌಂಡೇಷನ್‌ನ ಟ್ರಸ್ಟಿ ಎಮಿಲಿ ಎ ಅಬ್ರೆರಾ ಅವರು ದಲೈಲಾಮಾ ಅವರನ್ನು ಧರ್ಮಶಾಲಾದಲ್ಲಿನ ಅವರ ನಿವಾಸದಲ್ಲಿ ಭೇಟಿಯಾಗಿ ಪ್ರಶಸ್ತಿ ಪ್ರದಾನ ಮಾಡಿದ್ದಾರೆ.

'ದಲೈಲಾಮಾ ಅವರು ಟಿಬೆಟಿಯನ್ ಸಮುದಾಯದವರು ಧರ್ಮ ರಕ್ಷಣೆಗಾಗಿ ನಡೆಸುತ್ತಿದ್ದ ಹೋರಾಟದ ಮುಂದಾಳತ್ವ ವಹಿಸಿದ್ದರು. ಅವರ ಈ ನಾಯಕತ್ವ ಗುಣವನ್ನು ಮೆಚ್ಚಿ ನೀಡಲಾಗಿರುವ ಮೊದಲ ಅಂತರರಾಷ್ಟ್ರೀಯ ಗೌರವ ಇದಾಗಿದೆ. ಫೌಂಡೇಷನ್‌ನ ಸದಸ್ಯರು ವೈಯಕ್ತಿಕವಾಗಿ ಭೇಟಿ ಮಾಡಿ ಪ್ರಶಸ್ತಿ ಪ್ರದಾನ ಮಾಡಿದ್ದಾರೆ' ಎಂದು ದಲೈಲಾಮಾ ಅವರ ಕಚೇರಿ ತಿಳಿಸಿದೆ.

ಪ್ರಶಸ್ತಿ ಸ್ಥಾಪನೆಯಾಗಿ 64 ವರ್ಷಗಳ ಸಂದಿವೆ. 1959ರಲ್ಲಿ ಟಿಬೆಟ್ ತೊರೆದಿದ್ದ ದಲೈಲಾಮಾ ಅವರು ಆಗಿನಿಂದಲೂ ಭಾರತದಲ್ಲೇ ನೆಲೆಸಿದ್ದಾರೆ. ಇವರಿಗೆ ನೊಬೆಲ್ ಶಾಂತಿ ಪುರಸ್ಕಾರ ಒಲಿದಿತ್ತು.

ಸುಡಾನ್: ಸಂಘರ್ಷಪೀಡಿತ ನೆಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿಲುಕಿರುವ ಕನ್ನಡಿಗರು

ದೆಹಲಿ ತಲುಪಿದ 360 ಭಾರತೀಯರು

ನವದೆಹಲಿ(ಪಿಟಿಐ): ಸಂಘರ್ಷಪೀಡಿತ ಸುಡಾನ್‌ನಿಂದ 'ಆಪರೇಷನ್ ಕಾವೇರಿ' ಅಡಿ 360 ಭಾರತೀಯರಿದ್ದ ಮೊದಲ ತಂಡವನ್ನು ಹೊತ್ತ ವಾಯುಪಡೆಯ ವಿಮಾನ ಇಲ್ಲಿ ಬುಧವಾರ ರಾತ್ರಿ ಬಂದಿಳಿಯಿತು.

ಈ ಕುರಿತು ವಿದೇಶಾಂಗ ಸಚಿವ ಎಸ್.ಜೈಶಂಕರ್ ಟ್ವೀಟ್ ಮಾಡಿದ್ದು, ಇಲ್ಲಿನ ವಿಮಾನನಿಲ್ದಾಣದಲ್ಲಿ ಬಂದಿಳಿದ ಮೊದಲ ತಂಡದ ಚಿತ್ರವನ್ನು ಹಂಚಿಕೊಂಡಿದ್ದಾರೆ.

ಸಂಘರ್ಷ ಪೀಡಿತ ಸುಡಾನ್‌ನಲ್ಲಿ ಸಿಲುಕಿದ್ದವರ ಪೈಕಿ, 530ಕ್ಕೂ ಅಧಿಕ ಭಾರತೀಯರನ್ನು ಮಂಗಳವಾರ ಸುರಕ್ಷಿತವಾಗಿ ಸ್ಥಳಾಂತರಿಸಲಾಗಿತ್ತು. ಈ ಸ್ಥಳಾಂತರ ಕಾರ್ಯಕ್ಕೆ 'ಐಎನ್‌ಎಸ್ ಸುಮೇಧ' ನೌಕೆ ಹಾಗೂ ವಾಯುಪಡೆಯ ಎರಡು ಸಾರಿಗೆ ವಿಮಾನಗಳನ್ನು ನಿಯೋಜಿಸಲಾಗಿತ್ತು.

ಇದಕ್ಕೂ ಮುನ್ನ, ಮೊದಲ ಸಿ–130ಜೆ ವಿಮಾನ 121 ಮತ್ತು ಎರಡನೇ ವಿಮಾನ 135 ಭಾರತೀಯರನ್ನು ಸುಡಾನ್‌ನಿಂದ ಜಿದ್ದಾ ತಲುಪಿಸಿದ್ದವು ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಹೇಳಿದ್ದಾರೆ.

ಹಿಂಸಾಚಾರ ಪೀಡಿತ ಸುಡಾನ್‌ನಲ್ಲಿ ಸಿಲುಕಿದ್ದ ಭಾರತೀಯರ ಮೊದಲ ತಂಡವನ್ನು ಹೊತ್ತ ನೌಕಾಪಡೆಯ ಮುಂಚೂಣಿಯ ನೌಕೆ 'ಐಎನ್‌ಎಸ್ ಸುಮೇಧ' ಪೋರ್ಟ್ ಸುಡಾನ್‌ನಿಂದ ಮಂಗಳವಾರ ಸೌದಿ ಅರೆಬಿಯಾದ ಜಿದ್ದಾದತ್ತ ಹೊರಟಿತ್ತು. ಜಿದ್ದಾ ತಲುಪಿದ ನಂತರ ಅಲ್ಲಿಂದ ಎಲ್ಲರನ್ನೂ ಸ್ವದೇಶಕ್ಕೆ ಕರೆತರಲಾಗುತ್ತಿದೆ.

ಸುಡಾನ್‌ನಲ್ಲಿ ಸಿಲುಕಿರುವ ಸುಮಾರು 3 ಸಾವಿರಕ್ಕೂ ಅಧಿಕ ಭಾರತೀಯರನ್ನು ಸುರಕ್ಷಿತವಾಗಿ ದೇಶಕ್ಕೆ ಕರೆತರುವ ಉದ್ದೇಶದಿಂದ ಕೇಂದ್ರ ಸರ್ಕಾರವು 'ಆಪರೇಷನ್ ಕಾವೇರಿ' ಕಾರ್ಯಾಚರಣೆಗೆ ಸೋಮವಾರವೇ ಚಾಲನೆ ನೀಡಿದೆ. ಮೂರು ಸಾವಿರಕ್ಕೂ ಅಧಿಕ ಭಾರತೀಯರು ಅಲ್ಲಿ ಸಿಲುಕಿದ್ದಾರೆ. ಅದರಲ್ಲಿ ಕನ್ನಡಿಗರ ಸಂಖ್ಯೆಯೂ ಹೆಚ್ಚಿದೆ.

ಭಾರತೀಯರ ಸುರಕ್ಷಿತ ತೆರವು ಕಾರ್ಯಾಚರಣೆಯ ಮೇಲ್ವಿಚಾರಣೆಗಾಗಿ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ವಿ. ಮುರಳೀಧರನ್ ಅವರು ಜಿದ್ದಾ ತಲುಪಿದ್ದಾರೆ.

ಸುಡಾನ್‌ನಿಂದ ಮರಳುವವರಿಗೆ ರಾಜ್ಯ ಸರ್ಕಾರಗಳಿಂದ ಸಹಾಯವಾಣಿ: ಸುಡಾನ್‌ನಿಂದ ಮರಳುತ್ತಿರುವ ಭಾರತೀಯರಿಗೆ ಹಲವು ರಾಜ್ಯಗಳು ಸಹಾಯವಾಣಿ (ಹೆಲ್ಪ್ ಡೆಸ್ಕ್) ತೆರೆಯುವ ಜತೆಗೆ ಉಚಿತ ಪ್ರಯಾಣ ಮತ್ತು ವಸತಿ ಸೌಕರ್ಯಗಳನ್ನು ಪ್ರಕಟಿಸಿವೆ. ಸುಡಾನ್‌ನಿಂದ ಕೇಂದ್ರ ಸರ್ಕಾರ ಸ್ಥಳಾಂತರಿಸಿರುವ ಮಲಯಾಳಿಗರನ್ನು ರಾಜ್ಯಕ್ಕೆ ಕರೆತರಲು ದೇಶದ ವಿವಿಧ ವಿಮಾನ ನಿಲ್ದಾಣಗಳಲ್ಲಿ ಅಗತ್ಯ ವ್ಯವಸ್ಥೆ ಮಾಡುವುದಾಗಿ ಕೇರಳ ಸರ್ಕಾರ ಹೇಳಿದೆ.

ಉತ್ತರಪ್ರದೇಶ ಸರ್ಕಾರ ಕೂಡ ಸುಡಾನ್‌ನಲ್ಲಿರುವ ತಮ್ಮ ರಾಜ್ಯದ ಜನರನ್ನು ಸುರಕ್ಷಿತವಾಗಿ ಕರೆಸಿಕೊಳ್ಳಲು ಬುಧವಾರ ದೆಹಲಿಯಲ್ಲಿ ಸಹಾಯವಾಣಿ ತೆರೆದಿದೆ.

ಮಧ್ಯಪ್ರದೇಶ ಕೂಡ 'ಸಿಎಂ ಸಹಾಯವಾಣಿ' ಆರಂಭಿಸಿದೆ.

ರಾಜಸ್ಥಾನ ಸರ್ಕಾರವು ರಾಜ್ಯದ ವಲಸಿಗರು ಸುಡಾನ್‌ನಿಂದ ದೆಹಲಿಗೆ ಬಂದಿಳಿದ ನಂತರ ಅವರ ಸಾರಿಗೆ ವೆಚ್ಚ ಭರಿಸಲು ನಿರ್ಧರಿಸಿದೆ.



ಸುಡಾನ್‌ನಲ್ಲಿ ಸಿಲುಕಿದ್ದ ಭಾರತೀಯರನ್ನು ಬುಧವಾರ 'ಆಪರೇಷನ್ ಕಾವೇರಿ' ಕಾರ್ಯಾಚರಣೆಯಡಿ ಭಾರತೀಯ ವಾಯುಪಡೆಯ ಸಿ–130ಜೆ ಮಿಲಿಟರಿ ಸಾರಿಗೆ ವಿಮಾನದ ಮೂಲಕ ಕರೆತರಲಾಯಿತು —ಪಿಟಿಐ ಚಿತ್ರ

ಸುಡಾನ್ ಜೈಲಿನಿಂದ ಯುದ್ಧ ಅಪರಾಧಿಗಳು ಪರಾರಿ

ಖಾರ್ಟೂಮ್ (ಎಎಫ್‌ಪಿ/ಎಪಿ/ಪಿಟಿಐ): ಸುಡಾನ್‌ನಲ್ಲಿ ನಡೆಯುತ್ತಿರುವ ಸೇನಾಪಡೆಗಳ ಸಂಘರ್ಷದ ವೇಳೆ ಮಾಜಿ ಯುದ್ಧ ಅಪರಾಧಿ ಅಹ್ಮದ್ ಹರೂನ್ ಮತ್ತು ಆತನ ಕೆಲವು ಸಹಚರರು ಕೋಬೆರ್ ಜೈಲಿನಿಂದ ತಪ್ಪಿಸಿಕೊಂಡಿದ್ದು, ದೇಶದಲ್ಲಿ ಮುಂದಿನ ದಿನಗಳಲ್ಲಿ ಭಾರಿ ಅಪಾಯ ಎದುರಾಗುವ ಭಯ ಆವರಿಸಿದೆ.

2019ರಲ್ಲಿ ಪದಚ್ಯುತಗೊಂಡ ನಿರಂಕುಶಾಧಿಕಾರಿ ಒಮರ್ ಅಲ್ ಬಶೀರ್‌ಗೆ ಆಪ್ತನಾಗಿದ್ದ ಅಹ್ಮದ್ ಹರೂನ್ ದಾರ್‌ಫುರ್‌ನಲ್ಲಿ ಹಲವು ಯುದ್ಧ ಅಪರಾಧ ನಡೆಸಿದ್ದಕ್ಕಾಗಿ ಅಂತರರಾಷ್ಟ್ರೀಯ ಅಪರಾಧ ನ್ಯಾಯಾಲಯದಿಂದ ಸಮನ್ಸ್ ಪಡೆದಾತ. ಉಭಯ ಸೇನಾಪಡೆಗಳ ನಡುವಿನ ಸಂಘರ್ಷದ ಲಾಭ ಪಡೆದು ಜೈಲಿನಿಂದ ಅಪರಾಧಿಗಳು ಹೊರಬಂದ ಮೂರನೇ ಪ್ರಸಂಗ ಇದಾಗಿದೆ. ಅಲ್ ಬಶೀರ್ ಅನಾರೋಗ್ಯದ ಕಾರಣಕ್ಕೆ ಸೇನಾ ಆಸ್ಪತ್ರೆಗೆ ಸ್ಥಳಾಂತರಗೊಂಡಿದ್ದು, ಸೇನೆಯ ಕಣ್ಗಾವಲಿನಲ್ಲಿ ಇದ್ದಾರೆ.

ಮುಂದುವರಿದ ವಿದೇಶಿಗರ ಸ್ಥಳಾಂತರ: ಯುದ್ಧವಿರಾಮ ಘೋಷಣೆಯ ನಡುವೆಯೂ ಗುಂಡು ಹಾರಾಟ, ವಾಯುಪಡೆಗಳಿಂದ ದಾಳಿ ಮುಂದುವರಿದಿದೆ. ಇದೇ ವೇಳೆ ವಿದೇಶಿ ಪ್ರಜೆಗಳನ್ನು ದೇಶದಿಂದ ಹೊರಗೆ ಕರೆದೊಯ್ಯುವ ಕಾರ್ಯಾಚರಣೆಯೂ ಭರದಿಂದ ಸಾಗಿದೆ. ಇದುವರೆಗೆ 6,400ಕ್ಕೂ ಹೆಚ್ಚು ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಎಎಫ್‌ಪಿ ವರದಿ ಹೇಳಿದೆ.

50ಕ್ಕೂ ಅಧಿಕ ದೇಶಗಳ 1,687 ಜನರಿದ್ದ ಹಡಗು ಬುಧವಾರ ಜಿದ್ದಾ ತಲುಪಿದೆ ಎಂದು ಸೌದಿ ಅರೇಬಿಯಾದ ವಿದೇಶಾಂಗ ಸಚಿವಾಲಯ ತಿಳಿಸಿದೆ. ಈ ತಂಡದಲ್ಲಿ ಶ್ರೀಲಂಕಾದ 13 ಮಂದಿ ಸಹ ಇದ್ದರು. ಇನ್ನೂ 12 ಮಂದಿ ಸುಡಾನ್ ಬಂದರಿನಲ್ಲಿ ಕಾಯುತ್ತಿದ್ದಾರೆ ಎಂದು ಲಂಕಾ ಸರ್ಕಾರ ಹೇಳಿದೆ.

ಆಪತ್ತಿನಲ್ಲಿರುವ ಕೇಂದ್ರ ಆರೋಗ್ಯ ಪ್ರಯೋಗಾಲಯ (ಜಿನೀವಾ ವರದಿ): ಖಾರ್ಟೂಮ್‌ನಲ್ಲಿರುವ ಜೈವಿಕ ವಸ್ತುಗಳ ರಾಷ್ಟ್ರೀಯ ಆರೋಗ್ಯ ಪ್ರಯೋಗಾಲಯವನ್ನು ಸಂಘರ್ಷದಲ್ಲಿ ತೊಡಗಿರುವ ಪಡೆಗಳ ಪೈಕಿ ಒಂದು ಪಡೆ ವಶಕ್ಕೆ ಪಡೆದಿದೆ. ಇದರಿಂದ ದೇಶಕ್ಕೆ ಭಾರಿ ಅಪಾಯ ಎದುರಾಗುವ ಸಾಧ್ಯತೆ ಇದೆ ಎಂದು ವಿಶ್ವಸಂಸ್ಥೆ ಆತಂಕ ವ್ಯಕ್ತಪಡಿಸಿದೆ.

ಈ ಪ್ರಯೋಗಾಲಯದಲ್ಲಿದ್ದ ತಂತ್ರಜ್ಞರೆಲ್ಲರನ್ನೂ ಹೊರಹಾಕಲಾಗಿದ್ದು, ಅಲ್ಲಿ ಪೋಲಿಯೊ, ದಢಾರ, ಕಾಲರಾಗೆ ಸಂಬಂಧಿಸಿದ ಔಷಧಗಳನ್ನು ಇರಿಸಲಾಗಿತ್ತು. ಖಾರ್ಟೂಮ್‌ನಲ್ಲಿ ಶೇ 60ರಷ್ಟು ಆಸ್ಪತ್ರೆಗಳು ಮುಚ್ಚಿದ್ದು, ಸದ್ಯ ಶೇ 16ರಷ್ಟು ಆಸ್ಪತ್ರೆಗಳು ಮಾತ್ರ ಕಾರ್ಯಾಚರಿಸುತ್ತಿವೆ. ಸಂಘರ್ಷದಲ್ಲಿ ಇದುವರೆಗೆ 459 ಮಂದಿ ಮೃತಪಟ್ಟಿದ್ದು, 4,000ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ವಿಶ್ವಸಂಸ್ಥೆ ತಿಳಿಸಿದೆ.

ರಾಹುಲ್ ಮೇಲ್ಮನವಿ ವಿಚಾರಣೆ: ಹಿಂದೆ ಸರಿದ ನ್ಯಾಯಮೂರ್ತಿ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಮಾನನಷ್ಟ ಮೊಕದ್ದಮೆಯೊಂದರಲ್ಲಿ ಸೂರತ್‌ನ ನ್ಯಾಯಾಲಯ ವಿಧಿಸಿರುವ ಶಿಕ್ಷೆಗೆ ತಡೆ ನೀಡುವಂತೆ ಕೋರಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆಯಿಂದ ಗುಜರಾತ್ ಹೈಕೋರ್ಟ್ ನ್ಯಾಯಮೂರ್ತಿ ಗೀತಾ ಗೋಪಿ ಬುಧವಾರ ಹಿಂದೆ ಸರಿದರು.

ಅರ್ಜಿ ವಿಚಾರಣೆಯನ್ನು ಬೇರೆ ನ್ಯಾಯಪೀಠಕ್ಕೆ ವಹಿಸುವುದಕ್ಕಾಗಿ ಮುಖ್ಯ ನ್ಯಾಯಮೂರ್ತಿ ಅವರಿಗೆ ಈ ಅರ್ಜಿಯನ್ನು ಮರಳಿಸುವಂತೆ ಅವರು ನ್ಯಾಯಾಲಯದ ಅಧಿಕಾರಿಗಳಿಗೆ ಸೂಚನೆ ನೀಡಿದರು. ವಿಚಾರಣೆಯಿಂದ ಹಿಂದೆ ಸರಿಯುವುದಕ್ಕೆ ಅವರು ಯಾವುದೇ ಕಾರಣ ನೀಡಿಲ್ಲ.

ಇದಕ್ಕೂ ಮುನ್ನ, ನ್ಯಾಯಮೂರ್ತಿ ಗೀತಾ ಗೋಪಿ ಅವರಿದ್ದ ನ್ಯಾಯಪೀಠದ ಮುಂದೆ ವಾದ ಮಂಡಿಸಿದ ರಾಹುಲ್ ಪರ ವಕೀಲ ಪಿ.ಎಸ್.ಚಂಪಾನೇರಿ, ಅರ್ಜಿಯ ತುರ್ತು ವಿಚಾರಣೆ ನಡೆಸುವಂತೆ ಮನವಿ ಮಾಡಿದರು.

ಇದಕ್ಕೆ ಸಹಾಯಕ ಸರ್ಕಾರಿ ವಕೀಲರು ವಿರೋಧ ವ್ಯಕ್ತಪಡಿಸಿದರು. ಆಗ ಪ್ರತಿಕ್ರಿಯಿಸಿದ ವಕೀಲ ಚಂಪಾನೇರಿ, 'ಇದು ಖಾಸಗಿ ದೂರು. ರಾಜ್ಯ ಸರ್ಕಾರಕ್ಕೂ ಇದಕ್ಕೂ ಏನೂ ಸಂಬಂಧ ಇಲ್ಲ. ಹೀಗಾಗಿ ತುರ್ತು ವಿಚಾರಣೆ ನಡೆಸಬೇಕು' ಎಂದು ಕೋರಿದರು.

ಎರಡೂ ಕಡೆಯವರ ಮಾತುಗಳನ್ನು ಆಲಿಸಿದ ನ್ಯಾಯಮೂರ್ತಿ ಗೀತಾ ಗೋಪಿ ಅವರು, ಅರ್ಜಿ ವಿಚಾರಣೆಯಿಂದ ಹಿಂದೆ ಸರಿಯುತ್ತಿರುವುದಾಗಿ ಪ್ರಕಟಿಸಿದರು.

'ಐಇಡಿ ಬಳಸಿ ನಡೆಸುವ ದಾಳಿ ವಿಫಲಗೊಳಿಸುವುದೇ ಸವಾಲು'

ಐಇಡಿ ಪತ್ತೆ ಹಚ್ಚುವಂತಹ ಉತ್ತಮ ತಂತ್ರಜ್ಞಾನದ ಕೊರತೆ: ಅಧಿಕಾರಿಗಳು

ನವದೆಹಲಿ: ಸುಧಾರಿತ ಸ್ಫೋಟಕ ಸಾಧನ (ಐಇಡಿ) ಬಳಸಿ ನಡೆಸುವ ದಾಳಿಗಳನ್ನು ವಿಫಲಗೊಳಿಸುವುದೇ ಭದ್ರತಾ ಪಡೆಗಳ ಮುಂದಿರುವ ದೊಡ್ಡ ಸವಾಲು. ಛತ್ತೀಸ್‌ಗಢದ ಬಸ್ತರ್ ವಲಯದಲ್ಲಿ ಬುಧವಾರ ನಡೆದ ನಕ್ಸಲರ ದಾಳಿಯು ಇಂತಹ ಸವಾಲು ಕುರಿತು ಚರ್ಚೆಯನ್ನು ಮತ್ತೊಮ್ಮೆ ಮುನ್ನೆಲೆಗೆ ತಂದಿದೆ.

'ಐಇಡಿಗಳನ್ನು ಪತ್ತೆ ಹಚ್ಚುವಂತಹ ಉತ್ತಮ ತಂತ್ರಜ್ಞಾನ ಇಲ್ಲದಿರುವುದು ದೊಡ್ಡ ಕೊರತೆ' ಎಂದು ಭದ್ರತಾ ಪಡೆಗಳ ಅಧಿಕಾರಿಗಳು ಹೇಳುತ್ತಾರೆ.

'ನಕ್ಸಲ್ ನಿಗ್ರಹ ಕಾರ್ಯಾಚರಣೆಗಳು ನಡೆದ ಸಂದರ್ಭಗಳಲ್ಲಿ ನಕ್ಸಲರು ಭದ್ರತಾ ಪಡೆಗಳೊಂದಿಗೆ ನೇರವಾಗಿ ಕಾಳಗ ನಡೆಸುವುದಿಲ್ಲ. ಬಂದೂಕುಗಳು, ರೈಫಲ್ಸ್‌ನಂತಹ ಆಯುಧಗಳು ಅವರಲ್ಲಿ ಖಾಲಿಯಾಗಿವೆ. ಹೀಗಾಗಿ, ಅವರು ಐಇಡಿಗಳನ್ನು ಬಳಸಿ, ಹೊಂಚು ಹಾಕಿ ದಾಳಿ ನಡೆಸುತ್ತಾರೆ' ಎಂದೂ ಅಧಿಕಾರಿಗಳು ವಿಶ್ಲೇಷಿಸುತ್ತಾರೆ.

ಬುಧವಾರ ನಕ್ಸಲರ ದಾಳಿ ನಡೆದಿರುವ ಪ್ರದೇಶಗಳು ಬಸ್ತರ್ ವಲಯದ ಸುಕ್ಮಾ ಜಿಲ್ಲೆಯ ದಕ್ಷಿಣ ತುದಿಯಲ್ಲಿದೆ. ಇದು ಛತ್ತೀಸ್‌ಗಢ, ತೆಲಂಗಾಣ ಹಾಗೂ ಒಡಿಶಾ ರಾಜ್ಯಗಳು ಸೇರುವ ಸ್ಥಳ. ಈ ಪ್ರದೇಶವು ಅರಣ್ಯದಿಂದ ಕೂಡಿರುವ ಕಾರಣ ಇಲ್ಲಿ ನಕ್ಸಲರು ಅವಿತು ದಾಳಿ ನಡೆಸಿರುವುದು ಅಧಿಕ.

ಇದೇ ಸ್ಥಳದಲ್ಲಿ 2010ರಲ್ಲಿ ನಡೆದಿದ್ದ ನಕ್ಸಲರ ದಾಳಿಯಲ್ಲಿ ಸಿಆರ್‌ಪಿಎಫ್‌ನ 75 ಯೋಧರು ಮೃತಪಟ್ಟಿದ್ದರು.

ಜಾರ್ಖಂಡ್ ಹಾಗೂ ಬಿಹಾರದಲ್ಲಿ ಭದ್ರತಾ ಪಡೆಗಳು ನಿರಂತರವಾಗಿ ಕಾರ್ಯಾಚರಣೆಗಳನ್ನು ನಡೆಸಿರುವ ಪರಿಣಾಮ ಈ ರಾಜ್ಯಗಳಲ್ಲಿ ಎಡಪಂಥೀಯ ಉಗ್ರವಾದ (ಎಲ್‌ಡಬ್ಲ್ಯುಇ) ಬಹುತೇಕ ಕೊನೆಗೊಂಡಿದೆ ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಕಳೆದ ಒಂದು ದಶಕದ ಅವಧಿಯಲ್ಲಿ ನಕ್ಸಲರು ನಡೆಸುವ ಹಿಂಸಾಚಾರ ಘಟನೆಗಳು ಶೇ 77ರಷ್ಟು ಕಡಿಮೆಯಾಗಿವೆ ಎಂದೂ ಕೇಂದ್ರ ಸರ್ಕಾರ ಹೇಳುತ್ತಿದೆ.

ಆದರೆ, ಛತ್ತೀಸ್‌ಗಢದ ದಕ್ಷಿಣ ಗಡಿಯ ಪ್ರದೇಶಗಳಲ್ಲಿ ಐಇಡಿಗಳನ್ನು ರಹಸ್ಯವಾಗಿಟ್ಟು ನಕ್ಸಲರು ನಡೆಸುವ ವಿಧ್ವಂಸಕ ಕೃತ್ಯಗಳು ಈಗಲೂ ಸವಾಲಾಗಿವೆ ಎಂದು ಭದ್ರತಾ ಅಧಿಕಾರಿಗಳು ಹೇಳುತ್ತಾರೆ.

'ಭದ್ರತಾ ಪಡೆಗಳು ನಡೆಸುವ ಕಾರ್ಯಾಚರಣೆಗೆ ಪ್ರತಿಯಾಗಿ ನಕ್ಸಲರು ದಾಳಿ ನಡೆಸುವ ಸಾಧ್ಯತೆ ಬಗ್ಗೆ ಪಡೆಗಳಿಗೆ ಎಚ್ಚರಿಕೆ ನೀಡಲಾಗಿತ್ತು. ದುರದೃಷ್ಟವಶಾತ್, ದಾಂತೇವಾಡ ಜಿಲ್ಲೆಯಲ್ಲಿ ಡಿಆರ್‌ಜಿ ಸಿಬ್ಬಂದಿ ಇದ್ದ ವಾಹನವನ್ನು ಸ್ಫೋಟಿಸುವಲ್ಲಿ ನಕ್ಸಲರು ಯಶ ಕಂಡಿದ್ದಾರೆ. ಈ ಘಟನೆಗೆ ಕಾರಣಗಳನ್ನು ಪತ್ತೆ ಹಚ್ಚಲು ತನಿಖೆ ನಡೆಸಲಾಗುತ್ತಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ನಕ್ಸಲರ ದಾಳಿ: ಘಟನಾವಳಿಗಳು

ರಾಯಪುರ, ಛತ್ತೀಸಗಢ : ರಾಜ್ಯದಲ್ಲಿ ನಕ್ಸಲರು ನಡೆಸಿರುವ ದಾಳಿ, ಅವರೊಂದಿಗೆ ನಡೆದ ಕಾಳಗಕ್ಕೆ ರಕ್ತಸಿಕ್ತ ಇತಿಹಾಸವಿದ್ದು, ವಿವರ ಇಲ್ಲಿದೆ.

ಏಪ್ರಿಲ್ 2021	ಸುಕ್ಮಾ ಮತ್ತು ಬಿಜಾಪುರ ಜಿಲ್ಲೆಗಳ ಗಡಿಗೆ ಹೊಂದಿಕೊಂಡಿರುವ ಅರಣ್ಯದಲ್ಲಿ ನಕ್ಸಲರೊಂದಿಗಿನ ಕಾಳಗದಲ್ಲಿ 22 ಮಂದಿ ಭದ್ರತಾ ಸಿಬ್ಬಂದಿ ಸಾವನ್ನಪ್ಪಿದ್ದರು.
ಮಾರ್ಚ್ 2018	ಸುಕ್ಮಾ ಜಿಲ್ಲೆಯಲ್ಲಿ ನಕ್ಸಲರು ಐಇಡಿ ಬಳಸಿ ನಡೆಸಿದ್ದ ಸ್ಫೋಟದಲ್ಲಿ ಸಿಆರ್‌ಪಿಎಫ್‌ನ 9 ಯೋಧರು ಮೃತಪಟ್ಟಿದ್ದರು.
ಫೆಬ್ರುವರಿ 18, 2018	ಸುಕ್ಮಾ ಜಿಲ್ಲೆಯ ಭೆಜ್ಜಿ ಎಂಬಲ್ಲಿ ನಡೆದಿದ್ದ ಗುಂಡಿನ ಚಕಮಕಿಯಲ್ಲಿ ಇಬ್ಬರು ಪೊಲೀಸರು ಮೃತಪಟ್ಟಿದ್ದರು.
ಏಪ್ರಿಲ್ 24, 2017	ಸುಕ್ಮಾ ಜಿಲ್ಲೆಯಲ್ಲಿ ನಡೆದಿದ್ದ ಎನ್‌ಕೌಂಟರ್‌ನಲ್ಲಿ 24 ಸಿಆರ್‌ಪಿಎಫ್ ಯೋಧರು ಸಾವನ್ನಪ್ಪಿದ್ದರು
ಮಾರ್ಚ್ 12, 2017	ಸುಕ್ಮಾ ಜಿಲ್ಲೆಯಲ್ಲಿ ನಕ್ಸಲರು ನಡೆಸಿದ್ದ ದಾಳಿಯಲ್ಲಿ 12 ಸಿಆರ್‌ಪಿಎಫ್ ಯೋಧರು ಮೃತಪಟ್ಟಿದ್ದರು
ಮಾರ್ಚ್ 11, 2014	ಭದ್ರತಾ ಪಡೆಗಳ 15 ಯೋಧರು ಸಾವನ್ನಪ್ಪಿದ್ದರು
ಫೆಬ್ರುವರಿ 28, 2014	ದಾಂತೇವಾಡ ಜಿಲ್ಲೆಯಲ್ಲಿ ನಕ್ಸಲರು ನಡೆಸಿದ್ದ ದಾಳಿಯಲ್ಲಿ 6 ಪೊಲೀಸ್ ಅಧಿಕಾರಿಗಳು ಮೃತಪಟ್ಟಿದ್ದರು
ಮೇ 25, 2013	ದರ್ಭಾ ಕಣಿವೆಯಲ್ಲಿ ನಕ್ಸಲರಿಂದ ಭೀಕರ ದಾಳಿ. ಕಾಂಗ್ರೆಸ್ ನಾಯಕ, ಮಾಜಿ ಸಚಿವ ಮಹೇಂದ್ರ ಕರ್ಮ ಸೇರಿದಂತೆ ಪಕ್ಷದ 25 ಮುಖಂಡರ ಹತ್ಯೆಯಾಗಿತ್ತು
ಜೂನ್ 29, 2010	ನಾರಾಯಣಪುರ ಜಿಲ್ಲೆಯಲ್ಲಿ ನಕ್ಸಲರಿಂದ ಹೊಂಚು ದಾಳಿ. ಸಿಆರ್‌ಪಿಎಫ್‌ನ 26 ಯೋಧರು ಮೃತಪಟ್ಟಿದ್ದರು
ಮೇ 8, 2010	ಬಿಜಾಪುರ ಜಿಲ್ಲೆಯಲ್ಲಿ ನಕ್ಸಲರು ಗುಂಡು ನಿರೋಧಕ ವಾಹನ ಸ್ಫೋಟಿಸಿದ್ದರು. ಈ ಘಟನೆಯಲ್ಲಿ ಸಿಆರ್‌ಪಿಎಫ್‌ನ 8 ಯೋಧರು ಮೃತಪಟ್ಟಿದ್ದರು
ಏಪ್ರಿಲ್ 6, 2010	ದಾಂತೇವಾಡ ಜಿಲ್ಲೆಯಲ್ಲಿ ನಕ್ಸಲರು ನಡೆಸಿದ್ದ ಹೊಂಚು ದಾಳಿಯಲ್ಲಿ ಸಿಆರ್‌ಪಿಎಫ್‌ನ 75 ಯೋಧರು ಹತರಾಗಿದ್ದರು
ಸೆಪ್ಟೆಂಬರ್ 4, 2009	ಬಿಜಾಪುರ ಜಿಲ್ಲೆಯಲ್ಲಿ ನಾಲ್ವರು ಗ್ರಾಮಸ್ಥರನ್ನು ಹತ್ಯೆ ಮಾಡಿದ್ದರು
ಜುಲೈ 27, 2009	ದಾಂತೇವಾಡದಲ್ಲಿ ನಕ್ಸಲರಿಂದ ನೆಲಬಾಂಬ್ ಸ್ಫೋಟ. ಈ ಘಟನೆಯಲ್ಲಿ 6 ಮಂದಿ ಮೃತಪಟ್ಟಿದ್ದರು
ಜುಲೈ 18, 2009	ಬಸ್ತರ್ ಜಿಲ್ಲೆಯ ಗ್ರಾಮಸ್ಥರೊಬ್ಬರ ಹತ್ಯೆ ಮಾಡಲಾಗಿತ್ತು

'ಸುಪ್ರೀಂ ತೀರ್ಪಿನ ಬಳಿಕ ಪ್ರತಿಕ್ರಿಯೆ'

ಪ್ರಜಾವಾಣಿ ವಾರ್ತೆ

ಶರದ್ ಪವಾರ್

ಮುಂಬೈ: ಶಿವಸೇನಾ (ಶಿಂದೆ ಬಣ) ಹಾಗೂ ಬಿಜೆಪಿ ಮೈತ್ರಿಕೂಟ ಸರ್ಕಾರ ಅಧಿಕಾರದ ಗದ್ದುಗೆ ಏರಿ ಒಂದು ವರ್ಷ ಪೂರ್ಣಗೊಳ್ಳುವ ಮೊದಲೇ ನಾಯಕತ್ವದ ಬದಲಾವಣೆಯ ಕೂಗು ಕೇಳಿಬಂದಿದ್ದು, ಮಹಾರಾಷ್ಟ್ರದಲ್ಲಿ ಮತ್ತೆ ರಾಜಕೀಯ ಪಲ್ಲಟ ಶುರುವಾಗಲಿದೆಯೇ ಎಂಬ ಮಾತು ಮುನ್ನೆಲೆಗೆ ಬಂದಿದೆ.

ಇದಕ್ಕೆ ಪುಷ್ಟಿ ನೀಡುವಂತೆ ಶಿವಸೇನಾ ಪಕ್ಷದ ಮುಖವಾಣಿ 'ಸಾಮ್ನಾ' ಪತ್ರಿಕೆಯು 'ಮುಖ್ಯಮಂತ್ರಿ ಬದಲಾಗಲಿದ್ದಾರೆ' ಎಂದು ಸಂಪಾದಕೀಯ ಬರೆದಿತ್ತು. ಇದರ ಬೆನ್ನಲ್ಲೇ 'ಮಹಾರಾಷ್ಟ್ರದಲ್ಲಿ ನಡೆಯುತ್ತಿರುವ ರಾಜಕೀಯ ಹಗ್ಗಜಗ್ಗಾಟದ ಬಗ್ಗೆ ಸುಪ್ರೀಂ ಕೋರ್ಟ್‌ನಿಂದ ತೀರ್ಪು ಹೊರಬಿದ್ದ ಬಳಿಕ ಪ್ರತಿಕ್ರಿಯೆ ನೀಡುತ್ತೇನೆ' ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ನೀಡಿರುವ ಹೇಳಿಕೆ ರಾಜಕೀಯ ಮಹತ್ವ ಪಡೆದುಕೊಂಡಿದೆ.

ಸುಪ್ರೀಂ ಕೋರ್ಟ್‌ನಲ್ಲಿ ಮುಖ್ಯಮಂತ್ರಿ ಏಕನಾಥ ಶಿಂಧೆ ಹಾಗೂ ಇತರ 15 ಶಾಸಕರ ಅನರ್ಹತೆ ಪ್ರಕರಣವು ವಿಚಾರಣೆ ಹಂತದಲ್ಲಿದೆ. ಈ ನಡುವೆಯೇ ಮುಖ್ಯಮಂತ್ರಿ ಹುದ್ದೆಯಿಂದ ಶಿಂದೆ ಕೆಳಗಿಳಿಯಲಿದ್ದು, ದೇವೇಂದ್ರ ಫಡಣವೀಸ್ ಸಿ.ಎಂ ಗಾದಿಗೇರಲಿದ್ದಾರೆ ಎಂಬ ಊಹಾಪೋಹಗಳು ಹರಿದಾಡುತ್ತಿವೆ.

ಸದ್ಯ ಶಿಂದೆ ಅವರು, ಸತಾರ ಜಿಲ್ಲಾ ಪ್ರವಾಸದಲ್ಲಿದ್ದಾರೆ. ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಕರ್ನಾಟಕದಲ್ಲಿ ನಡೆಯುತ್ತಿರುವ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡಿದ್ದು, ಬಳಿಕ ಮಾರಿಷಸ್‌ಗೆ ತೆರಳಲಿದ್ದಾರೆ.

₹45 ಕೋಟಿ ವೆಚ್ಚದಲ್ಲಿ ಕೇಜ್ರಿವಾಲ್ ನಿವಾಸ ನವೀಕರಣ: ಬಿಜೆಪಿ ಟೀಕೆ

ನವದೆಹಲಿ(ಪಿಟಿಐ): 'ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಮ್ಮ ಅಧಿಕೃತ ನಿವಾಸದ ನವೀಕರಣಕ್ಕೆ ಸುಮಾರು ₹45 ಕೋಟಿ ವೆಚ್ಚ ಮಾಡಿದ್ದಾರೆ. ರಾಜಕಾರಣ ಪ್ರವೇಶಿಸಿದಾಗ ಅವರು ಪ್ರಾಮಾಣಿಕತೆ ಮತ್ತು ಸರಳತೆ ಉತ್ತೇಜಿಸುವುದಾಗಿ ಹೇಳಿಕೊಂಡಿದ್ದರು. ಇಷ್ಟು ದೊಡ್ಡ ಮೊತ್ತದ ವೆಚ್ಚ ಅವರ ಸೈದ್ಧಾಂತಿಕ 'ನವೀಕರಣ'ದ ಒಂದು ಸೂಚಕ' ಎಂದು ಬಿಜೆಪಿ ಬುಧವಾರ ಆರೋಪಿಸಿದೆ.

'ಇದು ಕೇಜ್ರಿವಾಲ್ ನಿವಾಸದ ದುಬಾರಿ ನವೀಕರಣ ಮಾತ್ರವಲ್ಲ. ಎಎಪಿ ಸಿದ್ಧಾಂತ ಮತ್ತು ಅದರ ನಾಯಕರ ಮನಸ್ಥಿತಿಯೂ ಆಗಿದೆ. ಕೇಜ್ರಿವಾಲ್ ತಕ್ಷಣವೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಬಿಜೆಪಿ ನಾಯಕರು ಆಗ್ರಹಿಸಿದ್ದಾರೆ.

ಬಿಜೆಪಿ ಪ್ರತಿಭಟನೆ: ಕೇಜ್ರಿವಾಲ್ ಅವರ ನಿವಾಸದ ಮುಂದೆ ಬುಧವಾರ ಪ್ರತಿಭಟಿಸಿದ ದೆಹಲಿ ಬಿಜೆಪಿ ಪ್ರಧಾನ ಕಾರ್ಯದರ್ಶಿ ಕುಲ್ಜೀತ್ ಚಹಾಲ್ ಸೇರಿ ಪಕ್ಷದ ಹಲವು ನಾಯಕರನ್ನು ಪೊಲೀಸರು ಬಲವಂತವಾಗಿ ಹೊರದಬ್ಬಿದರು.

ಕಾಂಗ್ರೆಸ್ ಕಿಡಿ: ಕಾಂಗ್ರೆಸ್ ಕೂಡ ಕೇಜ್ರಿವಾಲ್ ಮೇಲೆ ಮುಗಿಬಿದ್ದಿದೆ. ಪಕ್ಷದ ನಾಯಕ ಅಜಯ್ ಮಾಕೆನ್ ಅವರು, ಅರವಿಂದ ಕೇಜ್ರಿವಾಲ್ ಅವರಿಗೆ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಯುವ ಹಕ್ಕು ಉಳಿದಿದೆಯೇ ಎಂದು ಪ್ರಶ್ನಿಸಿದ್ದಾರೆ.

ಎಎಪಿ ಪ್ರತ್ಯುತ್ತರ: ಮುಖ್ಯಮಂತ್ರಿ ನಿವಾಸ 1942ರಲ್ಲಿ ನಿರ್ಮಾಣವಾದ ಕಟ್ಟಡ. ಈಗಾಗಲೇ ಮೂರು ಬಾರಿ ಮೇಲ್ಚಾವಣಿ ಕುಸಿದ ನಿದರ್ಶನಗಳಿದ್ದವು. ದೆಹಲಿ ಪಿಡಬ್ಲ್ಯುಡಿ ಲೆಕ್ಕಪರಿಶೋಧನೆಯ ನಂತರ ಅದನ್ನು ನವೀಕರಿಸಲು ಶಿಫಾರಸು ಮಾಡಿತ್ತು. ಬಿಜೆಪಿಯು ಈ ವಿಷಯ ಪ್ರಸ್ತಾಪಿಸಿ, ಪ್ರಮುಖ ವಿಷಯಗಳಿಂದ ಜನರ ಗಮನ ಬೇರೆಡೆಗೆ ತಿರುಗಿಸುತ್ತಿದೆ ಎಂದು ಎಎಪಿ ನಾಯಕ ರಾಘವ್ ಚಡ್ಡಾ ಹೇಳಿದ್ದಾರೆ.

ಇ.ಸಿ.ಜೆಡ್: ತೀರ್ಪು ಮಾರ್ಪಡಿಸಿದ 'ಸುಪ್ರೀಂ'

ನವದೆಹಲಿ: ರಾಷ್ಟ್ರೀಯ ಉದ್ಯಾನಗಳು, ವನ್ಯಜೀವಿಧಾಮಗಳು ಮತ್ತು ರಕ್ಷಿತ ಅರಣ್ಯಗಳು, ಅವುಗಳ ಗಡಿಯಿಂದ ಕನಿಷ್ಠ 1 ಕಿ.ಮೀ ವ್ಯಾಪ್ತಿಯಲ್ಲಿ ಕಡ್ಡಾಯವಾಗಿ ಪರಿಸರ ಸೂಕ್ಷ್ಮ ವಲಯ ಹೊಂದಿರಬೇಕು ಎಂದು 2022ರ ಜೂನ್ 3ರಂದು ತಾನು ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ಬುಧವಾರ ಮಾರ್ಪಡಿಸಿದೆ.

ತೀರ್ಪು ಪ್ರಶ್ನಿಸಿ ಕೇಂದ್ರ ಸರ್ಕಾರ ಹಾಗೂ ಇತರರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ತ್ರಿಸದಸ್ಯ ನ್ಯಾಯ ಪೀಠ, 'ಇಂತಹ ನಿರ್ದೇಶನವನ್ನು ಮುಂದುವರಿಸಿದ್ದೇ ಆದಲ್ಲಿ ಮಾನವ–ವನ್ಯಜೀವಿ ಸಂಘರ್ಷಕ್ಕೆ ಕಡಿವಾಣ ಬೀಳುವ ಬದಲು ಅದು ಇನ್ನಷ್ಟು ತೀವ್ರಗೊಳ್ಳಲಿದೆ' ಎಂದು ಅಭಿಪ್ರಾಯಪಟ್ಟಿದೆ.

'ಬಫರ್ ವಲಯ ಘೋಷಣೆಯ ಉದ್ದೇಶವು ನಾಗರಿಕರ ನಿತ್ಯದ ಚಟುವಟಿಕೆಗಳಿಗೆ ಅಡ್ಡಿಮಾಡುವುದಲ್ಲ. ಬದಲಾಗಿ ಅರಣ್ಯ ಸಂಪತ್ತನ್ನು ರಕ್ಷಿಸುವುದು ಹಾಗೂ ಸಂರಕ್ಷಿತ ವಲಯದ ಸುತ್ತಲಿನ ಪರಿಸರವನ್ನು ಉತ್ತಮಗೊಳಿಸುವುದೇ ಆಗಿದೆ' ಎಂದಿದೆ.

ಸಂಕ್ಷಿಪ್ತ ಸುದ್ದಿ

ಶಾಲೆಯೊಳಗೆ ನುಗ್ಗಿದ ಬಂದೂಕುಧಾರಿ ವ್ಯಕ್ತಿ: ಬಂಧನ

ಮಾಲದಾ (ಪಶ್ಚಿಮ ಬಂಗಾಳ) (ಪಿಟಿಐ): ಬಂದೂಕುಧಾರಿ ವ್ಯಕ್ತಿಯೊಬ್ಬ ಇಲ್ಲಿನ ಮುಚಿಯಾ ಅಂಚಲ್ ಚಂದ್ರ ಮೋಹನ್ ಹಿರಿಯ ಪ್ರಾಥಮಿಕ ಶಾಲೆಯ ಕೊಠಡಿಯೊಂದಕ್ಕೆ ನುಗ್ಗಿ, ವಿದ್ಯಾರ್ಥಿಗಳಿಗೆ ಬಂದೂಕು ತೋರಿಸಿ ಬೆದರಿಕೆವೊಡ್ಡಿದ ಘಟನೆ ಬುಧವಾರ ಮಧ್ಯಾಹ್ನದ ವೇಳೆಗೆ ನಡೆದಿದೆ. ವಿಷಯ ತಿಳಿದು ಶಾಲೆಗೆ ಬಂದ ಪೊಲೀಸರು ವ್ಯಕ್ತಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

'ಜನರ ಸಹಾಯದಿಂದ ವ್ಯಕ್ತಿಯನ್ನು ಬಂಧಿಸಿದೆವು. ಕೊಠಡಿಯಲ್ಲಿ ಒಟ್ಟು 35–40 ವಿದ್ಯಾರ್ಥಿಗಳಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

'1 ವರ್ಷದ ಹಿಂದೆ ನನ್ನ ಹೆಂಡತಿ ಹಾಗೂ ಮಗ ಕಾಣೆಯಾಗಿದ್ದಾರೆ. ಈ ಬಗ್ಗೆ ದೂರು ನೀಡಿದರೂ ಆಡಳಿತ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ನನ್ನ ಮಗ ಇದೇ ಶಾಲೆಯಲ್ಲಿ ಓದುತ್ತಿದ್ದ. ಕೊನೆ ಪಕ್ಷ ಹೀಗೆ ಮಾಡಿದರೆ, ಆಡಳಿತವು ನನ್ನ ಹೆಂಡತಿ ಹಾಗೂ ಮಗನನ್ನು ಹುಡುಕಿಕೊಡುವಂತೆ ಒತ್ತಡ ಹೇರಬಹುದು ಎಂದು ಅನ್ನಿಸಿ ಹೀಗೆ ಮಾಡಿದೆ' ಎಂದು ಬಂಧಿತ ವ್ಯಕ್ತಿ ಹೇಳಿದ್ದಾನೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಪೊಲೀಸರನ್ನು ಪ್ರಶಂಸಿದ್ದಾರೆ.

ಮಹಾರಾಷ್ಟ್ರ: ರೈತರ ಮತ್ತೊಂದು ಸುತ್ತಿನ ಹೋರಾಟ ಆರಂಭ

ಮುಂಬೈ: ಉರಿಯುವ ಬಿಸಿಲು ಲೆಕ್ಕಿಸದೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮಹಾರಾಷ್ಟ್ರದ ಅಹಮ್ಮದ್‌ನಗರದಿಂದ ಬುಧವಾರ ರೈತರ ಮತ್ತೊಂದು ಸುತ್ತಿನ ಹೋರಾಟ ಆರಂಭಗೊಂಡಿದೆ.

ಅಕೋಲಿಯಿಂದ ಅಹಮ್ಮದ್‌ನಗರದ ಲೊನಿವರೆಗೆ ಸಂಚರಿಸಲಿದೆ. ಈ ಹೋರಾಟಕ್ಕೆ ಪೊಲೀಸರು ಅನುಮತಿ ನೀಡಿಲ್ಲ. ಆದರೂ, ರೈತರು ಹೋರಾಟ ಆರಂಭಿಸಿದ್ದಾರೆ.

'ತನಿಖೆ ಮುಗಿಯದೇ ಚಾರ್ಜ್‌ಶೀಟ್ ಸಲ್ಲಿಸಬಾರದು'

ನವದೆಹಲಿ(ಪಿಟಿಐ): ಆರೋಪಿಗಳಿಗೆ ಸಿಗಬೇಕಿದ್ದ ಡಿಫಾಲ್ಟ್ ಜಾಮೀನು ತಪ್ಪಿಸಲು ತನಿಖಾ ಏಜೆನ್ಸಿಗಳು ಪ್ರಕರಣದ ತನಿಖೆ ಪೂರ್ಣಗೊಳಿಸದೇ ನ್ಯಾಯಾಲಯಗಳಿಗೆ ಚಾರ್ಜ್‌ಶೀಟ್ ಸಲ್ಲಿಸಬಾರದು ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

'ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸದೇ ಚಾರ್ಜ್‌ಶೀಟ್ ಸಲ್ಲಿಸಿದರೆ, ಆರೋಪಿ ಡಿಫಾಲ್ಟ್ ಜಾಮೀನು (ನಿಗದಿತ ಅವಧಿಯಲ್ಲಿ ಕೋರ್ಟ್‌ಗೆ ಅಂತಿಮ ವರದಿಯನ್ನು ಸಲ್ಲಿಸದೇ ಹೋದಲ್ಲಿ ಸಂವಿಧಾನಾತ್ಮಕವಾಗಿ ತಂತಾನೇ ಲಭಿಸುವ ಜಾಮೀನು ಹಕ್ಕು) ಪಡೆಯುವ ಹಕ್ಕನ್ನು ಅದು ಹೊಸಕಿಹಾಕುವುದಿಲ್ಲ' ಎಂದು ನ್ಯಾಯಪೀಠ ಹೇಳಿದೆ. ಕ್ರಿಮಿನಲ್ ಪ್ರಕರಣದ ಆರೋಪಿಗೆ ಜಾಮೀನು ನೀಡುವಾಗ ಸುಪ್ರೀಂ ಕೋರ್ಟ್ ದ್ವಿಸದಸ್ಯ ಪೀಠವು ಈ ತೀರ್ಪು ನೀಡಿದೆ.

ನಿರ್ಧಾರ ಸಂಸತ್ತಿಗೆ ಬಿಡಿ: ಕೇಂದ್ರ ಮನವಿ

ನವದೆಹಲಿ: ಸಲಿಂಗ ಮದುವೆ ಎಂಬುದು ಸಂಕೀರ್ಣ ವಿಷಯವಾಗಿದ್ದು, ಸಮಾಜದ ಮೇಲೆ ಅಗಾಧ ಪರಿಣಾಮ ಬೀರುವಂಥದ್ದು. ಹೀಗಾಗಿ ಈ ವಿಷಯ ಕುರಿತು ನಿರ್ಧಾರ ಕೈಗೊಳ್ಳುವುದನ್ನು ಸಂಸತ್ತಿಗೆ ಬಿಡಬೇಕು ಎಂದು ಕೇಂದ್ರ ಸರ್ಕಾರ ಸುಪ್ರಿಂಕೋರ್ಟ್‌ಗೆ ಬುಧವಾರ ಹೇಳಿದೆ.

ಕೇಂದ್ರದ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಸಲಿಂಗ ಮದುವೆಗೆ ಮಾನ್ಯತೆ ನೀಡಿದರೆ ಅದರಿಂದ ಭಿನ್ನಲಿಂಗ ದಂಪತಿ ಮೇಲೆಯೂ ಪರಿಣಾಮ ಉಂಟಾಗುತ್ತದೆ' ಎಂದು ಹೇಳಿದರು.

ಸಲಿಂಗ ಮದುವೆಗೆ ಮಾನ್ಯತೆ ನೀಡುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ಐದನೇ ದಿನವೂ ಮುಂದುವರಿಯಿತು. ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರಿರುವ ಸಂವಿಧಾನ ಪೀಠ ವಿಚಾರಣೆ ನಡೆಸಿತು.

ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್: ಲಕ್ಷ್ಯಗೆ ನಿರಾಸೆ

ಸಿಂಧು, ಪ್ರಣಯ್‌ಗೆ ಸುಲಭ ಜಯ

ದುಬೈ (ಪಿಟಿಐ): ಹಿನ್ನಡೆಯಿಂದ ಪುಟಿದೆದ್ದ ಭಾರತದ ತ್ರಿಶಾ ಜೋಲಿ ಹಾಗೂ ಗಾಯತ್ರಿ ಗೋಪಿಚಂದ್ ಜೋಡಿಯು ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮಹಿಳಾ ಡಬಲ್ಸ್ ವಿಭಾಗದಲ್ಲಿ ಪ್ರೀಕ್ವಾರ್ಟರ್‌ಫೈನಲ್ ತಲುಪಿದೆ.

ಸುಲಭ ಗೆಲುವು ದಾಖಲಿಸಿದ ಪಿ.ವಿ.ಸಿಂಧು, ಎಚ್.ಎಸ್.ಪ್ರಣಯ್ ಹಾಗೂ ಕಿದಂಬಿ ಶ್ರೀಕಾಂತ್ ಕೂಡ 16ರ ಘಟ್ಟ ತಲುಪಿದರು. ಆದರೆ ಲಕ್ಷ್ಯ ಸೇನ್ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಮೊದಲ ಸುತ್ತಿನ ಪಂದ್ಯದಲ್ಲಿ ಬುಧವಾರ ತ್ರಿಶಾ–ಗಾಯತ್ರಿ 17-21, 21-17, 21-18ರಿಂದ ಇಂಡೊನೇಷ್ಯಾದ ಲ್ಯಾನಿ ತ್ರಿಯಾ ಮಯಸಾರಿ ಮತ್ತು ರಿಬ್ಕಾ ಸುಗಿಯರ್ತೊ ಅವರನ್ನು ಮಣಿಸಿದರು.

ಮಹಿಳೆಯರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಸಿಂಧು 21-15, 22-20ರಿಂದ ಚೀನಾ ತೈಪೆಯ ಚಿ ಸು ಅವರನ್ನು ಮಣಿಸಿದರು. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಶ್ರೀಕಾಂತ್ ಅವರಿಗೆ 21-13, 21-8ರಿಂದ ಬಹ್ರೇನ್‌ನ ಅದ್ನಾನ್ ಇಬ್ರಾಹಿಂ ಎದುರು ಗೆಲುವು ಒಲಿಯಿತು.

ಪ್ರಣಯ್ ಮುನ್ನಡೆ: ವಿಶ್ವದ 9ನೇ ಕ್ರಮಾಂಕದ ಆಟಗಾರ ಎಚ್.ಎಸ್. ಪ್ರಣಯ್ ಅವರು 21–14, 21–9ರಿಂದ ಮ್ಯಾನ್ಮಾರ್‌ನ ಫೋನ್ ಪ್ಯೇ ನೈಂಗ್ ಅವರನ್ನು ಮಣಿಸಿ 16ರ ಸುತ್ತು ಪ್ರವೇಶಿಸಿದರು.

ಸೇನ್ ಪರಾಭವ: ಕಾಮನ್‌ವೆಲ್ತ್ ಗೇಮ್ಸ್ ಚಿನ್ನದ ಪದಕ ವಿಜೇತ ಲಕ್ಷ್ಯ ಸೇನ್ ಅವರು ಮೊದಲ ಸುತ್ತಿನಲ್ಲಿ 7-21, 21-23ರಿಂದ ಸಿಂಗಪುರದ ಲೋಹ್ ಕೀನ್ ಯೆವ್ ಎದುರು ಸೋಲನುಭವಿಸಿದರು.

ಮಿಶ್ರ ಡಬಲ್ಸ್ ಜೋಡಿ ರೋಹನ್ ಕಪೂರ್– ಸಿಕ್ಕಿರೆಡ್ಡಿ ಕೂಡ ಎರಡನೇ ಸುತ್ತಿಗೆ ಮುನ್ನಡೆಯಿತು. ಇವರಿಬ್ಬರು 21-12, 21-16ರಿಂದ ಮಲೇಷ್ಯಾದ ಚಾನ್ ಪೆಂಗ್ ಸೂನ್ ಮತ್ತು ಚೀಯ ಯೀ ಸೀ ಎದುರು ಗೆದ್ದರು.

ವಿಶ್ವ ಚೆಸ್: 12ನೇ ಪಂದ್ಯದಲ್ಲಿ ಲಿರೆನ್‌ಗೆ ಗೆಲುವು– ಸ್ಕೋರ್ ಸಮ

ಅಸ್ತಾನಾ, ಕಜನಕಸ್ತಾನ: ಬಿಳಿ ಕಾಯಿಗಳಲ್ಲಿ ಆಡಿದ ಚೀನಾದ ಡಿಂಗ್ ಲಿರೆನ್, ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ 12ನೇ ಪಂದ್ಯದಲ್ಲಿ ರಷ್ಯದ ನಿಪೊಮ್‌ನಿಷಿ ಅವರನ್ನು ಸೋಲಿಸಿದರು. ಇದರಿಂದ ಫೈನಲ್ ಹಣಾಹಣಿ ಸದ್ಯ 6–6 ಪಾಯಿಂಟ್‌ಗಳಿಂದ ಸಮವಾಗಿದೆ.

ಇನ್ನೆರಡು ಪಂದ್ಯಗಳಷ್ಟೇ ಬಾಕಿಯಿವೆ. ಇಂದಿನ ಫಲಿತಾಂಶದಿಂದ ಫೈನಲ್ ಸೆಣಸಾಟ ಅಂತಿಮ ಪಂದ್ಯದವರೆಗೂ ವಿಸ್ತರಣೆಯಾಗುವುದು ಖಚಿತವಾಯಿತು. ಕಳೆದ ಕೆಲವು ಪಂದ್ಯಗಳಿಂದ ಒಂದು ಪಾಯಿಂಟ್ ಅಂತರದ ಮುನ್ನಡೆ ಉಳಿಸಿಕೊಂಡು ಬಂದಿದ್ದ ನಿಪೊ ಅವರಿಗೆ ಬುಧವಾರದ ಫಲಿತಾಂಶ ಅರಗಿಸಿಕೊಳ್ಳುವುದು ಕಷ್ಟ.

ಪಂದ್ಯದ 25ನೇ ನಡೆಯವರೆಗೆ ಅವರು ಉತ್ತಮ ಸ್ಥಿತಿಯಲ್ಲೇ ಇದ್ದರು. ಆದರೆ 29 ಮತ್ತು 34ನೇ ನಡೆಗಳಲ್ಲಿ ಅವರು ಮಾಡಿದ ತಪ್ಪು ಅಂದಾಜಿನಿಂದ ಲಿರೆನ್ ಸಂಕಷ್ಟದ ಸ್ಥಿತಿಯಿಂದ ಪಾರಾದರು. ಅಷ್ಟೇ ಅಲ್ಲ, ಪಂದ್ಯದ ಮೇಲೆ ಹಿಡಿತವನ್ನೂ ಸಾಧಿಸಿದರು. 38ನೇ ನಡೆಯಲ್ಲಿ ನಿಪೊ ಸೋಲೊಪ್ಪಿಕೊಂಡರು.

13ನೇ ಪಂದ್ಯ ಗುರುವಾರ ಮಧ್ಯಾಹ್ನ ನಡೆಯಲಿದೆ.ಉಕ್ರೇನ್ ಮೇಲೆ ಯುದ್ಧ ಸಾರಿದ ರಷ್ಯಾ ಮೇಲೆ ನಿರ್ಬಂಧ ಇರುವ ಕಾರಣ ನಿಪೊ ಇಲ್ಲಿ ಫಿಡೆ ಧ್ವಜದಡಿ ಆಡುತ್ತಿದ್ದಾರೆ.

ಅಂಧ ಮಹಿಳೆಯರ ಕ್ರಿಕೆಟ್: ಭಾರತಕ್ಕೆ ಜಯ

ಪೋಖರ, ನೇಪಾಳ (ಪಿಟಿಐ): ಭಾರತ ಮಹಿಳಾ ತಂಡದವರು ಅಂಧರ ಕ್ರಿಕೆಟ್ ಸರಣಿಯ ಎರಡನೇ ಪಂದ್ಯದಲ್ಲಿ ನೇಪಾಳ ತಂಡವನ್ನು 9 ವಿಕೆಟ್‌ಗಳಿಂದ ಮಣಿಸಿದರು. ಈ ಮೂಲಕ ಐದು ಪಂದ್ಯಗಳ ಸರಣಿಯಲ್ಲಿ ಭಾರತ, 1–1ರಲ್ಲಿ ಸಮಬಲ ಸಾಧಿಸಿತು. ಮಂಗಳವಾರ ನಡೆದಿದ್ದ ಮೊದಲ ಪಂದ್ಯವನ್ನು ನೇಪಾಳ ಗೆದ್ದುಕೊಂಡಿತ್ತು.

ಸಂಕ್ಷಿಪ್ತ ಸ್ಕೋರ್: ನೇಪಾಳ 20 ಓವರ್‌ಗಳಲ್ಲಿ 172 (ಸರಿತಾ ಗಿಮಿರೆ 56, ಬಿಮಲಾ ರಾಜ್ 29, ಬಿನಿತಾ 18, ಸುಷ್ಮಾ ಪಟೇಲ್ 15ಕ್ಕೆ 1, ಗಂಗಾ 21ಕ್ಕೆ 1, ಫುಲಾ ಸರೇನ್ 26ಕ್ಕೆ 1) ಭಾರತ: 14.3 ಓವರ್‌ಗಳಲ್ಲಿ 1 ವಿಕೆಟ್‌ಗೆ 174 (ಸಿಮು ದಾಸ್ ಔಟಾಗದೆ 66, ಫುಲಾ ಸರೇನ್ ಔಟಾಗದೆ 65, ಗಂಗಾ 22)

ಮಹಿಳಾ ಹಾಕಿ ತಂಡದಿಂದ ಆಸ್ಟ್ರೇಲಿಯಾ ಪ್ರವಾಸ

ನವದೆಹಲಿ (ಪಿಟಿಐ): ಮುಂಬರುವ ಹಾಂಗ್‌ಝೌ ಏಷ್ಯನ್ ಕ್ರೀಡಾಕೂಟಕ್ಕೆ ಸಿದ್ಧತೆಯಾಗಿ ಭಾರತ ಮಹಿಳಾ ಹಾಕಿ ತಂಡ ಮುಂದಿನ ತಿಂಗಳು ಆಸ್ಟ್ರೇಲಿಯಾ ಪ್ರವಾಸ ಕೈಗೊಳ್ಳಲಿದೆ. ಅಲ್ಲಿ ಐದು ಪಂದ್ಯಗಳನ್ನು ಆಡಲಿದೆ.

ಪ್ರವಾಸ ಮೇ 18 ರಿಂದ 27ವರೆಗೆ ನಡೆಯಲಿದ್ದು, ಮೊದಲ ಮೂರು ಪಂದ್ಯಗಳನ್ನು ಆಸ್ಟ್ರೇಲಿಯಾ ತಂಡದ ವಿರುದ್ಧ ಆಡಲಿದೆ. ನಂತರದ ಎರಡು ಪಂದ್ಯಗಳನ್ನು ಆಸ್ಟ್ರೇಲಿಯಾ 'ಎ' ತಂಡದ ವಿರುದ್ಧ ಆಡಬೇಕಿದೆ. ಎಲ್ಲ ಪಂದ್ಯಗಳು ಅಡಿಲೇಡ್‌ನಲ್ಲಿ ನಡೆಯಲಿವೆ.

ಮೊದಲ ಪಂದ್ಯ 18ರಂದು ನಂತರದ ಪಂದ್ಯಗಳು ಕ್ರಮವಾಗಿ 20 ಮತ್ತು 21ರಂದು ನಡೆಯಲಿವೆ. ಆಸ್ಟ್ರೇಲಿಯಾ 'ಎ' ವಿರುದ್ಧದ ಪಂದ್ಯಗಳು ಮೇ 25ರಂದು 27ರಂದು ನಿಗದಿಯಾಗಿವೆ.

ಏಷ್ಯನ್ ಕ್ರೀಡಾಕೂಟ ಈ ವರ್ಷದ ಸೆಪ್ಟೆಂಬರ್– ಅಕ್ಟೋಬರ್ ತಿಂಗಳಲ್ಲಿ

ಜೇಸನ್, ನಿತೀಶ್ ಬಿರುಸಿನ ಆಟ; ವಿರಾಟ್ ಕೊಹ್ಲಿ ಏಕಾಂಗಿ ಹೋರಾಟ ವ್ಯರ್ಥ

ಕೆಕೆಆರ್‌ಗೆ ತಲೆಬಾಗಿದ ಆರ್‌ಸಿಬಿ

• ಮಹಮ್ಮದ್ ನೂಮಾನ್

ಬೆಂಗಳೂರು: ಮೂವರು ಬ್ಯಾಟರ್‌ಗಳ ಮೇಲಿನ ಅತಿಯಾದ ಅವಲಂಬನೆ, ಗೊತ್ತುಗುರಿಯಿಲ್ಲದ ಬೌಲಿಂಗ್ ಮತ್ತು ಕೈಚೆಲ್ಲಿದ ಕ್ಯಾಚ್‌ಗಳು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಮುಳುವಾಗಿ ಪರಿಣಮಿಸಿದವು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ಆಲ್‌ರೌಂಡ್ ಆಟವಾಡಿದ ಕೋಲ್ಕತ್ತ ನೈಟ್ ರೈಡರ್ಸ್ ತಂಡ, 21 ರನ್‌ಗಳಿಂದ ಗೆದ್ದು ಬೀಗಿತು. ಮಾತ್ರವಲ್ಲ, ಸತತ ನಾಲ್ಕು ಪಂದ್ಯಗಳ ಸೋಲಿನ ಸರಪಳಿಯನ್ನು ತುಂಡರಿಸಿತು.

ಅಗ್ರ ಕ್ರಮಾಂಕದ ಬ್ಯಾಟರ್‌ಗಳ ಬಿರುಸಿನ ಆಟದ ನೆರವಿನಿಂದ ನಿತೀಶ್ ರಾಣಾ ಬಳಗ ಐದು ವಿಕೆಟ್ ಕಳೆದುಕೊಂಡು 200 ರನ್ ಕಲೆಹಾಕಿದರೆ, ಆರ್‌ಸಿಬಿ 8 ವಿಕೆಟ್‌ಗಳಿಗೆ 179 ರನ್ ಗಳಿಸಲಷ್ಟೇ ಶಕ್ತವಾಯಿತು.

ಜೇಸನ್ ರಾಯ್ (56 ರನ್, 29 ಎ) ಮತ್ತು ನಿತೀಶ್ ರಾಣಾ (48 ರನ್, 21 ಎ.) ತೋರಿದ ಸೊಗಸಾದ ಬ್ಯಾಟಿಂಗ್ ಹಾಗೂ ವರುಣ್ ಚಕ್ರವರ್ತಿ (27ಕ್ಕೆ 3) ಅವರ ಸ್ಪಿನ್ ಮೋಡಿ, ಕೆಕೆಆರ್ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದವು.

ಆರ್‌ಸಿಬಿ ಹಿಂದಿನ ಪಂದ್ಯಗಳಲ್ಲಿ ಅಗ್ರಕ್ರಮಾಂಕದ ಮೂವರು ಬ್ಯಾಟರ್‌ಗಳ (ಫಫ್ ಡುಪ್ಲೆಸಿ, ವಿರಾಟ್ ಕೊಹ್ಲಿ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್) ಬಲದಿಂದ ಗೆಲುವು ಪಡೆದಿತ್ತು. ಈ ಪಂದ್ಯದಲ್ಲಿ ವಿರಾಟ್ (54 ರನ್, 37 ಎ.) ಹೊರತುಪಡಿಸಿ ಉಳಿದ ಇಬ್ಬರು ವಿಫಲರಾದರು. ಬಳಿಕದ ಬ್ಯಾಟರ್‌ಗಳಿಗೆ ಒತ್ತಡ ನಿಭಾಯಿಸಲು ಆಗಲಿಲ್ಲ.

ಸವಾಲಿನ ಗುರಿ ಬೆನ್ನಟ್ಟಿದ ಆರ್‌ಸಿಬಿಗೆ ಕೊಹ್ಲಿ ಮತ್ತು ಡುಪ್ಲೆಸಿ ಮೊದಲ ವಿಕೆಟ್‌ಗೆ 31 ರನ್ ಸೇರಿಸಿದರು. ಡುಪ್ಲೆಸಿ ಅವರನ್ನು ಸುಯಶ್ ಶರ್ಮಾ ಪೆವಿಲಿಯನ್‌ಗೆ ಕಳುಹಿಸಿದರು. ಶಹಬಾಜ್ ಅಹಮದ್ (2) ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ (5) ಬೆನ್ನುಬೆನ್ನಿಗೆ ಔಟಾದರು. ಸ್ಕೋರ್ 58 ಆಗುವಷ್ಟರಲ್ಲಿ ಮೂರು ವಿಕೆಟ್ ಬಿದ್ದದ್ದು ಆರ್‌ಸಿಬಿಯನ್ನು ಒತ್ತಡಕ್ಕೆ ಸಿಲುಕಿಸಿತು.

ಜೇಸನ್ ರಾಯ್ ಬ್ಯಾಟಿಂಗ್ ವೈಖರಿ –ಪ್ರಜಾವಾಣಿ ಚಿತ್ರ/ರಂಜು ಪಿ

ಒಂದು ಬದಿಯಲ್ಲಿ ವಿಕೆಟ್ ಬೀಳುತ್ತಿದ್ದರೂ, ಕೊಹ್ಲಿ ಸೊಗಸಾದ ಹೊಡೆತಗಳ ಮೂಲಕ ಸ್ಕೋರಿಂಗ್‌ನ ವೇಗ ತಗ್ಗದಂತೆ ನೋಡಿಕೊಂಡರು. ಅವರಿಗೆ ಮಹಿಪಾಲ್ ಲೊಮ್ರೊರ್ (34 ರನ್, 18 ಎ.) ತಕ್ಕ ಸಾಥ್ ನೀಡಿದ್ದರಿಂದ ಆರ್‌ಸಿಬಿ ಗೆಲುವಿನ ಆಸೆಗೆ ಮತ್ತೆ ಜೀವ ಬಂತು. ಆದರೆ ನಾಲ್ಕನೇ ವಿಕೆಟ್‌ಗೆ 34 ಎಸೆತಗಳಲ್ಲಿ 55 ರನ್ ಸೇರಿಸಿದ ಇವರಿಬ್ಬರು ಎರಡು ರನ್‌ಗಳ ಅಂತರದಲ್ಲಿ ಔಟಾದರು. ಮಹಿಪಾಲ್ ಅವರು ವರುಣ್ ಚಕ್ರವರ್ತಿ ಎಸೆತದಲ್ಲಿ ರಸೆಲ್‌ಗೆ ಕ್ಯಾಚ್ ಕೊಟ್ಟರು. ಕೊಹ್ಲಿ ಅವರು 13ನೇ ಓವರ್‌ನ ಮೊದಲ ಎಸೆತದಲ್ಲಿ ವೆಂಕಟೇಶ್ ಅಯ್ಯರ್ ಅವರ ಉತ್ತಮ ಕ್ಯಾಚ್‌ಗೆ ಔಟಾದರು.

ಬಳಿಕದ ಏಳು ಓವರ್‌ಗಳ ಆಟ ಪ್ರೇಕ್ಷಕರಿಗೆ ಅಲ್ಪ ಮನರಂಜನೆ ಒದಗಿಸಲು ಸೀಮಿತವಾಯಿತು.

ಭರ್ಜರಿ ಆರಂಭ: ಇದಕ್ಕೂ ಮುನ್ನ ಟಾಸ್ ಗೆದ್ದ ಆರ್‌ಸಿಬಿ, ಮೊದಲು ಫೀಲ್ಡಿಂಗ್ ಮಾಡಲು ನಿರ್ಧರಿಸಿತು. ಜೇಸನ್ ಮತ್ತು ಜಗದೀಶನ್ ಮೊದಲ ವಿಕೆಟ್‌ಗೆ 83 ರನ್ ಸೇರಿಸಿ ಕೋಲ್ಕತ್ತದ ತಂಡಕ್ಕೆ ಭರ್ಜರಿ ಆರಂಭ ನೀಡಿದರು.

ಶಹಬಾಜ್ ಬೌಲ್ ಮಾಡಿದ ಆರನೇ ಓವರ್‌ನಲ್ಲಿ ಹ್ಯಾಟ್ರಿಕ್ ಸೇರಿದಂತೆ ನಾಲ್ಕು ಸಿಕ್ಸರ್‌ಗಳನ್ನು ಸಿಡಿಸಿದ ಜೇಸನ್, ಪರಾಕ್ರಮ ಮೆರೆದರು. ಆ ಓವರ್‌ನಲ್ಲಿ 25 ರನ್‌ಗಳ ಬಂದವು.

ವೈಶಾಖ್ ವಿಜಯಕುಮಾರ್ ಅವರು 10ನೇ ಓವರ್‌ನಲ್ಲಿ ಆರಂಭಿಕ ಬ್ಯಾಟರ್‌ಗಳಿಬ್ಬರನ್ನೂ ಪೆವಿಲಿಯನ್‌ಗಟ್ಟಿ ಕೆಕೆಆರ್‌ಗೆ ಅವಳಿ ಆಘಾತ ನೀಡಿದರು. ಈ ವೇಳೆ ಜತೆಯಾದ ವೆಂಕಟೇಶ್ ಅಯ್ಯರ್ ಮತ್ತು ನಿತೀಶ್ ರಾಣಾ ಅವರು ಮೂರನೇ ವಿಕೆಟ್‌ಗೆ 80 ರನ್ ಸೇರಿಸಿದರು.

5 ಹಾಗೂ 19 ರನ್ ಗಳಿಸಿದ್ದಾಗ ನಿತೀಶ್ ರಾಣಾ ಅವರಿಗೆ ಜೀವದಾನ ಲಭಿಸಿತ್ತು. ವೈಶಾಖ್ ಬೌಲಿಂಗ್‌ನಲ್ಲಿ ಸಿರಾಜ್ ಹಾಗೂ ಸಿರಾಜ್ ಬೌಲಿಂಗ್‌ನಲ್ಲಿ ಹರ್ಷಲ್ ಪಟೇಲ್ ಅವರು ಸುಲಭ ಕ್ಯಾಚ್ ಅವಕಾಶ ಹಾಳುಮಾಡಿಕೊಂಡರು.ಆ್ಯಂಡ್ರೆ ರಸೆಲ್ (1) ವಿಫಲರಾದರೂ, ಡೇವಿಡ್ ವೈಸ್ ಮತ್ತು ರಿಂಕು ಸಿಂಗ್ ಅವರು ಕೊನೆಯಲ್ಲಿ ಬಿರುಸಿನ ಆಟವಾಡಿದರು.

ಕೊಹ್ಲಿ ಸಾಧನೆ: ವಿರಾಟ್ ಕೊಹ್ಲಿ ಅವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಟಿ20 ಮಾದರಿಯಲ್ಲಿ 3,000 ರನ್ ಗಳಿಸಿದ ಸಾಧನೆ ಮಾಡಿದರು.

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್ 5ಕ್ಕೆ 200 (20 ಓವರ್‌ಗಳಲ್ಲಿ)
ಜೇಸನ್ ಬಿ ವೈಶಾಖ್ 56 (29 ಎ., 4X4, 6X5)
ಜಗದೀಶನ್ ಸಿ ವಿಲಿ ಬಿ ವೈಶಾಖ್ 27 (29 ಎ., 4X4)
ವೆಂಕಟೇಶ್ ಸಿ ಮ್ಯಾಕ್ಸ್‌ವೆಲ್ ಬಿ ಹಸರಂಗ 31 (26 ಎ., 4X3)
ನಿತೀಶ್ ಸಿ ವೈಶಾಖ್ ಬಿ ಹಸರಂಗ 48 (21 ಎ., 4X3, 6X4)
ರಸೆಲ್ ಬಿ ಸಿರಾಜ್ 1 (2 ಎ)
ರಿಂಕು ಔಟಾಗದೆ 18 (10 ಎ., 4X2, 6X1)
ವೈಸ್ ಔಟಾಗದೆ 12 (3 ಎ., 6X2)
ಇತರೆ: 7 (ವೈಡ್ 5, ಲೆಗ್‌ಬೈ 2)
ವಿಕೆಟ್ ಪತನ: 1–83 (ನಾರಾಯಣ ಜಗದೀಶನ್; 9.2), 2–88 (ಜೇಸನ್ ರಾಯ್; 9.6), 3–168 (ನಿತೀಶ್ ರಾಣಾ; 17.2), 4–169 (ವೆಂಕಟೇಶ್ ಅಯ್ಯರ್; 17.4), 5–185 (ಆ್ಯಂಡ್ರೆ ರಸೆಲ್; 18.6)
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–33–1, ಡೇವಿಡ್ ವಿಲಿ 3–0–31–0, ವಣಿಂದು ಹಸರಂಗ 4–0–24–2, ಶಹಬಾಜ್ ಅಹಮದ್ 1–0–25–0, ವೈಶಾಖ್ ವಿಜಯಕುಮಾರ್ 4–0–41–2, ಹರ್ಷಲ್ ಪಟೇಲ್ 4–0–44–0

ರಾಯಲ್ ಚಾಲೆಂಜರ್ಸ್ ಬೆಂಗಳೂರು 8ಕ್ಕೆ 179 (20 ಓವರ್‌ಗಳಲ್ಲಿ)
ಕೊಹ್ಲಿ ಸಿ ಅಯ್ಯರ್ ಬಿ ರಸೆಲ್ 54 (37 ಎ., 4X6)
ಡುಪ್ಲೆಸಿ ಸಿ ರಿಂಕು ಬಿ ಸುಯಶ್ 17 (7 ಎ., 4X1, 6X2)
ಶಹಬಾಜ್ ಎಲ್‌ಬಿಡಬ್ಲ್ಯು ಬಿ ಸುಯಶ್ 2 (5 ಎ)
ಮ್ಯಾಕ್ಸ್‌ವೆಲ್ ಸಿ ವೈಸ್ ಬಿ ವರುಣ್ 5 (4 ಎ., 4X1), ಲೊಮ್ರೊರ್ ಸಿ ರಸೆಲ್ ಬಿ ವರುಣ್ 34 (18 ಎ., 4X1, 6X3)
ಕಾರ್ತಿಕ್ ಸಿ ರಿಂಕು ಬಿ ವರುಣ್ 22 (18 ಎ., 4X1, 6X1)
ಸುಯಶ್ ರನೌಟ್ 10 (9 ಎ., 4X1)
ಹಸರಂಗ ಸಿ ರಾಯ್ ಬಿ ರಸೆಲ್ 5 (4 ಎ.)
ವಿಲಿ ಔಟಾಗದೆ 11 (10 ಎ., 4X1)
ವೈಶಾಖ್ ಔಟಾಗದೆ 13 (8 ಎ., 6X1)
ಇತರೆ: 6 (ಬೈ 3, ಲೆಗ್ ಬೈ 3)
ವಿಕೆಟ್ ಪತನ: 1–31 (ಫಫ್ ಡುಪ್ಲೆಸಿ; 2.2), 2–51 (ಶಹಬಾಜ್ ಅಹಮದ್; 4.4), 3–58 (ಮ್ಯಾಕ್ಸ್‌ವೆಲ್; 5.5), 4–113 (ಮಹಿಪಾಲ್ ಲೊಮ್ರೊರ್; 11.3), 5–115 (ವಿರಾಟ್ ಕೊಹ್ಲಿ; 12.1), 6–137 (ಸುಯಶ್ ಪ್ರಭು ದೇಸಾಯಿ; 14.5), 7–152 (ಹಸರಂಗ; 16.5), 8–154 (ಕಾರ್ತಿಕ್; 17.3)
ಬೌಲಿಂಗ್: ವೈಭವ್ ಅರೋರ 2–0–22–0, ಉಮೇಶ್ ಯಾದವ್ 1–0–19–0, ಸುಯಶ್ ಶರ್ಮಾ 4–0–30–2, ವರುಣ್ ಚಕ್ರವರ್ತಿ 4–0–27–3, ಆ್ಯಂಡ್ರೆ ರಸೆಲ್ 4–0–29–2, ಸುನಿಲ್ ನಾರಾಯಣ 4–0–41–1, ನಿತೀಶ್ ರಾಣಾ 1–0–8–0

ಫಲಿತಾಂಶ: ಕೆಕೆಆರ್‌ಗೆ 21 ರನ್ ಗೆಲುವು

‘ಅಗ್ರ’ ಪೈಪೋಟಿಗೆ ಜೈಪುರ ಸಜ್ಜು

ಚೆನ್ನೈ –ರಾಜಸ್ಥಾನ ರಾಯಲ್ಸ್ ನಡುವೆ ಹಣಾಹಣಿ ಇಂದು

ಜೈಪುರ (ಪಿಟಿಐ): ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಐಪಿಎಲ್ ಟೂರ್ನಿಯ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಉಳಿಸಿಕೊಳ್ಳುವ ಪ್ರಯತ್ನದಲ್ಲಿದೆ.

ಗುರುವಾರ ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ನಡೆಯುವ ಪಂದ್ಯದಲ್ಲಿ ಚೆನ್ನೈ ತಂಡದ ಅಗ್ರಸ್ಥಾನಕ್ಕೆ ಸಂಚಕಾರ ತರುವ ಛಲದಿಂದ ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ರಾಯಲ್ಸ್ ಕಣಕ್ಕಿಳಿಯಲಿದೆ. ಹದಿನೈದು ದಿನಗಳ ಹಿಂದೆ ಮೊದಲ ಸುತ್ತಿನಲ್ಲಿ ರಾಜಸ್ಥಾನ ತಂಡವು ಚೆನ್ನೈ ಬಳಗವನ್ನು ಅದರ ತವರಿನಲ್ಲಿಯೇ ಮಣಿಸಿತ್ತು. ಅಲ್ಲಿಂದ ಸತತ ಮೂರು ಪಂದ್ಯಗಳನ್ನು ಗೆದ್ದಿದ್ದ ರಾಜಸ್ಥಾನ ತಂಡವು ಕೆಲವು ದಿನ ಪಾಯಿಂಟ್ ಪಟ್ಟಿಯ ಅಗ್ರಸ್ಥಾನಕ್ಕೇರಿತ್ತು. ಕಳೆದ ಎರಡು ಪಂದ್ಯಗಳಲ್ಲಿ ಸೋತ ನಂತರ ಮೂರನೇ ಸ್ಥಾನಕ್ಕೆ ಸರಿದಿದೆ.

ಅದೇ ಚೆನ್ನೈ ಬಳಗವು ತನ್ನ ಕಳೆದ ಮೂರು ಪಂದ್ಯಗಳಲ್ಲಿಯೂ ಭರ್ಜರಿ ಜಯಸಾಧಿಸಿ ಮೊದಲ ಸ್ಥಾನಕ್ಕೆ ಬಂದಿದೆ. 2ನೇ ಸ್ಥಾನದಲ್ಲಿ ಗುಜರಾತ್ ಇದೆ. ಮೊದಲ ನಾಲ್ಕು ಸ್ಥಾನಗಳಲ್ಲಿ ಉಳಿಯಲು ಅಪಾರ ಪೈಪೋಟಿಯಿದ್ದು, ಈ ಸುತ್ತು ಕುತೂಹಲ ಮೂಡಿಸಿದೆ.

ಅದರಲ್ಲೂ ಈ ಪಂದ್ಯವು ಚೆನ್ನೈ ತಂಡದ ಅಗ್ರಕ್ರಮಾಂಕದ ಬ್ಯಾಟರ್‌ಗಳು ಮತ್ತು ರಾಯಲ್ಸ್ ಬಳಗದ ಸ್ಪಿನ್ನರ್‌ಗಳ ನಡುವಣ ಹಣಾಹಣಿಯ ಕದನವೆಂದೇ ಬಿಂಬಿತವಾಗಿದೆ. ಚೆನ್ನೈ ತಂಡಕ್ಕೆ ಡೇವೊನ್ ಕಾನ್ವೆ (314 ರನ್) ಹಾಗೂ ಋತುರಾಜ್ ಗಾಯಕವಾಡ ಅವರು ಉತ್ತಮ ಆರಂಭ ನೀಡುತ್ತಿದ್ದಾರೆ. ಅಜಿಂಕ್ಯ ರಹಾನೆ ಅಮೋಘವಾಗಿ ಆಡುತ್ತಿದ್ದಾರೆ. ಭಾರತ ಟೆಸ್ಟ್ ತಂಡದಲ್ಲಿ ಮರಳಿ ಸ್ಥಾನ ಪಡೆದಿರುವ ಖುಷಿಯಲ್ಲಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಶಿವಂ ದುಬೆ, ಮಹೇಂದ್ರಸಿಂಗ್ ಧೋನಿ ಮತ್ತು ರವೀಂದ್ರ ಜಡೇಜ ಅವರು ಉತ್ತಮ ಲಯದಲ್ಲಿದ್ದಾರೆ. ಈ ಪಡೆಯನ್ನು ಕಟ್ಟಿಹಾಕುವ ಸವಾಲು ರಾಜಸ್ಥಾನ ತಂಡದ ಅನುಭವಿ ಸ್ಪಿನ್ನರ್‌ಗಳಾದ ಆರ್. ಅಶ್ವಿನ್ ಹಾಗೂ ಯಜುವೇಂದ್ರ ಚಾಹಲ್ ಅವರ ಮುಂದಿದೆ. ವೇಗಿಗಳಾದ ಟ್ರೆಂಟ್ ಬೌಲ್ಟ್ ಮತ್ತು ಸಂದೀಪ್ ಶರ್ಮಾ ಅವರಿಂದಲೂ ಅಪಾರ ನಿರೀಕ್ಷೆಗಳಿವೆ.

ಯಶಸ್ವಿ ಜೈಸ್ವಾಲ್ ಹಾಗೂ ಜೋಸ್ ಬಟ್ಲರ್ ಕೂಡ ರಾಜಸ್ಥಾನದ ತಂಡಕ್ಕೆ ಉತ್ತಮ ಆರಂಭಗಳನ್ನು ನೀಡುತ್ತಿದ್ದಾರೆ. ಅವರಲ್ಲದೇ ಕನ್ನಡಿಗ ದೇವದತ್ತ ಪಡಿಕ್ಕಲ್, ನಾಯಕ ಸಂಜು ಸ್ಯಾಮ್ಸನ್, ಶಿಮ್ರೊನ್ ಹೆಟ್ಮೆಯರ್ ಹಾಗೂ ಧ್ರುವ ಜುರೇಲ್ ಅವರಿಂದಾಗಿ ಮಧ್ಯಮ ಕ್ರಮಾಂಕವೂ ಬಲಿಷ್ಠವಾಗಿದೆ. ಚೆನ್ನೈ ಯುವ ವೇಗಿಗಳು ಸ್ಥಿರ ಪ್ರದರ್ಶನ ನೀಡುತ್ತಿಲ್ಲ. ಸ್ಪಿನ್ನರಗಳಾದ ಮೋಯಿನ್ ಅಲಿ ಮತ್ತು ರವೀಂದ್ರ ಜಡೇಜ ಅವರಿಂದಲೇ ಹೆಚ್ಚು ನಿರೀಕ್ಷೆಗಳಿವೆ. ಎಲ್ಲಕ್ಕಿಂತ ಮಿಗಿಲಾಗಿ ನಾಯಕ ಧೋನಿ ತಂತ್ರಗಾರಿಕೆಯು ಇಲ್ಲಿ ಪ್ರಮುಖ ಪಾತ್ರ ವಹಿಸುವ ಸಾಧ್ಯತೆ ಇದೆ. ತಮ್ಮ ಯುವ ಬೌಲರ್‌ಗಳನ್ನು ಅವರು ನಿಯೋಜನೆ ಮಾಡುವ ಬಗೆಯೂ ಕುತೂಹಲ ಇದೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್

ಧೋನಿ ಹಾಗೂ ಸಂಜು ಸ್ಯಾಮ್ಸನ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಚೆನ್ನೈ	7	5	2	0	10	0.662
ಗುಜರಾತ್	7	5	2	0	10	0.580
ರಾಜಸ್ಥಾನ	7	4	3	0	8	0.844
ಲಖನೌ	7	4	3	0	8	0.547
ಬೆಂಗಳೂರು	8	4	4	0	8	-0.139
ಪಂಜಾಬ್	7	4	3	0	8	-0.162
ಕೋಲ್ಕತ್ತ	8	3	5	0	6	-0.027
ಮುಂಬೈ	7	3	4	0	6	-0.620
ಹೈದರಾಬಾದ್	7	2	5	0	4	-0.725
ಡೆಲ್ಲಿ	7	2	5	0	4	-0.961

ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	422

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಸಿರಾಜ್	ಆರ್‌ಸಿಬಿ	14

ಪ್ರಧಾನಿ ಮೋದಿಯವರಿಗೆ ಧರಣಿನಿರತ ಕುಸ್ತಿಪಟುಗಳ ಅಹವಾಲು

‘ದಯಮಾಡಿ ನಮ್ಮ ಮನದ ಮಾತು ಕೇಳಿ’

ನವದೆಹಲಿ (ಪಿಟಿಐ): ‘ನಮ್ಮ ಮನದ ಮಾತುಗಳನ್ನು ತಾವೇಕೆ ಕೇಳುತ್ತಿಲ್ಲ’ ಎಂದು ಧರಣಿನಿರತ ಕುಸ್ತಿಪಟುಗಳು ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಶ್ನಿಸಿದ್ದಾರೆ.

ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಹಾಗೂ ಬಿಜೆಪಿ ಸಂಸದರೂ ಆಗಿರುವ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಆರೋಪಿಸಿರುವ ಖ್ಯಾತನಾಮ ಕುಸ್ತಿಪಟುಗಳು ಹೋದ ಭಾನುವಾರದಿಂದ ಇಲ್ಲಿ ಧರಣಿ ನಡೆಸುತ್ತಿದ್ದಾರೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಒಲಿಂಪಿಯನ್ ಸಾಕ್ಷಿ ಮಲಿಕ್, ‘ಪ್ರಧಾನಿ ಮೋದಿ ಸರ್ ಬೇಟಿ ಬಚಾವೊ ಮತ್ತು ಬೇಟಿ ಪಡಾವೊ ಎಂದು ಹೇಳುತ್ತಾರೆ. ಅವರು ಎಲ್ಲರ ಮನದ ಮಾತು ಕೇಳುತ್ತಾರೆ. ಆದರೆ ನಮ್ಮ ಮನದ ಮಾತು ಅವರಿಗೇಕೆ ತಲುಪುತ್ತಿಲ್ಲ’ ಎಂದು ಪ್ರಶ್ನಿಸಿದರು.

‘ನಾವು ಯಾವುದೇ ಅಂತರರಾಷ್ಟ್ರೀಯ ಟೂರ್ನಿಯಲ್ಲಿ ಪದಕ ಜಯಿಸಿ ಬಂದಾಗ ಪ್ರಧಾನಿಯವರು ಆಹ್ವಾನಿಸುತ್ತಾರೆ. ಗೌರವಿಸುತ್ತಾರೆ. ನಮ್ಮನ್ನು ತಮ್ಮ ಮಕ್ಕಳು ಎಂದೇ ಕರೆಯುತ್ತಾರೆ. ದಯಮಾಡಿ ನಮ್ಮ ಮನದ ಮಾತು ಕೇಳಿ ಎಂದು ಮನವಿ ಮಾಡುತ್ತಿದ್ದೇವೆ’ ಎಂದು ಸಾಕ್ಷಿ ಹೇಳಿದರು.

‘ಸ್ಮೃತಿ ಇರಾನಿ (ಕೇಂದ್ರ ಸಚಿವೆ) ಅವರು ಏಕೆ ಮೌನವಾಗಿದ್ದಾರೆ? ನಾವು ಧರಣಿ ಆರಂಭಿಸಿ ನಾಲ್ಕು ದಿನಗಳಾಗಿವೆ. ರಸ್ತೆಯ ಮೇಲೆ ಮಲಗುತ್ತಿದ್ದೇವೆ. ಸೊಳ್ಳೆಗಳು ಕಚ್ಚುತ್ತಿವೆ. ಇಲ್ಲಿ ಅಡುಗೆ ಮಾಡಲು ಹಾಗೂ ವ್ಯಾಯಾಮ ಮಾಡಲೂ ಅನುಮತಿ (ದೆಹಲಿ ಪೊಲೀಸರು) ನೀಡುತ್ತಿಲ್ಲ. ಆದ್ದರಿಂದ ತಾವು ಇಲ್ಲಿ ಬನ್ನಿ. ನಮ್ಮ ಅಹವಾಲು ಕೇಳಿ ಮತ್ತು ಬೆಂಬಲಿಸಿ’ ಎಂದು ಸಾಕ್ಷಿ ಮನವಿ ಮಾಡಿದ್ದಾರೆ.

‘ಪ್ರಧಾನಿಗಳಿಗೆ ಬಹುಶಃ ನಮ್ಮ ಹೋರಾಟದ ಸತ್ಯಾಂಶಗಳು ತಲುಪುತ್ತಿಲ್ಲ. ಆದ್ದರಿಂದ ಅವರನ್ನು ಖುದ್ದು ಭೇಟಿಯಾಗಿ ವಿಷಯಗಳನ್ನು ತಿಳಿಸುತ್ತೇವೆ’ ಎಂದೂ ಸಾಕ್ಷಿ ಹೇಳಿದರು.

ಬಾನುಲಿಯಲ್ಲಿ ಬಿತ್ತರವಾಗುವ ಪ್ರಧಾನಿ ನರೇಂದ್ರ ಮೋದಿಯವರ ‘ಮನ್ ಕೀ ಬಾತ್’ ಶೀರ್ಷಿಕೆದಲ್ಲಿಯೇ ನೂರನೇ ಎಪಿಸೋಡ್ ಪೂರೈಸಲಿದೆ.

ಈ ಸಂದರ್ಭದಲ್ಲಿ ಹಾಜರಿದ್ದ ವಿಶ್ವ ಚಾಂಪಿಯನ್‌ಷಿಪ್ ಪದಕವಿಜೇತ ಕುಸ್ತಿಪಟು ವಿನೇಶಾ ಫೋಗಟ್, ‘ಪ್ರಧಾನಮಂತ್ರಿ ಮೋದಿಯವರನ್ನು ತಲುಪಲು ನಮಗೆ ಮಾಧ್ಯಮಗಳ ಮೂಲಕ ಮಾತ್ರ ಸಾಧ್ಯ. ಏಕೆಂದರೆ ಅವರ ಭೇಟಿಯ ಅವಕಾಶಕ್ಕೆ ಸಹಾಯ ಮಾಡುವ ಸೂಕ್ತ ವ್ಯಕ್ತಿಗಳ ಪರಿಚಯ ಅಥವಾ ಸಂಖ್ಯೆಗಳು (ಫೋನ್) ನಮಗೆ ಗೊತ್ತಿಲ್ಲ. ಆದ್ದರಿಂದ ಮಾಧ್ಯಮಗಳ ಮೂಲಕವೇ ನಮ್ಮ ಅಹವಾಲು ತಲುಪಿಸುತ್ತಿದ್ದೇವೆ. ಅವರು ನಿಮ್ಮ (ಮಾಧ್ಯಮದವರು) ಧ್ವನಿಯನ್ನು ಕೇಳಬಹುದು. ನಮ್ಮ ಚೈತನ್ಯ ಬಹುತೇಕ ಸತ್ತುಹೋಗಿದೆ’ ಎಂದು ಭಾವುಕರಾದರು.

‘ಎಲ್ಲ ಕ್ರೀಡೆಗಳ ಅಥ್ಲೀಟ್‌ಗಳೂ ನಮ್ಮ ಹೋರಾಟಕ್ಕೆ ಬೆಂಬಲ ನೀಡಬೇಕು. ಒಗ್ಗಟ್ಟು ಪ್ರದರ್ಶಿಸಬೇಕು ನಾವು ಗೆದ್ದಾಗಲಷ್ಟೇ ಅಪ್ಪಿಕೊಂಡು ಅಭಿನಂದಿಸುವವರು ಇಂತಹ ಸಮಯದಲ್ಲಿ ಮೌನವಾಗಿರುವುದೇಕೆ? ಎಲ್ಲರೂ ನಮ್ಮ ಕೈಜೋಡಿಸಿ’ ಎಂದೂ ವಿನೇಶಾ ಮನವಿ ಮಾಡಿದ್ದಾರೆ.

‘ನಾವು ಇಲ್ಲಿಯೇ ಅಭ್ಯಾಸ ಮಾಡಲು ಕುಸ್ತಿ ಮ್ಯಾಟ್‌ಗಳನ್ನು ತೆಗೆದುಕೊಂಡು ಬಂದಿದ್ದೇವೆ. ಆದರೆ ಅದಕ್ಕೆ ಅನುಮತಿ ನೀಡುತ್ತಿಲ್ಲ. ಇಲ್ಲಿ ಅಡುಗೆ ಮಾಡಲೂ ಅವಕಾಶ ಕೊಡುತ್ತಿಲ್ಲ. ಈಗ ಉಸಿರಾಡಲೂ ಅನುಮತಿ ಪಡೆಯುವ ಪರಿಸ್ಥಿತಿ ಇದೆ’ ಎಂದು ಬಜರಂಗ್ ಅಸಮಾಧಾನ ವ್ಯಕ್ತಪಡಿಸಿದರು.

ಅಭಿನವ್ ಬಿಂದ್ರಾ ಬೆಂಬಲ

‘ಕ್ರೀಡಾಪಟುಗಳಾಗಿ ನಾವು ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ದೇಶವನ್ನು ಪ್ರತಿನಿಧಿಸಲು ಕಠಿಣ ಪರಿಶ್ರಮಪಡುತ್ತೇವೆ. ನಮ್ಮ ಅಥ್ಲೀಟ್‌ಗಳು ತಮಗಾದ ದೌರ್ಜನ್ಯದ ವಿರುದ್ಧ ಬೀದಿಗಿಳಿದು ಪ್ರತಿಭಟಿಸುತ್ತಿರುವುದು ಗಂಭೀರ ವಿಷಯ’ ಎಂದು ಒಲಿಂಪಿಯನ್ ಶೂಟರ್ ಅಭಿನವ್ ಬಿಂದ್ರಾ ಟ್ವೀಟ್ ಮಾಡಿದ್ದಾರೆ.

‘ಈ ಪ್ರಕರಣದಲ್ಲಿ ನೊಂದವರಿಗಾಗಿ ನನ್ನ ಹೃದಯ ಮಿಡಿಯುತ್ತಿದೆ. ಈ ವಿಷಯವನ್ನು ಗಂಭೀರವಾಗಿ ನಿರ್ವಹಿಸಬೇಕು. ಅಥ್ಲೀಟ್‌ಗಳ ಹಿತಾಸಕ್ತಿ ಮತ್ತು ಸುರಕ್ಷತೆಗಾಗಿ ಕಟ್ಟುನಿಟ್ಟಾದ ವ್ಯವಸ್ಥೆಯೊಂದರ ಅಗತ್ಯವನ್ನು ಈ ಪ್ರಕರಣ ಎತ್ತಿ ತೋರಿಸುತ್ತಿದೆ. ದೌರ್ಜನ್ಯಗಳನ್ನು ತಡೆಯಲು ತುರ್ತು ಕ್ರಮಗಳು ಬೇಕು. ಸುರಕ್ಷಿತ ವಾತಾವರಣವನ್ನು ಅಥ್ಲೀಟ್‌ಗಳಿಗಾಗಿ ಕಲ್ಪಿಸಬೇಕು’ ಎಂದು ಬಿಂದ್ರಾ ಹೇಳಿದ್ದಾರೆ.

ನಿಶಾನ್ ಮದುಷ್ಕ (ಎಡ) ಮತ್ತು ದಿಮುತ್ ಕರುಣಾರತ್ನೆ –ಎಎಫ್‌ಪಿ ಚಿತ್ರ

ಟೆಸ್ಟ್: ದಿಮುತ್, ನಿಶಾನ್ ಶತಕ

ಗಾಲೆ, ಶ್ರೀಲಂಕಾ (ಎಪಿ): ಆರಂಭಿಕ ಬ್ಯಾಟರ್‌ಗಳಾದ ದಿಮುತ್ ಕರುಣಾರತ್ನೆ ಮತ್ತು ನಿಶಾನ್ ಮದುಷ್ಕ ಅವರ ಶತಕಗಳ ನೆರವಿನಿಂದ ಶ್ರೀಲಂಕಾ ತಂಡ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಐರ್ಲೆಂಡ್ ತಂಡಕ್ಕೆ ದಿಟ್ಟ ಉತ್ತರ ನೀಡಿದೆ.

ಬುಧವಾರ ಮೂರನೇ ದಿನದಾಟದ ಕೊನೆಗೆ ಶ್ರೀಲಂಕಾ ತಂಡ ಮೊದಲ ಇನಿಂಗ್ಸ್‌ನಲ್ಲಿ ಒಂದು ವಿಕೆಟ್‌ಗೆ 357 ರನ್ ಗಳಿಸಿದೆ. ಐರ್ಲೆಂಡ್ ಮೊದಲ ಇನಿಂಗ್ಸ್‌ನಲ್ಲಿ 492 ರನ್ ಗಳಿಸಿತ್ತು.

ವಿಕೆಟ್ ನಷ್ಟವಿಲ್ಲದೆ 81 ರನ್‌ಗಳಿಂದ ಆಟ ಮುಂದುವರಿಸಿದ ಆತಿಥೇಯ ತಂಡಕ್ಕೆ ಕರುಣಾರತ್ನೆ (115 ರನ್, 133 ಎ., 4X15) ಮತ್ತು ನಿಶಾನ್ (ಔಟಾಗದೇ 149) ಭದ್ರ ಬುನಾದಿ ಹಾಕಿಕೊಟ್ಟರು. ಈ ಜೋಡಿ ಮೊದಲ ವಿಕೆಟ್‌ಗೆ 228 ರನ್ ಸೇರಿಸಿತು.

ಕರುಣಾರತ್ನೆ ಅವರು ಟೆಸ್ಟ್‌ನಲ್ಲಿ 16ನೇ ಶತಕ ಗಳಿಸಿದರೆ, 24 ವರ್ಷದ ನಿಶಾನ್ ಚೊಚ್ಚಲ ಶತಕ ಗಳಿಸಿ ಸಂಭ್ರಮಿಸಿದರು.

ಸಂಕ್ಷಿಪ್ತ ಸ್ಕೋರ್: ಐರ್ಲೆಂಡ್ ಮೊದಲ ಇನಿಂಗ್ಸ್ 492. ಶ್ರೀಲಂಕಾ ಮೊದಲ ಇನಿಂಗ್ಸ್ 77 ಓವರ್‌ಗಳಲ್ಲಿ 1 ವಿಕೆಟ್‌ಗೆ 357 (ನಿಶಾನ್ ಮದುಷ್ಕ ಔಟಾಗದೆ 149, ದಿಮುತ್ ಕರುಣಾರತ್ನೆ 115, ಕುಶಾಲ್ ಮೆಂಡಿಸ್ ಔಟಾಗದೆ 83, ಕರ್ಟಿಸ್ ಕ್ಯಾಂಫರ್ 47ಕ್ಕೆ 1).

ಸಂಕ್ಷಿಪ್ತ ಸುದ್ದಿ

ವರ್ಷವಿಡೀ ಆಡಲು ಇಂಗ್ಲೆಂಡ್ ಆಟಗಾರರಿಗೆ ಫ್ರ್ಯಾಂಚೈಸಿಗಳ ಗಾಳ?

ಲಂಡನ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಕೆಲವು ಫ್ರ್ಯಾಂಚೈಸಿ ಮಾಲೀಕರು ಇಂಗ್ಲೆಂಡ್‌ನ ಆರು ಪ್ರಮುಖ ಆಟಗಾರರನ್ನು ತಮ್ಮ ತಂಡಗಳಲ್ಲಿ ವರ್ಷವಿಡೀ ಆಡಲು ಮನವೊಲಿಸುತ್ತಿದ್ದಾರೆ.

ತಮ್ಮ ದೇಶದ ಕ್ರಿಕೆಟ್ ತಂಡವನ್ನು ತೊರೆದು ವಾರ್ಷಿಕ ₹ 50 ಕೋಟಿಗೂ ಹೆಚ್ಚು ಮೌಲ್ಯದ ಒಪ್ಪಂದ ಮಾಡಿಕೊಳ್ಳಲು ಫ್ರ್ಯಾಂಚೈಸ್‌ಗಳು ಆಹ್ವಾನಿಸಿವೆ ಎಂದು ‘ಟೈಮ್ಸ್ ಲಂಡನ್’ ವರದಿ ಮಾಡಿದೆ. ಆದರೆ ಫ್ರ್ಯಾಂಚೈಸಿಗಳ ಮತ್ತು ಆಟಗಾರರ ಹೆಸರುಗಳನ್ನು ಇದರಲ್ಲಿ ಉಲ್ಲೇಖಿಸಿಲ್ಲ.

ಐಪಿಎಲ್‌ನಲ್ಲಿರುವ ಹತ್ತು ಫ್ರ್ಯಾಂಚೈಸಿಗಳು ಬೇರೆ ದೇಶಗಳ ಲೀಗ್ ಟೂರ್ನಿಗಳಲ್ಲಿಯೂ ತಂಡಗಳನ್ನು ಹೊಂದಿವೆ. ಸಿಪಿಎಲ್ (ವೆಸ್ಟ್ ಇಂಡೀಸ್), ಎಸ್‌ಎ ಟಿ20 (ದಕ್ಷಿಣ ಆಫ್ರಿಕಾ), ಗ್ಲೋಬಲ್ ಟಿ20 ಲೀಗ್ (ಯುಎಇ) ಮತ್ತು ಅಮೆರಿಕದಲ್ಲಿ ಆರಂಭವಾಗಲಿರುವ ಮೇಜರ್ ಟಿ20 ಲೀಗ್ ಟೂರ್ನಿಗಳಲ್ಲಿ ತಂಡಗಳ ಮಾಲೀಕತ್ವ ಹೊಂದಿವೆ.

‘ರೋಹಿತ್ ಕೆಲದಿನ ವಿಶ್ರಾಂತಿ ಪಡೆಯಲಿ’

ನವದೆಹಲಿ (ಪಿಟಿಐ): ಭಾರತ ಮತ್ತು ಮುಂಬೈ ಇಂಡಿಯನ್ಸ್ ತಂಡದ ನಾಯಕ ರೋಹಿತ್ ಶರ್ಮಾ, ಐಪಿಎಲ್‌ನಿಂದ ಕೆಲವು ದಿನಗಳ ಮಟ್ಟಿಗೆ ವಿರಾಮ ಪಡೆದುಕೊಳ್ಳಬೇಕು. ಇದರಿಂದ ಅವರು ಜೂನ್‌ನಲ್ಲಿ ನಡೆಯುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ಗೆ ಉತ್ಸಾಹದಿಂದ ಆಡಲು ಸಾಧ್ಯವಾಗಬಹುದು ಎಂದು ಬ್ಯಾಟಿಂಗ್ ದಿಗ್ಗಜ ಸುನೀಲ್ ಗಾವಸ್ಕರ್ ಸಲಹೆ ನೀಡಿದ್ದಾರೆ.

‘ಸದ್ಯಕ್ಕೆ ಅವರು ವಿಶ್ರಾಂತಿ ಪಡೆದುಕೊಳ್ಳುವುದೇ ಉತ್ತಮ ಎಂಬುದು ನನ್ನ ಪ್ರಾಮಾಣಿಕ ಅನಿಸಿಕೆ. ಅವರು ಮೂರು- ನಾಲ್ಕು ಪಂದ್ಯ ಬಾಕಿಯಿರುವಾಗ ಮರಳಬಹುದು’ ಎಂದು ಸ್ಟಾರ್‌ಸ್ಪೋರ್ಟ್ಸ್‌ಗೆ ಜೊತೆ ಮಾತನಾಡುವಾಗ ಗಾವಸ್ಕರ್ ಅವರು ಅಭಿಪ್ರಾಯಪಟ್ಟಿದ್ದಾರೆ.